ವಿಶ್ವವಾಣಿ
ವಿಶ್ವಾಸವೇ ವಿಶ್ವ

ಜಿ-7 ಶೃಂಗ: ಇಂದು ಪ್ರಧಾನಿ ಕೆನಡಾಕ್ಕೆ

ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಅವರ ಆಹ್ವಾನ ಮೇರೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಜೂನ್ 16-17ರಂದ ಕೆನಡಾಕ್ಕೆ ಭೇಟಿ ನೀಡಲಿದ್ದು, ಅಲ್ಲಿ ಜಿ-7 ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ. ಈ ವೇಳೆ ಭಯೋತ್ಪಾದನೆ ವಿರುದ್ಧ ಕೆನಡಾ ಜತೆ ಮಹತ್ವದ ಒಪ್ಪಂದಕ್ಕೆ ಸಹಿ ಹಾಕುವ ಸಂಭವವಿದೆ.

ಸಮಾಚಾರ ಸಣ್ಣದಲ್ಲ

ಕೈದಿಗಳಿಗೆ ಮೊಬೈಲ್ ಮನಃಶಾಸ್ತ್ರಜ್ಞರ ಸೆರೆ

ಬೆಂಗಳೂರು: ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ಕೈದಿಗಳಿಗೆ ಮೊಬೈಲ್ ಸರಬರಾಜು ಮಾಡುತ್ತಿದ್ದ ಇಬ್ಬರು ಮನಃಶಾಸ್ತ್ರಜ್ಞರನ್ನು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಜೈಲಿನೊಳಗಿರುವ ಕೈದಿಗಳ ಮನಃ ಪರಿವರ್ತನೆಗಾಗಿ ಮನಃಶಾಸ್ತ್ರಜ್ಞೆ ಆಗಾಗ್ಗೆ ಪರಪ್ಪನ ಕಾರಾಗೃಹಕ್ಕೆ ಹೋಗುತ್ತಿದ್ದರು. ಇತ್ತೀಚೆಗೆ ಮನಃಶಾಸ್ತ್ರಜ್ಞೆ ಮೊಬೈಲ್ ತೆಗೆದುಕೊಂಡು ಹೋಗುತ್ತಿದ್ದಾಗ ಜೈಲಿನ ಅಧಿಕಾರಿಗೆ ಮೊಬೈಲ್ ಸಮೇತ ಸಿಕ್ಕಿಬಿದ್ದಿದ್ದಾರೆ. ನಂತರ ಅವರನ್ನು ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಗೆ ಒಪ್ಪಿಸಿದ್ದಾರೆ. ಮನಃಶಾಸ್ತ್ರಜ್ಞೆಯನ್ನು ವಿಚಾರಣೆಗೆ ಒಳಪಡಿಸಿದಾಗ, ತನಗೆ ಮತ್ತೊಬ್ಬ ಸೈಕ್ಯಾಟ್ರಿಸ್ಟ್ ಮೊಬೈಲ್ ತಂದುಕೊಟ್ಟಿದ್ದಾಗಿ ಹೇಳಿದ್ದರಿಂದ ಆತನನ್ನೂ ಸಹ ಬಂಧಿಸಿರುವ ಪೊಲೀಸರು ಹೆಚ್ಚಿನ ಮಾಹಿತಿಗಳನ್ನು ಕಲೆಹಾಕುತ್ತಿದ್ದಾರೆ ಎಂದು ತಿಳಿದುಬಂದಿದೆ.

ಸೀಟ್ ಮ್ಯಾಟ್ರಿಕ್ಸ್ ಬಿಡುಗಡೆ: ಕೆಇಎ

ಬೆಂಗಳೂರು: ಪ್ರಸಕ್ತ ಸಾಲಿನಲ್ಲಿ ಖಾಸಗಿ ಎಂಜಿನಿಯರಿಂಗ್ ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಹೊಸ ಕೋರ್ಸುಗಳ ಪ್ರಾರಂಭ ಹಾಗೂ ಪ್ರವೇಶಾತಿ ಹೆಚ್ಚಳಕ್ಕೆ ಸರಕಾರದಿಂದ ಅನುಮೋದನೆ ಪಡೆದ ಕೋರ್ಸುಗಳನ್ನು ಒಳಗೊಂಡಂತೆ ಸಿದ್ಧಪಡಿಸಿರುವ ಕರಡು ಸೀಟ್ ಮ್ಯಾಟ್ರಿಕ್ಸ್ ಅನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ. ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಪ್ರಕಟಣೆ ಹೊರಡಿಸಿದ್ದು, ಕರಡು ಸೀಟ್ ಮ್ಯಾಟ್ರಿಕ್ಸ್ ನಲ್ಲಿ ಲೋಪದೋಷವಿದ್ದಲ್ಲಿ ಅಥವಾ ಆಕ್ಷೇಪಣೆ, ಸಲಹೆಗಳಿದ್ದಲ್ಲಿ ಸಾರ್ವಜನಿಕರು, ಶಿಕ್ಷಣ ಸಂಸ್ಥೆಗಳು ಸರಕಾರದ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ. 2025-26ನೇ ಸಾಲಿಗೆ ರಾಜ್ಯದ ಸರಕಾರಿ, ಅನುದಾನಿತ, ಅನುದಾನ ರಹಿತ ಎಂಜಿನಿಯರಿಂಗ್ ಕಾಲೇಜುಗಳು, ವಿಶ್ವವಿದ್ಯಾಲಯಗಳಲ್ಲಿನ ಇಂಜಿನಿಯರಿಂಗ್ ಸ್ನಾತಕ ಕೋರ್ಸ್‌ಗಳಿಗೆ ಐಸಿಟಿಇಯಿಂದ ಪ್ರವೇಶಾತಿ ಅನುಮೋದನೆಯನ್ನು ನೀಡಿರುವ ಕಾಲೇಜುಗಳನ್ನು ಸೀಟ್ ಮ್ಯಾಟ್ರಿಕ್ಸ್ ನಲ್ಲಿ ಪರಿಗಣಿಸಲಾಗಿದೆ ಎಂದು ಪ್ರಕಟಣೆಯಲ್ಲಿ ವಿವರಿಸಲಾಗಿದೆ.

ಕಲಾವಿದ ಕೆಂಪಯ್ಯಗೆ ಪದ್ಮಶ್ರೀ ಪ್ರಶಸ್ತಿ ಸಿಗಲಿ

ಬೆಂಗಳೂರು: ಜಾನಪದ ಕಲಾವಿದರಾದ ಬಾನಂದೂರು ಕೆಂಪಯ್ಯ ಅವರಿಗೆ ಕೇಂದ್ರ ಸರ್ಕಾರ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಬೇಕು ಎಂದು ಸಮತಾ ಸೈನಿಕ ದಳದ ರಾಜ್ಯ ಘಟಕದ ಅಧ್ಯಕ್ಷ ಎಂ. ವೆಂಕಟಸ್ವಾಮಿ ಹೇಳಿದರು. ಕರ್ನಾಟಕ ರಾಜ್ಯ ಸಂವಿಧಾನ ಬಳಗ ಶನಿವಾರ ಆಯೋಜಿಸಿದ್ದ 'ದಣಿವರಿಯದ ಗಾನಕೋಗಿಲೆ ಬಾನಂದೂರು ಕೆಂಪಯ್ಯ ಅವರಿಗೆ 75ರ ಸಂಭ್ರಮ' ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ನಾಲ್ಕು ದಶಕಗಳಿಂದ ಬಾನಂದೂರು ಕೆಂಪಯ್ಯ ಜಾನಪದ ಗೀತೆಗಳನ್ನು ಹಾಡುವ ಮೂಲಕ ಮನೆ ಮಾತಾಗಿದ್ದಾರೆ. ಅವರಿಗೆ ದೇಶದ ಉನ್ನತ ಪ್ರಶಸ್ತಿ ನೀಡುವಂತೆ ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಮನವಿ ಸಲ್ಲಿಸಬೇಕು. ಈ ಬಗ್ಗೆ ಕೇಂದ್ರ ಸಚಿವ ರಾಮದಾಸ್ ಅಠವಳೆ ಅವರ ಮೂಲಕ ಮನವಿ ಸಲ್ಲಿಸಲಾಗುವುದು. ಮುಂದಿನ ಅವರ ಜನ್ಮದಿನಕ್ಕೆ ಪದ್ಮಶ್ರೀ ಪ್ರಶಸ್ತಿ ಸಿಗುವಂತಾಗಬೇಕು ಎಂದರು. ಇದೇ ಸಂದರ್ಭದಲ್ಲಿ ಕೆಂಪಯ್ಯ ಅವರಿಗೆ ಬೆಳ್ಳಿ ಕಿರೀಟ ತೊಡಿಸಿ ಗೌರವಿಸಲಾಯಿತು. ಕೆಂಪಯ್ಯ ಅವರ ಪತ್ನಿ ಸುಚಿತ್ರಾ, ಉಪಸ್ಥಿತರಿದ್ದರು. ಹಲವಾರು ಜಾನಪದ ಕಲಾವಿದರು ಕೆಂಪಯ್ಯ ಅವರಿಗೆ ತಮ್ಮ ಹಾಡುಗಳ ಮೂಲಕ ಗೌರವ ಸಲ್ಲಿಸಿದರು. ಕರ್ನಾಟಕ ಸಂವಿಧಾನ ಬಳಗದ ರಾಜ್ಯ ಘಟಕದ ಅಧ್ಯಕ್ಷ ಎಸ್. ಜಯಕಾಂತ್ ಚಾಲುಕ್ಯ, ಮಾಜಿ ಶಾಸಕ ಎ.ಕೆ. ಅನ್ನದಾನಿ, ಮಾಜಿ ವಿಧಾನ ಪರಿಷತ್ ಸದಸ್ಯ ಡಿ.ಎಸ್. ವೀರಯ್ಯ ಸೇರಿ ಹಲವರಿದ್ದರು.

ಬಿಎಂಟಿಸಿ ಡ್ರೈವರ್‌ಗೆ ಚಪ್ಪಲಿಯಿಂದ ಹಲ್ಲೆ

ಬೆಂಗಳೂರು: ಬಸ್ ನಿಲ್ಲಿಸದ್ದಕ್ಕೆ ಬಿಎಂಟಿಸಿ ಚಾಲಕನಿಗೆ ಮಹಿಳಾ ಪ್ರಯಾಣಿಕರೊಬ್ಬರು ಚಪ್ಪಲಿಯಿಂದ ಹಲ್ಲೆ ನಡೆಸಿದ ಘಟನೆ ನಗರದಲ್ಲಿ ನಡೆದಿದೆ. ಇದೇ ಬುಧವಾರ ಜೂ. 11ರಂದು ಟಿನ್ ಫ್ಯಾಕ್ಟರಿಯಿಂದ ಎಲೆಕ್ಟ್ರಾನಿಕ್ ಸಿಟಿಗೆ ಸಂಚರಿಸುತ್ತಿದ್ದ ಕೆಎ 57, ಎಫ್ 0836 ಬಸ್‌ನಲ್ಲಿ ಈ ಘಟನೆ ನಡೆದಿದೆ. ಬೆಳಗ್ಗೆ 8.40ರ ಹೊತ್ತಿಗೆ ಬಸ್ ಸರ್ಜಾಪುರ ರಸ್ತೆಯ ಕೈಕೊಂಡರಹಳ್ಳಿ ಸಮೀಪ ತಲುಪಿದಾಗ ಖಾಸಗಿ ಕಂಪನಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದ ಕಾವ್ಯ ಎಂಬ ಮಹಿಳೆ, ಬಸ್ ಸ್ಟಾಪ್ ಇಲ್ಲದೇ ಇದ್ದರೂ, ಎಲೆಕ್ಟ್ರಾನಿಕ್ ಸಿಟಿ ರಸ್ತೆಯಲ್ಲಿ ಹೋಗುವಾಗ ಕಚೇರಿ ಮುಂದೆ ಬಸ್ ನಿಲ್ಲಿಸಲು ಹೇಳಿದ್ದಳು. ಸಂಚಾರ ದಟ್ಟಣೆ ಬಸ್ ಚಾಲಕ ಬಸ್ ನಿಲ್ಲಿಸಿಲ್ಲ, ಆಗ ಹೊಟ್ಟೆ ಹಿಡಿದುಕೊಂಡು ಕಿರುಚಿ, ಅವಾಚ್ಯ ಶಬ್ದಗಳಿಂದ 42 ವರ್ಷದ ಚಾಲಕನನ್ನು ನಿಂದಿಸಿದ್ದಳು. ಬಳಿಕ ಮಹಿಳೆ ಚಪ್ಪಲಿ ತೆಗೆದುಕೊಂಡು ಹೊಡೆದಿದ್ದಾಳೆ ಎಂದು ದೂರು ದಾಖಲಾಗಿದೆ. ಈ ಬಗ್ಗೆ ಬೆಳ್ಳಂದೂರು ಪೊಲೀಸ್ ಠಾಣೆಯಲ್ಲಿ ಸೆಕ್ಷನ್ 121, 131, 132, 352 ಅಡಿಯಲ್ಲಿ ದೂರು ದಾಖಲಾಗಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ ಎಚ್ ವಿಶ್ವನಾಥ್ } ವಿಧಾನ ಪರಿಷತ್ ಸದಸ್ಯ

10 ವರ್ಷದ ಹಿಂದೆಯೇ ಸಿಎಂ ಸಿದ್ದರಾಮಯ್ಯ ಜಾತಿವಾರು ಜನಗಣತಿ ಮಾಡಿಸಿದ್ದರು. ಒಂದುವರೆ ಲಕ್ಷ ಶಿಕ್ಷಕರು 2 ವರ್ಷ ಗಣತಿ ಮಾಡಿದ್ದರು. ಅದಕ್ಕೆ 170 ಕೋಟಿಗೂ ಅಧಿಕ ಹಣ ಖರ್ಚಾಗಿತ್ತು. ಆಗಿನಿಂದಲೂ ವರದಿ ಬಹಿರಂಗ ಮಾಡದೇ ಹಾಗೆಯೇ ಇಟ್ಟುಕೊಂಡಿದ್ದರು. ಈವಾಗ ಹೈಕಮಾಂಡ್‌ಗೆ ಹೆದರಿ ಮತ್ತೊಮ್ಮೆ ಜಾತಿಗಣತಿ ಮಾಡಿರುವುದಾಗಿ ಹೇಳಿದ್ದಾರೆ.



ಭಾರತಕ್ಕೆ ಆಗಮಿಸಿರುವವರ ವಿವರ ಎಫ್‌ಆರ್‌ಆರ್‌ಒಗೆ ಒದಗಿಸಲು ಸರಕಾರಕ್ಕೆ ಹೈಕೋರ್ಟ್ ನಿರ್ದೇಶನ

ದೇಶದಲ್ಲೇ ಉಳಿದ ವಿದೇಶಿಗರಿಗೆ ಹೈಕೋರ್ಟ್ ಚಾಟಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವೀಸಾ ಅವಧಿ ಮುಗಿದ ನಂತರವೂ ಹೆಚ್ಚು ಸಂಖ್ಯೆಯಲ್ಲಿ ವಿದೇಶಿಯರು ಅಕ್ರಮವಾಗಿ ಉಳಿಯುತ್ತಿರುವ ಪ್ರಕರಣಗಳು ಹೆಚ್ಚುತ್ತಿರುವುದನ್ನು ಹೈಕೋರ್ಟ್ ಗಂಭೀರವಾಗಿ ಪರಿಗಣಿಸಿದೆ. ವಿದೇಶಿಯರನ್ನು ಕೆಲಸದಲ್ಲಿ ತೊಡಗಿಸಿಕೊಂಡಿರುವವರ ಬಗ್ಗೆ ನಿರ್ದಿಷ್ಟ ಮಾದರಿಯಲ್ಲಿ ವಿದೇಶಿಯರ ನೋಂದಣಿ ಕಚೇರಿ (ಎಫ್‌ಆರ್‌ಆರ್‌ಒ)ಗೆ ಮಾಹಿತಿ ನೀಡಲು ರಾಜ್ಯದ ಎಲ್ಲ ಶಿಕ್ಷಣ ಸಂಸ್ಥೆಗಳು ಸೇರಿದಂತೆ ಸರಕಾರಿ ಹಾಗೂ ಖಾಸಗಿ ಸಂಸ್ಥೆಗಳಿಗೆ ನಿರ್ದೇಶನ ನೀಡಲು ಸುತ್ತೋಲೆ ಹೊರಡಿಸುವಂತೆ ರಾಜ್ಯ ಸರಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಸಿರಿಯಾದ ಐದು ಮಂದಿ ಭಾರತಕ್ಕೆ ಬಂದು ವೀಸಾ ಅವಧಿ ಮುಗಿದ ಬಳಿಕವೂ ಇಲ್ಲಿಯೇ ನೆಲೆಸಿ ಅವಧಿ ವಿಸ್ತರಿಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕ ಸದಸ್ಯ ಪೀಠ, ಮುಂದಿನ ಎರಡು ವಾರಗಳಲ್ಲಿ ಈ ಕುರಿತು ಸುತ್ತೋಲೆ ಹೊರಡಿಸಿ, ಅದರ ಪ್ರತಿ ನ್ಯಾಯಾಲಯಕ್ಕೆ ಸಲ್ಲಿಸುವಂತೆ ಸರಕಾರದ ಮುಖ್ಯ ಕಾರ್ಯದರ್ಶಿಗೆ ಸೂಚನೆ ನೀಡಿದೆ.

ಕೇಂದ್ರ ಸರಕಾರದ ಪರ ಶಾಂತಿಭೂಷಣ್ ವಾದ

ವಿಚಾರಣೆ ವೇಳೆ ಕೇಂದ್ರ ಸರಕಾರದ ಪರ ವಾದ ಮಂಡಿಸಿದ ಡೆಪ್ಯೂಟಿ ಸಾಲಿಸಿಟರ್ ಜನರಲ್ ಎಚ್. ಶಾಂತಿಭೂಷಣ್, ಇತ್ತೀಚಿನ ದಿನಗಳಲ್ಲಿ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಮಾಡುವ ಹೆಸರಿನಲ್ಲಿ ಮತ್ತು ವೈದ್ಯಕೀಯ ಸಂಸ್ಥೆಗಳಲ್ಲಿ ಚಿಕಿತ್ಸೆ ಪಡೆಯುವುದು ಮತ್ತು ಕಂಪನಿಗಳು ಹಾಗೂ ಸಂಶೋಧನಾ ಸಂಸ್ಥೆಗಳಲ್ಲಿ ಉದ್ಯೋಗದ ಹೆಸರಿನಲ್ಲಿ ದೊಡ್ಡ ಸಂಖ್ಯೆಯ ವಿದೇಶಿಯರು ಭಾರತಕ್ಕೆ ಆಗಮಿಸುತ್ತಿದ್ದಾರೆ. ಅವರು ಅವಧಿ ಮೀರಿದ ನಂತರವೂ ತಮ್ಮ ದೇಶಗಳಿಗೆ ಮರಳುತ್ತಿಲ್ಲ, ಇದು ಸಮಸ್ಯೆ ಸೃಷ್ಟಿಸುತ್ತಿದೆ ಎಂಬುದಾಗಿ ವಾದ ಮಂಡಿಸಿದರು.

ಈ ಅಂಶವನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಪೀಠ, ಸರಕಾರಿ/ಖಾಸಗಿ ಸೇರಿದಂತೆ ಎಲ್ಲಾ ವಿಶ್ವವಿದ್ಯಾಲಯಗಳು, ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆ, ಡಯಾಗ್ನಾಸ್ಟಿಕ್ ಸೆಂಟರ್‌ಗಳು, ಸೌಖ್ಯ ಕೇಂದ್ರಗಳು ಸೇರಿದಂತೆ ಎಲ್ಲಾ ವೈದ್ಯಕೀಯ ಸಂಸ್ಥೆಗಳು, ಸರಕಾರೇತರ ಸಂಸ್ಥೆಗಳು, ವಾಣಿಜ್ಯ ಕಂಪನಿಗಳು/ಸಂಸ್ಥೆಗಳು ಒಳಗೊಂಡಂತೆ ಎಲ್ಲ ಸಂಸ್ಥೆಗಳು ತಮ್ಮಲ್ಲಿ ವಿದೇಶಿಯರು ಕೆಲಸ, ಅಧ್ಯಯನ ಅಥವಾ ಚಿಕಿತ್ಸೆ ಪಡೆಯುತ್ತಿದ್ದರೆ ಅಂತಹ ಸಂಸ್ಥೆಗಳು ನಿರ್ದಿಷ್ಟ ಮಾದರಿಯಲ್ಲಿ ವಿದೇಶಿಯರ ನೋಂದಣಿ ಕಚೇರಿ(ಎಫ್‌ಆರ್‌ಆರ್‌ಒ)ಗೆ ಮಾಹಿತಿ ನೀಡಬೇಕು. ಅದಕ್ಕಾಗಿ ಸ್ಥಳೀಯ ಪೊಲೀಸರು ನಿರ್ದಿಷ್ಟ ನಮೂನೆ ಸಿದ್ಧಪಡಿಸಬೇಕು ಎಂದು ಪೀಠ ಆದೇಶಿಸಿದೆ.

ಅಲ್ಲದೇ, ಆ ನಿರ್ದಿಷ್ಟ ನಮೂನೆಯನ್ನು ಪರಿಶೀಲಿಸಬೇಕು ಮತ್ತು ಎಲ್ಲ ಸಂಸ್ಥೆಗಳು ಕಾಲಕಾಲಕ್ಕೆ ವಿದೇಶಿಯರ ವಿವರಗಳನ್ನು ಒದಗಿಸಬೇಕು. ಒಂದು ವೇಳೆ ಒದಗಿಸದಿದ್ದರೆ ಅಂತಹ ಸಂಸ್ಥೆಗಳ ವಿರುದ್ಧ ಅನ್ವಯಿಸುವ ಕಾನೂನು ಪ್ರಕಾರ ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿ ಕ್ರಮ ಕೈಗೊಳ್ಳಬೇಕು ಎಂದು ನ್ಯಾಯಪೀಠ ತನ್ನ ಆದೇಶದಲ್ಲಿ ತಿಳಿಸಿದೆ. ಜತೆಗೆ ಎಫ್‌ಆರ್‌ಆರ್‌ಒಗೆ ಯಾವ ಸಂಸ್ಥೆಗಳು ತಮ್ಮಲ್ಲಿನ ವಿದೇಶಿಯರ ಮಾಹಿತಿಗಳನ್ನು ಒದಗಿಸಿವೆ ಎಂಬ ಬಗ್ಗೆ ದಾಖಲೆಗಳನ್ನು ನಿರ್ವಹಣೆ ಮಾಡಬೇಕು. ಅದರಲ್ಲಿ ವಿದೇಶಿಯರು ಯಾವ ಉದ್ದೇಶಕ್ಕಾಗಿ ನಗರಕ್ಕೆ ಆಗಮಿಸಿದ್ದಾರೆ, ಎಲ್ಲಿ ವಾಸ್ತವ್ಯ ಹೂಡಿರುತ್ತಾರೆ ಮತ್ತು ಯಾವಾಗ ನಿರ್ಗಮಿಸುತ್ತಾರೆ ಎಂಬ ವಿವರಗಳನ್ನು ಒಳಗೊಂಡಿರಬೇಕು. ಜತೆಗೆ ಒಂದು ವೇಳೆ ವಿಸಾ ಅವಧಿ ಮುಗಿದ ನಂತರವೂ ವಿದೇಶಕ್ಕೆ ತೆರಳದೆ ಇಲ್ಲೇ ಇರುವ ವ್ಯಕ್ತಿಗಳಿದ್ದರೆ ಅವರ ಮಾಹಿತಿಯನ್ನು ಸಹ ಎಫ್‌ಆರ್‌ಆರ್‌ಒಗೆ ಒದಗಿಸಬೇಕು ಎಂದು ನ್ಯಾಯಾಲಯ ಇದೇ ವೇಳೆ ನಿರ್ದೇಶನ ನೀಡಿದೆ. ದೇಶಕ್ಕೆ ಆಗಮಿಸಿರುವ ವಿದೇಶಿಯರ ಕುರಿತಂತೆ ಈ ಕೆಳಗಿನ ಮಾಹಿತಿಗಳನ್ನು ಕೋರ್ಟ್‌ಗೆ ಒದಗಿಸುವಂತೆ ಕೇಂದ್ರ ಸರಕಾರಕ್ಕೆ ನ್ಯಾಯಪೀಠ ಸೂಚನೆ ನೀಡಿ, ವಿಚಾರಣೆಯನ್ನು ಜು.27ಕ್ಕೆ ಮುಂದೂಡಿದೆ.

ಹೈಕೋರ್ಟ್ ಕೇಳಿದ ಪ್ರಶ್ನೆಗಳು

- ಕಳೆದ ಐದು ವರ್ಷಗಳಲ್ಲಿ ದೇಶಾದ್ಯಂತ ವಿದೇಶದಿಂದ ಭಾರತಕ್ಕೆ ಆಗಮಿಸಿರುವ ವಿದೇಶಿಯರ ಸಂಖ್ಯೆ ಎಷ್ಟು?
- ಪ್ರವಾಸಿ, ವೈದ್ಯಕೀಯ, ಶಿಕ್ಷಣ, ಉದ್ಯೋಗ, ರಾಜತಾಂತ್ರಿಕ ವಿಸಾದಲ್ಲಿ ಬಂದಿರುವವರ ಸಂಖ್ಯೆ ಎಷ್ಟು?
- ವಿಸಾ ಅವಧಿ ಮುಗಿದ ಬಳಿಕವೂ ತಮ್ಮ ದೇಶಗಳಿಗೆ ವಾಪಸ್ ಆಗದ ವಿದೇಶಿಯರೆಷ್ಟು? ಅವರ ಪೂರ್ಣ ವಿವರಗಳನ್ನು ಒದಗಿಸಬೇಕು?
- ಎಫ್‌ಆರ್‌ಆರ್‌ಒದಲ್ಲಿ ನೋಂದಾಯಿಸಿಕೊಂಡಿರುವ ವಿದೇಶಿಯರ ಸಂಖ್ಯೆ ಎಷ್ಟು?
- ಕರ್ನಾಟಕದಲ್ಲಿ ಅವಧಿ ಮುಗಿದ ನಂತರವೂ ವಾಪಸ್ ಆಗದ ವಿದೇಶಿಯರು ಎಷ್ಟು?
- ರಾಜ್ಯದಲ್ಲಿ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾದ ವಿದೇಶಿಯರ ಸಂಖ್ಯೆ ಎಷ್ಟು?

ಹೈಕೋರ್ಟ್ ನಿರ್ದೇಶನಗಳೇನು?

- ವಿದೇಶಿಗರ ವಿವರ ಕೊಡದ ಸಂಸ್ಥೆಗಳ ವಿರುದ್ಧ ಪ್ರಕರಣ ದಾಖಲಿಸಿ
- ಎಫ್‌ಆರ್‌ಆರ್‌ಒಗೆ ವಿದೇಶಿಯರ ಬಗ್ಗೆ ಸಂಸ್ಥೆಗಳು ಕೊಟ್ಟ ದಾಖಲೆ ಬಗ್ಗೆ ನಿಗಾ ವಹಿಸಲು ಸೂಚನೆ
- ವಿದೇಶಿಯರು ಯಾವ ಉದ್ದೇಶಕ್ಕಾಗಿ ನಗರಕ್ಕೆ ಆಗಮಿಸಿದ್ದಾರೆ, ಎಲ್ಲಿ ವಾಸ್ತವ್ಯ ಹೂಡಿರುತ್ತಾರೆ ವಿವರ ನೀಡಿ
- ವೀಸಾ ಮುಗಿದರು ಸ್ವದೇಶಕ್ಕೆ ಮರಳದ ವಿದೇಶಗರ ವಿರುದ್ಧ ಎಫ್ಐಆರ್ ಹಾಕಲು ಸೂಚನೆ

ಬಂಧಿತ ಮಹಿಳೆಯಿಂದ 70 ಲಕ್ಷ ರು. ಮೌಲ್ಯದ ಚಿನ್ನಾಭರಣ ಜಪ್ತಿ

ಚಿನ್ನಾಭರಣ ಕದ್ದ ಕೇರ್‌ಟೇಕರ್ ಬಂಧನ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮನೆಯಲ್ಲಿ ಕೇರ್‌ಟೇಕರ್ ಕೆಲಸಕ್ಕೆ ಸೇರಿಕೊಂಡು ಹಣ, ಆಭರಣ ಕಳ್ಳತನ ಮಾಡಿದ್ದ ಮಹಿಳೆಯನ್ನು ಚಾಮರಾಜಪೇಟೆ ಠಾಣೆ ಪೊಲೀಸರು ಬಂಧಿಸಿ ನಗದು ಸೇರಿದಂತೆ 70.16 ಲಕ್ಷ ರು. ಮೌಲ್ಯದ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ಚಾಮರಾಜನಗರದ ಇಲಿಯಾಜ್ ನಗರ ನಿವಾಸಿ ಉಮಾ (43) ಬಂಧಿತ ಮಹಿಳೆ. ಚಾಮರಾಜಪೇಟೆಯ ನಿವಾಸಿ ರಾಧಾ ಅವರ ಕುಟುಂಬದವರು ನಗರತ್‌ಪೇಟೆಯಲ್ಲಿ ಸೆಕ್ಯೂರಿಟಿ ಏಜೆನ್ಸಿ ನಡೆಸುತ್ತಿದ್ದಾರೆ. ರಾಧಾ ಅವರ ಅಕ್ಕ ಸುಜಾತಾ ಅವರು ಅನಾರೋಗ್ಯದ ಕಾರಣ ಹಾಸಿಗೆಯಲ್ಲಿದ್ದಾರೆ. ಹಾಗಾಗಿ ಸುಜಾತಾ ಅವರು ರಾಧಾರ ಮನೆಯಲ್ಲಿದ್ದಾರೆ. ಅವರನ್ನು ನೋಡಿಕೊಳ್ಳಲು ಮೂರು ತಿಂಗಳ ಹಿಂದೆ ಏಜೆನ್ಸಿ ಮೂಲಕ ಉಮಾ ಎಂಬುವವರನ್ನು ಕೆಲಸಕ್ಕೆ ನೇಮಿಸಿಕೊಂಡು ತಿಂಗಳಿಗೆ 23 ಸಾವಿರ ಸಂಬಳ ಕೊಡುತ್ತಿದ್ದರು.

ಸುಜಾತಾ ಅವರು ಎಲೆಕ್ಟ್ರಾನಿಕ್ಸ್ ಸಿಟಿಯ ನೀಲಾದ್ರಿ ಸೊಸೈಟಿಯಲ್ಲಿನ ತಮ್ಮ ಸೈಟನ್ನು 67 ಲಕ್ಷರು.ಗೆ ಮಾರಾಟ ಮಾಡಿ ಬೇರೆ ಕಡೆ ಮನೆ ಖರೀದಿಸಲು ಈ ಹಣವನ್ನು ತಂದು ರಾಧಾ ಅವರ ಮನೆಯ ಬೀರುವಿನಲ್ಲಿಟ್ಟಿದ್ದರು. ಅಲ್ಲದೇ ಬೀರುವಿನಲ್ಲಿ ಮತ್ತೊಬ್ಬ ಸಹೋದರಿ ಸ್ವರ್ಣಲತಾ ರವರಿಗೆ ಸೇರಿದ 1ಕೆ.ಜಿ 415 ಗ್ರಾಂ ಚಿನ್ನಾಭರಣಗಳು ಮತ್ತು 2ಕೆಜಿ 445 ಗ್ರಾಂ ತೂಕದ ಬೆಳ್ಳಿಯ ತಟ್ಟೆ, ಚಂಬು ಮತ್ತು ಕಪ್‌ಗಳನ್ನು ಇಟ್ಟಿದ್ದರು. ಇವರ ಮನೆಯಲ್ಲಿ ಇಟ್ಟಿರುವ ಹಣ,ಆಭರಣಗಳ ಬಗ್ಗೆ ಉಮಾ ಗಮನಿಸಿ ಆಗಿಂದಾಗ್ಗೆ ಅವುಗಳನ್ನು ಕಳ್ಳತನ ಮಾಡಿದ್ದಾಳೆ. ಆದರೆ ಇದು ಮನೆಯವರ ಗಮನಕ್ಕೆ ಬಂದಿಲ್ಲ. ಈ ನಡುವೆ ಚಾಮರಾಜಪೇಟೆಯ 5ನೇ ಮುಖ್ಯ ರಸ್ತೆಯಲ್ಲಿ ಫ್ಲಾಟ್ ಖರೀದಿಗಾಗಿ ಮಾತುಕತೆ ನಡೆಸಿದ್ದು, ಅಡ್ವಾನ್ಸ್ ಹಣ ಕೊಡಲು ಜೂ.9 ರಂದು ಮಧ್ಯಾಹ್ನ 12 ಗಂಟೆ ಸುಮಾರಿನಲ್ಲಿ ಬೀರು ತೆಗೆದಿದ್ದಾರೆ. ಆದರೆ ಅದರಲ್ಲಿಟ್ಟಿದ್ದ ಹಣ ಹಾಗೂ ಚಿನ್ನಾಭರಣಗಳು ಇರಲಿಲ್ಲ. ಒಂದು ಕ್ಷಣ ಗಾಬರಿಯಾಗಿ ಕೇರ್‌ಟೇಕರ್ ಕೆಲಸ ಮಾಡಿಕೊಂಡಿದ್ದ ಉಮಾಳನ್ನು ವಿಚಾರಿಸಿದ್ದಾಗ ತನಗೇನೂ ಗೊತ್ತಿಲ್ಲವೆಂದು ಹೇಳಿದ್ದಾಳೆ.

ಉದ್ಯಮಿ ಮನೆಯಿಂದ 1 ಕೋಟಿಗೂ ಅಧಿಕ ಮೌಲ್ಯದ ವಸ್ತು ಕದ್ದೊಯ್ದ ಮನೆ ಕೆಲಸದಾಕೆಯ ಬಂಧನ

ವಿಚಾರಣೆ ವೇಳೆ ಕಳ್ಳತನ ಪ್ರಕರಣ ಬೆಳಕಿಗೆ

ಮನೆಯವರಿಗೆ ಉಮಾಳ ಮೇಲೆ ಅನುಮಾನ ಬಂದಿದೆ. ಹಾಗಾಗಿ ಆಕೆ ಶಂಕೆ ವ್ಯಕ್ತಪಡಿಸಿ ಚಾಮರಾಜಪೇಟೆ ಪೊಲೀಸ್ ಠಾಣೆಗೆ ರಾಧಾ ಅವರು ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು ಉಮಾಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ತಾನೇ ಹಣ, ಆಭರಣಗಳನ್ನು ಕಳವು ಮಾಡಿಕೊಂಡು ಚಾಮರಾಜನಗರದ ತನ್ನ ಮನೆಯಲ್ಲಿ ಇಟ್ಟಿರುವುದಾಗಿ ಹೇಳಿದ್ದಾಳೆ. ಈಕೆಯ ಮಾಹಿತಿ ಮೇರೆಗೆ ಪೊಲೀಸರು ಆಕೆಯ ಮನೆಯಿಂದ 57.50 ಲಕ್ಷ ರು. ನಗದು ಹಾಗೂ 12.66 ಲಕ್ಷ ರು. ಮೌಲ್ಯದ 211 ಗ್ರಾಂ ತೂಕದ ವಿವಿಧ ಮಾದರಿಯ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳುವಲ್ಲಿ ಇನ್‌ಸ್ಪೆಕ್ಟರ್ ಮಂಜಣ್ಣ ಹಾಗೂ ಅವರ ಸಿಬ್ಬಂದಿ ತಂಡ ಯಶಸ್ವಿಯಾಗಿದೆ.

ಗ್ಯಾರಂಟಿಗಳಿಗೆ ಹಣ ಹೊಂದಿಸಲು ಆಗದೇ ಕೇಂದ್ರದ ಮೇಲೆ ಆರೋಪ

ಬೆಂಗಳೂರು: 15ನೇ ಹಣಕಾಸು ಆಯೋಗದಲ್ಲಿ ರಾಜ್ಯಕ್ಕೆ ಕೇಂದ್ರದಿಂದ 1 ಲಕ್ಷ ಕೋಟಿ ರು.ಗೂ ಹೆಚ್ಚು ಹಣ ಬರುತ್ತದೆ. ಗ್ಯಾರಂಟಿ ಯೋಜನೆಗೆ ಹಣ ಹೊಂದಿಸಲಾಗದೇ ಸಿಎಂ ಸಿದ್ದರಾಮಯ್ಯ ಕೇಂದ್ರ ಸರಕಾರದ ವಿರುದ್ಧ ರಾಜಕೀಯವಾಗಿ ಮಾತನಾಡುತ್ತಾರೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.



ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂ ಸಿದ್ದರಾಮಯ್ಯ ಅವರು, ಹೊಸದೇನು ಹೇಳಿಲ್ಲ ಈಗಾಗಲೇ ಹಲವಾರು ಬಾರಿ ಸುಳ್ಳು ಹೇಳಿದ್ದಾರೆ. ಈಗ ಅದನ್ನೇ ಮತ್ತೆ ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಕೇಂದ್ರದ ಅನುದಾನ ಶೇ.32 ರಿಂದ ಶೇ 42 ಕ್ಕೆ ಏರಿಸಿದ್ದರು. ಅವರು ಶೇ.10ಹೆಚ್ಚಳ ಮಾಡಿದ್ದಾರೆ. ಅದು ಸಿದ್ದರಾಮಯ್ಯ ಅವರಿಗೆ ಗೊತ್ತಿದ್ದು ಮರೆ ಮಾಚುತ್ತಾರೆ. ಶೇ.40 ರಿಂದ 50 ಕ್ಕೆ ಹೆಚ್ಚಳ ಮಾಡಬೇಕೆನ್ನುವುದು ನಮ್ಮೆಲ್ಲರ ಬೇಡಿಕೆಯಾಗಿದೆ. 14 ನೇ ಹಣಕಾಸು ಆಯೋಗ ಸಭೆ ನಡೆಸಿದ ಸಂದರ್ಭದಲ್ಲಿ ಐದು ಜನ ಕಾಂಗ್ರೆಸ್ ಸಚಿವರಿದ್ದರು. ಆಗ ರಾಜ್ಯದ ಪರವಾಗಿ ಸರಿಯಾಗಿ ವಾದ ಮಾಡದೇ ತಮ್ಮ ತಪ್ಪು ಮುಚ್ಚಿಕೊಳ್ಳಲು ಈ ರೀತಿ ಮಾತನಾಡುತ್ತಿದ್ದಾರೆ. ರಾಜ್ಯಕ್ಕೆ ಕಾಂಗ್ರೆಸ್‌ನಿಂದಲೇ ಅನ್ಯಾಯವಾಗಿದೆ ಎಂದು ಆರೋಪಿಸಿದರು.

14ನೇ ಹಣಕಾಸು ಆಯೋಗಕ್ಕೆ ಹೋಲಿಕೆ ಮಾಡಿದರೆ 15ನೇ ಹಣಕಾಸು ಆಯೋಗದಲ್ಲಿ ರಾಜ್ಯಕ್ಕೆ ಕೇಂದ್ರದಿಂದ 1 ಲಕ್ಷ ಕೋಟಿ ರು. ಹೆಚ್ಚಿಗೆ ಬರುತ್ತದೆ. ಈಗಾಗಲೇ 14ನೇ ಹಣಕಾಸು ಆಯೋಗದಲ್ಲಿ ಬಂದಷ್ಟು ಹಣ ರಾಜ್ಯಕ್ಕೆ ಬಂದಿದೆ. ಇನ್ನು ಎರಡು ವರ್ಷ ಬರುತ್ತದೆ. ಗ್ಯಾರಂಟಿ ಯೋಜನೆಗೆ ಹಣ ಹೊಂದಿಸಲಾಗದೇ ಸಿಎಂ ಸಿದ್ದರಾಮಯ್ಯ ಅವರು ಕೇಂದ್ರ ಸರಕಾರದ ವಿರುದ್ಧ ರಾಜಕೀಯವಾಗಿ ಮಾತನಾಡುತ್ತಾರೆ. ರಾಜ್ಯದ ರೈಲ್ವೆ ಯೋಜನೆಗೆ ಯುಪಿಎ ಅವಧಿಯಲ್ಲಿ 700 ಕೋಟಿ ರು. ಬಂದಿತ್ತು. ಈ ವರ್ಷ ಕೇಂದ್ರ ಸರಕಾರ 7700 ಕೋಟಿ ರು. ಕೊಟ್ಟಿದೆ ಅದಕ್ಕೆ ಮ್ಯಾಚಿಂಗ್ ಗ್ರ್ಯಾಂಟ್ ಕೊಡಲು ರಾಜ್ಯ ಸರಕಾರಕ್ಕೆ ಆಗುತ್ತಿಲ್ಲ. ಆರೋಗ್ಯ, ಗ್ರಾಮೀಣಾಭಿವೃದ್ಧಿ, ರಸ್ತೆ ಸೇರಿ ಹಲವು ಯೋಜನೆಗಳಿಗೂ ಕೇಂದ್ರ ಅನುದಾನ ನೀಡುತ್ತಿದೆ. ಅದನ್ನು ರಾಜ್ಯ ಸರಕಾರ ಹೇಳುವುದಿಲ್ಲ ಎಂದರು.

ಕೆಎಸ್‌ಆರ್‌ಟಿಸಿ ಹುದ್ದೆಗಳಿಗೆ ಕೌನ್ಸೆಲಿಂಗ್ ದಿನಾಂಕ ಪ್ರಕಟ

ಬೆಂಗಳೂರು: ಕೆಎಸ್‌ಆರ್‌ಟಿಸಿಯಿಂದ 2000 ಚಾಲಕ ಕಂ ನಿರ್ವಾಹಕರ ಹುದ್ದೆಗೆ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಿದ್ದು, ಕೌನ್ಸಿಲಿಂಗ್‌ಗೆ ದಿನಾಂಕ ಪ್ರಕಟಿಸಿದೆ. ಕೆಲ ದಿನಗಳ ಹಿಂದೆ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಿದ್ದು, ಇದಕ್ಕೆ ಬಂದ ಆಕ್ಷೇಪಣೆಯ ಬಳಿಕ ಗುರುವಾರದಂದು ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿತ್ತು. ಹೊಸದಾಗಿ ನೇಮಕಗೊಂಡ ಚಾಲಕ-ಕಂ- ನಿರ್ವಾಹಕ ಅಭ್ಯರ್ಥಿಗಳಿಗೆ ಸ್ಥಳವನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ನಿಯೋಜಿಸುವುದಾಗಿ ಹೇಳಿದೆ. 14 ಫೆ.2020ರಂತೆ ಚಾಲಕ-ಕಂ-ನಿರ್ವಾಹಕ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ, ಆಯ್ಕೆ ಪಟ್ಟಿಯ ಜ್ಯೇಷ್ಠತೆಯನ್ವಯ ಗಣಕೀಕೃತ ಕೌನ್ಸೆಲಿಂಗ್ ಮೂಲಕ ನೇರವಾಗಿ ವಿಭಾಗ/ಘಟಕಗಳಿಗೆ ನಿಯೋಜನೆ ಮಾಡಲಾಗುವುದು ಎಂದು ತಿಳಿಸಿದೆ. ಅಭ್ಯರ್ಥಿಗಳು ಶಾಂತಿನಗರದ ನಿಗಮದ, ಕೇಂದ್ರ ಕಚೇರಿಯಲ್ಲಿ ಹಾಜರಾಗುವುದು. ಹೆಚ್ಚಿನ ಮಾಹಿತಿಗೆ ವೆಬ್-ಸೈಟ್ ksrtcjobs.karnataka.gov.in ವೀಕ್ಷಿಸಿ.

ವೇಳಾಪಟ್ಟಿ

- **16 ಜೂನ್ 2025ರ ಬೆಳಗ್ಗೆ 8 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಕ್ರಮ ಸಂಖ್ಯೆ 1 - 325, ಮಧ್ಯಾಹ್ನ 2 ಗಂಟೆಯಿಂದ ಕ್ರಮ ಸಂಖ್ಯೆ326-650**
- **18 ಜೂನ್ 25 ಸಮಯ: 8 ರಿಂದ ಮಧ್ಯಾಹ್ನ 1ಗಂಟೆಯವರೆಗೆ ಕ್ರ.ಸಂ 651-1050 ಮಧ್ಯಾಹ್ನ 1.30 ರಿಂದ ಕ್ರಮ ಸಂಖ್ಯೆ 1051-1350**
- **19 ಜೂನ್ 25 ಸಮಯ: 8ರಿಂದ ಮಧ್ಯಾಹ್ನ 1ಗಂಟೆಯವರೆಗೆ ಕ್ರಮ ಸಂಖ್ಯೆ 1351-1700, ಮಧ್ಯಾಹ್ನ 1.30 ರಿಂದ ಕ್ರಮ ಸಂಖ್ಯೆ 1701- 2000**

ಆಶಾ ಮಾರ್ಗದರ್ಶಕರ ಬಿಡುಗಡೆಗೆ ಖಂಡನೆ

ಬೆಂಗಳೂರು: ಆಶಾ ಮಾರ್ಗದರ್ಶಕರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿರುವ ಆರೋಗ್ಯ ಇಲಾಖೆಯ ಕ್ರಮವನ್ನು ಖಂಡಿಸಿರುವ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವೈದ್ಯಕೀಯ ಶಿಕ್ಷಣ ಇಲಾಖೆ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಸಂಘ, ಆದೇಶ ಹಿಂಪಡೆಯದಿದ್ದರೆ ಕಾನೂನು ಹೋರಾಟ ನಡೆಸುವ ಎಚ್ಚರಿಕೆ ನೀಡಿದೆ.

ರಾಜ್ಯದಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ 195 ಆಶಾ ಮಾರ್ಗದರ್ಶಕರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ ಆರೋಗ್ಯ ಇಲಾಖೆ ಇದೇ 12ರಂದು ಆದೇಶ ಹೊರಡಿಸಿದೆ. ಕಳೆದ 15-18 ವರ್ಷಗಳಿಂದ ಸೇವೆ ಸಲ್ಲಿಸಿದ ಸಿಬ್ಬಂದಿಯನ್ನು ಏಕಾಏಕಿ ಬೀದಿಗೆ ತಳ್ಳಿದರೆ ಅವರ ಭವಿಷ್ಯ ಹೇಗೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಈ ಸಿಬ್ಬಂದಿ ಈಗಾಗಲೇ ತಮ್ಮ ಮಕ್ಕಳನ್ನು ಶಾಲಾ-ಕಾಲೇಜುಗಳಿಗೆ ಸೇರಿಸಿದ್ದು, ಇಲಾಖೆಯ ಕ್ರಮದಿಂದ ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಾರೆ. ಕರ್ತವ್ಯದಿಂದ ಬಿಡುಗಡೆಗೊಂಡಿರುವ 195 ಮಂದಿಯನ್ನು ಅರ್ಹತೆಯ ಆಧಾರ ಆಯಾ ಜಿಲ್ಲೆಗಳಲ್ಲಿ, ಎನ್‌ಎಚ್‌ಎಂ ಅಡಿ ಖಾಲಿ ಇರುವ ಶುಶ್ರೂಷಕರ ಹುದ್ದೆಗಳಿಗೆ ಗುತ್ತಿಗೆ ಆಧಾರದಲ್ಲಿ ನೇಮಿಸುವುದು ಅವೈಜ್ಞಾನಿಕ ಆದೇಶ. ಹುದ್ದೆಯಿಂದ ಬಿಡುಗಡೆಗೊಂಡವರ ಕಣ್ಣೀರ ಶಾಪಕ್ಕೆ ಗುರಿಯಾಗುವ ಮೊದಲು ಸರಕಾರ ಎಚ್ಚೆತ್ತುಕೊಂಡು ಆದೇಶವನ್ನು ಕೈಬಿಡಬೇಕು ಎಂದು ಸಂಘದ ರಾಜ್ಯಾಧ್ಯಕ್ಷ ಶ್ರೀಕಾಂತಸ್ವಾಮಿ ಆಗ್ರಹಿಸಿದ್ದಾರೆ. ಈ ಆದೇಶವನ್ನು ಸರಕಾರ ಕೈಬಿಡದಿದ್ದರೆ ನ್ಯಾಯಾಲಯದ ಮೊರೆ ಹೋಗಬೇಕಾಗುತ್ತದೆ. ಅಗತ್ಯವಿದ್ದರೆ ಬೀದಿಗೆ ಇಳಿದು ಹೋರಾಟ ನಡೆಸಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಿದ್ದಾರೆ.

ಸಮೀಕ್ಷೆ: ಮನೆಗಳಿಗೆ ಸ್ಟಿಕ್ಕರ್ ಅಂಟಿಸಿ

ಬೆಂಗಳೂರು: ಪಶ್ಚಿಮ ವಲಯ ವ್ಯಾಪ್ತಿಯಲ್ಲಿ ಶೇ.100ರಷ್ಟು ಸಮೀಕ್ಷೆ ಪೂರ್ಣಗೊಳಿಸುವುದಕ್ಕಾಗಿ ಮನೆಗಳಿಗೆ ಸ್ಟಿಕ್ಕರ್ ಅಂಟಿಸಿ ಎಂದು ಅಧಿಕಾರಿಗಳಿಗೆ ವಲಯ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಸೂಚನೆ ನೀಡಿದರು.

ಪರಿಶಿಷ್ಟ ಜಾತಿ ಸಮಗ್ರ ಸಮೀಕ್ಷಾ ಕಾರ್ಯಕ್ಕೆ ಸಂಬಂಧಿಸಿದಂತೆ ಪಶ್ಚಿಮ ವಲಯದ ಪರಿಶೀಲನಾ ಸಭೆಯಲ್ಲಿ ಮಾತನಾಡಿ, ಸಮೀಕ್ಷೆ ಪೂರ್ಣಗೊಳಿಸುವ ಸಲುವಾಗಿ ಎಲ್ಲಾ ಮನೆಗಳಿಗೆ ಸ್ಟಿಕ್ಕರ್ ಅಂಟಿಸಿದರೆ ಸರ್ವೆ ಮಾಡಬೇಕಿರುವ ಮನೆಗಳನ್ನು ಸುಲಭವಾಗಿ ಗುರುತಿಸಬಹುದಾಗಿರುತ್ತದೆ. ಈ ನಿಟ್ಟಿನಲ್ಲಿ ಕೂಡಲೇ ಎಲ್ಲಾ ಮನೆಗಳಿಗೆ ಭೇಟಿ ನೀಡಿ ಸ್ಟಿಕ್ಕರ್ ಅಂಟಿಸಿ. ಸ್ಟಿಕ್ಕರ್ ಅಂಟಿಸುವ ವೇಳೆ ಸರ್ವೆ ಆಗಿದೆಯೇ ಇಲ್ಲವೇ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು. ಅದಕ್ಕಾಗಿ ಎನ್‌ಎಸ್‌ಎಸ್, ಎನ್‌ಸಿಸಿ, ನೋಂದಾಯಿತ ಸಂಸ್ಥೆಗಳ ಸಹಯೋಗ ಪಡೆಯಬೇಕು. ಬೆಸ್ಕಾಂ, ಜಲಮಂಡಳಿಯ ದತ್ತಾಂಶ ಆಧಾರದ ಮೇಲೆ ಸಮೀಕ್ಷೆ ಕಾರ್ಯವನ್ನು ಪರಿಶೀಲಿಸಿ, ಬಾಕಿ ಸಮೀಕ್ಷೆ ಮಾಡಬೇಕಿರುವುದನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ 27 ವಿಧಾನಸಭಾ ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿ ಸಮಗ್ರ ಸಮೀಕ್ಷಾ ಕಾರ್ಯ ಸಕ್ರಿಯವಾಗಿ ನಡೆಯುತ್ತಿದ್ದು, 14ನೇ ಜೂನ್ 2025ರ ವೇಳೆಗೆ 1,77,718 ಪರಿಶಿಷ್ಟ ಜಾತಿಯವರ ಮನೆಗಳಿಗೆ ಹಾಗೂ 32,02,449 ಪರಿಶಿಷ್ಟ ಜಾತಿಯಲ್ಲದ ಮನೆಗಳಿಗೆ ಭೇಟಿ ನೀಡಿ ದತ್ತಾಂಶ ಸಂಗ್ರಹಿಸಲಾಗಿದೆ. ಈ ವೇಳೆ ವಲಯ ಜಂಟಿ ಆಯುಕ್ತ ಸಂಗಪ್ಪ, ಉಪ ಆಯುಕ್ತರು, ಕಂದಾಯ ಅಧಿಕಾರಿಗಳು ಹಾಗೂ ಇತರೆ ಅಧಿಕಾರಿಗಳು ಇದ್ದರು.

ವಿವಿಧ ಆಯಾಮದಲ್ಲಿ ಸಮೀಕ್ಷಾ ಕಾರ್ಯ

- **ನಾಗರೀಕ ಸೇವಾ ಕೇಂದ್ರಗಳಾದ, ಕರ್ನಾಟಕ ಒನ್ ಬೆಂಗಳೂರು ಒನ್ ಮತ್ತು ಗ್ರಾಮ ಒನ್ ಕೇಂದ್ರಗಳು.**
- **ಬಾಪೂಜಿ ಸೇವಾ ಕೇಂದ್ರಗಳಲ್ಲಿಯೂ ಸಹ ಸಮೀಕ್ಷೆಗೆ ಅವಕಾಶ ಕಲ್ಪಿಸಲಾಗಿದೆ.**
- **ಪಾಲಿಕೆ ವ್ಯಾಪ್ತಿಯ ಎಲ್ಲಾ ವಾರ್ಡ್ ಕಚೇರಿಗಳಲ್ಲಿ ಪ್ರತ್ಯೇಕವಾದ ಶಿಬಿರಗಳ ವ್ಯವಸ್ಥೆ.**
- **ಸ್ವಯಂ ಪ್ರೇರಿತವಾಗಿ ಆನ್ ಲೈನ್ ಲಿಂಕ್ ಮೂಲಕ** https://schedulecastesurvey.karnataka.gov.in/selfdeclaration/ **ಸಮೀಕ್ಷೆಯಲ್ಲಿ ಪಾಲ್ಗೊಳ್ಳಿ.**

ನ್ಯಾಯಬೆಲೆ ಅಂಗಡಿಗಳ ಮುಂದೆ ಜಮಾಯಿಸುತ್ತಿರುವ ಕಾರ್ಡುದಾರರು

ಎಫ್‌ಸಿಐನಿಂದ ಪಡಿತರ ಪೂರೈಕೆ ವಿಳಂಬ

ಬೆಂಗಳೂರು: ಕೇಂದ್ರ ಸರಕಾರದ ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಹಾಗೂ ರಾಜ್ಯ ಸರಕಾದ ಅನ್ನಭಾಗ್ಯ ಯೋಜನೆಯಡಿ ನೀಡುವ ಪಡಿತರ ಈ ತಿಂಗಳು 14 ದಿನ ಕಳೆದರೂ ಭಾರತೀಯ ಆಹಾರ ನಿಗಮದಿಂದ(ಎಫ್‌ಸಿಐ) ಸಗಟು ಮಳಿಗೆಗಳಿಗೆ ಎತ್ತುವಳಿಯಾಗಿಲ್ಲ.

ಪ್ರತಿ ತಿಂಗಳು 1ನೇ ತಾರೀಖಿನಿಂದಲೇ ಎಫ್‌ಸಿಐನಿಂದ ಸಗಟು ಮಳಿಗೆಗಳಿಗೆ ಅಕ್ಕಿ, ಜೋಳ, ರಾಗಿ ಪೂರೈಕೆಯಾಗುತ್ತದೆ. ಬಳಿಕ ನ್ಯಾಯಬೆಲೆ ಅಂಗಡಿಗಳು, ಕಾರ್ಡುದಾರರಿಗೆ ರೇಷನ್ ವಿತರಿಸಬೇಕಿತ್ತು. ಆದರೆ, 2 ವಾರ ಕಳೆದರೂ ಪಡಿತರ ಹಂಚಿಕೆಯಾಗಿಲ್ಲ. ರಾಜ್ಯದಲ್ಲಿ 1.28 ಕೋಟಿ ಬಿಪಿಎಲ್,10.80 ಲಕ್ಷ ಅಂತ್ಯೋದಯ ಕಾರ್ಡುಗಳಿಂದ ಒಟ್ಟು 4.11 ಕೋಟಿ ಲಾನುಭವಿಗಳಿದ್ದಾರೆ. ಪ್ರತಿ ತಿಂಗಳು 4.34 ಲಕ್ಷ ಮೆಟ್ರಿಕ್ ಟನ್ ಆಹಾರ ಪದಾರ್ಥ ವಿತರಿಸಲಾಗುತ್ತಿದೆ.

ಸರಕಾರಕ್ಕೆ ಟಿ.ಕೃಷ್ಣಪ್ಪ ಪತ್ರ

ನ್ಯಾಯಬೆಲೆ ಅಂಗಡಿಗಳಿಗೆ ಆಹಾರ ಪದಾರ್ಥ ಪೂರೈಕೆಯಾಗದಿರುವ ಬಗ್ಗೆ ರಾಜ್ಯ ಸರಕಾರಿ ಪಡಿತರ ವಿತರಕ ಸಂಘದ ಅಧ್ಯಕ್ಷ ಟಿ.ಕೃಷ್ಣಪ್ಪ, ಆಹಾರ ಸಚಿವ ಕೆ.ಎಚ್. ಮುನಿಯಪ್ಪಗೆ ಪತ್ರ ಬರೆದಿದ್ದಾರೆ. ಪ್ರತಿ ನಿತ್ಯ ಕಾರ್ಡುದಾರರು ಅಂಗಡಿಗಳ ಮುಂದೆ ಧಾವಿಸಿ ಪಡಿತರ ವಿತರಣೆ ಬಗ್ಗೆ ವಿಚಾರಿಸುತ್ತಿದ್ದಾರೆ. ಆದರೆ ಅಧಿಕಾರಿಗಳನ್ನು ವಿಚಾರಿಸಿದರೆ ಸ್ಪಷ್ಟ ಮಾಹಿತಿ ನೀಡುತ್ತಿಲ್ಲ. ಉಳಿದ 15 ದಿನಗಳಲ್ಲಿ ಕಾರ್ಡುದಾರರಿಗೆ ಅಕ್ಕಿ ವಿತರಣೆ ತೊಂದರೆಯಾಗಲಿದೆ. ಹಾಗಾಗಿ, ಕೂಡಲೆ ಆಹಾರ ಪದಾರ್ಥ ಎತ್ತುವಳಿಗೆ ಅವಕಾಶ ನೀಡಬೇಕು ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಪಡಿತರ ಚೀಟಿದಾರರಿಗೆ ಆಹಾರ ಧಾನ್ಯ ಪಡೆಯುವಾಗ ಮುದ್ರಿತ ರಶೀದಿ ನೀಡುವ ನಿಯಮ ಜಾರಿಗೆ ತರುವ ಮುನ್ನ ಮಾಲೀಕರ ಜತೆ ಸರಕಾರ ಚರ್ಚಿಸಬೇಕು. ರೇಷನ್ ವಿತರಣೆಗೆ ಸಂಬಂಧಪಟ್ಟಂತೆ ಹೊಸ ಹೊಸ ನಿಯಮ ವಿಧಿಸಲಾಗುತ್ತಿದೆ. ಇದರಿಂದ, ಪಡಿತರ ವಿತರಣೆಗೆ ಸಮಸ್ಯೆಯಾಗಲಿದೆ ಎಂದು ಕೃಷ್ಣಪ್ಪ ಹೇಳಿದರು.

- **1.28 ಕೋಟಿ ಬಿಪಿಎಲ್**
- **10.80 ಲಕ್ಷ ಅಂತ್ಯೋದಯ**
- **4.11 ಕೋಟಿ ಅನ್ನಭಾಗ್ಯ ಫಲಾನುಭವಿಗಳು**

ಹಿಂದೆಯೂ ತಡವಾಗಿ ಹಂಚಿಕೆ

2 ತಿಂಗಳ ಹಿಂದೆಯೂ ಅಕ್ಕಿ ವಿತರಣೆಯಲ್ಲಿ ವ್ಯತ್ಯಯವಾಗಿತ್ತು. ಹಣದ ಬದಲು ಫೆಬ್ರವರಿಯಿಂದ ಹೆಚ್ಚುವರಿ ಅಕ್ಕಿ ವಿತರಿಸಲು ರಾಜ್ಯ ಸರಕಾರ ಕ್ರಮ ಕೈಗೊಂಡಿತ್ತು. ಈ ಹಿನ್ನೆಲೆಯಲ್ಲಿ ಫೆಬ್ರವರಿ, ಮಾರ್ಚ್ ತಿಂಗಳ ಅಕ್ಕಿಯನ್ನು ಒಂದೇ ಬಾರಿ ವಿತರಿಸಬೇಕಿತ್ತು. ಜತೆಗೆ, ಕೇಂದ್ರದ ಪಾಲಿನ 5 ಕೆ.ಜಿ. ಅಕ್ಕಿ ಸೇರಿ ಒಟ್ಟು 15 ಕೆ.ಜಿ. ಅಕ್ಕಿಯನ್ನು ಬಿಪಿಎಲ್‌ನ ಪ್ರತಿ ಸದಸ್ಯನಿಗೆ ನೀಡಬೇಕಿತ್ತು. ಆದರೆ, ನ್ಯಾಯಬೆಲೆ ಅಂಗಡಿಗಳಿಗೆ ತಡವಾಗಿ ರೇಷನ್ ಎತ್ತುವಳಿ ಅವಕಾಶ ಮಾಡಿಕೊಟ್ಟಿತ್ತು.

ಸನಾತನ ಶಾಸನಕ್ಕೆ ಶಸ್ತ್ರಕ್ಕಿಂತ ಹೆಚ್ಚಿನ ಶಕ್ತಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸನಾತನ ಭಾರತೀಯ ಶಾಸನಕ್ಕೆ ಶಸ್ತ್ರಕ್ಕಿಂತಲೂ ಹೆಚ್ಚಿನ ತಾಕತ್ತಿದೆ. ಜಗತ್ತಿನ ಎಲ್ಲಾ ಸಮಸ್ಯೆಗಳಿಗೂ ಶಾಸನದ ಮೂಲಕ ಪರಿಹಾರ ನೀಡುವ ಏಕೈಕ ವಿಶಿಷ್ಟ ರಾಷ್ಟ್ರ ಭಾರತ ಎಂದು ಅವಧೂತ ವಿನಯ್ ಗುರೂಜಿ ಹೇಳಿದರು.

ದಾಸರಹಳ್ಳಿಯ ಹೆಸರಘಟ್ಟ ಮುಖ್ಯ ರಸ್ತೆಯಲ್ಲಿರುವ ಎಂ.ಇ.ಐ. ಮೈದಾನದಲ್ಲಿ ರೀಪ್ ಫೌಂಡೇಶನ್ ಆಯೋಜಿಸಿದ್ದ ಮಹಾರುದ್ರ ಕಿರಾತ ಮೂರ್ತಿ ಯಜ್ಞಕ್ಕೆ ಚಾಲನೆ ನೀಡಿ ಮಾತನಾಡಿ, ಭಾರತದ ಶಾಸ್ತ್ರ ಪದ್ಧತಿಗಳಿಗೆ ವೈಜ್ಞಾನಿಕ ಹಿನ್ನೆಲೆಯಿದ್ದು, ಪ್ರತಿಯೊಂದು ಆಚರಣೆ ಹಿಂದೆ ವಿಶೇಷ ಮಹತ್ವ ಅಡಗಿದೆ. ಕೊಬ್ಬರಿ ಎಣ್ಣೆ ಅಥವಾ ತುಪ್ಪದ ದೀಪ ಬೆಳಗುವುದರಿಂದ ವಾತಾವರಣ ಶುದ್ಧಗೊಂಡು ಆಮ್ಲಜನಕವು ದೊರೆಯುತ್ತದೆ. ಭಾರತವು ಯೋಗಭೂಮಿ, ಇಲ್ಲಿನ ಜ್ಞಾನಶಿಖರವನ್ನು ದೇಶಾದ್ಯಂತ ಪಸರಿಸಿದವರು ಭಗವತ್ಪಾದ ಶಂಕರಾಚಾರ್ಯರು. ಅಂತಹ ಪೂಜ್ಯರು ಜನ್ಮವೆತ್ತಿದ ಪುಣ್ಯಭೂಮಿ ಕೇರಳ ಕೇರಳದ ಸಂಸ್ಕೃತಿ, ಸಂಸ್ಕಾರಗಳ ಪ್ರಚಾರಕ್ಕೆ ಮಹಾರುದ್ರ, ಕಿರಾತ ಯಜ್ಞ ಪೂರಕವಾಗಿದೆ. ಆ ಕಾರ್ಯವನ್ನು ಇದೇ ಮೊದಲ ಬಾರಿಗೆ ಬೆಂಗಳೂರಿನಲ್ಲಿ ಆಯೋಜಿಸುವ ಮೂಲಕ ಗೋಪಿನಾಥ ವನ್ನೇರಿಯವರು ಯಶಸ್ವಿಯಾಗಿದ್ದಾರೆ. ಧಾರ್ಮಿಕ ಕಾರಣಕ್ಕೆ ಎಲ್ಲರೂ ಒಟ್ಟಾಗಿ ಸೇರಿರುವುದು ಸ್ವಾಗತಾರ್ಹ ಎಂದು ಅಭಿನಂದಿಸಿದರು.

ಶಾಸಕ ಮುನಿರಾಜು ಮಾತನಾಡಿ, ಜಗತ್ತಿನ ಯಾವುದೇ ಮೂಲೆಗೆ ಹೋದರೂ ಭಾರತೀಯರು ಏನಾದರೊಂದು ಸಾಧನೆಯಿಂದ ಗುರುತಿಸಿಕೊಳ್ಳುತ್ತಾರೆ. ಭಾರತೀಯರ ಸಾಧನೆ ಹಿಂದೆ ತಲೆತಲಾಂತರದಿಂದ ನಡೆದುಕೊಂಡು ಬಂದಿರುವ ಪೂಜೆ, ಜಪ, ತಪ, ಯಾಗ, ಯಜ್ಞಗಳ ಸಂಸ್ಕಾರವಿದೆ. ಬರಗಾಲ ಮತ್ತಿತರ ಸಂದಿಗ್ಧ ಸಂದರ್ಭಗಳಲ್ಲಿ ಋಷಿಮುನಿಗಳು ಮಾಡುತ್ತಿದ್ದ ಮಹಾರುದ್ರ, ಕಿರಾತಮೂರ್ತಿ ಯಜ್ಞವು ಇದೇ ಮೊದಲ ಬಾರಿಗೆ ಕರ್ನಾಟಕದಲ್ಲಿ ನಡೆಯುತ್ತಿದೆ. ಅದರಲ್ಲೂ ದಾಸರಹಳ್ಳಿ ಕ್ಷೇತ್ರದಲ್ಲಿ ನಡೆಯುತ್ತಿರುವುದು ನಮ್ಮೆಲ್ಲರ ಪುಣ್ಯ ಎಂದರು.

ಬೆಳಗ್ಗೆ ಗಣಪತಿ ಹೋಮದೊಂದಿಗೆ ಆರಂಭವಾಗಿ ಸಂಜೆ 1008 ತೆಂಗಿನಕಾಯಿ ಒಡೆದು ಅರ್ಪಿಸುವ ಮೂಲಕ ಮೊದಲನೇ ದಿನದ ಕಾರ್ಯಕ್ರಮ ಮುಕ್ತಾಯವಾಯಿತು. ಭಾನುವಾರ ಮಧ್ಯಾಹ್ನ 3 ಗಂಟೆಯಿಂದ ಯಜ್ಞದ ಆಹುತಿ ಭಾಗವಾಗಿ 24 ಸಾವಿರ ತೆಂಗಿನಕಾಯಿಗಳನ್ನು ಒಡೆದು ಅರ್ಪಿಸಲಾಯಿತು.

ಸಮಾರಂಭದಲ್ಲಿ ಮಾಜಿ ಸಚಿವ ರಾಮಚಂದ್ರ ಗೌಡ, ವಿಆರ್‌ಎಲ್ ಸಮೂಹ ಸಂಸ್ಥೆಗಳ ಚೇರ್ಮನ್ ಡಾ. ವಿಜಯ ಸಂಕೇಶ್ವರ, ಲಲಿತಾ ಸಂಕೇಶ್ವರ, ಸೂರಜ್ ಫೌಂಡೇಶನ್ ಅಧ್ಯಕ್ಷೆ ಸುಜಾತ ಮುನಿರಾಜು, ಬಿಜೆಪಿ ಯುವ ಮುಖಂಡ ಸಪ್ತಗಿರಿ ಗೌಡ, ರೀಪ್ ಫೌಂಡೇಶನ್ ಅಧ್ಯಕ್ಷ ಗೋಪಿನಾಥ ವನ್ನೇರಿ, ಕಾರ್ಯದರ್ಶಿ ಜಯರಾಜ್, ವಿಶ್ರಾಂತ ಕುಲಪತಿ ನಾರಾಯಣ ಗೌಡ, ಕರ್ನಾಟಕ ರಕ್ಷಣಾ ವೇದಿಕೆ ಮುಖಂಡ ಪ್ರವೀಣ್ ಶೆಟ್ಟಿ ಮತ್ತಿತರರು ಇದ್ದರು.

ದಾಸರಹಳ್ಳಿಯ ಹೆಸರಘಟ್ಟ ಮುಖ್ಯ ರಸ್ತೆಯಲ್ಲಿರುವ ಎಂ.ಇ.ಐ. ಮೈದಾನದಲ್ಲಿ ರೀಪ್ ಫೌಂಡೇಶನ್ ಆಯೋಜಿಸಿದ್ದ ಮಹಾರುದ್ರ ಕಿರಾತ ಮೂರ್ತಿ ಯಜ್ಞಕ್ಕೆ ಚಾಲನೆ ನೀಡಲಾಯಿತು.

> **ಸರ್ವರನ್ನು ಒಟ್ಟಾಗಿ ಕೊಂಡೊಯ್ಯುವುದು ಸನಾತನ ಧರ್ಮದ ಧ್ಯೇಯ. ವಿಶ್ವಕ್ಕೆ ಎದುರಾಗುವ ಪ್ರತಿಯೊಂದು ಸಮಸ್ಯೆಗೂ ಭಾರತದಲ್ಲಿ ಉತ್ತರವಿದೆ. ಇಲ್ಲಿ ನಡೆಯುವ ಇಂತಹ ಪೂಜೆ, ಪುನಸ್ಕಾರಗಳಲ್ಲಿ ವಿಶೇಷ ಶಕ್ತಿ ಇದೆ. ಆ ಶಕ್ತಿ ಜಾಗತಿಕ ಸಮಸ್ಯೆಗೆ ಪರಿಹಾರ ಒದಗಿಸುತ್ತದೆ.**
> - ಬ್ರಹ್ಮಶ್ರೀ ಮೋಹನ್‌ಜಿ, ಆಧ್ಯಾತ್ಮ ಚಿಂತಕರು

ಸಂಪುಟ: 10 ಸಂಚಿಕೆ: 152 ಪುಟಗಳು: 10+4 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಆರೋಗ್ಯ ಆವಿಷ್ಕಾರ ಯೋಜನೆಗೆ ಚಾಲನೆ

ರಾಜ್ಯ ಸರಕಾರದ ವತಿಯಿಂದ ₹440.63 ಕೋಟಿ ವೆಚ್ಚದಲ್ಲಿ 'ಆರೋಗ್ಯ ಆವಿಷ್ಕಾರ' ಯೋಜನೆಯಡಿ ಕಲ್ಯಾಣ ಕರ್ನಾಟಕ ವಿಭಾಗದ ಆರೋಗ್ಯ ಇಲಾಖೆಯ ವಿವಿಧ ಕಾಮಗಾರಿಗಳಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಜಿಲ್ಲಾ ಕ್ರೀಡಾಂಗಣದಲ್ಲಿ ಶನಿವಾರ ಚಾಲನೆ ನೀಡಿದರು.

ದ.ಆಫ್ರಿಕಾಗೆ ಪ್ರಥಮ ಬವುಮಾನ

ಹರಿಣ ಪಡೆ ಟೆಸ್ಟ್ ಚಾಂಪಿಯನ್ | ಕಳಚಿದ ಚೋಕರ್ಸ್ ಹಣೆಪಟ್ಟಿ

ಲಾರ್ಡ್ಸ್ ಕ್ರೀಡಾಂಗಣದಲ್ಲಿ ನಡೆದ ವಿಶ್ವಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾವನ್ನು ಮಣಿಸಿದ ದಕ್ಷಿಣ ಆಫ್ರಿಕಾ ತಂಡ ಮೊಟ್ಟ ಮೊದಲ ಬಾರಿಗೆ ಐಸಿಸಿ ಕಪ್ ಗೆದ್ದು ಸಂಭ್ರಮಿಸಿದೆ. ಹರಿಣ ಪಡೆ ತೆಂಬಾ ಬವೂಮ ನಾಯಕತ್ವ ದಲ್ಲಿ 27 ವರ್ಷಗಳ ಬಳಿಕ ಮೊದಲ ಬಾರಿಗೆ ಐಸಿಸಿ ಕಪ್ ಗೆದ್ದು ಇತಿಹಾಸ ನಿರ್ಮಿಸಿದೆ.

ವಿವರಪುಟ → 8

ಕೋಟಿ ರು. **31.05** ಚಾಂಪಿಯನ್ ದಕ್ಷಿಣ ಆಫ್ರಿಕಾಗೆ ರು. ನಗದು ಬಹುಮಾನ

ಕೋಟಿ ರು. **18.63** ರನ್ನರ್ ಅಪ್ ಆಸ್ಟ್ರೇಲಿಯಾ

ಮಾರ್ಕ್ರಮ್ ಶತಕ

ಏಡೆನ್ ಮಾರ್ಕ್ರಮ್ 2ನೇ ಇನ್ನಿಂಗ್ಸ್‌ನಲ್ಲಿ 207 ಎಸೆತಗಳಲ್ಲಿ 14 ಬೌಂಡರಿ ಸಹಿತ 136 ರನ್ ಗಳಿಸಿ ಗೆಲುವಿನ ರೂವಾರಿಯಾದರು. ನಾಯಕ ಬವೂಮ 69 ರನ್ ಗಳಿಸಿ ಸಮರ್ಥ ಜತೆಯಾಟ ನೀಡಿದರು. ಎರಡೂ ಇನ್ನಿಂಗ್ಸ್ ಸೇರಿ ಒಟ್ಟು 9 ವಿಕೆಟ್ ಕಬಳಿಸಿದ ಕಗಿಸೋ ರಬಾಡಾ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು.

ಸಾವಿನ ಸಂಖ್ಯೆ 279ಕ್ಕೆ ಏರಿಕೆ

ತನಿಖೆಗೆ ಸಮಿತಿ

ಏರ್‌ಇಂಡಿಯಾ ದುರಂತ

- ದುರಂತ ನಡೆದ ಸ್ಥಳದಲ್ಲಿ ಪತ್ತೆಯಾಗಿರುವ ವಿಮಾನದ ಬ್ಲಾಕ್ ಬಾಕ್ಸ್‌ನಿಂದ ಮಾಹಿತಿ ಕಲೆ ಹಾಕುತ್ತಿರುವ ತನಿಖಾ ಸಂಸ್ಥೆಗಳು
- ವಿಮಾನ ಡಿಕ್ಕಿ ಯಾದ ಹಾಸ್ಟೆಲ್ ಕಟ್ಟಡ ಸಂಪೂರ್ಣ ಧ್ವಂಸವಾಗಿದ್ದು, ಅಲ್ಲಿದ್ದ ವಿದ್ಯಾರ್ಥಿಗಳನ್ನು ಬೇರೆಡೆಗೆ ಸ್ಥಳಾಂತರಿಸಲಾಗಿದೆ

ಅಹಮದಾಬಾದ್: ಅಹಮದಾ ಬಾದ್ ವಿಮಾನ ದುರಂತದ ತನಿಖೆಗೆ ಕೇಂದ್ರ ಸರಕಾರವು ಗೃಹ ಕಾರ್ಯದರ್ಶಿ ನೇತೃತ್ವದ ಉನ್ನತ ಮಟ್ಟದ ಸಮಿತಿಯನ್ನು ರಚಿಸಿದೆ. ದುರ್ಘಟನೆಯ ಮೂಲ ಕಾರಣವನ್ನು ಪತ್ತೆ ಹಚ್ಚುವ ಜತೆಗೆ ಭವಿಷ್ಯದಲ್ಲಿ ಇಂಥ ಘಟನೆಗಳನ್ನು ಎದುರಿಸಲು ಸಮಗ್ರ ಮಾರ್ಗಸೂಚಿಗಳನ್ನು ಸೂಚಿಸಿ ಎಂದು ನಿರ್ದೇಶಿಸಿದೆ.

ವರದಿ ಸಲ್ಲಿಕೆಗೆ 3 ತಿಂಗಳ ಕಾಲಾವಕಾಶ ನೀಡಲಾಗಿದ್ದು, ವಿಮಾನದ ದತ್ತಾಂಶ, ಕಾಕ್‌ಪಿಟ್‌ನ ಧ್ವನಿ ದಾಖಲೆ, ವಿಮಾನ ನಿರ್ವಹಣೆ ದಾಖಲೆಗಳು, ಎಟಿಸಿ ಲಾಗ್ ಹಾಗೂ ಪ್ರತ್ಯಕ್ಷ ಸಾಕ್ಷ್ಯಗಳು ಸೇರಿ ಎಲ್ಲ ದಾಖಲೆಗಳನ್ನು ಪರಿಶೀಲನೆ ನಡೆಸುವ ಅಧಿಕಾರ ನೀಡಲಾಗಿದೆ. ಸ್ಥಳ ಪರಿಶೀಲನೆ, ಸಿಬ್ಬಂದಿ ಹಾಗೂ ವಾಯು ಸಂಚಾರ ನಿಯಂತ್ರಣ ಸಿಬ್ಬಂದಿ ಸಂದರ್ಶನ ಮತ್ತು ಅಂತಾರಾಷ್ಟ್ರೀಯ ಏಜೆನ್ಸಿಗಳ ಸಮನ್ವಯದೊಂದಿಗೆ ಕೆಲಸ ಮಾಡಲೂ ಅಧಿಕಾರ ನೀಡಲಾಗಿದೆ. → 4

171 ಬಳಕೆ ಇಲ್ಲ

ಅಹಮದಾಬಾದ್ ವಿಮಾನ ದುರಂತದ ಬೆನ್ನಲ್ಲೇ ಏರ್ ಇಂಡಿಯಾ ಮತ್ತು ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನಗಳು '171' ಸಂಖ್ಯೆಯನ್ನು ಬಳಸದಿರಲು ನಿರ್ಧರಿಸಿವೆ.

ವಾಯುಯಾನಕ್ಕೆ ಸಂಬಂಧಿಸಿದಂತೆ ನಾವು ಕಟ್ಟುನಿಟ್ಟಾದ ಸುರಕ್ಷತಾ ಮಾನದಂಡಗಳನ್ನು ಅನುಸರಿಸುತ್ತೇವೆ. ಆದರೂ ಬೋಯಿಂಗ್ 787 ವಿಮಾನವನ್ನು ಒಳಗೊಂಡ ಇತ್ತೀಚಿನ ಘಟನೆಯ ನಂತರ, ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಭವಿಷ್ಯದ ಸಮಸ್ಯೆಗಳನ್ನು ತಡೆಗಟ್ಟಲು ಬೋಯಿಂಗ್ 787 ಸರಣಿಯ ವಿಮಾನಗಳ ಮೇಲೆ ವಿಸ್ತೃತ ಕಣ್ಗಾವಲು ನಡೆಸಲು ಕೇಂದ್ರ ಸರಕಾರ ಯೋಜಿಸಿದೆ.

– **ರಾಮ್ ಮೋಹನ್ ನಾಯ್ಡು ಕಿಂಜರಪು** ನಾಗರಿಕ ವಿಮಾನಯಾನ ಸಚಿವ

ರಾಜಸ್ಥಾನದ ಮಹೇಶ್, ಮಧ್ಯಪ್ರದೇಶದ ಉತ್ಕರ್ಷ್ ಟಾಪರ್ಸ್

ನೀಟ್ ಫಲಿತಾಂಶ ಪ್ರಕಟ

ದೆಹಲಿ: ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ) ನಡೆಸುವ ನೀಟ್ ಪರೀಕ್ಷೆಯ ಫಲಿತಾಂಶ ಶನಿವಾರ ಪ್ರಕಟಗೊಂಡಿದ್ದು, ರಾಜಸ್ಥಾನದ ಮಹೇಶ್ ಕುಮಾರ್ ಮೊದಲ ರ‍್ಯಾಂಕ್ ಪಡೆದರೆ, ಮಧ್ಯಪ್ರದೇಶದ ಉತ್ಕರ್ಷ ಅವಾಧಿಯಾ, ಮಹಾರಾಷ್ಟ್ರದ ಕೃಷಾಂಗ್ ಜೋಶಿ, ದೆಹಲಿಯ ಮೃಣಾಲ್ ಕಿಶೋರ್ ಜಾ, ದೆಹಲಿಯ ಅವಿಕಾ ಅಗರವಾಲ್ ಕ್ರಮವಾಗಿ 2, 3, 4 ಮತ್ತು 5ನೇ ರ‍್ಯಾಂಕ್ ಪಡೆದಿದ್ದಾರೆ. ಈ ವರ್ಷ 22.09 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ತೆಗೆದು ಕೊಂಡಿದ್ದರು. ಇವರಲ್ಲಿ 12.36 ಲಕ್ಷ ಅಭ್ಯರ್ಥಿಗಳು ಅರ್ಹತೆ ಗಿಟ್ಟಿಸಿಕೊಂಡಿದ್ದಾರೆ. → 4

ನಿಖಿಲ್ ಸೊನ್ನದ ರಾಜ್ಯಕ್ಕೆ ಪ್ರಥಮ



ವಿಜಯಪುರ ನಗರದ ಸಂಜೀವಿನಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯ ದಂಪತಿ ಡಾ.ಸಿದ್ದಪ್ಪ ಸೊನ್ನದ ಮತ್ತು ಡಾ. ಮೀನಾಕ್ಷಿ ಸೊನ್ನದ ಅವರ ಪುತ್ರ, ನಿಖಿಲ್ ಸೊನ್ನದ ಅವರು ನೀಟ್ ಪರೀಕ್ಷೆಯಲ್ಲಿ ರಾಷ್ಟ್ರಕ್ಕೆ 17ನೇ ರ‍್ಯಾಂಕ್ ಹಾಗೂ ರಾಜ್ಯಕ್ಕೆ ಪ್ರಥಮ ರ‍್ಯಾಂಕ್ ಗಳಿಸಿದ್ದಾರೆ. ನಿಖಿಲ್ ಅವರು 720 ಅಂಕ ಗಳಿಗೆ 670 ಅಂಕ ಗಳಿಸಿದ್ದಾರೆ. ಪಿಯುಸಿಯಲ್ಲಿ ಶೇ 98.3 ಅಂಕ ಗಳಿಸಿದ್ದರು.

ಉಭಯ ದೇಶಗಳಿಂದ ಸತತ ದಾಳಿ, ಪ್ರತಿದಾಳಿ

ಮಧ್ಯಪ್ರಾಚ್ಯದಲ್ಲಿ ಕಾವೇರಿದ ಯುದ್ಧ ಕಾರ್ಮೋಡ

ಇಸ್ರೇಲ್-ಇರಾನ್ ಸಂಘರ್ಷ ತೀವ್ರ

ಟೆಹರಾನ್: ಇಸ್ರೇಲ್ ಹಾಗೂ ಇರಾನ್ ನಡುವಿನ ಸಂಘರ್ಷ ತೀವ್ರ ಸ್ವರೂಪ ಪಡೆದು ಕೊಂಡಿದ್ದು, ಉಭಯ ದೇಶಗಳು ಸತತ ದಾಳಿ, ಪ್ರತಿದಾಳಿ ನಡೆಸುತ್ತಿವೆ. ಪರಿಣಾಮವಾಗಿ ಮಧ್ಯ ಪ್ರಾಚ್ಯ ದೇಶಗಳಲ್ಲಿ ಮತ್ತೆ ಯುದ್ಧದ ಕಾರ್ಮೋಡ ಕವಿದಿದೆ.

ಇರಾನ್‌ನ ಪರಮಾಣು ಘಟಕಗಳು ಮತ್ತು ಸೇನಾ ನೆಲೆ ಗಳನ್ನು ಗುರಿಯಾಗಿಸಿ ಇಸ್ರೇಲ್ ಸೇನೆ ಶುಕ್ರವಾರ ಬೆಳಗಿನ ಜಾವ ನಡೆಸಿದ್ದ ಭಾರಿ ವೈಮಾನಿಕ ದಾಳಿಯಲ್ಲಿ 78 ಜನ ಮೃತ ಪಟ್ಟಿದ್ದು, 320ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು. ಇಸ್ರೇಲ್‌ದಾಳಿಗೆ ಇರಾನ್ ಪ್ರತಿದಾಳಿ ನಡೆಸಿದ್ದು, ಇಸ್ರೇಲ್‌ನ ಕ್ಷಿಪಣಿ ನಿರೋಧಕ ಸಾಧನಗಳನ್ನು ನಿಷ್ಕ್ರಿಯಗೊಳಿಸಲು ಯತ್ನಿಸಿದೆ. → 4

ವಿಶ್ವಸಂಸ್ಥೆ ಸಭೆಗೆ ಭಾರತ ಗೈರು

ಗಾಜಾ ಪಟ್ಟಿಯಲ್ಲಿ ತಕ್ಷಣದ, 'ಷರತ್ತಿಲ್ಲದ ಮತ್ತು ಶಾಶ್ವತ' ಕದನ ವಿರಾಮಕ್ಕೆ ಸಂಬಂಧಿಸಿದಂತೆ ಕರಡು ನಿರ್ಣಯ ಅಂಗೀಕರಿಸಲು ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ನಡೆದ ಮತದಾನ ಪ್ರಕ್ರಿಯೆಯಿಂದ ಭಾರತ ದೂರ ಉಳಿದಿದೆ. ಕಾಂಗ್ರೆಸ್ ಈ ನಡೆಯನ್ನು ಟೀಕಿಸಿದೆ.

ನಾಗರಿಕರನ್ನು ಗುರಿಯಾಗಿಸಿ ದಾಳಿ ನಡೆಸುವ ಮೂಲಕ ಇರಾನ್ ಅಪಾಯದ ಗೆರೆಯನ್ನು ದಾಟಿದೆ. ಇದಕ್ಕಾಗಿ ಆ ದೇಶ ದುಬಾರಿ ಬೆಲೆ ತೆರಬೇಕಾಗುತ್ತದೆ.

–**ಇಸ್ರೇಲ್ ಕಟ್ಜ್**, ಇಸ್ರೇಲ್ ರಕ್ಷಣಾ ಸಚಿವ



ಹೊಣೆಯರಿತ ವ್ಯಕ್ತಿಗಳು, ಬ್ರ್ಯಾಂಡ್‌ಗಳು ನಿರೀಕ್ಷೆಯನ್ನು ಹುಸಿಗೊಳಿಸೋದಿಲ್ಲ

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್ 6



ಸಂಸ್ಕೃತಕ್ಕೂ, ಸಂತನ ಸಾಧನೆಗೂ ಸಂದ ಜ್ಞಾನಪೀಠ

ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ 7

ದಾರಿದೀಪೋಕ್ತಿ

ಯಾರಾದ್ರೂ ನಿಮ್ಮನ್ನು ಟೀಕಿಸಿದರೆ, ಅವಮಾನಿಸಿದರೆ ಪ್ರತಿಕ್ರಿಯಿಸಬಾರದು. ನೀವು ಹಿಂದೆ ಮುಂದೆ ಯೋಚಿಸದೇ ಪ್ರತಿಕ್ರಿಯಿಸಲಿ ಎಂಬುದು ಟೀಕಾಕಾರರ ಉದ್ದೇಶವಾಗಿರುತ್ತದೆ. ನಿಮ್ಮ ಮೌನದಿಂದ ಅವರನ್ನು ಹತಾಶರನ್ನಾಗಿ ಮಾಡಿ.

ವಕ್ರತುಂಡೋಕ್ತಿ

ಕೆಲವರಿಗೆ ನೀವು ಮೂರ್ಖ ಎಂದು ಬೈದರೆ ಬೇಸರವಾಗುತ್ತದೆ. ನಿಜ ಸಂಗತಿ ಹೇಗೆ ಗೊತ್ತಾಯಿತು ಎಂಬುದು ಅವರ ಬೇಸರಕ್ಕೆ ಕಾರಣವಾಗಿರುತ್ತದೆ.

19ಕ್ಕೆ ಶುಭಾಂಶು ಗಗನಯಾನ

ದೆಹಲಿ: ಶುಭಾಂಶು ಶುಕ್ಲಾ, ಪೋಲೆಂಡ್ ಮತ್ತು ಹಂಗೇರಿಯ ಇತರೆ ಮೂವರು ಗಗನಯಾತ್ರಿಗಳನ್ನು ಹೊತ್ತು ಐಎಸ್‌ಎಸ್‌ಗೆ ಹೊರಟಿರುವ 'ಆಕ್ಸಿಯಮ್-4' ಗಗನನೌಕೆ ಇದೇ ಜೂ.19ರಂದು ಉಡಾವಣೆಗೊಳ್ಳಲಿದೆ.

ಫನ್‌ತರಂಗ

– ರಘುಪತಿ ಶೃಂಗೇರಿ –

ಅಭಿಮಾನಗಳನ್ನು ಉದ್ದೇಶಿಸಿ ರೋಷಾವೇಶದಲ್ಲಿ ಭಾಷಣ ಮಾಡುವಾಗ ಉದುರಿದ ನಟನ 'ಮೀಸೆ' ಸುದ್ದಿ



ಪ್ರಾಂಶುಪಾಲರ ಕ್ರಮಕ್ಕೆ ಸೋಷಿಯಲ್ ಮೀಡಿಯಾದಲ್ಲಿ ಆಕ್ರೋಶ

ಕನ್ನಡ ಮಾತನಾಡಿದ್ದಕ್ಕೆ ವಜಾ

ಬೆಂಗಳೂರು: ರಾಜಧಾನಿಯ ಪ್ರತಿಷ್ಠಿತ ಕಾಲೇಜೊಂದರಲ್ಲಿ ಕನ್ನಡಿಗ ಉಪನ್ಯಾಸಕನ ಮೇಲೆ ದಬ್ಬಾಳಿಕೆ ನಡೆದಿರುವ ಘಟನೆ ಬೆಳಕಿಗೆ ಬಂದಿದೆ. ಕಾಲೇಜಿನಲ್ಲಿ ಕನ್ನಡ ಮಾತನಾಡಿದ್ದಕ್ಕೆ ಉಪನ್ಯಾಸಕ ನನ್ನು ಬಲವಂತವಾಗಿ ರಾಜೀನಾಮೆ ಕೊಡಿಸಿ, ವಜಾ ಮಾಡಲಾ ಗಿದೆ. ಇದರಿಂದ ಕರ್ನಾಟಕದಲ್ಲಿ ಕನ್ನಡ ಮಾತ ನಾಡುವುದೂ ಅಪರಾಧವೇ? ಎಂಬ ಪ್ರಶ್ನೆ ಉದ್ಭವಿಸಿದೆ. ಕನ್ನಡದಲ್ಲಿ ಪ್ರಶ್ನೆ ಕೇಳಿದ ವಿದ್ಯಾರ್ಥಿಗೆ ಕನ್ನಡದಲ್ಲಿಯೇ ಉತ್ತರಿಸಿದ್ದಕ್ಕೆ ಉಪನ್ಯಾಸಕನನ್ನು ಕೆಲಸದಿಂದ ವಜಾ ಮಾಡಲಾಗಿದೆ ಎನ್ನುವ ಆರೋಪ ಕೇಳಿಬಂದಿದೆ.

ಬೆಂಗಳೂರಿನ ಆರ್‌ವಿ ಲರ್ನಿಂಗ್ ಹಬ್ ಸಂಸ್ಥೆಯಲ್ಲಿ ಕನ್ನಡ ಮಾತನಾಡಿದ್ದಕ್ಕೆ ಉಪನ್ಯಾಸಕನನ್ನು ವಜಾ ಮಾಡಲಾಗಿದೆ. ಪಾಠ ಮಾಡುತ್ತಿದ್ದಾಗ ವಿದ್ಯಾರ್ಥಿಯೊಬ್ಬ, ಕನ್ನಡದಲ್ಲಿ ಪ್ರಶ್ನೆ ಕೇಳಿದ್ದಾನೆ. → 4

ಕಾಲೇಜಿನ ನಡೆಗೆ ವಿರೋಧ

ಉಪನ್ಯಾಸಕರನ್ನು ಅಮಾನತು ಮಾಡಿರುವ ಕ್ರಮಕ್ಕೆ ಸಾಮಾಜಿಕ ಜಾಲತಾಣದಲ್ಲಿ ತೀವ್ರ ವಿರೋಧ ವ್ಯಕ್ತವಾಗಿದ್ದು, ಕರ್ನಾಟಕದಲ್ಲಿ ಕನ್ನಡದಲ್ಲಿ ಮಾತನಾಡಿದ್ದಕ್ಕೆ ವಜಾ ಮಾಡಿದರೆ ಭಾಷೆಗೆ ಅವಮಾನವಾದಂತೆ. ಆದ್ದರಿಂದ ಕೂಡಲೇ ಕಾಲೇಜು ಆಡಳಿತ ಮಂಡಳಿ ವಿರುದ್ಧ ಸರಕಾರ ಕ್ರಮವಹಿಸಬೇಕು. ಇನ್ನು ಸಣ್ಣ ಪುಟ್ಟ ವಿಷಯಗಳಿಗೆ ಬೀದಿಗೆ ಇಳಿಯುವ ಕನ್ನಡ ಪರ ಸಂಘಟನೆಗಳು ಈ ಪ್ರಕರಣದಲ್ಲಿಯೂ ಹೋರಾಟ ಮಾಡಲಿ ಎಂದು ನೆಟ್ಟಿಗರು ಆಗ್ರಹಿಸಿದ್ದಾರೆ.



ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತ, ಹಿರಿಯ ಸಾಹಿತಿ ಎಸ್.ಎಲ್.ಭೈರಪ್ಪ ಅವರ ಧ್ಯೇಯೋದ್ದೇಶಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಎಸ್.ಎಲ್.ಭೈರಪ್ಪ ಪ್ರತಿಷ್ಠಾನ ಶನಿವಾರ ಲೋಕಾರ್ಪಣೆಗೊಂಡಿದ್ದು, ಕಾರ್ಯಕ್ರಮದಲ್ಲಿ ಭೈರಪ್ಪ ಅವರನ್ನು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಶತಾವಧಾನಿ ಗಣೇಶ್, ಲೇಖಕಿ ಸಹನಾ ವಿಜಯಕುಮಾರ್, ಪ್ರತಿಷ್ಠಾನದ ಅಧ್ಯಕ್ಷ ಅರುಣ ಸನ್ಮಾನಿಸಿದರು.

ರಾಜ್ಯದಲ್ಲಿ ಸುಮಾರು 3500 ಮಕ್ಕಳು ಕ್ಯಾನ್ಸರ್ ಬಾಧಿತರು

ಕ್ಯಾನ್ಸರ್ ಪೀಡಿತರಿಗೆ ಪ್ರತ್ಯೇಕ ಶಾಲೆ

- ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆ ಪಕ್ಕದಲ್ಲಿ ಶಾಲೆ ಆರಂಭ
- ಅಗತ್ಯ ಭೂಮಿ ಲಭ್ಯವಾದರೆ ಈ ವರ್ಷದಿಂದಲೇ ಶುರು
- ಆರಂಭದಲ್ಲಿ 10ನೇ ತರಗತಿ ವರೆಗೂ ಶಾಲೆ, ನಂತರ ವಿಸ್ತರಣೆ

ಬೆಂಗಳೂರು: ಕ್ಯಾನ್ಸರ್‌ನಿಂದ ಬಳಲುತ್ತಿರುವ ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರಾಗಬಾರದು ಎನ್ನುವ ಉದ್ದೇಶದಿಂದ ರಾಜ್ಯ ಸರಕಾರ ಇದೀಗ, ಕ್ಯಾನ್ಸರ್ ಪೀಡಿತ ಮಕ್ಕಳಿಗೆ ಪ್ರತ್ಯೇಕ ಶಾಲೆ ಆರಂಭಿಸಲು ಚಿಂತನೆ ನಡೆಸಿದೆ. ಎಲ್ಲವೂ ಅಂದುಕೊಂಡಂತೆ ನಡೆದರೆ ಪ್ರಸಕ್ತ ಸಾಲಿನಿಂದಲೇ ಈ ವಿಶೇಷ ಶಾಲೆ ಆರಂಭವಾಗಲಿದೆ. ರಾಜ್ಯದಲ್ಲಿ 3500ಕ್ಕೂ ಹೆಚ್ಚು ಮಕ್ಕಳು ಕ್ಯಾನ್ಸರ್‌ನಿಂದ ಬಳಲುತ್ತಿದ್ದು, ಈ ವಿದ್ಯಾರ್ಥಿಗಳು ಸಾಮಾನ್ಯ ಶಾಲೆಗಳಿಗೆ ಹೋಗಿ ಕಲಿಯುವುದು ಕಷ್ಟ ಎನ್ನುವ ಕಾರಣಕ್ಕೆ ಅನೇಕ ಪೋಷಕರು ಮಕ್ಕಳು ಶಾಲೆ ಕಳುಹಿಸುತ್ತಿಲ್ಲ ಎನ್ನುವ ಮಾತುಗಳು ಕೇಳಿಬಂದಿವೆ.

ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿರುವ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು, ಕ್ಯಾನ್ಸರ್‌ನಿಂದ ಸಂಕಷ್ಟಕ್ಕೊಳಗಾದ ವಿದ್ಯಾರ್ಥಿಗಳಿಗೆ ಚಿಕಿತ್ಸೆಯ ಜತೆಗೆ ಓದಿಗೂ ಅವಕಾಶವಾಗುವಂತೆ ನಗರದ ಕಿದ್ವಾಯಿ ಆಸ್ಪತ್ರೆಯ ಬಳಿ ವಸತಿ ಸಹಿತ ಶಾಲೆ ಆರಂಭಿಸಲಾಗುತ್ತಿದೆ ಎಂದು ಪ್ರಕಟಿಸಿದ್ದಾರೆ. ಕ್ಯಾನ್ಸರ್ ಗುಣಮುಖವಾಗುವ ಆರೋಗ್ಯ ಸಮಸ್ಯೆ. ರೋಗ ಬಂದಾಕ್ಷಣ ಬಹಳಷ್ಟು ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಾರೆ. ತಾವು ಸಚಿವ ರಾದ ಮೇಲೆ ಕ್ವಾಲಿಟಿ, ಇಕ್ವಾಲಿಟಿ, ಆಕ್ಸಿಸಬಲಿಟಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದು, ಕ್ಯಾನ್ಸರ್ ಕಾರಣಕ್ಕಾಗಿ ಮಕ್ಕಳು ಶಿಕ್ಷಣ ವಂಚಿತರಾಗಬಾರದು. → 4

ಸಮಾಚಾರ ಸಣ್ಣದಲ್ಲ

ಕಲುಷಿತ ನೀರು ಸೇವನೆ 30 ಮಂದಿ ಅಸ್ವಸ್ಥ

ರಾಯಚೂರು: ಕಲುಷಿತ ನೀರು ಸೇವಿಸಿ ವಾಂತಿ ಭೇದಿಯಾಗಿ 30ಕ್ಕೂ ಹೆಚ್ಚು ಮಂದಿ ಅಸ್ವಸ್ಥಗೊಂಡ ಘಟನೆ ಸಿಂಧನೂರು ತಾಲೂಕಿನ ಭೂತಲದಿನ್ನಿ ಗ್ರಾಮದಲ್ಲಿ ನಡೆದಿದೆ. ವಾಂತಿ ಭೇದಿಯಾದ 30ಕ್ಕೂ ಹೆಚ್ಚು ಗ್ರಾಮಸ್ಥರು ಸಿಂಧನೂರು ತಾಲೂಕು ಆಸ್ಪತ್ರೆಗೆ ದಾಖಲಾಗಿದ್ದಾರೆ. ಕುಡಿಯುವ ನೀರು ಪೂರೈಕೆ ಮಾಡುವ ಓವರ್‌ಹೆಡ್ ಟ್ಯಾಂಕರ್ ಒಂದು ವರ್ಷದಿಂದ ಸ್ವಚ್ಛ ಮಾಡಿಲ್ಲ. ಆದ್ದರಿಂದ ಕಲುಷಿಸಿ ಗೊಂಡ ನೀರು ಕುಡಿದು ಗ್ರಾಮಸ್ಥರು ಅಸ್ವಸ್ಥರಾಗಿದ್ದಾರೆ ಎನ್ನಲಾಗಿದೆ. ನಿರ್ಲಕ್ಷ್ಯ ವಹಿಸಿದ ಪಂಚಾಯತಿ ಕಚೇರಿಗೆ ಮುತ್ತಿಗೆ ಹಾಕಿ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

1 ಅಂಕ ಪಡೆದು ಟಾಪರ್

ಶಿವಮೊಗ್ಗ: ಒಂದು ಅಂಕದಿಂದ ಎಸ್‌ಎಸ್‌ಎಲ್‌ಸಿ ಟಾಪರ್ ಕನಸು ತಪ್ಪಿಸಿಕೊಂಡಿದ್ದ ಹುಡುಗಿ ಅದೇ ಒಂದು ಅಂಕಕ್ಕಾಗಿ ಮತ್ತೊಮ್ಮೆ ಪರೀಕ್ಷೆ ಎದುರಿಸಿ 625ಕ್ಕೆ 625 ಅಂಕ ಪಡೆದು ವಿಶೇಷ ಸಾಧನೆ ಮಾಡಿ ದ್ದಾಳೆ. ಶಿವಮೊಗ್ಗದ ಆದಿಚುಂಚನಗಿರಿ ಪ್ರೌಢ ಶಾಲೆಯ ಸಂಜನಾ.

ಎಸ್ ಮೊದಲ ಪರೀಕ್ಷೆಯಲ್ಲಿ 624 ಅಂಕ ಪಡೆದಿದ್ದಳು. ಬಯಲಾಜಿಯಲ್ಲಿ ಒಂದು ಅಂಕ ಕಟ್ ಆಗಿತ್ತು. ''ಥ ಇನ್ಫರ್ಮೇಶನ್ ಸೋರ್ಸ್ ಫಾರ್ ಮೇಕಿಂಗ್ ಪ್ರೋಟಿನ್ ಇನ್ ದ ಸೆಲ್ಸ್ ಇಸ್'' ಎಂಬ ಬಹು ಆಯ್ಕೆಯ ಪ್ರಶ್ನೆ ಕೇಳಲಾಗಿತ್ತು. ಅದಕ್ಕೆ ಜೀನ್, ಕ್ರೋಮೋಜೋಮ್, ಡಿಎನ್‌ಎ, ರೈಬೊಝೋಮ್ ಎಂಬ 4 ಆಯ್ಕೆ ಇತ್ತು. ಜೀನ್ ಸಹ ಪ್ರೋಟಿನ್ ಸೆಲ್ ಎಂದು ಸಂಜನಾ ಉತ್ತರ ನೀಡಿದ್ದಳು. ಆದರೆ ಸರಿಯಾದ ಉತ್ತರ ಡಿಎನ್‌ಎ ಎಂದಿತ್ತು. ಜೀನ್ ಸಹ ಸರಿ ಉತ್ತರ ಎಂಬುದು ಅನೇಕರ ವಾದ. ಆದರೂ ಒಂದು ಅಂಕದಿಂದ ರಾಜ್ಯಕ್ಕೆ ಟಾಪರ್ ಆಗುವ ಅವಕಾಶದಿಂದ ವಂಚಿತಳಾದ ಸಂಜನಾ ಮತ್ತೆ ಬಯಾಲಾಜಿ ಪರೀಕ್ಷೆ ಬರೆದು 80ಕ್ಕೆ 80 ಅಂಕ ಪಡೆದಿದ್ದಾಳೆ. ಈ ಮೂಲಕ 625ಕ್ಕೆ 625 ಅಂಕ ಪಡೆದ ಸಾಧನೆ ಮಾಡಿದ್ದಾಳೆ.

ನೀಟ್ ಫಲಿತಾಂಶ ಪ್ರಕಟ

← ಮೊದಲಪುಟದಿಂದ

ಕಳೆದ ಸಾಲಿಗೆ ಹೋಲಿಸಿದಲ್ಲಿ ಈ ವರ್ಷ ಕಡಿಮೆ ಫಲಿತಾಂಶ ದಾಖಲಾಗಿದೆ. ಕಳೆದ ವರ್ಷ 23.33 ಲಕ್ಷ ಅಭ್ಯರ್ಥಿಗಳು ಪರೀಕ್ಷೆ ಎದುರಿಸಿದ್ದರು. 13.15 ಲಕ್ಷ ಅಭ್ಯರ್ಥಿ ಗಳು ಅರ್ಹರಾಗಿದ್ದರು. ನೀಟ್ ಪರೀಕ್ಷೆಯಲ್ಲಿ ಉತ್ತರ ಪ್ರದೇಶದ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ (1.70 ಲಕ್ಷ) ಅರ್ಹತೆ ಪಡೆದಿದ್ದಾರೆ. ಮಹಾರಾಷ್ಟ್ರದ 1.25 ಲಕ್ಷ ಮತ್ತು ರಾಜಸ್ಥಾನದ 1.19 ಲಕ್ಷ ಅಭ್ಯರ್ಥಿಗಳು ವೈದ್ಯಕೀಯ ಕೋರ್ಸ್‌ಗಳಿಗೆ ಅರ್ಹರಾಗಿದ್ದಾರೆ. ದೇಶದಲ್ಲಿ ಒಟ್ಟು 1.08 ಲಕ್ಷ ವೈದ್ಯಕೀಯ ಸೀಟುಗಳಿವೆ. ಇದರಲ್ಲಿ 56 ಸಾವಿರ ಸರ್ಕಾರಿ, 52 ಸಾವಿರ ಖಾಸಗಿ ಕಾಲೇಜುಗಳಲ್ಲಿ ಸೀಟುಗಳು ಲಭ್ಯ ಇವೆ. ಇದರೊಂದಿಗೆ ದಂತ ವೈದ್ಯಕೀಯ, ಆಯುರ್ವೇದ, ಉನಾನಿ, ಸಿದ್ಧ ಕೋರ್ಸ್‌ಗಳನ್ನು ಸೇರಲು ನೀಟ್ ಪರೀಕ್ಷೆ ಪಾಸಾಗಿ ಅರ್ಹತೆ ಗಿಟ್ಟಿಸಿಕೊಳ್ಳುವುದು ಕಡ್ಡಾಯ.

ಕಲ್ಯಾಣ ಕರ್ನಾಟಕಕ್ಕೆ ಬಿಜೆಪಿ ಕೊಡುಗೆ ಶೂನ್ಯ: ಸಿಎಂ ಸಿದ್ದು

ಯಾದಗಿರಿಯಲ್ಲಿ ಆರೋಗ್ಯ ಆವಿಷ್ಕಾರ ಯೋಜನೆಗೆ ಚಾಲನೆ | ಮಲ್ಲಿಕಾರ್ಜುನ ಖರ್ಗೆ, ಡಿಕೆಶಿ ಭಾಗಿ

ಯಾದಗಿರಿ: ಕಲ್ಯಾಣ ಕರ್ನಾಟಕ ಭಾಗಕ್ಕೆ ಬಿಜೆಪಿ ಪಕ್ಷ ಯಾವುದೇ ಕೊಡುಗೆ ನೀಡಿಲ್ಲ. ಲೂಟಿ ಹೊಡೆಯುವುದು ಮತ್ತು ಸುಳ್ಳು ಹೇಳುತ್ತಾ ತಿರುಗಾಡುವುದೇ ಬಿಜೆಪಿ ಅವರ ಕೆಲಸವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ಯಾದಗಿರಿ ಜಿಲ್ಲಾ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಕೆಕೆಆರ್‌ಡಿಬಿ ಮಂಡಳಿಯಿಂದ ಆರೋಗ್ಯ ಅವಿಷ್ಕಾರ ಯೋಜನೆಯಡಿಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ ಸಹಯೋಗದಲ್ಲಿ 416. 68 ಕೋಟಿ ರು ವೆಚ್ಚದ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿ, ಬಿಜೆಪಿಯಿಂದ ಕಲಂ 371 (ಜೆ) ಗೆ ವಿರೋಧವಿತ್ತು. ಎಸ್. ಎಂ ಕೃಷ್ಣ ಮಾಡಿದ್ದ ಮನವಿಗೆ ಆಗಿನ ಉಪ ಪ್ರಧಾನಿ ಆ ಎಲ್.ಕೆ.ಅಡ್ವಾಣಿ ಅವರು 371ಜೆ ಜಾರಿ ಮಾಡುವುದಿಲ್ಲ ಎಂದು ಪತ್ರ ಬರೆದಿದ್ದರು. ಕೊನೆಗೆ ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿ ಖರ್ಗೆ, ಧರಂಸಿಂಗ್ ಹೋರಾಟದ ಫಲವಾಗಿ ನೀಡಿ 371ಜೆ ಜಾರಿ ಮಾಡಿದರು.

ಬಸವರಾಜ ಬೊಮ್ಮಾಯಿ ಕೆಕೆಆರ್‌ಡಿಬಿ ಮಂಡಳಿಗೆ 3 ಸಾವಿರ ಕೋಟಿ ರು. ಅನುದಾನ ಘೋಷಣೆ ಮಾಡಿ ನೀಡಲಿಲ್ಲ. ಆದರೆ, ನಾವು ಕಳೆದ ಮೂರು ವರ್ಷದಲ್ಲಿ 13 ಸಾವಿರ ಕೋಟಿ ಅನುದಾನ ನೀಡಲಾಗಿದೆ. ಇದರಲ್ಲಿ 5100 ಕೋಟಿ ರು. ಖರ್ಚು ಮಾಡಲಾಗಿದ್ದು, ಚುನಾವಣೆ ವೇಳೆ ಘೋಷಿಸಿದಂತೆ ಪ್ರತಿ ವರ್ಷ 5 ಸಾವಿರ ಕೋಟಿ ಹಣ ನೀಡುವುದನ್ನು ನಾನು ನಿಲ್ಲಿಸುವುದಿಲ್ಲ. ಹಾಗೆಯೇ ಮಂಡಳಿಯ ಅನುದಾನವನ್ನು ಸರಿಯಾದ ರೀತಿಯಲ್ಲಿ ವಿನಿಯೋಗಿಸಿ ಖರ್ಚು ಮಾಡುವುದಿಲ್ಲ ಎನ್ನುವ ಆರೋಪ ಅಳಿಸಿ ಹಾಕುವಂತೆ ಮಂಡಳಿಯ ಅಧ್ಯಕ್ಷರಿಗೆ ಸೂಚನೆ ನೀಡಿರುವುದಾಗಿ ಹೇಳಿದರು.

ನಂಜುಂಡಪ್ಪ ವರದಿ ಪ್ರಕಾರ ಅತ್ಯಂತ ಹಿಂದುಳಿದ ಪ್ರಾಂತ್ಯ ಎಂಬ ಹಣೆಪಟ್ಟಿ ಹೊತ್ತಿರುವ ಈ ಭಾಗದ ಸರ್ವತೋಮುಖ ಅಭಿವೃದ್ಧಿಗೆ ಸರಕಾರ ಬದ್ಧವಾಗಿದೆ. ಮಂಡಳಿ ಅನುದಾನದಲ್ಲಿ ಆರೋಗ್ಯ, ಶಿಕ್ಷಣ ಹಾಗೂ ಮೂಲಭೂತ ಸೌಕರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು . ಅಲ್ಲದೇ ಸದ್ಯ, ಅಭಿವೃದ್ಧಿ ಹೊಂದಿದ ಆಧಾರದ ಮೇಲೆ ಹೊಸದಾಗಿ ಗೋವಿಂದರಾವ್ ಅವರ ನೇತೃತ್ವದ ಉನ್ನತ ಸಮಿತಿ ರಚನೆ ಮಾಡಿದ್ದು, ಈ ಸಮಿತಿ ಕೊಡುವ ವರದಿಯನ್ನು ಸಹ ಯಥಾವತ್ತಾಗಿ ನಮ್ಮ ಸರಕಾರ ಜಾರಿಗೆ ತರಲಿದೆ ಎಂದು ಭರವಸೆ ನೀಡಿದರು.

ಗ್ಯಾರಂಟಿ ಯೋಜನೆಗಳ ಬಗ್ಗೆ ಬಿಜೆಪಿಯವರು ಸುಳ್ಳು ಹೇಳುತ್ತಾ ತಿರುಗಾಡುತ್ತಿದ್ದಾರೆ.ಆದರೆ, ನಾವು ಇದಕ್ಕೆ ತಲೆ ಕೆಡಿಸಿಕೊಳ್ಳದೆ ಪಂಚ ಗ್ಯಾರಂಟಿ ಯೋಜನೆಗಾಗಿ 90 ಸಾವಿರ ಕೋಟಿ ರು. ಮಾಡುವುದರ ಜತೆಗೆ ಯಾವುದೇ ಅಭಿವೃದ್ಧಿ ಕೆಲಸಗಳನ್ನು ಸ್ಥಗಿತಗೊಳಿಸಿಲ್ಲ. ಜಿಎಸ್‌ಟಿ ಸಂಗ್ರಹದಲ್ಲಿ ದೇಶದಲ್ಲಿ 2ನೇ ಸ್ಥಾನದಲ್ಲಿದ್ದೇವೆ. ಜಿಡಿಪಿ ನಮ್ಮ ಕಡೆಯಿಂದ ಈ ಮೊದಲು ಪ್ರತಿಶತ 7 ರಷ್ಟು ನೀಡಲಾಗುತ್ತಿತ್ತು. ಇದೀಗ ಪ್ರತಿಶತ 8.7 ರಷ್ಟು ಕೊಡುತ್ತಿದ್ದೇವೆ. ಕರ್ನಾಟಕ ಅಭಿವೃದ್ಧಿ ಪಥದತ್ತ ಸಾಗುತ್ತಿದೆ. ಆದರೆ, ಜನರ ದಿಕ್ಕು ತಪ್ಪಿಸುತ್ತಿರುವ ಬಿಜೆಪಿಗೆ ತಕ್ಕ ಪಾಠ ಕಲಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಬೆಂಗಳೂರನ್ನು ಸಿಂಗಾಪುರ ಮಾಡಿಕೊಳ್ಳಿ ನಮ್ಮದೇನು ಅಭ್ಯಂತರವಿಲ್ಲ. ಆದರೆ, ಕಲ್ಯಾಣ ಕರ್ನಾಟಕ ಭಾಗವನ್ನು ಮೈಸೂರು, ಬೆಂಗಳೂರು ಮಾದರಿಯಲ್ಲಿ ಅಭಿವೃದ್ಧಿ ಮಾಡಿ ಎಂದು ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆಶಿ ಅವರಿಗೆ ಸಲಹೆ ನೀಡಿದರು.

ಹಿಂದೆ ಎಸ್. ಎಂ ಕೃಷ್ಣ ಅವರು ಬೆಂಗಳೂರನ್ನು ಸಿಂಗಾಪುರ ಮಾಡುವುದಾಗಿ ಹೇಳಿದ್ದರು, ಅದನ್ನು ಬೇಕಾದರೂ ನೀವೇ ಮಾಡಿಕೊಳ್ಳಿ ನಮ್ಮ ಭಾಗದಲ್ಲಿ ಮಾತ್ರ ನಿಮ್ಮ ಕಡೆ ರೀತಿ ಅಭಿವೃದ್ಧಿ ಮಾಡಿ ಸಾಕು ಎಂದರು. ಈ ಭಾಗ ಶಿಕ್ಷಣ, ಆರೋಗ್ಯ, ಉದ್ಯೋಗ ಕ್ಷೇತ್ರದಲ್ಲಿ ಸಂಪೂರ್ಣ ಹಿಂದುಳಿದಿದೆ. ಶಿಕ್ಷಕರ ಕೊರತೆಯಿಂದಾಗಿ ಪರೀಕ್ಷಾ ಫಲಿತಾಂಶದಲ್ಲಿ ಕೊನೆಯ ಸ್ಥಾನದಲ್ಲಿ ನಮ್ಮ 7 ಜಿಲ್ಲೆಗಳಿರುತ್ತವೆ. ನಮ್ಮ ಮಕ್ಕಳಿಗೆ ಗಣಿತ, ವಿಜ್ಞಾನ ಹಾಗೂ ಇಂಗ್ಲೀಷ್ ಕಲಿಸುವವರಿಲ್ಲ, ಖಾಲಿ ಉಳಿದಿರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಕುರಿತು ಸಂಪುಟ ಸಭೆಯಲ್ಲಿ ತೀರ್ಮಾನಿಸಿ ಎಂದು ಸಿಎಂ ಸಿದ್ದರಾಮಯ್ಯ ಅವರಿಗೆ ತಿಳಿಸಿದರು.

ಯಾದಗಿರಿ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಆರೋಗ್ಯ ಆವಿಷ್ಕಾರ ಯೋಜನೆಗೆ ಸಿಎಂ ಸಿದ್ದರಾಮಯ್ಯ ಡಿಜಿಟಲ್ ಮೂಲಕ ಚಾಲನೆ ನೀಡಿದರು. ಈ ವೇಳೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ, ಡಿಸಿಎಂ ಡಿಕೆ ಶಿವಕುಮಾರ್ ಸೇರಿ ಹಲವರಿದ್ದರು.

411.68 ಕೋಟಿ ರು. ಮೊತ್ತದ ಕಾಮಗಾರಿಗಳಿಗೆ ಚಾಲನೆ

ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ, ಯಾದಗಿರಿ, ಬೀದರ, ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಒಟ್ಟಾರೆ 416.68 ಕೋಟಿ ರು. ವೆಚ್ಚದಲ್ಲಿ ಹೊಸದಾಗಿ 12 ಪ್ರಾಥಮಿಕ ಆರೋಗ್ಯ ಕೇಂದ್ರ, 1 ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, 2 ತಾಲೂಕು ಆಸ್ಪತ್ರೆ ನಿರ್ಮಾಣಕ್ಕೆ, 6 ಪ್ರಾಥಮಿಕ ಅರೋಗ್ಯ ಕೇಂದ್ರದಿಂದ ಸಮುದಾಯ ಆರೋಗ್ಯ ಕೇಂದ್ರಕ್ಕೆ, 30 ಹಾಸಿಗೆಗಳಿಂದ 50 ಹಾಸಿಗೆಗೆ ಮೇಲ್ದರ್ಜೆಗೆ ಏರಿಸುವ 16 ಸಮುದಾಯ ಆರೋಗ್ಯ ಕೇಂದ್ರಗಳು, 1 ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 100 ಹಾಸಿಗೆಯ ತಾಲೂಕಾ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೆ ಏರಿಸುವುದು, 100 ಹಾಸಿಗೆ ಸಾಮರ್ಥ್ಯದ 3 ತಾಲೂಕಾ ಆಸ್ಪತ್ರೆ 150 ಹಾಸಿಗೆಗೆ ಮೇಲ್ದರ್ಜೆಗೇರಿಸುವ ಯೋಜನೆಗೆ ಇಂದಿಲ್ಲಿ ಚಾಲನೆ ದೊರೆತಿದೆ.

ಇದರಲ್ಲಿ ಕೆ.ಕೆ.ಆರ್.ಡಿ.ಬಿ ಮಂಡಳಿ 208.94 ಕೋಟಿ ಅನುದಾನ ನೀಡಲಾಗಿರುವ ಕಾಮಗಾರಿಗಳಿಗೆ ಸಿಎಂ ಚಾಲನೆ ನೀಡಿದರು.

> **ನರೇಂದ್ರ ಮೋದಿ ಆಡಳಿತ ನಡೆಸುವ ಮುನ್ನ 10 ಗ್ರಾಂ ಚಿನ್ನದ ಬೆಲೆ 28 ಸಾವಿರ ರು. ಗಳಿತ್ತು. ಆದರೆ ಇಂದು ಲಕ್ಷ ದಾಟಿದೆ. ಇದೇ ರೀತಿ ಗ್ಯಾಸ್, ಪೆಟ್ರೋಲ್ ಡೀಸೆಲ್ ಬೆಲೆ ಯಾರ ಕಾಲದಲ್ಲಿ ಹೆಚ್ಚಳವಾಗಿದೆ ಎನ್ನುವುದನ್ನು ಬಿಜೆಪಿಗರು ಮರೆತಿದ್ದಾರೆ ಅನಿಸುತ್ತೆ. ಅದಕ್ಕಾಗಿ ನಮ್ಮ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಾರೆ.**
>
> -ಸಿದ್ದರಾಮಯ್ಯ ಮುಖ್ಯಮಂತ್ರಿ

> **ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಸಿದ್ದರಾಮಯ್ಯ ನೇತೃತ್ವದ ಸರಕಾರ ಕಳೆದ 2 ವರ್ಷದಲ್ಲಿ 1300 ಕೋಟಿ ರು. ಗಳನ್ನು ನೀಡಿದೆ. ಅದರಂತೆ ಗ್ಯಾರಂಟಿ ಯೋಜನೆಗಳ ಮುಖೇನ ನೇರವಾಗಿ ಬಡ ಜನರಿಗೆ 1.35 ಸಾವಿರ ಕೋಟಿ ತಲುಪಿಸಿ ನುಡಿದಂತೆ ನಡೆದ ಸರಕಾರವಿದ್ದರೆ ಅದು ನಮ್ಮ ಕಾಂಗ್ರೆಸ್ ಸರಕಾರ.**
>
> -ಡಾ. ಅಜಯ್ ಧರ್ಮಸಿಂಗ್

> **ನಮ್ಮ ಜಿಲ್ಲೆಗಳಿಗಿಂತ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳು ಹೆಚ್ಚು ಪ್ರಗತಿ ಸಾಧಿಸುತ್ತಿವೆ. ಯುಪಿಎ ಸರಕಾರದಲ್ಲಿ ಮಲ್ಲಿಕಾರ್ಜುನ ಖರ್ಗೆ, ಮನಮೋಹನ್ ಸಿಂಗ್, ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರಿಂದಾಗಿ ಈ ಭಾಗಕ್ಕೆ 371ಜೆ ಮೂಲಕ ವಿಶೇಷ ಸ್ಥಾನಮಾನ ನೀಡಲಾಗಿದೆ. ಇದನ್ನು ಪಡೆದ ನೀವೆ ಪುಣ್ಯವಂತರು. ಕಾಂಗ್ರೆಸ್ ಪಕ್ಷದ ಈ ಕೊಡುಗೆಯನ್ನು ನೀವು ನಿಮ್ಮ ಮುಂದಿನ ಪೀಳಿಗೆಗಳು ಸ್ಮರಿಸಬೇಕು.**
>
> -ಡಿಕೆ ಶಿವಕುಮಾರ್ ಡಿಸಿಎಂ

ನಿಖಿಲ್‌ಗೆ 17ನೇ ರ್‍ಯಾಂಕ್

ನೀಟ್ ಫಲಿತಾಂಶ: ರಾಜ್ಯದ 83,582 ಅಭ್ಯರ್ಥಿಗಳು ಅರ್ಹ

ಬೆಂಗಳೂರು: ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಶನಿವಾರ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್-ಯುಜಿ) 2025ರ ಪದವಿ ಫಲಿತಾಂಶ ಪ್ರಕಟಿಸಿದ್ದು 83,582 ಕರ್ನಾಟಕದ ಅಭ್ಯರ್ಥಿಗಳು ಅರ್ಹತೆ ಪಡೆದುಕೊಂಡಿದ್ದಾರೆ.

ಕರ್ನಾಟಕದ ಒಟ್ಟು 1,47,782 ಅಭ್ಯರ್ಥಿಗಳು ಪರೀಕ್ಷೆಗೆ ನೊಂದಾಯಿಸಿ ದ್ದರು. ಆದರೆ 1,42,369 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಇದರಲ್ಲಿ 83,582 ಅರ್ಹತೆ ಪಡೆದು ಕೊಂಡಿರುವುದು ಸಾಧನೆಯಾಗಿದೆ. ಪ್ರತಿ ವರ್ಷವೂ ರಾಜ್ಯದ ವಿದ್ಯಾರ್ಥಿಗಳು ನೀಟ್-ಯುಜಿ ಪರೀಕ್ಷೆಯಲ್ಲಿ ಟಾಪ್ ನೂರರಲ್ಲಿ ಸ್ಥಾನ ಪಡೆಯುತ್ತಿದ್ದಾರೆ. ರಾಜ್ಯದಲ್ಲಿ ಒಟ್ಟು 71 ವೈದ್ಯಕೀಯ ಕಾಲೇಜುಗಳಿದ್ದು, ಈ ವರ್ಷ 12,395 ಎಂಬಿಬಿಎಸ್ ಸೀಟುಗಳು ಲಭ್ಯವಿದೆ. ಇದಲ್ಲದೆ, 45 ದಂತ ವೈದ್ಯಕೀಯ ಕಾಲೇಜುಗಳಲ್ಲಿ 3,355 ದಂತ ವೈದ್ಯಕೀಯ ಸೀಟುಗಳು, 650 ನರ್ಸಿಂಗ್ ಕಾಲೇಜುಗಳಲ್ಲಿ 39,595 ಬಿಎಸ್‌ಸಿ ನರ್ಸಿಂಗ್ ಸೀಟುಗಳು, 202 ಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜುಗಳಲ್ಲಿ 16,441 ಅಲೈಡ್ ಹೆಲ್ತ್ ಸೈನ್ಸಸ್ ಸೀಟುಗಳು ಮತ್ತು 120 ಫಿಸಿಯೋಥೆರಪಿ ಕಾಲೇಜುಗಳಲ್ಲಿ 5,710 ಸೀಟುಗಳು ಲಭ್ಯವಿರಲಿದೆ. ಇದಲ್ಲದೆ, 47 ಸ್ನಾತಕೋತ್ತರ ವೈದ್ಯಕೀಯ ಕಾಲೇಜುಗಳಲ್ಲಿ 4,027 ಸ್ನಾತಕೋತ್ತರ ವೈದ್ಯಕೀಯ, 31 ಸ್ನಾತಕೋತ್ತರ ದಂತ ಕಾಲೇಜುಗಳಲ್ಲಿ 846 ಎಂಡಿಎಸ್, 204 ಸ್ನಾತಕೋತ್ತರ ನರ್ಸಿಂಗ್ ಕಾಲೇಜುಗಳಲ್ಲಿ 4,772, 43 ಸ್ನಾತಕೋತ್ತರ ಸಂಬಂಧಿತ ಆರೋಗ್ಯ ವಿಜ್ಞಾನ ಕಾಲೇಜುಗಳಲ್ಲಿ 1,217 ಮತ್ತು 41 ಸ್ನಾತಕೋತ್ತರ ಭೌತ ಚಿಕಿತ್ಸೆಯ ಕಾಲೇಜುಗಳಲ್ಲಿ 819 ಸೀಟುಗಳು ಲಭ್ಯವಿದೆ.

ಟಾಪ್ 100ರಲ್ಲಿ ಸ್ಥಾನ ಪಡೆದ ಕರ್ನಾಟಕದ ವಿದ್ಯಾರ್ಥಿಗಳ ಪಟ್ಟಿ

ವಿದ್ಯಾರ್ಥಿಗಳು	ರ್‍ಯಾಂಕ್
ನಿಖಿಲ್ ಸೋನದ್	17
ರುಚಿ ಗುಪ್ತಾ	22
ತೇಜಸ್ ಶೈಲೇಶ್	38
ಪಿ.ಜಾಗಿದಾರ್	42
ಹರಿಣಿ ಶರ್ಮಾ	72
ದಿಗಂತ್	80
ಕೆ.ಜಿ.ನಿಧಿ	84

ಇಸ್ರೇಲ್-ಇರಾನ್ ಸಂಘರ್ಷ ತೀವ್ರ

← ಮೊದಲಪುಟದಿಂದ

ದಾಳಿಯಲ್ಲಿ ಒಬ್ಬ ಮಹಿಳೆ ಸೇರಿ ಇಬ್ಬರು ಮೃತಪಟ್ಟಿದ್ದಾರೆ. ಹತ್ತಕ್ಕೂ ಹೆಚ್ಚು ಜನ ಗಾಯ ಗೊಂಡಿದ್ದಾರೆ. ಇರಾನ್‌ನ ಕ್ಷಿಪಣಿಗಳು ಇಸ್ರೇಲ್‌ನ ಹಲವು ವಸತಿ ಪ್ರದೇಶಗಳಿಗೆ ಅಪ್ಪಳಿಸಿವೆ. ಟೆಲ್ ಅವಿವ್ ಮತ್ತು ಜೆರುಸಲೆಲ್‌ಗಳಲ್ಲಿ ಇಡೀ ದಿನ ಸೈರನ್ ಮೊಳಗಿವೆ. ಸಾರ್ವಜನಿಕರನ್ನು ತಕ್ಷಣವೇ ಸುರಕ್ಷತಾ ಸ್ಥಳಕ್ಕೆ ಕರೆದೊಯ್ಯಲಾಯಿತು.

ಗಾಜಾಪಟ್ಟಿ ನಿರ್ಣಯ: ಸಭೆಗೆ ಗೈರಾದ ಭಾರತ: ಗಾಜಾ ಪಟ್ಟಿಯಲ್ಲಿ ತಕ್ಷಣದ, 'ಷರತ್ತಿಲ್ಲದ ಮತ್ತು ಶಾಶ್ವತ' ಕದನ ವಿರಾಮಕ್ಕೆ ಸಂಬಂಧಿಸಿದಂತೆ ಕರಡು ನಿರ್ಣಯ ಅಂಗೀಕರಿಸಲು ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ನಡೆದ ಮತದಾನ ಪ್ರಕ್ರಿಯೆಗೆ ಭಾರತ ಗೈರಾಗಿದೆ. ಗಾಜಾ ಪಟ್ಟಿಯಲ್ಲಿ ಶಾಶ್ವತ ಕದನ ವಿರಾಮ ಘೋಷಿಸಿ, ಹಮಾಸ್, ಮತ್ತಿತರರ ಸಂಘಟನೆಗಳು ಒತ್ತೆಯಾಳುಗಳನ್ನಾಗಿ ಇಟ್ಟುಕೊಂಡಿರುವವರನ್ನು ಷರತ್ತುಗಳಿಲ್ಲದೆ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿ ಸ್ಪೇನ್ ಮಂಡಿಸಿದ ಈ ನಿರ್ಣಯಕ್ಕೆ 193 ಸದಸ್ಯ ರಾಷ್ಟ್ರಗಳು ಸದಸ್ಯರಾಗಿರುವ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಅಭೂತಪೂರ್ವ ಬೆಂಬಲ ಲಭಿಸಿತು. ಭಾರತ ಸೇರಿ 19 ರಾಷ್ಟ್ರಗಳು ಮತದಾನ ಪ್ರಕ್ರಿಯೆಯಿಂದ ಹೊರಗುಳಿದಿದ್ದವು. 12 ರಾಷ್ಟ್ರಗಳು ನಿರ್ಣಯಕ್ಕೆ ವಿರುದ್ಧವಾಗಿ, 149 ರಾಷ್ಟ್ರಗಳು ನಿರ್ಣಯದ ಪರವಾಗಿ ಮತ ಚಲಾಯಿಸಿದವು. ಗೈರಾದ ದೇಶಗಳಲ್ಲಿ ಭಾರತ, ಅಲ್ಬಾನಿಯಾ, ಈಕ್ವೆಡಾರ್, ಇಥಿಯೋಪಿಯಾ, ಮಾಲಾವಿ, ಪನಾಮಾ, ದಕ್ಷಿಣ ಸುಡಾನ್, ಟೊಗೊ ಸೇರಿವೆ.

ಕ್ಯಾನ್ಸರ್ ಪೀಡಿತರಿಗೆ ಪ್ರತ್ಯೇಕ ಶಾಲೆ

← ಮೊದಲಪುಟದಿಂದ

ಕಿದ್ವಾಯಿ ಬಳಿ ಜಾಗ ಹುಡುಕಲು ಈಗಾಗಲೇ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದ್ದೇವೆ. ನಮ್ಮ ಇಲಾಖೆಯ ಮೂರು ಎಕರೆಯಷ್ಟು ಜಾಗ ಸಿಕ್ಕರೆ ಇದೇ ವರ್ಷದ ಜುಲೈನಿಂದಲೇ ಶಾಲೆ ಆರಂಭಿಸುವ ಉಮೇದಿ ನಲ್ಲಿ ನಾವಿದ್ದೇವೆ. ಮುಖ್ಯ ಮಂತ್ರಿ ಸಿದ್ದರಾಮಯ್ಯ ಅಗತ್ಯ ವಿರುವ ಎಲ್ಲ ಸಹಕಾರ ನೀಡುವುದಾಗಿ ಭರವಸೆ ನೀಡಿದ್ದಾರೆ.

ಪೋಷಕರಿಗೂ ಅವಕಾಶ: ಮಕ್ಕಳಿಗೆ ಓದಲು ಅನುಕೂಲ ವಾಗುವಂತೆ ಶಾಲೆ, ಅದರ ಪಕ್ಕದಲ್ಲಿಯೇ ಹಾಸ್ಟೆಲ್, 5 ರಿಂದ 6 ವರ್ಷದೊಳಗಿನ ಮಕ್ಕಳನ್ನು ನೋಡಿಕೊಳ್ಳಲು ಪೋಷಕರಿರ ಬೇಕಾಗುತ್ತದೆ. ಅದಕ್ಕಾಗಿ ಪ್ರತ್ಯೇಕ ಕಟ್ಟಡ ಸೇರಿದಂತೆ ಎಲ್ಲ ಸೌಲಭ್ಯಗಳನ್ನು ಈ ಶಾಲೆಯಲ್ಲಿ ಒದಗಿಸಲಾಗುವುದು. ಇದರೊಂದಿಗೆ ಆಸ್ಪತ್ರೆಗೆ ಮತ್ತು ಶಾಲೆಗೆ ಮಿನಿಬಸ್‌ನಂತಹ ವಾಹನದ ವ್ಯವಸ್ಥೆ ಕಲ್ಪಿಸಲಾಗುತ್ತದೆ ಎಂದರು.

ಕ್ಯಾನ್ಸರ್‌ನಿಂದ ಬಾಧಿತರಾಗಿ ಚಿಕಿತ್ಸೆ ಪಡೆದು ಗುಣಮುಖರಾಗಿರುವ ಸಂತ್ರಸ್ತರಿಂದಲೇ ಈ ಯೋಜನೆಯ ವರದಿಯನ್ನು ತಯಾರಿಸಲಾಗಿದೆ. ಎಲ್ಲಾ ರೀತಿಯ ಸಕಲ ಸೌಲಭ್ಯಗಳೊಂದಿಗೆ ಶಾಲೆಯನ್ನು ಆರಂಭಿಸಲಾಗುವುದು. ಮೊದಲಿಗೆ ಸ್ವಂತ ಕಟ್ಟಡ ಸಿಗದೇ ಇದ್ದರೆ ಅಥವಾ ಕಟ್ಟಡ ನಿರ್ಮಿಸಲು ಸಾಧ್ಯವಾಗದೇ ಇದ್ದರೆ ಬಾಡಿಗೆ ಕಟ್ಟಡದಲ್ಲಿ ಶಾಲೆ ಆರಂಭಿಸಲಾಗುವುದು. ಆರಂಭದಲ್ಲಿ 10ನೇ ತರಗತಿಯ ವರೆಗೂ ಶಾಲೆ ನಡೆಸಲಾಗುತ್ತದೆ. ಅಗತ್ಯಬಿದ್ದರೆ ಅದನ್ನು ವಿಸ್ತರಣೆ ಮಾಡಲಾಗುವುದು ಎಂದು ತಿಳಿಸಿದರು.

ಆರೋಗ್ಯ ಸಮಸ್ಯೆಗೆ ಚಿಕಿತ್ಸೆ ಬಹಳ ಮುಖ್ಯವಾಗಿದೆ. ಆದ್ದರಿಂದ ಕಿದ್ವಾಯಿ ಆಸ್ಪತ್ರೆ ಬಳಿಯೇ ಶಾಲೆ ಆರಂಭಿಸುವ ಚಿಂತನೆಯಿದೆ. ಮುಂದಿನ ದಿನಗಳಲ್ಲಿ ಬೇರೆಬೇರೆ ಕಡೆಗಳಲ್ಲಿಯೂ ಈ ರೀತಿಯ ಶಾಲೆ ಆರಂಭಿಸುವ ಚಿಂತನೆಯಿದೆ. ಮೊದಲ ಹಂತದಲ್ಲಿ ಒಂದೂವರೆ ಸಾವಿರ ಮಕ್ಕಳಿಗೆ ವಸತಿಸಹಿತ ಶಾಲೆ ಆರಂಭಿಸಲಾಗುವುದು. ಇದಕ್ಕಾಗಿ ಸಿಎಸ್ ಆರ್ ನಿಧಿಯನ್ನು ಬಳಸಲಾಗುತ್ತದೆ. ಡಾ.ರಾಜ್‌ಕುಮಾರ್ ಅವರ ಸಹೋದರ ವರದರಾಜು ಅವರ ಮೊಮಕ್ಕಳಿಗೂ ಈ ರೀತಿಯ ಆರೋಗ್ಯ ಸಮಸ್ಯೆಗೆ ನಾವೇ ಚಿಕಿತ್ಸೆ ಕೊಡಿಸಿದ್ದೇವೆ. ಅದರ ಕಷ್ಟನಷ್ಟಗಳ ಅರಿವಿದೆ. ನೂತನ ಶಾಲೆಯ ಶಿಕ್ಷಕರಿಗೆ ವಿಶೇಷ ತರಬೇತಿ ನೀಡಲಾಗುವುದು. ಸಾಮಾನ್ಯ ಶಿಕ್ಷಣ ದೊಂದಿಗೆ ವಿದ್ಯಾರ್ಥಿಗಳೊಂದಿಗೆ ಆತ್ಮೀಯವಾಗಿ ಬೆರೆಯಲು ಬೋಧಕ, ಬೋಧಕೇತರ ಸಿಬ್ಬಂದಿಗಳನ್ನು ಸಜ್ಜುಗೊಳಿಸುವುದಾಗಿ ಹೇಳಿದರು.

ದ್ವಿಭಾಷಾ ಮಾಧ್ಯಮ ಜಾರಿ: ಸರಕಾರಿ ಶಾಲೆಗಳಲ್ಲಿ ಕನ್ನಡ ಮಾಧ್ಯಮ ಮಾತ್ರ ಬೋಧನೆ ಮಾಡುತ್ತಿರುವುದಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಕುಸಿತವಾಗುತ್ತಿದೆ. ಇದನ್ನು ಸರಿಪಡಿಸಲು ದ್ವಿಭಾಷಾ ಮಾಧ್ಯಮ ಜಾರಿಗೊಳಿಸಲಾಗುತ್ತಿದೆ. ವಿದ್ಯಾರ್ಥಿಗಳು, ಪೋಷಕರು ತಮಗೆ ಅನುಕೂಲವಾದಂತಹ ಮಾಧ್ಯಮವನ್ನು ಆಯ್ಕೆ ಮಾಡಿಕೊಳ್ಳಬಹುದು. ಕೆಲವು ಶಾಲೆಗಳಲ್ಲಿ ವಿದ್ಯಾರ್ಥಿಗಳ ಕೊರತೆಯಿದ್ದು, ಅಂತಹ ಶಾಲೆಗಳ ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಹತ್ತಿರದ ಶಾಲೆಗೆ ವಿನಿಯೋಜನೆಗೊಳಿಸುವುದಾಗಿ ತಿಳಿಸಿದರು.

> **ಅಜೀಂ ಪ್ರೇಮ್‌ಜಿ ಪ್ರತಿಷ್ಠಾನದಿಂದ 50 ಸಾವಿರ ಶಿಕ್ಷಕರುಗಳಿಗೆ ತರಬೇತಿ ಕೊಡಿಸಲು ಮನವಿ ನೀಡಲಾಗಿದೆ. ಉತ್ತಮ ಶಿಕ್ಷಕರಿಂದ ಬೋಧನೆ ಮಾಡಿಸಲು ಶಿಕ್ಷಣ ಇಲಾಖೆಯ ಯೂ-ಟ್ಯೂಬ್ ಚಾನೆಲ್ ಆರಂಭಿಸಲಾಗುತ್ತಿದೆ. ರಾಜ್ಯದ ಏಳೆಂಟು ಕಡೆ ಸ್ವಂತ ಸ್ಟುಡಿಯೋಗಳನ್ನು ಶುರು ಮಾಡುತ್ತೇವೆ.**
>
> - ಮಧು ಬಂಗಾರಪ್ಪ ಶಿಕ್ಷಣ ಸಚಿವ

ತಾಯಿ ಮಡಿಲು ಸೇರಿದ ಕಾಣೆಯಾದ ಮಗು

ಬಾಗಲಕೋಟೆ: ಜಿಲ್ಲಾ ಆಸ್ಪತ್ರೆಯಲ್ಲಿ ನಡೆದಿದ್ದ ಮಗು ಕಳ್ಳತನ ಪ್ರಕರಣ ಶನಿವಾರ ಮಧ್ಯಾಹ್ನದ ಹೊತ್ತಿಗೆ ಸುಖಾಂತ್ಯ ಕಂಡಿದೆ.

ಮಗು ತಾಯಿಯ ಮಡಿಲು ಸೇರಿದೆ.

ಇಲ್ಲಿನ ನವನಗರದ ಜಿಲ್ಲಾ ಆಸ್ಪತ್ರೆಯಲ್ಲಿ ಮೆಹಬೂಬಿ ನದಾಫ್ (30) ಎಂಬಾಕೆ ಹೆಣ್ಣು ಮಗುವಿಗೆ ಜನ್ಮ ನೀಡಿದ್ದರು. ಆ ಮಗುವಿಗೆ ಕಫಾ ಹೆಚ್ಚಾಗಿದ್ದು, ಅದನ್ನು ತೆಗೆಯಬೇಕು ಎಂದು ಮಹಿಳೆಯೊಬ್ಬಳು ನರ್ಸ್ ವೇಶದಲ್ಲಿ ಬಂದು ಮಗುವನ್ನು ಕರೆದುಕೊಂಡು ಹೋಗಿದ್ದಳು. ನಂತರದಲ್ಲಿ ತಾಯಿ ಮೆಹಬೂಬಿ ಮಗು ಬಗ್ಗೆ ವಿಚಾರಿಸಿದಾಗ ಕಳ್ಳತನ ಆಗಿರುವ ಬಗ್ಗೆ ಗೊತ್ತಾಗಿದೆ.

ಘಟನೆ ಬಗ್ಗೆ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ ಆಗಮಿಸಿ ಪರಿಶೀಲನೆ ನಡೆಸಿದರು. ಜಿಲ್ಲಾಸ್ಪತ್ರೆಯ ಡಾ.ರಜನಿ ಎಂಬುವವರು ರೌಂಡ್‌ಗೆ ತೆರಳಿದ್ದಾಗ ಮಹಿಳೆಯೊಬ್ಬಳು ಹೆರಿಗೆ ಆಗದಿದ್ದರೂ ಮಗುವಿಗೆ ಹಾಲು ಕುಡಿಸುತ್ತಿರುವುದನ್ನು ನೋಡಿ, ಆಕೆಯನ್ನು ವಿಚಾರಿಸಿದಾಗ ಈ ಮಗು ಮೆಹಬೂಬಿ ಅವರದ್ದು ಎಂದು ಗೊತ್ತಾಗಿದೆ. ನಂತರ ಮಗುವನ್ನು ತಾಯಿಗೆ ಹಸ್ತಾಂತರಿಸಿದರು. ಮಗವನ್ನು ತೆಗೆದುಕೊಂಡು ಹೋಗಿದ್ದ ಮಹಿಳೆಯನ್ನು ನವನಗರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಕನ್ನಡದಲ್ಲಿ ಮಾತನಾಡಿದ್ದಕ್ಕೆ ವಜಾ

← ಮೊದಲಪುಟದಿಂದ

ಹೀಗಾಗಿ ಕನ್ನಡದಲ್ಲೇ ಉಪನ್ಯಾಸಕ ಉತ್ತರಿಸಿದರಂತೆ. ಆದರೆ, ಮತ್ತೊಬ್ಬ ವಿದ್ಯಾರ್ಥಿ ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿ, ನೀವು ಕನ್ನಡದಲ್ಲಿ ಪಾಠ ಮಾಡಬೇಡಿ, ಇಂಗ್ಲಿಷ್ ನಲ್ಲಿಯೇ ಮಾತನಾಡಿ, ನಮಗೆ ಕನ್ನಡ ಬರಲ್ಲ ಎಂದು ವಾದ ಮಾಡಿದ್ದಾನೆ. ಈ ವೇಳೆ ಕನ್ನಡ ಈ ನೆಲದ ಭಾಷೆ, ಕ್ರಿಮಿನಲ್ ಭಾಷೆ ಅಲ್ಲ ಎಂದು ಉಪನ್ಯಾಸಕ ವಿದ್ಯಾರ್ಥಿಗೆ ಬುದ್ಧಿವಾದ ಹೇಳಿದ್ದಾರೆ. ಆದರೆ, ನನಗೆ ಕನ್ನಡ ಬರಲ್ಲ, ಇಂಗ್ಲಿಷ್‌ನಲ್ಲೇ ಪಾಠ ಮಾಡಬೇಕು ಅಂತ ಮತ್ತೆ ವಿದ್ಯಾರ್ಥಿ ಪಟ್ಟುಹಿಡಿದಿದ್ದಾನೆ.

ವಿಡಿಯೊದಲ್ಲಿ ಉಪನ್ಯಾಸಕ ಅಳಲು: ಈ ಘಟನೆ ನಡೆದ ಮರುದಿನ ಉಪನ್ಯಾಸಕರು ಕಾಲೇಜಿಗೆ ಹೋಗಿದ್ದಾರೆ. ಆ ವೇಳೆ ಪ್ರಾಂಶುಪಾಲರು ಕರೆದು ರಾಜೀನಾಮೆಗೆ ಆಗ್ರಹಿಸಿದರು. ಒಂದು ವೇಳೆ ರಾಜೀನಾಮೆಗೆ ಸಹಿ ಹಾಕದಿದ್ದರೆ ಕಾಲೇಜಿನ ಇನ್ನೊಂದು ಶಾಖೆಯಲ್ಲಿರುವ ನಿಮ್ಮ ಮಗಳ ಸರ್ಟಿಫಿಕೇಟ್ ಕೊಡಲ್ಲ ಎಂದು ಬೆದರಿಸಿ, ರಾಜೀನಾಮೆ ಪಡೆದಿದ್ದಾರೆ ಎಂದು ಉಪನ್ಯಾಸಕ ಆರೋಪಿಸಿದ್ದಾರೆ. ಈ ಬಗ್ಗೆ ವಿಡಿಯೊ ಹಂಚಿಕೊಂಡಿರುವ ಉಪನ್ಯಾಸಕ, ಕನ್ನಡ ನಾಡಿನಲ್ಲಿ ಕನ್ನಡ ಮಾತನಾಡಿ ಕೆಲಸ ಹೋಗುವಂತಹ ನನ್ನಂತಹ ಸ್ಥಿತಿ ಯಾರಿಗೂ ಬರದಿರಲಿ ಎಂದು ಅಳಲು ತೋಡಿಕೊಂಡಿದ್ದಾರೆ. ಸದ್ಯ ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದ್ದು, ಕಾಲೇಜು ವಿರುದ್ಧ ಭಾರಿ ಆಕ್ರೋಶ ವ್ಯಕ್ತವಾಗುತ್ತಿದೆ.

ತನಿಖೆಗೆ ಸಮಿತಿ

← ಮೊದಲಪುಟದಿಂದ

ಈ ಸಮಿತಿಯು ಬೇರೆ ಸಂಸ್ಥೆಗಳು ನಡೆಸುವ ತನಿಖೆಗೆ ಬದಲಿಯಲ್ಲ. ಭವಿಷ್ಯದಲ್ಲಿ ಇಂತಹ ಘಟನೆಗಳನ್ನು ತಡೆಗಟ್ಟಲು ಮತ್ತು ನಿರ್ವಹಿಸಲು ಪ್ರಮಾಣೀಕೃತ ಕಾರ್ಯವಿಧಾನಗಳನ್ನು ರೂಪಿಸುವತ್ತ ಗಮನಹರಿಸುತ್ತದೆ ಎಂದು ನಾಗರಿಕ ವಿಮಾನಯಾನ ಸಚಿವಾಲಯ ಸ್ಪಷ್ಟಪಡಿಸಿದೆ. ವಿಮಾನ ಅಪಘಾತ ತನಿಖಾ ಬ್ಯೂರೋ (AAIB) ಈಗಾಗಲೇ ತನಿಖೆ ನಡೆಸುತ್ತಿದೆ. ಜತೆಗೆ ರಾಷ್ಟ್ರೀಯ ತನಿಖಾ ಸಂಸ್ಥೆ (NIA) ಮತ್ತು ಇತರರ ತಂಡಗಳು ಅಪಘಾತ ಸ್ಥಳಕ್ಕೆ ಭೇಟಿ ನೀಡಿವೆ.

ಸಾವಿನ ಸಂಖ್ಯೆ 279ಕ್ಕೆ ಏರಿಕೆ: ವಿಮಾನ ದುರಂತದಲ್ಲಿ ಮೃತಪಟ್ಟವರ ಸಂಖ್ಯೆ 279ಕ್ಕೆ ಏರಿಕೆಯಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. 'ಘಟನೆಯಲ್ಲಿ ವಿಮಾನದಲ್ಲಿದ್ದ 241 ಪ್ರಯಾಣಿಕರು ಮೃತಪಟ್ಟಿದ್ದರು. ವಿಮಾನವು ಹಾಸ್ಟೆಲ್ ಕಟ್ಟಡಕ್ಕೆ ಅಪ್ಪಳಿಸಿದಾಗ 60ಕ್ಕೂ ಹೆಚ್ಚು ವೈದ್ಯರು ಮತ್ತು ಅಡುಗೆಯವರು ಸೇರಿದಂತೆ ಮೆಸ್ ಸಿಬ್ಬಂದಿ ಒಳಗೆ ಇದ್ದರು. ದುರಂತದಲ್ಲಿ 32ಕ್ಕೂ ಹೆಚ್ಚು ಜನ ಗಾಯಗೊಂಡಿದ್ದು, ಕೆಲವರ ಸ್ಥಿತಿ ಗಂಭೀರವಾಗಿತ್ತು. ಅವರನ್ನು ಸಿವಿಲ್, ಜೈಡಸ್, ಕೆಡಿ ಹಾಗೂ ಅಪೊಲೊ ಸೇರಿದಂತೆ ನಗರದಾದ್ಯಂತ ವಿವಿಧ ಖಾಸಗಿ ಆಸ್ಪತ್ರೆಗಳಿಗೆ ದಾಖಲಿಸಲಾಗಿತ್ತು. ಇದೀಗ ಗಾಯಾಳುಗಳಲ್ಲಿ ಹಲವರು ಮೃತಪಟ್ಟಿದ್ದು, ಸಾವಿನ ಸಂಖ್ಯೆ 279ಕ್ಕೆ ಏರಿಕೆಯಾಗಿದೆ. ದುರಂತದಲ್ಲಿ ವಿಮಾನದ ಇಂಧನ ಸ್ಫೋಟಗೊಂಡ ಕಾರಣ ಮೃತಪಟ್ಟವರ ದೇಹಗಳು ಛಿದ್ರವಾಗಿದ್ದು, ನಿಖರ ಸಂಖ್ಯೆ ಪತ್ತೆಮಾಡಲು ಡಿಎನ್‌ಎ ಪರೀಕ್ಷೆ ಮಾಡಲಾಗುತ್ತಿದೆ. ಅದು ಪೂರ್ಣಗೊಂಡ ನಂತರವಷ್ಟೇ ಮೃತಪಟ್ಟವರ ನಿಖರ ಸಂಖ್ಯೆ ತಿಳಿಯಲಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'171' ಸಂಖ್ಯೆ ಬಳಸದಿರಲು ಏರ್ ಇಂಡಿಯಾ ನಿರ್ಧಾರ: ಅಹಮದಾಬಾದ್ ವಿಮಾನ ದುರಂತದ ಬೆನ್ನಲ್ಲೇ ಏರ್ ಇಂಡಿಯಾ ಮತ್ತು ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನಗಳು '171' ಸಂಖ್ಯೆಯನ್ನು ಬಳಸದಿರಲು ನಿರ್ಧರಿಸಿವೆ. ಮಾರಕ ಅಪಘಾತಗಳು ನಡೆದ ಸಂದರ್ಭದಲ್ಲಿ ವಿಮಾನಯಾನ ಸಂಸ್ಥೆಗಳು ನಿರ್ದಿಷ್ಟ ಸಂಖ್ಯೆಗಳನ್ನು ಬಳಸುವುದನ್ನು ನಿಲ್ಲಿಸುವುದು ಸಾಮಾನ್ಯ. ಹಾಗಾಗಿ, ಇದೇ 17ರಿಂದ ಅಹಮದಾಬಾದ್‌ನಿಂದ ಲಂಡನ್‌ಗೆ ಹೊರಡುವ ವಿಮಾನ ಸಂಖ್ಯೆ 'ಎಐ 171' ಬದಲಿಗೆ 'ಎಐ 159' ಆಗಿರುತ್ತದೆ. ಬುಕಿಂಗ್ ವ್ಯವಸ್ಥೆಯಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಲಾಗಿದೆ ಎಂದು ಮೂಲಗಳು ಹೇಳಿವೆ. 2020ರ ಆಗಸ್ಟ್ 7ರಂದು ಕೋಝಿಕ್ಕೋಡ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ರನ್ವೇಯಿಂದ ಜಾರಿ ಕಂದಕಕ್ಕೆ ಬಿದ್ದಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನ 1344; ವಿಮಾನದಲ್ಲಿದ್ದ 190 ಮಂದಿ ಪೈಕಿ ಇಬ್ಬರು ಪೈಲಟ್‌ಗಳು ಸೇರಿ 21 ಮಂದಿ ಮೃತಪಟ್ಟಿದ್ದರು. ಈ ದುರಂತದ ಬೆನ್ನಲ್ಲೇ ಏರ್ ಇಂಡಿಯಾ ಎಕ್ಸ್‌ಪ್ರೆಸ್ '1344' ಸಂಖ್ಯೆಯನ್ನು ಬಳಸುವುದನ್ನು ನಿಲ್ಲಿಸಿತ್ತು.

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ ಬೆಳಗಾವಿ
ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ ರಾಜ ಇಂಜನೀಯರಿಂಗ್ ವಿಭಾಗ ಚಿಕ್ಕೋಡಿ
Email :preckdee@gmail.com ಕಚೇರಿ ದೂರವಾಣಿ/ಫ್ಯಾಕ್ಸ ಸಂಖ್ಯೆ: 08338-272131,

ಕ್ರ.ಸಂ. ಕಾನಿಅ/ಪಂರಾಇಂ/ಚಿವಿ/ಡಿಬಿ/ಕೆಪಿಪಿ/2025-26/1485 ದಿನಾಂಕ:13-06-2025.

(ಕೆಪಿಪಿಪಿ ಅಲ್ಪಾವಧಿ ಟೆಂಡರ ಪ್ರಕಟಣೆ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಚಿಕ್ಕೋಡಿ ಇವರು KW-1, KW-2, KW-3, (Standard Tender Document) – ನಿಬಂಧನೆಗಳೊಪಟ್ಟಂತೆ ಪಂಚಾಯತ ರಾಜ್ ಇಂಜನೀಯರಿಂಗ್ ಇಲಾಖೆಯಲ್ಲಿ ಸಿವಿಲ್ ನೊಂದಾಯಿತ ಹಾಗೂ ಇ-ಗುತ್ತಿಗೆ ಕುರಿತು ಕೆಪಿಪಿಪಿ ಇವರಿಂದ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ವಿವಿಧ ಯೋಜನೆ ಅಡಿಯಲ್ಲಿಯ ಕಾಮಗಾರಿಗಳಿಗೆ ಐಟಂವಾರು ಟರ್ನಕೀ ಆಧಾರದ ಮೇಲೆ ಇ-ಟೆಂಡರ ಆಹ್ವಾನಿಸಲಾಗಿದೆ.

1]	Last date of request for issue of blank E-bid document through e-Procurment Date: Other works	13-06-2025 To 30-06-2025
2]	Bid Closing & submission Date:	30-06 - 2025 AT 04:00 PM
3]	Financial Bid Opening Date:	02-07 - 2025 AT 11:00 AM
4)	Pre Bid Meeting Date: [KW-3 Works Only]	01-07 - 2025 AT 05:00 PM
5)	Techanical Bid Opening Date: [KW-3 Works Only]	02-07 - 2025 AT 11:00 AM
6]	Financial Bid Opening Date: [KW-3 Works Only]	04-07 - 2025 AT 11:00 AM

General Works Indent No's:	15648, 15647, 15644, 15643, 15641, 15638, 15635, 15594, 15591. 15665, 15668, 15590, 15666, 15399, 15451, 15403, 15402, 15401, 15015, 15001, 15010, 14998, 15906, 15202, 15904, 15903, 15597, 15596, 15600, 15053, 15136, 13852, 15025, 15164,
SC Works Indent No's:	15646, 15667, 15905, 15900, 15593, 15813, 15934
ST Works Indent No's:	15639, 15669, 15599,
Category 1 Works Indent No's:	15636, 15598, 15045,
Category 2A Works Indent No's:	15595, 15592, 15664, 15663, 15897, 15734, 15134, 15158,

ಕಾಮಗಾರಿಗಳ ವಿವರ, ಪರತ್ತು ನಿಬಂಧನೆಗಳಿಗಾಗಿ ಈ ಕಚೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ ಸೈಟ್ https://kppp.karnataka.gov.in/ ಸಂಪರ್ಕಿಸಬಹುದಗಿದೆ

ಸಹಿ/–
ಕಾರ್ಯನಿರ್ವಾಹಕ ಅಭಿಯಂತರು
ಪಂ.ರಾಜ್, ಇಂ. ವಿಭಾಗ, ಚಿಕ್ಕೋಡಿ

DIPR/ BGM/ RO-NO- 481 2025-26

ಕರ್ನಾಟಕ ಸರಕಾರ
(ಲೋಕೋಪಯೋಗಿ, ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ ಲೋಕೋಪಯೋಗಿ ಇಲಾಖೆ, ಸೇಡಂ ವಿಭಾಗ ಜಿಲ್ಲೆ: ಕಲಬುರಗಿ.

ಸಂ:ಕಾನಿಇಂ/ಲೋಇ./ಸೇವಿ/ತಾಶಾ-1/2025-26/681 ದಿನಾಂಕ : 12-06-2025

-:: ಅಲ್ಪಾವಧಿ ಇ-ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ ::-

1) ಕಾಮಗಾರಿಯ ವಿವರ: 1. ಸೇಡಂ ತಾಲೂಕಿನ 02 ರಸ್ತೆ ಕಾಮಗಾರಿ ಇಂಡೆಂಟ್ ಸಂ : **20830, 20281,** 2) ಲೆಕ್ಕ ಶೀರ್ಷಿಕೆ: 2024-25 ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಯೋಜನೆಯಡಿಯಲ್ಲಿನ ಕಾಮಗಾರಿ, 3) ಟೆಂಡರಿಗಿಟ್ಟ ಮೊತ್ತ: **ಕನಿಷ್ಠ ರೂ. 250.00 ಲಕ್ಷಗಳು, ಗರಿಷ್ಠ ರೂ. 590.00 ಲಕ್ಷಗಳು,** 4) ಗುತ್ತಿಗೆದಾರರ ಅರ್ಹತೆ: 1ನೇ ದರ್ಜೆ & ಮೇಲ್ಪಟ್ಟು, 5) ಪೂರ್ವಭಾವಿ ಸಭೆ ದಿನಾಂಕ: **18-06-2025 ಬೆಳಿಗ್ಗೆ 11:30 ಗಂಟೆವರೆಗೆ,** 6) ಟೆಂಡರ್ ಸ್ಪಷ್ಟೀಕರಣ ಪಡೆಯುವ ದಿನಾಂಕ: **20-06-2025 ಸಾಯಂಕಾಲ 17:30 ಗಂಟೆಯವರೆಗೆ,** 7) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ : ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ ಇ-ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ. 8) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: **25-06-2025 ರ ಸಾಯಂಕಾಲ 16:00 ಗಂಟೆಯವರೆಗೆ.** 9) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **27-06-2025 ರ ಸಾಯಂಕಾಲ 16:30 ಗಂಟೆಯವರೆಗೆ.** 10) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: **30-06-2025 ರ ಸಾಯಂಕಾಲ 16:30 ಗಂಟೆಯವರೆಗೆ.** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಇಂಜಿನೀಯರ್ ಲೋಕೋಪಯೋಗಿ ಇಲಾಖೆ, ವಿಭಾಗ ಸೇಡಂ, 12) ಅಂತರಜಾಲ ತಾಣದ ವಿಳಾಸ: www.kppp.karnataka.gov.in, 13) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ.: ಯಾವುದೇ ಮಾರ್ಪಾಡು ಬದಲಾವಣೆಗಳನ್ನು www.kppp.karnataka.gov.in ಮಾಡಲಾಗುವುದು.

ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಪ್ರಕ್ರಿಯೆಯ ಮುಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್
ಲೋಕೋಪಯೋಗಿ, ಇಲಾಖೆ ವಿಭಾಗ ಸೇಡಂ

ವಾ.ಸಾ.ಸಂ.ಇ/ಕಲಬುರಗಿ/206/ಕೆ.ಎಸ್.ಎಂ.ಸಿ.&ಎ/2025-26

ನಗರಸಭಾ ಕಾರ್ಯಾಲಯ, ಅರಸೀಕೆರೆ.
ದೂ ಸಂ:08174-232201 ಫ್ಯಾಕ್ಸ್ ನಂ:08174-233274
ಈ ಮೇಲ್ ವಿಳಾಸ: itstaff_ulb_arasikere@yahoo.com
ವೆಬ್‌ಸೈಟ್ ವಿಳಾಸ: www.arasikeretown.mrc.gov.in
ನಂ:ನ.ಸ.ಅ./ಸಿ.ಆರ್/ಕಿ.ಅ/58/2025-26 ದಿನಾಂಕ: 13-06-2025.

ಮರು ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ. ಪೋರ್ಟ್‌ಲ್ ಮೂಲಕ ಮಾತ್ರ)

ಅರಸೀಕೆರೆ ನಗರಸಭೆಯ2025-26 ನೇ ಸಾಲಿನ ನಗರಸಭಾ ನಿಧಿಯಡಿಯಲ್ಲಿ ಕೆ.ಪಿ.ಪಿ.ಪಿ. ಪೋರ್ಟ್‌ಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ http//www.kppp.portal.gov.in ಪೋರ್ಟ್‌ಲ್ ಮೂಲಕ ಆನ್ ಲೈನ್‌ನಲ್ಲಿ ಪಡೆಯಬಹುದಾಗಿರುತ್ತದೆ. ವಿವರಗಳು ಈ ಕೆಳಕಂಡಂತ್ತಿರುತ್ತದೆ. ಕ್ರ.ಸಂ.1)ಕಾಮಗಾರಿ ವಿವರ: ಅರಸೀಕೆರೆ ನಗರಸಭೆಗೆ ಸೇರಿದ ಚನ್ನರಾಯಪಟ್ಟಣ ಪಂಪ್ ಹೌಸ್‌ನಲ್ಲಿರುವ 270 ಅಶ್ವಶಕ್ತಿಯ ಪಂಪ್ ಸೆಟ್‌ಗಳನ್ನು ಬದಲಾಯಿಸುವ ಕಾಮಗಾರಿ. (DMA/2025-26/IND4618/CALL-2) ಟೆಂಡರ್ ಡಾಕ್ಯೂಮೆಂಟ್: ಕೆ.ಜಿ-2 ಇ.ಎಂ.ಡಿ. (ರೂಗಳಲ್ಲಿ): 50000/- ಕೆ.ಪಿ.ಪಿ.ಪಿ. ಪೋರ್ಟ್‌ಲ್‌ನಲ್ಲಿ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ :01-07-2025 ಸಂಜೆ 17:30 ಗಂಟೆಗೆ.

ಸಹಿ/– ಅಧ್ಯಕ್ಷರು, ನಗರಸಭೆ, ಅರಸೀಕೆರೆ.
ಸಹಿ/– ಪೌರಾಯುಕ್ತರು, ನಗರಸಭೆ, ಅರಸೀಕೆರೆ.

ವಾಸಾಸಂಇ/ಹಿಸನಿ/ಹಾಸನ/214/ಕೆಎಸ್‌ಎಂಸಿಎ/2025-26

ಸಮಾಚಾರ ಸಣ್ಣದಲ್ಲ

ಕಾರು-ಬಸ್ ಡಿಕ್ಕಿ, ಇಬ್ಬರು ಸಾವು

ಹಾವೇರಿ: ಸಾರಿಗೆ ಬಸ್ ಹಾಗೂ ಕಾರಿನ ನಡುವೆ ಡಿಕ್ಕಿಯಾಗಿ ಇಬ್ಬರು ಸಾವನ್ನಪ್ಪಿದ ಘಟನೆ ಜಿಲ್ಲೆಯ ರಾಣೆಬೆನ್ನೂರು ತಾಲೂಕಿನ ಕುಮಾರಪಟ್ಟಣಂ ಗ್ರಾಮದ ಬೈಪಾಸ್ ಬಳಿ ಶುಕ್ರವಾರ ರಾತ್ರಿ ಸಂಭವಿಸಿದೆ. ಮೃತರನ್ನು ದಾವಣಗೆರೆ ಮೂಲದ ಪ್ರವೀಣ (36) ಮತ್ತು ವಿಜಯ ಎಂದು ಗುರುತಿಸಲಾಗಿದೆ. ಘಟನೆಯಲ್ಲಿ, ಕೊಟ್ರೇಶ ಅಬಲೂರ ಎಂಬವರು ಗಂಭೀರ ಗಾಯಗೊಂಡಿದ್ದು, ಆಸ್ಪತ್ರೆಗೆ ರವಾನಿಸಲಾಗಿದೆ. ಸಾರಿಗೆ ಬಸ್ ಅಥಣಿಯಿಂದ ದಾವಣಗೆರೆಗೆ ಹೊರಟಿತ್ತು. ಈ ವೇಳೆ, ಕುಮಾರ ಪಟ್ಟಣಂ ಗ್ರಾಮದ ಬೈಪಾಸ್ ಬಳಿ ಬಸ್‌ಗೆ ಕಾರು ಡಿಕ್ಕಿಯಾಗಿ ದುರ್ಘಟನೆ ನಡೆದಿದೆ. ಕುಮಾರಪಟ್ಟಣಂ ಠಾಣೆಯಲ್ಲಿ ಈ ಕುರಿತು ಪ್ರಕರಣ ದಾಖಲಾಗಿದೆ.

ಮಂಗಳೂರಿಗೆ ಎನ್‌ಐಎ ಆಗಮನ

ಮಂಗಳೂರು: ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದ ತನಿಖೆಯನ್ನ ಎನ್‌ಐಎಗೆ ಕೇಂದ್ರ ಗೃಹ ಇಲಾಖೆ ವಹಿಸಿದ್ದು, ಇದೀಗ ಎನ್‌ಐಎ ಅಧಿಕಾರಿಗಳ ತಂಡ ಅಖಾಡಕ್ಕಿಳಿದಿದೆ. ಪ್ರಕರಣದ ತನಿಖೆ ಕೈಗೆತ್ತಿಕೊಂಡಿರುವ ಎನ್‌ಐಎ ಅಧಿಕಾರಿಗಳು ಶನಿವಾರ ಮಂಗಳೂರಿಗೆ ಆಗಮಿಸಿದ್ದಾರೆ. ಡಿಎಸ್‌ಪಿ ಪವನ್ ಕುಮಾರ್ ನೇತೃತ್ವದ ತಂಡ ಮಂಗಳೂರು ಸಿಸಿಬಿ ಅಧಿಕಾರಿಗಳಿಂದ ಮಾಹಿತಿ ಕಲೆ ಹಾಕಿದೆ. ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದಲ್ಲಿ ನಿಷೇಧಿತ ಸಂಘಟನೆ ಪಿಎಫ್‌ಐ ಕಾರ್ಯಕರ್ತರು ಶಾಮೀಲಾಗಿರುವ ಆರೋಪ ಕೇಳಿಬಂದಿದೆ. ಇದರಿಂದಾಗಿ ಈ ಪ್ರಕರಣದ ತನಿಖೆಯನ್ನು ಕೇಂದ್ರ ಗೃಹ ಇಲಾಖೆ ಎನ್‌ಐಎ ತನಿಖೆಗೆ ವಹಿಸಿತ್ತು. ಮೇ 1 ರಂದು ಫಾಜಿಲ್ ಹತ್ಯೆಯ ಆರೋಪಿ ಸುಹಾಸ್ ಶೆಟ್ಟಿಯನ್ನು ಬರ್ಬರವಾಗಿ ಹತ್ಯೆ ಮಾಡಲಾಗಿತ್ತು. ಈ ಹತ್ಯೆಗೆ ದೇಶ, ವಿದೇಶಗಳಿಂದ ಫಂಡಿಂಗ್ ಆಗಿದೆ. ರಾಜ್ಯದ ಪೊಲೀಸ್ ಇಲಾಖೆಯಿಂದ ನಿಷ್ಪಕ್ಷಪಾತವಾಗಿ ತನಿಖೆ ನಡೆಸಲು ಸಾಧ್ಯವಿಲ್ಲ. ಹೀಗಾಗಿ ಎನ್‌ಐಎಗೆ ಒಪ್ಪಿಸಬೇಕೆಂದು ಆಗ್ರಹಿಸಿ ಬಿಜೆಪಿ, ಸೇರಿದಂತೆ ಹಿಂದೂಪರ ಕಾರ್ಯರ್ತರು ಆಗ್ರಹಿಸಿದ್ದರು. ಸುಹಾಸ್ ಶೆಟ್ಟಿ ಹತ್ಯೆ ಕೇಸ್‌ನಲ್ಲಿ ಈಗಾಗಲೇ ಪೊಲೀಸರು 11 ಮಂದಿಯನ್ನು ಬಂಧಿಸಿದ್ದಾರೆ.

ವೈದ್ಯರ ನಿರ್ಲಕ್ಷ್ಯಕ್ಕೆ ಬಾಣಂತಿ ಸಾವು

ದಾವಣಗೆರೆ: ಸಿಸೇರಿಯನ್ ಹೆರಿಗೆ ಮೂಲಕ ಹೆಣ್ಣು ಮಗುವಿಗೆ ಜನ್ಮ ನೀಡಿದ್ದ ಬಾಣಂತಿ ಆರೋಗ್ಯದಲ್ಲಿ ಏರುಪೇರಾಗಿ ಮೃತಪಟ್ಟ ಘಟನೆ ಇಲ್ಲಿನ ಚಿಗಟೇರಿ ಜಿಲ್ಲಾಸ್ಪತ್ರೆ ಯಲ್ಲಿ ನಡೆದಿದೆ. ವೈದ್ಯರ ನಿರ್ಲಕ್ಷ್ಯ ವೇ ಸಾವಿಗೆ ಕಾರಣ ವೆಂದು ಮೃತಳ ಕುಟುಂಬಸ್ಥರು ಆರೋಪಿಸಿದ್ದಾರೆ.

ದುರ್ಗಮ್ಮ (21) ಮೃತ ಬಾಣಂತಿ. ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲೂ ಕಿನಲ್ಲಿರುವ ತನ್ನ ತಾಯಿ ಮನೆಗೆ ಹೆರಿಗೆ ಬಂದಿದ್ದ ಅವರಿಗೆ ಮೂರು ದಿನಗಳ ಹಿಂದೆ ಹೆರಿಗೆ ನೋವು ಕಾಣಿಸಿಕೊಂಡಿತ್ತು. ಪೋಷ ಕರು ತಕ್ಷಣ ಹತ್ತಿರದ ಹರಪನಹಳ್ಳಿ ತಾಲೂಕು ಆಸ್ಪತ್ರೆಗೆ ದಾಖಲಿಸಿದ್ದರು. ಹರಪನಹಳ್ಳಿ ವೈದ್ಯರು ಸಿಸೇರಿಯನ್‌ಮೂಲಕ ಹೆರಿಗೆ ಮಾಡಿಸಿದ್ದರು.

ಹೆಣ್ಣು ಮಗು ಜನಿಸಿತ್ತು. ಬಳಿಕ ಅವರಿಗೆ ಆರೋಗ್ಯದಲ್ಲಿ ಸಮಸ್ಯೆ ಕಂಡುಬಂದ ಹಿನ್ನೆಲೆಯಲ್ಲಿ ಚಿಗಟೇರಿ ಜಿಲ್ಲಾಸ್ಪತ್ರೆಗೆ ದಾಖಲು ಮಾಡಲಾಗಿತ್ತು.

ಹೆರಿಗೆಗಾಗಿ ಹರಪನಹಳ್ಳಿ ತಾಲೂಕು ಆಸ್ಪತ್ರೆಗೆ ಮಗಳನ್ನು ದಾಖಲಾದ ಸಿಸೇರಿ ಯನ್ ಮೂಲಕ ವೈದ್ಯರು ಹೆರಿಗೆ ಮಾಡಿಸಿ ದ್ದರು. ಆದರೆ ಹೆರಿಗೆ ಬಳಿಕ ಹೊಲಿಗೆ ಹಾಕುವ ವೇಳೆ ವೈದ್ಯರು ಎಡವಟ್ಟು ಮಾಡಿದ್ದಾರೆ. ನಂತರ ಬಾಣಂತಿಯ ಆರೋಗ್ಯ ಸ್ಥಿತಿ ಚಿಂತಾಜನಕವಿದೆ ಎಂದು ದಾವಣಗೆರೆಯ ಚಿಗಟೇರಿ ಆಸ್ಪತ್ರೆಗೆ ಕಳುಹಿಸಿದ್ದರು. ಅಲ್ಲಿ 12 ಬಾಟಲ್ ರಕ್ತ ಸೇರಿಸಿದ್ದರು. ಗರ್ಭಕೋಶ ಹೊರತೆಗೆಯಬೇಕೆಂದರು. ಆದರೆ, ಎಲ್ಲಾ ಮಾಡಿದರೂ ನಮ್ಮ ಮಗಳು ಉಳಿಯಲಿಲ್ಲ. ರಕ್ತ ಇಲ್ಲ, ರಕ್ತಸ್ರಾವ ಆಗುತ್ತಿದೆ ಎಂದು ಏನೂ ಹೇಳಲಿಲ್ಲ. ನಮಗೆ ನೋಡಲು ಕೂಡ ಬಿಡಲಿಲ್ಲ. ಹರಪನಹಳ್ಳಿ ತಾಲೂಕು ಆಸ್ಪತ್ರೆ ವೈದ್ಯರ ನಿರ್ಲಕ್ಷ್ಯದಿಂದ ಮಗಳು ಸಾವನಪ್ಪಿದ್ದಾಳೆ ಎಂದು ಮೃತರ ತಾಯಿ ಹುಲಿಗೆಮ್ಮ ಆರೋಪಿಸಿದ್ದಾರೆ.

ಟ್ವೀಟೂ-ಖಾರಾ

ಕರ್ನಾಟಕ ಕಾಂಗ್ರೆಸ್

ಬೆಂಗಳೂರಿನ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ರಾಜ್ಯ ಕಾಂಗ್ರೆಸ್ ಸರಕಾರ 13,000 ಕೋಟಿ ರು. ವೆಚ್ಚದಲ್ಲಿ 16 ಎಲಿವೇಟೆಡ್ ಕಾರಿಡಾರ್‌ಗಳನ್ನು ನಿರ್ಮಿಸಲು ಯೋಜನೆ ರೂಪಿಸಿದೆ. ಇದಕ್ಕಾಗಿ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಮೂರು ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗಿದೆ. ಈ ಯೋಜನೆಗಳು ನಗರದ ಪ್ರಮುಖ ರಸ್ತೆಗಳಲ್ಲಿ ವಾಹನ ಸಂಚಾರವನ್ನು ಸುಗಮಗೊಳಿಸಲಿವೆ.

ಆನಂದ್‌ರಾಜ್

ಬೆಂಗಳೂರಿನ ಸಂಚಾರ ದಟ್ಟಣೆ ಕಡಿಮೆ ಮಾಡಲು 13 ಸಾವಿರ ಕೋಟಿ ಯೋಜನೆ ಮಾಡ್ತಿದ್ದೀರಾ ಒಳ್ಳೆಯದು. ಆದರೆ ಈ ಯೋಜನೆ ಹಿಂದೆ ಎಷ್ಟು ಕೋಟಿ ದುಡ್ಡು ಲೂಟಿ ಹೊಡೆಯುವ ಹುನ್ನಾರವಿದೆ.

ಭೈರಪ್ಪನವರ ಬದುಕು, ಬರಹ ಎರಡೂ ಒಂದೇ ರೀತಿ | ಬದುಕನ್ನು ಆದರ್ಶವಾಗಿಟ್ಟುಕೊಂಡ ಸಾಹಿತ್ಯ ರಚನೆ ದೊಡ್ಡ ಸವಾಲು: ಬೊಮ್ಮಾಯಿ

ಭೈರಪ್ಪನವರೆಂದೂ ಪ್ರಶಸ್ತಿಗೆ ಲಾಬಿ ಮಾಡಿಲ್ಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಾಹಿತಿ ಎಸ್.ಎಲ್.ಭೈರಪ್ಪ ಅವರ ಜೀವನ ಮತ್ತು ಸಾಹಿತ್ಯಕ್ಕೆ ಎರಡು ವಿಶ್ಲೇಷಣೆ ಅಗತ್ಯವಿಲ್ಲ. ಅವರ ಜೀವನ ಮತ್ತು ಬದುಕು ಎರಡೂ ಒಂದೇ ಆಗಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟರು.

ನಗರದ ಬಿಎಂಎಸ್ ಎಂಜನಿಯರಿಂಗ್ ಕಾಲೇಜಿನಲ್ಲಿ ನಡೆದ ಎಸ್.ಎಲ್.ಭೈರಪ್ಪ ಪ್ರತಿಷ್ಠಾನ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿ, ಎಸ್.ಎಲ್.ಭೈರಪ್ಪನವರ ಕೃತಿಗಳನ್ನು ಅರ್ಥ ಮಾಡಿಕೊಳ್ಳುವುದೇ ಕಷ್ಟ. ನಾನು ಪರ್ವ ಕಾದಂಬರಿಯನ್ನು ಕಾಲೇಜು ಜೀವನದಲ್ಲಿಯೇ ಓದಲು ಪ್ರಯತ್ನ ಮಾಡಿದ್ದೆ, ಅಷ್ಟು ಸುಲಭವಾಗಿ ಅರ್ಥವಾಗಿರಲಿಲ್ಲ. ಕೆಲವು ವರ್ಷಗಳ ನಂತರ ಮತ್ತೆ ಓದಿದೆ. ಭೈರಪ್ಪ ಅವರ ಸಾಹಿತ್ಯಗಳು ಎಲ್ಲಾ ಕಾಲಕ್ಕೂ ಹೊಂದುವಂತಹ ಸಾಹಿತ್ಯವಾಗಿದೆ. ಪ್ರತಿಬಾರಿ ಓದಿದಾಗ ಹೊಸ ಆಯಾಮ ಸಿಗುತ್ತದೆ. ನನಗೆ ಕಾಡಿರುವ ಎರಡು ಪುಸ್ತಕಗಳು ಒಂದು ಭೈರಪ್ಪ ಅವರ ಕಾದಂಬರಿ ಹಾಗೂ ಸ್ವಾಮಿ ವಿವೇಕಾನಂದರ ಲೈಫ್ ಆಫ್ಟರ್ ಡೆತ್ ಎಂದರು.

ಸ್ವಾಮಿ ವಿವೇಕಾನಂದರ ಲೈಫ್ ಆಫ್ಟರ್ ಡೆತ್ ಪುಸ್ತಕದಲ್ಲಿ ವಿವೇಕಾನಂದರು ಸಾಧಕರಿಗೆ ಸಾವು ಅಂತ್ಯವಲ್ಲ. ಸಾವಿನ ನಂತರವೂ ಬದುಕುವುದು ಸಾಧಕ. ಅಂತಹ ಒಬ್ಬ ಸಾಧಕರು ಎಸ್.ಎಲ್.ಭೈರಪ್ಪ, ಅವರ ಜೀವನ ಮತ್ತು ಸಾಹಿತ್ಯಕ್ಕೆ ಎರಡು ವಿಶ್ಲೇಷಣೆ ಅಗತ್ಯವಿಲ್ಲ. ಜೀವನ ಮತ್ತು ಬದುಕು ಎರಡೂ ಒಂದೇ ಆಗಿದೆ. ಬದುಕನ್ನು ತಿಳಿದುಕೊಳ್ಳುವುದೇ ಕಷ್ಟ. ಅಂತಹ ಬದುಕನ್ನು ಆದರ್ಶವಾಗಿಟ್ಟುಕೊಂಡು ಸಾಹಿತ್ಯ ಬರೆಯುವುದು ದೊಡ್ಡ ಸವಾಲು ಅವರಿಗೆ ಇನ್ನೊಬ್ಬ ವ್ಯಕ್ತಿ, ಇನ್ನೊಂದು ವಿಚಾರ ಅವರಿಗೆ ಸವಾಲು ಅಲ್ಲ. ಅವರು ಬಹಳ ಗಟ್ಟಿಯಾಗಿದ್ದಾರೆ. ಅವರು ಯಾವುದೇ ಪ್ರಶಸ್ತಿಗೂ ಲಾಬಿ ಮಾಡಿಲ್ಲ. ಕೆಲವರು ನೊಬೆಲ್ ಪ್ರಶಸ್ತಿಗೂ ಲಾಬಿ ಮಾಡಿದವರು ಇದ್ದಾರೆ. ಎಲ್ಲರೂ ಒಂದೇ ಥರ ವಿಚಾರ ಮಾಡಲು ಸಾಧ್ಯವಿಲ್ಲ. ವಿಭಿನ್ನತೆ ಬಹಳ ಮುಖ್ಯ. ಈಗ ಅವರು ಇನ್ನೊಂದು ದೊಡ್ಡ ಹೆಜ್ಜೆ ಇಟ್ಟಿದ್ದಾರೆ. ಅವರ ಹೆಸರಿನಲ್ಲಿ ಟ್ರಸ್ಟ್ ಮಾಡಿದ್ದಾರೆ. ನಮಗೆ ಸಮಾಜ ಏನು ಕೊಟ್ಟಿದೆಯೋ ಅದನ್ನು ನಾವು ಸಮಾಜಕ್ಕೆ ವಾಪಸ್ ಕೊಟ್ಟಾಗ ನಮ್ಮ ಬದುಕಿನ ಬ್ಯಾಲೆನ್ಸ್ ಶೀಟ್ ಪೂರ್ತಿಯಾಗುತ್ತದೆ.

ಎಸ್.ಎಲ್. ಭೈರಪ್ಪ ಪ್ರತಿಷ್ಠಾನದ ಉದ್ಘಾಟನಾ ಕಾರ್ಯಕ್ರಮಕ್ಕೆ ಅವರ ಕೃತಿಗಳಿಗೆ ಆರತಿ ಬೆಳಗುವ ಮೂಲಕ ಚಾಲನೆ ನೀಡಲಾಯಿತು.

ಭೈರಪ್ಪನವರು ತಮಗೆ ಸಮಾಜ ಕೊಟ್ಟಿರುವುದನ್ನು ಸಮಾಜಕ್ಕೆ ಕೊಟ್ಟಿದ್ದಾರೆ ಎಂದರು.

ಭೈರಪ್ಪ ಸಾಹಿತ್ಯ ಲೋಕದ ಧೀಮಂತ

'ವಿಶ್ವವಾಣಿ' ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಮಾತನಾಡಿ, ಡಾ.ಎಸ್.ಎಲ್.ಭೈರಪ್ಪ ಅವರು ಸಾಹಿತ್ಯ ಲೋಕದಲ್ಲಿ ಒಬ್ಬ ಧೀಮಂತ ವ್ಯಕ್ತಿ. ಅವರು ಎಂದಿಗೂ ತಮ್ಮ ಸುಖದ ಬಗ್ಗೆ ಯೋಚಿಸಿದವರಲ್ಲ, ಅವರು ಸದಾ ಸಮಾಜದ ಒಳಿತಿಗಾಗಿ ಯೋಚಿಸಿದವರು. ಈ ಹಿಂದೆ ಅವರು ನನ್ನ ಬಳಿ ಅವರ ಹುಟ್ಟೂರು ಸಂತೇಶಿವರದಲ್ಲಿನ ನೀರಿನ ಸಮಸ್ಯೆಗೆ ಸಂಬಂಧಿಸಿದಂತೆ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಬೇಕು ಎಂದು ಹೇಳಿದರು. ಅಂತೆಯೇ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ತಮ್ಮೂರಿಗೆ ಒಂದು ಕೆರೆ ನಿರ್ಮಾಣವಾಗುವವರೆಗೂ ಭೈರಪ್ಪನವರು ವಿರಮಿಸಲಿಲ್ಲ. ಯಾರಾದರೂ ಸಾಹಿತಿಗಳು ಒಬ್ಬ ರಾಜಕಾರಣಿಯನ್ನು ಭೇಟಿ ಮಾಡುವುದು ಯಾವುದಾದರೂ ಪ್ರಶಸ್ತಿಯ ಬಗ್ಗೆಯೋ ಅಥವಾ ಬೆಂಗಳೂರಿನಲ್ಲಿ ಒಂದಿಷ್ಟು ಜಾಗ ನೀಡುವಂತೆಯೋ ಆಗಿರುತ್ತದೆ. ಆದರೆ ಭೈರಪ್ಪ ಅವರು ತಮ್ಮ ಹುಟ್ಟೂರಿನ ನೀರಿನ ಸಮಸ್ಯೆ ಬಗೆಹರಿಸಲು ಹೋರಾಡಿದರು. ಭೈರಪ್ಪನವರಿಗೆ ಅವರು ಬರೆದಿರುವ ಪುಸ್ತಕಗಳಿಂದ ಬರುವ ಗೌರವಧನದಲ್ಲಿ, ಯಾವುದೋ ಒಂದು ಫ್ಲಾಟ್ ತೆಗೆದುಕೊಂಡು ಅಥವಾ ಅವರಿಗೆ ಏನು ಬೇಕೊ ಅದನ್ನು ಮಾಡಿಕೊಂಡು ಇರಬಹುದಿತ್ತು. ಆದರೆ ಅವರು ತಾವು ಶಿಕ್ಷಣ ಪಡೆಯುವ ವೇಳೆಯಲ್ಲಿ ಅನುಭವಿಸಿದ ಕಷ್ಟಗಳನ್ನು ನೆನೆದು ಇಂದಿನ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಏನಾದರೂ ಸಹಾಯ ಮಾಡಬೇಕು ಎಂಬ ಅವರ ಆಶಯದ ಮೇರೆಗೆ ಸಾಹಿತ್ಯ ಭಂಡಾರ ಅರುಣ್ ಅವರ ಅಧ್ಯಕ್ಷತೆಯಲ್ಲಿ ಪ್ರತಿಷ್ಠಾನ ಸ್ಥಾಪಿಸಿದ್ದಾರೆ. ಈ ಪ್ರತಿಷ್ಠಾನದ ಮೂಲಕ ಭೈರಪ್ಪ ಅವರ ಎಲ್ಲಾ ಆಶಯಗಳು ಈಡೇರಲಿ ಎಂದು ಆಶಿಸಿದರು.

ಎಸ್.ಎಲ್. ಭೈರಪ್ಪ ಅವರ ಕೃತಿಗಳಿಗೆ ಆರತಿ ಬೆಳಗುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ಈ ವೇಳೆ ಸರಸ್ವತಿ ಸಮ್ಮಾನ್ ಪುರಸ್ಕೃತ ಸಾಹಿತಿ ಎಸ್.ಎಲ್.ಭೈರಪ್ಪ, ಶತಾವಧಾನಿ ಆರ್.ಗಣೇಶ್, ಪ್ರತಿಷ್ಠಾನದ ಅಧ್ಯಕ್ಷ ಅರುಣ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು.

ಎಸ್.ಎಲ್ ಭೈರಪ್ಪ ಪ್ರತಿಷ್ಠಾನದ ಪದಾಧಿಕಾರಿಗಳು

ಅಧ್ಯಕ್ಷ:	ಅರುಣ್, ಸಾಹಿತ್ಯ ಭಂಡಾರ
ಉಪಾಧ್ಯಕ್ಷೆ:	ತೇಜಸ್ವಿನಿ ಅನಂತಕುಮಾರ್
ಕಾರ್ಯದರ್ಶಿ:	ಸಹನಾ ವಿಜಯಕುಮಾರ್
ಖಜಾಂಚಿ :	ಕೃಷ್ಣಪ್ರಸಾದ್
ಟ್ರಸ್ಟಿ :	ವಿಶ್ವೇಶ್ವರ ಭಟ್

ಭೈರಪ್ಪ ಸಾಹಿತ್ಯದಲ್ಲಿ ಮೌಲ್ಯವಿದೆ

ಭೈರಪ್ಪ ಅವರ ಕೃತಿಗಳಲ್ಲಿ ಮೌಲ್ಯಮೀಮಾಂಸೆ ಬಗ್ಗೆ ಶತಾವಧಾನಿ ಆರ್.ಗಣೇಶ್ ಮಾತನಾಡಿ, ಭೈರಪ್ಪನವರು ತಮ್ಮ ಸಾಹಿತ್ಯದಲ್ಲಿ ಕಥೆ, ಕಥಾವಸ್ತು ಮತ್ತು ಪಾತ್ರಗಳಲ್ಲಿ ಹಲವು ಮೌಲ್ಯಗಳು ಅಡಕವಾಗಿವೆ. ಯಾವಾಗಲೂ ಒಂದು ಸಾಹಿತ್ಯ ಹೆಸರಾಗಬೇಕು ಎಂದರೆ ಅದು ಪ್ರಸ್ತುತ ದಿನಮಾನಕ್ಕೆ ಹೊಂದುವಂತಿರಬೇಕು. ಭೈರಪ್ಪನವರ ಕೃತಿಯನ್ನು ಯಾರು, ಯಾವುದೇ ಕಾಲದಲ್ಲಿ ಓದಿದರು ಅದು ಪ್ರಸ್ತುತವೆನ್ನಿಸುತ್ತದೆ. ಅವರ ಪರ್ವ, ಆವರಣ, ಗೃಹಭಂಗ ಸೇರಿದಂತೆ ಎಲ್ಲಾ ಕೃತಿಗಳು ಬೇರೆ ಬೇರೆ ಕಥಾಪಾತ್ರಗಳನ್ನು ಇಟ್ಟುಕೊಂಡು ಮನುಷ್ಯನ ಅಂತರದಲ್ಲಿ ಮೌಲ್ಯಗಳನ್ನು ತುಂಬುವ ಕೆಲಸಮಾಡಿದ್ದಾರೆ. ಅವರ ಕೃತಿಗಳು ಕೇವಲ ಮೌಲ್ಯದಿಂದ ಕೂಡಿದ್ದಲ್ಲದೇ ಓದುಗನಿಗೆ ಆ ಕಥೆ ಅನುಭಕ್ಕೆ ಬರುವಂತೆ ಚಿತ್ರಿಸುತ್ತಾರೆ. ಒಟ್ಟನಲ್ಲಿ ಅವರ ಬದುಕು ಬರಹ ಎರಡೂ ವಿಭಿನ್ನವಲ್ಲ, ಅವರು ಏನನ್ನು ಬದುಕಿದರು ಅದನ್ನು ಬರೆದಿದ್ದಾರೆ, ಏನನ್ನು ಬರೆದರು ಅದರಂತೆ ಬದುಕಿದ್ದಾರೆ ಎಂದು ಹೇಳಿದರು.

ವಿದ್ಯಾರ್ಥಿಗಳ ಸಹಾಯಕ್ಕಾಗಿ ಎಸ್.ಎಲ್.ಭೈರಪ್ಪ ಅವರು ಪ್ರತಿಷ್ಠಾನ ಸ್ಥಾಪಿಸಿದ್ದಾರೆ. ಸಾಹಿತ್ಯದಿಂದ ಬರುವ ಹಣವನ್ನು ಸ್ವಂತಕ್ಕೆ ಬಳಸದೇ, ಬಡ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವ್ಯಯಿಸಬೇಕು ಎಂದು ಯೋಚಿಸಿ ಈ ಪ್ರತಿಷ್ಠಾನದ ಮೂಲಕ ಉನ್ನತ ತಾಂತ್ರಿಕ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಧನ ಸಹಾಯ, ವಸತಿಯಂತಹ ಮೂಲ ಸೌಕರ್ಯ ಕಲ್ಪಿಸುವ ಗುರಿಯಿದೆ. ಜತೆಗೆ ಪ್ರತಿ ವರ್ಷ ಭೈರಪ್ಪ ಅವರ ಹೆಸರಿನಲ್ಲಿ ಒಬ್ಬ ಸಾಧಕರಿಗೆ ಪ್ರಶಸ್ತಿ ನೀಡಲಾಗುವುದು.

– ಸಹನಾ ವಿಜಯಕುಮಾರ್, ಎಸ್.ಎಲ್. ಭೈರಪ್ಪ ಪ್ರತಿಷ್ಠಾನದ ಕಾರ್ಯದರ್ಶಿ

ಮಿಸ್ ಕಾಲ್ ಮೂಲಕ ಸದಸ್ಯತ್ವಕ್ಕೆ ಅವಕಾಶ | ನಿಖಿಲ್ ನೇತೃತ್ವದಲ್ಲಿ ರಾಜ್ಯ ಪ್ರವಾಸ

ಇಂದಿನಿಂದ ಜೆಡಿಎಸ್ ಸದಸ್ಯತ್ವ ಅಭಿಯಾನ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪಕ್ಷವನ್ನು ಸಂಘಟನಾತ್ಮಕವಾಗಿ ಕಟ್ಟುವ ಉದ್ದೇಶ ಹಾಗೂ ಜೆಡಿಎಸ್‌ನತ್ತ ಯುವಕರನ್ನು ಸೆಳೆಯುವ ಉದ್ದೇಶ ದೊಂದಿಗೆ ರಾಜ್ಯ ಜೆಡಿಎಸ್ ಇದೀಗ ಸದಸ್ಯತ್ವ ಅಭಿಯಾನ ವನ್ನು ಆರಂಭಿಸಿದ್ದು, ಈ ಬಾರಿ ಮಿಸ್ ಕಾಲ್ ಮೂಲಕ ಸದಸ್ಯತ್ವ ನೊಂದಣಿ ಮಾಡಲು ಉದ್ದೇಶಿಸಿದೆ.

ಜೆಡಿಎಸ್ ಯುವ ಘಟಕದ ವತಿಯಿಂದ 'ಜನರೊಂದಿಗೆ ಜನತಾದಳ' ಎನ್ನುವ ಹೆಸರಲ್ಲಿ ಅಭಿಯಾನವನ್ನು ಆರಂಭಿಸಲು ಉದ್ದೇಶಿಸಲಾಗಿದೆ. ಈ ಕಾರ್ಯ ಕ್ರಮ ಜೂ.13ರಂದೇ ನಡೆಯ ಬೇಕಿತ್ತು. ಆದರೆ ಏರ್ ಇಂಡಿಯಾ ವಿಮಾನ ದುರಂತ ದಿಂದಾಗಿ ಕಾರ್ಯಕ್ರ ಮವನ್ನು ಮುಂದೂಡಲಾಗಿತ್ತು. ಆದರೀಗ ಭಾನುವಾರ ಈ ಅಭಿಯಾನಕ್ಕೆ ಚಾಲನೆ ನೀಡಲು ತೀರ್ಮಾನಿಸಲಾಗಿದೆ.

ಸದಸ್ಯತ್ವ ನೊಂದಣಿಗೆ ಚಾಲನೆ ನೀಡುವ ಜತೆಜತೆಗೆ ತಳಮಟ್ಟದಲ್ಲಿ ಪಕ್ಷವನ್ನು ಸಂಘಟಿಸುವ ಉದ್ದೇಶದಿಂದ ಸೋಮವಾರದಿಂದ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ರಾಜ್ಯಾದ್ಯಂತ ಪ್ರವಾಸ ಮಾಡಲಿದ್ದಾರೆ. ಈ ಪ್ರವಾಸದಲ್ಲಿ ಪಕ್ಷದ ಎರಡನೇ ಹಾಗೂ ಮೂರನೇ ಹಂತದ ನಾಯಕರೊಂದಿಗೆ ಚರ್ಚಿಸಿ, ಸ್ಥಳೀಯ ಸಮಸ್ಯೆ, ಸಂಘಟನೆಗೆ ಸಂಬಂಧಿಸಿದಂತೆ ಚರ್ಚಿಸಲಿದ್ದಾರೆ ಎಂದು ತಿಳಿದುಬಂದಿದೆ.

- ಜೆಡಿಎಸ್ ಯುವ ಘಟಕದಿಂದ 'ಜನರೊಂದಿಗೆ ಜನತಾದಳ'
- ತಳಮಟ್ಟದಲ್ಲಿ ಪಕ್ಷ ಸಂಘಟಿಸಲು ಖುದ್ದು ನಿಖಿಲ್ ರಾಜ್ಯ ಪ್ರವಾಸ
- ಸೋಮವಾರ ತುಮಕೂರಿನಿಂದ ಪ್ರವಾಸ ಮಾಡಲಿರುವ ನಿಖಿಲ್
- ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕರಿಂದ ಅಭಿಯಾನಕ್ಕೆ ಇಂದು ಚಾಲನೆ

ಭಾನುವಾರ ಬೆಳಗ್ಗೆ ಬೆಂಗಳೂರಿನ ಜೆ.ಪಿ. ಭವನದಲ್ಲಿ ಕಿರು ಸಮಾವೇಶ ನಡೆಯಲಿದ್ದು, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ನಾಯಕರಾದ ಸುರೇಶ್ ಬಾಬು, ಭೋಜೇಗೌಡ, ಸಂಸದ ಮಲ್ಲೇಶ್ ಬಾಬು ಸಹಿತ ಪಕ್ಷದ ಶಾಸಕರು ಹಾಗೂ ಇನ್ನಿತರ ಮುಖಂಡರು ಪಾಲ್ಗೊಳ್ಳಲಿದ್ದಾರೆ. ಇದಾದ ಬಳಿಕ ನಿಖಿಲ್ ಕುಮಾರಸ್ವಾಮಿ ಅವರು ಎರಡು ತಿಂಗಳ ಕಾಲ ರಾಜ್ಯಾದ್ಯಂತ ಪ್ರವಾಸ ಕೈಗೊಳ್ಳಲಿದ್ದು, ಈ ವೇಳೆ ತಾಲೂಕು ಮಟ್ಟದಿಂದ ಪಕ್ಷದ ಸಂಘಟನೆಗೆ ಒತ್ತು ನೀಡುವ ಸಾಧ್ಯತೆಯಿದೆ. ಭವಿಷ್ಯದಲ್ಲಿ ಜಿಲ್ಲಾಧ್ಯಕ್ಷರ ಆಯ್ಕೆಯೂ ನಡೆಯಬೇಕಿದ್ದು, ಅದಕ್ಕೂ ಮುನ್ನ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ರಾಜ್ಯ ಪ್ರವಾಸ ನಡೆಯಲಿದೆ. ಇದಕ್ಕೆ ಪೂರಕವಾಗಿ ಸಂಘಟನೆಯನ್ನು ಹಿಗ್ಗಿಸಲು ಡಿಜಿಟಲ್ ವೇದಿಕೆಗಳನ್ನು ಬಳಸಿ ಕೊಳ್ಳಲೂ ಪಕ್ಷ ಮುಂದಾಗಿದೆ.

ತುಮಕೂರು ಜಿಲ್ಲೆಯಿಂದ ನಿಖಿಲ್ ಪ್ರವಾಸ

ಸೋಮವಾರ ತುಮಕೂರು ಜಿಲ್ಲೆಯಿಂದ ಪ್ರವಾಸ ಆರಂಭಿಸಲಿರುವ ನಿಖಿಲ್, ಪ್ರತಿ ದಿನ ಕನಿಷ್ಠ 2 ತಾಲೂಕುಗಳಂತೆ ನಾಲ್ಕು ದಿನಗಳ ಕಾಲ ತುಮಕೂರು ಜಿಲ್ಲೆಯ ಎಲ್ಲ ತಾಲೂಕು ಕೇಂದ್ರಗಳಲ್ಲೂ ಸಂಚರಿಸಲಿ ದ್ದಾರೆ. ಸಂಘಟನಾತ್ಮಕ ಪ್ರವಾಸವು ತುಮಕೂರಿನಿಂದ ಆರಂಭವಾಗುತ್ತದೆಯಾದರೂ ಅನಂತರ ಯಾವ್ಯಾವ ಜಿಲ್ಲೆಗಳಿಗೆ ತೆರಳಲಿದ್ದಾರೆ ಎಂಬುದರ ವೇಳಾಪಟ್ಟಿ ಇನ್ನೂ ಸಿದ್ಧಗೊಂಡಿಲ್ಲ. ತುಮಕೂರಿನ ಬಳಿಕ ಮೈಸೂರು, ಮಂಡ್ಯ ಭಾಗದಲ್ಲಿ ಪ್ರವಾಸ ನಡೆಸುವ ಚಿಂತನೆ ಇತ್ತು. ಆದರೆ ಪಕ್ಷದೊಂದಿಗೆ ಮುನಿಸಿಕೊಂ ಡಿರುವ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ. ದೇವೇಗೌಡ ರನ್ನು ಸಮಾಧಾನಪಡಿಸುವ ಸವಾಲು ಇರುವುದರಿಂದ ವಿಜಯಪುರ, ಬಾಗಲಕೋಟೆಯತ್ತ ಮುಖ ಮಾಡಲು ಚಿಂತನೆಗಳು ನಡೆದಿವೆ.

ಅಭಿವೃದ್ಧಿ ಮರೆತಿರುವ ಕಾಂಗ್ರೆಸ್ | ಗಂಭೀರ ಹಂತ ತಲುಪಿದ ರಾಜ್ಯದ ಆರ್ಥಿಕ ಸ್ಥಿತಿ: ಪ್ರಲ್ಹಾದ ಜೋಶಿ

ರಾಜ್ಯದಲ್ಲಿ ದುರ್ಬಲ ನಾಯಕತ್ವ

ಕಲಬುರಗಿ: ರಾಜ್ಯವು ದುರ್ಬಲ ನಾಯಕತ್ವ ಹಾಗೂ ಮಂತ್ರಿಗಳ ನಡುವಿನ ಅವಿಶ್ವಾಸದಿಂದಾಗಿ ರಾಜ್ಯದ ಆರ್ಥಿಕ ಸ್ಥಿತಿ ಗಂಭೀರ ಹಂತಕ್ಕೆ ತಲುಪಿದೆ.

ಕಾಂಗ್ರೆಸ್ ಸರಕಾರ ಅಭಿವೃದ್ಧಿ ಮರೆತಿದ್ದು, ದೊಡ್ಡ ಮಟ್ಟದ ಅಭಿವೃದ್ಧಿ ಕೆಲಸಗಳು ನಡೆಯುತ್ತಿಲ್ಲ. ಇನ್ನು ಇದರ ನೇರ ಪರಿಣಾಮ ಆಡಳಿತದ ಮೇಲಾಗಿ, ಮತಾಂಧ ಶಕ್ತಿಗಳ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಇದೀಗ ಇರುವುದು 60 ಪರ್ಸೆಂಟ್ ಸರಕಾರ ಎಂದು ಗುತ್ತಿಗೆದಾರರ ಸಂಘ ಹೇಳುತ್ತಿದೆ. ಆಳುವ ಸರಕಾರದಲ್ಲಿ ಹೊಂದಾಣಿಕೆ ಇಲ್ಲದಂತಾಗಿದೆ. ತಮ್ಮ ಇಚ್ಛಾಶಕ್ತಿಗೆ ಅನುಸಾರ ನಿರ್ಣಯಗಳನ್ನು ಕೈಗೊಳ್ಳಲಾಗುತ್ತಿದೆ. ಇಂತಹ ನಿರ್ಧಾರದಿಂದಲೇ ಬೆಂಗಳೂರಿನಲ್ಲಿ ಕಾಲ್ತುಳಿತ ದುರಂತ ನಡೆದು 11 ಮಂದಿ ಸಾವನ್ನಪ್ಪಿದರು. ಆರ್‌ಸಿಬಿ ಕಾರ್ಯಕ್ರಮಕ್ಕೆ ರಾಜ್ಯಪಾಲರನ್ನು ಆಹ್ವಾನಿಸಿಲ್ಲ ಎಂದು ಒಂದು ಬಾರಿ ಹೇಳಿದರೇ, ಇನ್ನೊಂದು ಬಾರಿ ನಾನೇ ಕರೆದಿದ್ದು ಎಂದು ಹೇಳುವ ಮೂಲಕ ಗೊಂದಲ ಸೃಷ್ಟಿಕೊಳ್ಳುತ್ತಿದ್ದಾರೆ.

ಕೇಂದ್ರದಿಂದ ನವೀಕರಿಸಬಹುದಾದ ಇಂಧನ ಉತ್ಪಾದನೆಗೆ, ಬಳಕೆಗೆ ಕುಸುಮ್, ಸೋಲಾರ್ ಪ್ಲಾಂಟ್ ಸೇರಿ ವಿವಿಧ ಯೋಜನೆ ಜಾರಿಗೆ ತರಲಾಗಿದೆ. ರಾಜ್ಯ ಸರಕಾರ ಪ್ರಸ್ತಾವನೆ ಸಲ್ಲಿಸಿದರೆ ಅನುಮೋದನೆ ನೀಡಿ, ಸಹಕಾರ ನೀಡುತ್ತೇವೆ. ಘೋಷಿತ ಯೋಜನೆಗಳು ಪೂರ್ಣಗೊಳಿಸದಿದ್ದರೆ ಬೇರೆ ರಾಜ್ಯಕ್ಕೆ ನೀಡುತ್ತೇವೆ ಎಂದು ಪತ್ರ ಬರೆಯಲಾಗಿದೆ ಎಂದು ಹೇಳಿದರು. ನವೀಕರಿಸಬಹುದಾದ ಇಂಧನ ಬಳಕೆಯಲ್ಲಿ ಭಾರತ ವಿಶ್ವದಲ್ಲೇ ಮೂರನೇ ಸ್ಥಾನ ಹೊಂದಿದೆ. ರೈತರ ಪಂಪ್‌ಸೆಟ್‌ಗಳಿಗೆ ಕುಸುಮ್ ಯೋಜನೆ ಅಡಿ ಹಣ ನೀಡುತ್ತೇವೆ. ಗ್ರೀನ್ ಕಾರಿಡಾರ್ ಅಡಿ ಅವಕಾಶ ಮಾಡಿ ಕೊಡಲಾಗುವುದು ಎಂದು ಹೇಳಿದರು.

ಕಲ್ಯಾಣ ಭಾಗದ ಯೋಜನೆಗಳು ಬೇರೆ ಎಲ್ಲಿಗೂ ಕೂಡ ತೆಗೆದುಕೊಂಡು ಹೋಗುತ್ತಿಲ್ಲ. ಪೂರ್ವ ತಯಾರಿ ಇಲ್ಲದೆ ಖರ್ಗೆ ಅವರು ಅವರ ಕೊನೆಯ ಬಜೆಟ್‌ನಲ್ಲಿ ರೈಲ್ವೆ ಡಿವಿಜನ್ ಘೋಷಣೆ ಮಾಡಿದ್ದಾರೆ. ಅದರ ಬಗ್ಗೆ ಚಿಂತನೆ ನಡೆಯುತ್ತಿದೆ. ಏಮ್ಸ್ ಎಲ್ಲಿ ನೀಡಬೇಕು ಎಂಬ ಕುರಿತು ಚರ್ಚೆ ನಡೆದಿಲ್ಲ. ಐಐಟಿ ಧಾರವಾಡಕ್ಕೆ ನೀಡುವಂತೆ ಪತ್ರ ಬರೆದಿದ್ದು ಯಾರು, ಆ ಪತ್ರದ ಅನುಸಾರ ಧಾರವಾಕ್ಕೆ ಐಐಟಿ ಹೋಗಿದೆ.

-ಪ್ರಹ್ಲಾದ್ ಜೋಶಿ, ಕೇಂದ್ರ ಸಚಿವ

ನವಲಗುಂದದ ಬಳಿ ಬೆಣ್ಣೆಹಳ್ಳ ಪ್ರವಾಹ ಪ್ರದೇಶ ವೀಕ್ಷಣೆ ಮಾಡಿದ ಸಚಿವ ಸಂತೋಷ್ ಲಾಡ್

ಬೆಣ್ಣೆಹಳ್ಳ ಅಗಲೀಕರಣಕ್ಕೆ 200 ಕೋಟಿ ಅನುದಾನ

ಬೆಂಗಳೂರು: ಉತ್ತರ ಕರ್ನಾಟಕದ ಧಾರವಾಡ, ಗದಗ, ಬಾಗಲಕೋಟೆ ಜಿಲ್ಲೆಗಳಲ್ಲಿ ಕಳೆದ 3-4 ದಿನಗಳಿಂದ ಅಬ್ಬರಿಸಿದ್ದ ಮಳೆ ಶನಿವಾರ ಕೊಂಚ ತಗ್ಗಿದೆ. ಕರಾವಳಿ ಹಾಗೂ ಮಲೆನಾಡು ಜಿಲ್ಲೆಗಳಲ್ಲಿ ರೆಡ್ ಅಲರ್ಟ್ ಮುಂದುವರಿದಿದೆ.

ಧಾರವಾಡ ಜಿಲ್ಲೆಯಲ್ಲಿ ಭಾರೀ ಮಳೆಯಾದ ಪರಿಣಾಮ ಕಳೆದ ಮೂರ್ನಾಲ್ಕು ದಿನಗಳಿಂದ ಬೆಣ್ಣೆಹಳ್ಳ, ತುಪ್ಪರಿಹಳ್ಳದಲ್ಲಿ ಪ್ರವಾಹ ಉಂಟಾಗಿತ್ತು. ಹಲವಡೆ ಹಳ್ಳದ ಸೇತುವೆಗಳು ಮುಳುಗಡೆಗೊಂಡ ಗ್ರಾಮದ ಸಂಪರ್ಕ ಕಡಿತಗೊಂಡಿತ್ತು. ಮಳೆಯಿಂದ ನೂರಾರು ಎಕರೆ ಬೆಳೆ ನಾಶ ಆಗಿದೆ. ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಲಾಡ್ ಹಾಗೂ ಶಾಸಕ ಎನ್.ಎಚ್.ಕೋನರಡ್ಡಿ ಮಳೆ ಹಾನಿ ಪ್ರದೇಶಕ್ಕೆ ಭೇಟಿ ನೀಡಿ ವೀಕ್ಷಣೆ ಮಾಡಿದರು.

ನವಲಗುಂದ ತಾಲೂಕಿನ ಕರ್ಲವಾಡ, ಆರೇಕುರಟ್ಟಿ, ಯಮನೂರ ಗ್ರಾಮಗಳ ಹತ್ತಿರ ಇರುವ ಬೆಣ್ಣೆಹಳ್ಳದ ಪ್ರವಾಹ ಪ್ರದೇಶವನ್ನು ಸಚಿವ ಸಂತೋಷ ಲಾಡ್ ವೀಕ್ಷಣೆ ಮಾಡಿದರು. ಬೆಣ್ಣೆಹಳ್ಳದ ಪ್ರವಾಹ ತಪ್ಪಿಸಲು ಶಾಶ್ವತ ಪರಿಹಾರಕ್ಕಾಗಿ ಸಚಿವರಿಗೆ ಕರ್ಲವಾಡ ಗ್ರಾಮಸ್ಥರು ಆಗ್ರಹಿಸಿದರು. ಗ್ರಾಮದಲ್ಲಿ ಬೆಳೆಹಾನಿಗೆ ಪರಿಹಾರ ನೀಡುವಂತೆ ಹಾಗೂ ಬೆಣ್ಣೆಹಳ್ಳದ ತೊಂದರೆ ತಪ್ಪಿಸಲು ರೈತರಿಂದ ಸಚಿವರಿಗೆ ಮನವಿ ಮಾಡಿದರು.

ಎಡಿಸಿ ಕಾರು ಅಪಘಾತ

ಸಚಿವ ಸಂತೋಷ್ ಲಾಡ್ ಅವರ ಜತೆ ಮಳೆಹಾನಿ ಪ್ರದೇಶಕ್ಕೆ ಭೇಟಿ ನೀಡಿ ವಾಪಸ್ ಆಗುವ ವೇಳೆ ಧಾರವಾಡ ಅಪರ ಜಿಲ್ಲಾಧಿಕಾರಿ ಕಾರು ಅಪಘಾತಕ್ಕೀಡಾಗಿದೆ. ಹುಬ್ಬಳ್ಳಿ ತಾಲೂಕ ಹೆಬಸೂರ ಗ್ರಾಮದ ಬಳಿ ಘಟನೆ ಸಂಭವಿಸಿದ್ದು, ಎಡಿಸಿ ಗೀತಾ ಸಿಡಿ ಅವರಿದ್ದ ಕಾರಿಗೆ ಸಿಲಿಂಡರ್ ರವಾನೆ ಮಾಡುತ್ತಿದ್ದ ಕ್ಯಾಂಟರ್ ಡಿಕ್ಕಿಯಾಗಿದೆ.

ಬೆಣ್ಣೆಹಳ್ಳ ಪ್ರವಾಹ ಪೀಡಿತ ಪ್ರದೇಶ ವೀಕ್ಷಿಸಿದ ಸಚಿವ ಸಂತೋಷ್ ಲಾಡ್.

ಅದೃಷ್ಟವಶಾತ್ ಅಪಘಾತದಲ್ಲಿ ಯಾವುದೇ ಹಾನಿ ಸಂಭವಿಸಿಲ್ಲ.

ಕೊಚ್ಚಿಹೋದ ಮಾಡಳ್ಳಿ ಸೇತುವೆ

ಗದಗ ಜಿಲ್ಲೆಯಲ್ಲಿ ವರುಣನ ಆರ್ಭಟಕ್ಕೆ ಲಕ್ಷ್ಮೇಶ್ವರ ತಾಲೂಕಿನ ಮಾಡಳ್ಳಿ ಬಳಿ ಸೇತುವೆಯೊಂದು ಕೊಚ್ಚಿ ಹೋಗಿ ಮಾಡಳ್ಳಿ ಗುಂಜಳ ರಸ್ತೆ ಸಂಚಾರ ಸ್ಥಗಿತಗೊಂಡಿದೆ. ಬಿಡದೇ ಸುರಿಯುತ್ತಿರುವ ಮಳೆಗೆ ಕಲ್ಲಿನ ಹಳೆಯ ಸೇತುವೆ ಕೊಚ್ಚಿಹೋಗಿದ್ದು, ಮಾಗಡಿ, ಮಾಡಳ್ಳಿ, ಗುಂಜಳದಿಂದ ಕುಂದಗೋಳ ರಸ್ತೆ ಸಂಪರ್ಕ ಕಡಿತಗೊಂಡಿದೆ. ಇದೀಗ ರೈತರು, ಪ್ರಯಾಣಿಕರು ಪರದಾಡುವಂತಾಗಿದೆ.

ಜಿಲ್ಲೆಯಲ್ಲಿ ಹಳ್ಳ-ಕೊಳ್ಳಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ರೋಣ ತಾಲೂಕಿನ ಬೆಳವಣಕಿ ಗ್ರಾಮದ ಬಳಿ ಸೇತುವೆ ಸಂಪೂರ್ಣ ಜಲಾವೃತವಾಗಿವೆ. ತುಂಬಿ ಹರಿಯುತ್ತಿರುವ ಬೆಳವಣಕಿ ಬಿಸಿ ಬೂದಿಹಳ್ಳದ ನೀರಿನ ರಭಸಕ್ಕೆ ರಸ್ತೆಗಳು ಕೊಚ್ಚಿ ಹೋಗಿವೆ. ಕೊಚ್ಚಿಹೋದ ರಸ್ತೆಯಿಂದ ಬೆಳವಣಕಿ, ಬಳಗಾನೂರ ಗದಗ ಸಂಪರ್ಕ ಕಲ್ಪಿಸುವ ರಸ್ತೆ ಬಂದ್ ಆಗಿದೆ.

ಹಾರಂಗಿ ಡ್ಯಾಮ್‌ನಿಂದ ನದಿಗೆ ನೀರು

ಕೊಡಗು ಜಿಲ್ಲೆಯಲ್ಲಿ ಕಳೆದ ಮೂರು-ನಾಲ್ಕು ದಿನಗಳಿಂದ ಮಳೆ ಮತ್ತೆ ಬಿರುಸು ಪಡೆದಿದೆ. ಈ ಹಿನ್ನೆಲೆ ಕೊಡಗಿನ ಕುಶಾಲನಗರದ ಹಾರಂಗಿ ಜಲಾಶಯಕ್ಕೆ ಅಧಿಕ ಪ್ರಮಾಣದ ನೀರು ಹರಿದು ಬರುತ್ತಿರುವುದರಿಂದ ಕಾವೇರಿ ನದಿಗೆ ನೀರು ಹರಿಸಲಾಗುತ್ತಿದೆ.

ಜಲಾಶಯದ ಎಲ್ಲಾ 4 ಕ್ರಸ್ಟ್ ಗೇಟ್‌ಗಳನ್ನು ತೆರೆದು 4,000 ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಗಿದೆ. ಜಲಾಶಯ ತುಂಬಲು ಇನ್ನೂ 6 ಅಡಿಗಳು ಬಾಕಿ ಇದೆ.

ಬೆಣ್ಣೆಹಳ್ಳ ಅಗಲೀಕರಣ ಕಾಮಗಾರಿಗೆ 200 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಟೆಂಡರ್ ಕರೆದು ಕಾಮಗಾರಿ ಪ್ರಾರಂಭಿಸಲು ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಅವರ ಜತೆ ಚರ್ಚಿಸಿ ಶೀಘ್ರದಲ್ಲಿ ಅನುಷ್ಠಾನಗೊಳಿಸಲು ಮನವಿ ಮಾಡಲಾಗಿದೆ.

-ಸಂತೋಷ್ ಲಾಡ್, ಸಚಿವ

ಕರಾವಳಿ ಜಿಲ್ಲೆಗಳಿಗೆ ರೆಡ್ ಅಲರ್ಟ್

ಹವಾಮಾನ ಇಲಾಖೆ ಕರಾವಳಿ ಜಿಲ್ಲೆಗಳಿಗೆ ರೆಡ್ ಅಲರ್ಟ್ ಘೋಷಿಸಿದ್ದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶನಿವಾರ ಭಾರಿ ಮಳೆಯಾಗಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ. ಮಂಗಳೂರು ನಗರದಲ್ಲಿ ಶನಿವಾರ ಮಧ್ಯಾಹ್ನದ ಬಳಿಕ ಧಾರಾಕಾರವಾಗಿ ಮಳೆ ಸುರಿಯುತ್ತಿದೆ. ನಗರದ ವಿವಿಧೆಡೆ ತಗ್ಗು ಪ್ರದೇಶಗಳು ಜಲಾವೃತವಾಗಿವೆ. ನಗರದ ಪಂಪ್ ವೆಲ್ ಫ್ಲೈಓವರ್‌ನ ಕೆಳಭಾಗದಲ್ಲಿ ಇರುವ ಸರ್ವಿಸ್ ರಸ್ತೆಗಳಲ್ಲಿ ನೀರು ತುಂಬಿ ವಾಹನ ಓಡಾಟಕ್ಕೆ, ಜನ ಸಂಚಾರಕ್ಕೆ ಅಡಚಣೆಯಾಗಿತ್ತು. ಪಡೀಲ್ ರೈಲ್ವೆ ಅಂಡರ್ ಪಾಸ್ ರಸ್ತೆ, ಕಾರ್‌ಸ್ಟ್ರೀಟ್ ರಸ್ತೆ ಜಲಾವೃತಗೊಂಡಿತ್ತು.

ದೇವಿಮನೆ ಘಟ್ಟದಲ್ಲಿ ಮತ್ತೆ ಗುಡ್ಡ ಕುಸಿತ

ಉತ್ತರಕನ್ನಡ ಜಿಲ್ಲೆಯಲ್ಲಿ ಮಳೆ ಮುಂದುವರಿದಿದ್ದು, ಘಾಟ್ ಪ್ರದೇಶದಲ್ಲಿ ಗುಡ್ಡ ಕುಸಿತುವ ಆತಂಕವಿದೆ. ದೇವಿಮನೆ ಘಟ್ಟದಲ್ಲಿ ಮತ್ತೆ ಗುಡ್ಡ ಕುಸಿತ ಆಗಿದ್ದು, ಶಿರಸಿ ಕುಮಟಾ ಸಂಪರ್ಕ ಅಸ್ತವ್ಯಸ್ತಗೊಂಡಿದೆ. ಭಾರೀ ಪ್ರಮಾಣದಲ್ಲಿ ಮಳೆ ಸುರಿಯುತ್ತಿರುವ ಹಿನ್ನೆಲೆ ಶಿರಸಿ ಕುಮಟಾ ಪ್ರಯಾಣವನ್ನು ಉತ್ತರ ಕನ್ನಡ ಜಿಲ್ಲಾಡಳಿತ ನಿರ್ಬಂಧಿಸಿದೆ.

ಉತ್ತರ ಕನ್ನಡ ಜಿಲ್ಲೆಯ ದೇವಿರ ಮನೆ ಬೆಟ್ಟದಲ್ಲಿ ಮತ್ತೆ ಗುಡ್ಡ ಕುಸಿತ

ಹೊಣೆಯರಿತ ವ್ಯಕ್ತಿಗಳು, ಬ್ರ್ಯಾಂಡ್‌ಗಳು ನಿರೀಕ್ಷೆಯನ್ನು ಹುಸಿಗೊಳಿಸೋದಿಲ್ಲ

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್

vbhat@me.com

vveditoped@gmail.com

ಇದು ಕೆಲ ವರ್ಷಗಳ ಹಿಂದಿನ ಮಾತು. ಸಹಸ್ರಾರು ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡಲು ಖ್ಯಾತ ಮ್ಯಾನೇಜ್‌ಮೆಂಟ್ ಗುರು ರಘುರಾಮನ್ ಗ್ವಾಲಿಯರ್‌ಗೆ ಹೊರಟಿದ್ದರು. ಅದು ಕಾಲೇಜೊಂದರ ಬಹು ಮುಖ್ಯ ಕಾರ್ಯಕ್ರಮ. ರಘುರಾಮನ್ ಪ್ರಯಾಣ ಮಾಡುತ್ತಿದ್ದ ಇಂಡಿಗೋ ವಿಮಾನದಲ್ಲಿ ಪುಣೆ, ಹೈದರಾಬಾದ್, ಮುಂಬಯಿ ಸೇರಿದಂತೆ ಅನೇಕ ಭಾಗಗಳ ಪ್ರಯಾಣಿಕರಿದ್ದರು. ಮಾರ್ಗ ಮಧ್ಯದಲ್ಲಿ ಅದು ಇಂದೋರ್‌ನಲ್ಲಿ ಇಳಿಯಿತು. ಅಲ್ಲಿ ಒಂದಷ್ಟು ಪ್ರಯಾಣಿಕರು ವಿಮಾನ ಹತ್ತಿದರು.

ಅಷ್ಟೊತ್ತಿಗಾಗಲೇ ತಾಪಮಾನದಲ್ಲಿ ವ್ಯತ್ಯಯವಾಗಿತ್ತು, ಮೋಡ ಮುಸುಕಿಕೊಂಡಿತ್ತು, ರನ್‌ವೇ ಕಾಣಿಸುತ್ತಿರಲಿಲ್ಲ. ಇಂಥ ಸಂದರ್ಭದಲ್ಲಿ ವಿಮಾನದ ಲ್ಯಾಂಡಿಂಗ್-ಟೇಕಾಫ್ ಕಷ್ಟಕರ. ಅಷ್ಟರಲ್ಲಿ ಮಳೆಯೂ ಪ್ರಾರಂಭವಾಯಿತು. ಗ್ವಾಲಿಯರ್‌ನಲ್ಲಿ ವಿಮಾನ ಲ್ಯಾಂಡಿಂಗ್ ಮಾಡಲು ಆಗದಷ್ಟು ಪ್ರತಿಕೂಲ ಹವಾಮಾನ ಪರಿಸ್ಥಿತಿ ಇದೆ ಎಂಬ ಸಂಗತಿ ಕ್ಯಾಪ್ಟನ್‌ಗೂ ತಿಳಿದು ಬಂತು. ಕೊಂಚಕಾಲ ಕಾಯಬೇಕಾಗುತ್ತದೆ ಎಂದು ವಿಮಾನ ಸಿಬ್ಬಂದಿ ಹೇಳುತ್ತಿದ್ದರೆ ಅನೇಕ ಪ್ರಯಾಣಿಕರು ಬೇರೆ ಬೇರೆ ಜಾಲತಾಣಗಳಲ್ಲಿ ಜಾಲಾಟ ಮಾಡಿ ಇಂದು ಇಡೀ ದಿನ ಹವಾಮಾನ ಹೀಗೆಯೇ ಇರುತ್ತದೆ ಎಂಬ ಮುನ್ಸೂಚನೆಯನ್ನೂ ಕೊಡಲಾರಂಭಿಸಿದರು.

ಸುಮಾರು ಎರಡೂವರೆ ಗಂಟೆ ಕಾದ ನಂತರ ಅಂದಿನ ವಿಮಾನಯಾನ ರದ್ದಾಯಿತು ಮತ್ತು ಪ್ರಯಾಣಿಕರಿಗೆ ಮಾರನೇ ದಿನ ಪ್ರಯಾಣಿಸುವಂತೆ ವಿನಂತಿ ಮಾಡಿಕೊಂಡರು. ತುರ್ತು ಕೆಲಸದ ಮೇಲೆ ಹೋಗಲೇಬೇಕಿದ್ದವರಿಗೆ ಅಡಚಣೆಯಾದರೆ, ಇನ್ನು ಕೆಲವರಿಗೆ ಆ ಅಪರಿಚಿತ ಊರಿನಲ್ಲಿ ಎಲ್ಲಿ ಉಳಿದುಕೊಳ್ಳಬೇಕು ಎಂಬ ಬಗ್ಗೆ ಗೊಂದಲವುಂಟಾದವು.

ಅಷ್ಟರಲ್ಲಿ ರಘುರಾಮನ್ ಮತ್ತು ಅವರ ಸಹಯಾತ್ರಿ ಇಂದೋರ್‌ನಿಂದ ಗ್ವಾಲಿಯರ್‌ಗೆ ರಸ್ತೆ ಮಾರ್ಗವಾಗಿ 500 ಕಿ.ಮೀ. ದೂರವನ್ನು ಒಂಬತ್ತು ಗಂಟೆಗಳ ಕಾಲ ಪ್ರಯಾಣಿಸಿ ತಲುಪುವುದೆಂದು ತೀರ್ಮಾನ ತೆಗೆದುಕೊಂಡಾಗಿತ್ತು. ಆ ಮಾರ್ಗ ಮಧ್ಯದಲ್ಲಿ ದುರ್ಗಮ ಬೆಟ್ಟಗುಡ್ಡಗಳ ಪ್ರದೇಶವಿರುವುದು ಕೂಡ ಗೊತ್ತಿತ್ತು. ಗ್ವಾಲಿಯರ್‌ನ ಕಾಲೇಜಿನ ಆಡಳಿತ ಮಂಡಳಿಗೆ ಮೂರು ತಿಂಗಳ ಮೊದಲೇ ಅವರು ಕಾರ್ಯಕ್ರಮದಲ್ಲಿ ಭಾಗಿಯಾಗುವುದಾಗಿ ಮಾತು ಕೊಟ್ಟಿದ್ದರು. ಹೀಗಾಗಿ ರಘುರಾಮನ್ ಹೇಗಾದರೂ ಮಾಡಿ ತಲುಪಲೇಬೇಕೆಂಬ ತೀರ್ಮಾನಕ್ಕೆ ಬಂದಿದ್ದರು.

ಕೆಲವರು ಕಾರ್ಯಕ್ರಮಗಳಿಗೆ ಒಪ್ಪಿಕೊಳ್ಳುವಾಗಲೇ 'ವಿಮಾನದ ಟಿಕೆಟ್ ಕೊಡಿಸಿ, ಆಗ ಮಾತ್ರವೇ ನಿಗದಿಯಾದ ವೇಳೆಗೆ ಬರುತ್ತೇವೆ' ಎಂಬ ವಾಗ್ದಾನ ಮಾಡಿರುತ್ತಾರೆ. ಆದರೆ ರಘುರಾಮನ್ ಹಾಗೆ ಮಾಡಿರಲಿಲ್ಲ. ಹೊಣೆಯರಿತ ವ್ಯಕ್ತಿ ಮತ್ತು ಬ್ರ್ಯಾಂಡ್‌ಗಳು ತಮ್ಮ ಅವಲಂಬಿತ ಗ್ರಾಹಕರಿಗೆ ಎಂದೂ ನಿರಾಶೆ ಮಾಡುವುದಿಲ್ಲ.

ರಘುರಾಮನ್ ಕಾರ್ಯಕ್ರಮದ ಆಯೋಜಕರನ್ನು ಸಂಪರ್ಕಿಸಿ ಆಗಿರುವ ತೊಂದರೆಯನ್ನು ತಿಳಿಸಿದ್ದರು. ವಿಮಾನಯಾನ ಮತ್ತೆ ಆರಂಭ ಆಗಬಹುದು ಎಂಬ ಆಶಾಭಾವ ಕಾಲೇಜ್ ಆಡಳಿತ ಮಂಡಳಿ ಸದಸ್ಯರಲ್ಲಿತ್ತು. ಆದರೆ ಅವರನ್ನು ನಿರಾಶೆಗೆ ಒಳಪಡಿಸುವುದು ರಘುರಾಮನ್‌ಗೆ ಇಷ್ಟವಿರಲಿಲ್ಲ. ರಘುರಾಮನ್ ಅರೆಕ್ಷಣವೂ ವ್ಯರ್ಥಮಾಡದೇ ಟ್ಯಾಕ್ಸಿ ಹಿಡಿದು ಗಂಟೆಗಟ್ಟಲೆ ಪ್ರಯಾಣಿಸಿ ರಾತ್ರಿ ಹನ್ನೆರಡು ಗಂಟೆಯ ವೇಳೆಗೆ ಗ್ವಾಲಿಯರ್‌ನ ಹೋಟೆಲು ತಲುಪಿದರು.

ಮಾರನೇ ದಿನ ಬೆಳಗ್ಗೆ ಕಾರ್ಯಕ್ರಮ ನಡೆಯುವುದಿತ್ತು. ಅವರು ರಸ್ತೆ ಮೂಲಕ ಪ್ರಯಾಣಿಸುವಾಗ ಭಾರಿ ಮಳೆ ಸುರಿಯುತ್ತಲೇ ಇತ್ತು. ಕಣ್ಣ ಮುಂದಿನ ರಸ್ತೆ ಕಾಣಿಸದಷ್ಟು ಮಂಜು ಮುಸುಕಿತ್ತು. ಅಪರಿಚಿತ ಊರಿನಲ್ಲಿ ಇಂಥ ರಸ್ತೆ ಪ್ರಯಾಣ ಮಾಡುವುದು ಖಂಡಿತವಾಗಿಯೂ ಸುರಕ್ಷಿತವಲ್ಲ ಎಂಬುದು ಅವರಿಗೆ ಗೊತ್ತಿತ್ತು.

ಆಗ ಅವರ ನೆನಪಿಗೆ ಬಂದಿದ್ದು 2008ರಲ್ಲಿ ಮುಂಬಯಿಯಲ್ಲಿ ನಡೆದ ಉಗ್ರರ ದಾಳಿ. ತಾಜ್ ಹೋಟೆಲಿನಲ್ಲಿದ್ದ ಸಿಬ್ಬಂದಿಯನ್ನು ಬಚಾವು ಮಾಡಲು ತಮ್ಮ ಜೀವದ ಹಂಗು ತೊರೆದು ಆತಂಕವಾದಿಗಳ ವಿರುದ್ಧ ಹೋರಾಡಿದವರು ತಾಜ್ ಹೋಟೆಲಿನ ಸಿಬ್ಬಂದಿ. ಅವರು ತಮ್ಮ ಜೀವ ಉಳಿಸಿಕೊಳ್ಳಲು ಓಡಿಹೋಗಬಹುದಾಗಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಹೋಟೆಲಿನಲ್ಲಿದ್ದ ಎಲ್ಲರನ್ನೂ ರಕ್ಷಿಸುವ ಪಣತೊಟ್ಟರು. ಅವರು ವಿಶ್ವದ ವಿಶ್ವಾಸಾರ್ಹ ಬ್ರ್ಯಾಂಡ್ ಎಂದು ಪರಿಗಣಿತವಾದ ಕಂಪನಿಯ ಬಹುದೊಡ್ಡ ಆಸ್ತಿ.

ನೀವು ಹೊಣೆಯರಿತ ವ್ಯಕ್ತಿ ಅಥವಾ ಬ್ರ್ಯಾಂಡ್ ಅಗಿದ್ದರೆ, ನಿಮ್ಮಲ್ಲಿರುವ ಸರ್ವಶ್ರೇಷ್ಠ ಪ್ರಯತ್ನವನ್ನು ಹಾಕುತ್ತೀರಿ ಮತ್ತು ನಿಮ್ಮನ್ನು ನಂಬಿರುವವರನ್ನು ಎಂದಿಗೂ ನಿರಾಶೆಗೊಳಿಸುವುದಿಲ್ಲ. ಸ್ವತಃ ತೊಂದರೆಗೊಳಗಾದರೂ ಲೆಕ್ಕಿಸದೇ ನಿಮ್ಮನ್ನು ನಂಬಿರುವವರ ರಕ್ಷಣೆಗೆ ನೀವು ನಿಲ್ಲುತ್ತೀರಿ. ತುಸು ಯೋಚಿಸಿ, ಅಂದು ರಘುರಾಮನ್ ಅಷ್ಟೆಲ್ಲ ಕಷ್ಟಪಡಬೇಕಿರಲಿಲ್ಲ. 500 ಕಿ.ಮೀ. ದೂರವನ್ನು ರಸ್ತೆ ಮೂಲಕ ಪ್ರಯಾಣಿಸುವ ಕಷ್ಟ ತೆಗೆದುಕೊಳ್ಳಬೇಕಿರಲಿಲ್ಲ. ಆದರೆ ಅವರು ತಮ್ಮ ಮೇಲೆ ಕಾರ್ಯಕ್ರಮ ಸಂಘಟಕರು ಇಟ್ಟ ವಿಶ್ವಾಸಕ್ಕೆ ಲೋಪ ಆಗಬಾರದು ಎಂದು ನಿರ್ಧರಿಸಿದ್ದರು. ಅದಕ್ಕಾಗಿ ಯಾವ ಕಷ್ಟವಾದರೂ, ಅನನುಕೂಲವಾದರೂ ಸೈ, ಅನುಭವಿಸಲು ಸಿದ್ಧರಾಗಿದ್ದರು.

ಯೋಗಿ ದುರ್ಲಭಜೀ ಅವರು ಹರಿದ್ವಾರಕ್ಕೆ ಹೋಗಿದ್ದಾಗಿನ ಸಂಗತಿಯಿದು. ಚಳಿಗಾಲ ಆರಂಭವಾಗಿತ್ತು. ಅವರು ನೆಟ್‌ವರ್ಕ್ ಇಲ್ಲದ, ಗುಡ್ಡದ ಮೇಲಿರುವ ಆಶ್ರಮದಲ್ಲಿ ಬರಿಮೈಯಲ್ಲಿ ಇಪ್ಪತ್ತೊಂದು ದಿನ ಧ್ಯಾನಕ್ಕೆ ಕುಳಿತಿದ್ದರು. ನಾನು ಅವರನ್ನು ಸಂಪರ್ಕಿಸಲು ಮೂರ್ನಾಲ್ಕು ಸಲ ಪ್ರಯತ್ನಿಸಿದೆ. ಅವರ ಸಂಪರ್ಕ ಸಾಧ್ಯವಾಗಲಿಲ್ಲ. ಆದರೆ ನನಗೆ ಅವರು ಧ್ಯಾನಕ್ಕೆ ಕುಳಿತಿರುವುದು ಗೊತ್ತಿರಲಿಲ್ಲ. ಇಪ್ಪತ್ನಾಲ್ಕನೇ ದಿನದಂದು ದುರ್ಲಭಜೀ ಕರೆ ಬಂತು. ''ನಿಮ್ಮ ಮೆಸೇಜ್‌ನಿಂದ ಫೋನ್ ಮಾಡಿದ್ದು ಗೊತ್ತಾಯಿತು. ಏನು ಸಮಾಚಾರ?'' ಎಂದು ಕೇಳಿದರು. ''ಯೋಗಿಜೀ, ನಿಮ್ಮ ಆರೋಗ್ಯ ವಿಚಾರಿಸಲು ಸುಮ್ಮನೆ ಫೋನ್ ಮಾಡಿದ್ದೆ, ಬೇರೆ ಯಾವ ಉದ್ದೇಶವೂ ಇಲ್ಲ'' ಎಂದೆ. ''ಅದೇ ಉತ್ತಮ. ಯಾವ ಉದ್ದೇಶವಿಲ್ಲದೇ ಕರೆ ಮಾಡಿದ್ದು ಕೇಳಿ ಇನ್ನೂ ಸಂತೋಷವಾಯಿತು'' ಎಂದು ಹೇಳಿದರು. ಅಂದು ನಾವಿಬ್ಬರೂ ಸುಮಾರು ಅರ್ಧ ಗಂಟೆ ಮಾತಾಡಿದೆವು.

ನಂತರ ನನಗೆ ಗೊತ್ತಾಗಿದ್ದೇನೆಂದರೆ, ಅಂದು ಯೋಗಿಜೀ ಆ ದುರ್ಗಮ ಗುಡ್ಡ-ಬೆಟ್ಟದಲ್ಲಿ, ಆ ಕೊರೆಯುವ ಚಳಿಯಲ್ಲಿ, ಸುಮಾರು ಮೂರು ತಾಸು ಕಾಲ್ನಡಿಗೆಯಲ್ಲಿ ಕ್ರಮಿಸಿ ನೆಟ್‌ವರ್ಕ್ ಇರುವ ಜಾಗಕ್ಕೆ ಬಂದು ಫೋನ್ ಮಾಡಿದ್ದರು. ''ಭಟ್ಟರು, ನನ್ನನ್ನು ನೆನಪಿಸಿಕೊಂಡು ಐದಾರು ಸಲ ಫೋನ್ ಮಾಡಿದ್ದಾರೆ. ಏನು ವಿಷಯವೋ ಗೊತ್ತಿಲ್ಲ. ಯಾವುದಕ್ಕೂ ಅವರ ಜತೆ ಮಾತಾಡಿ ಬರುತ್ತೇನೆ'' ಎಂದರಂತೆ. ಆಗ ಅವರ ಶಿಷ್ಯರು, ''ಯೋಗಿಜೀ, ನೀವು ಹೋಗಬೇಡಿ, ನಾವು ಭಟ್ಟರ ಜತೆ ಮಾತಾಡಿ ಬರುತ್ತೇವೆ'' ಎಂದು ಹೇಳಿದರಂತೆ. ಆದರೆ ದುರ್ಲಭಜೀ ಸ್ವತಃ ನನ್ನ ಜತೆಗೇ ಮಾತಾಡಲು ಹೊರಟಿದ್ದರು. ನನಗೆ ಈ ಥರದ ಅನುಭವವಾಗುತ್ತಿರುವುದು ಮೊದಲ ಸಲವಲ್ಲ.

ನನಗೆ ಯೋಗಿಜೀ ಬಗೆಗಿದ್ದ ಪ್ರೀತಿ ಮತ್ತಷ್ಟು ಹೆಚ್ಚಿತು. ತಮಗೆ ಎಷ್ಟು ಕಷ್ಟವಾದರೂ ಕೆಲವರು ಬೇರೆಯವರಿಗಾಗಿ ಎಂಥ ಸಂಕಷ್ಟಗಳನ್ನಾದರೂ ಅನುಭವಿಸಲು ಸಿದ್ಧರಿರುತ್ತಾರೆ. ಬೇರೆಯವರಿಗೆ ನಿರಾಸೆ, ಬೇಸರ ಮೂಡಿಸಲು ಅವರು ಸರ್ವಥಾ ಸಿದ್ಧರಿರುವುದಿಲ್ಲ. ಅದಕ್ಕಾಗಿ ಎಂಥ ತ್ಯಾಗಕ್ಕೂ ಸಿದ್ಧರಿರುತ್ತಾರೆ. ಆ ಮೂಲಕ ತಮ್ಮ ಬ್ರ್ಯಾಂಡ್ ಮೌಲ್ಯವನ್ನು ಕಾಪಾಡಿಕೊಳ್ಳುತ್ತಾರೆ. ನಮ್ಮ ವ್ಯಕ್ತಿತ್ವಕ್ಕೆ ಹೊಡೆತ ಬೀಳುತ್ತದೆ ಎನಿಸಿದರೆ, ಯಾವ ಸವಾಲುಗಳನ್ನಾದರೂ ಎದುರಿಸಲು ಸನ್ನದ್ಧರಾಗಿರಬೇಕು, ಕಷ್ಟಗಳನ್ನು ಅನುಭವಿಸಲು ತಯಾರಿರಬೇಕು.

ಎಲ್ಲಕ್ಕಿಂತ ಆಶಾವಾದ ಮುಖ್ಯ

ಮಾರ್ಟಿನ್ ಸೆಲಿಗ್ಮನ್ ಸತತ 22 ವರ್ಷಗಳ ಕಾಲ ಅಧ್ಯಯನ ಮಾಡಿ ಅದರ ಸಾರಾಂಶವನ್ನು ತನ್ನ 'ಲರ್ನ್ಡ್ ಆಪ್ಟಿಮಿಸಂ' ಪುಸ್ತಕದಲ್ಲಿ ದಾಖಲಿಸಿದ್ದಾನೆ. ಆತನ ಪ್ರಕಾರ, ಆಶಾವಾದವೆಂಬುದು ಎಲ್ಲಕ್ಕಿಂತ ಮಹತ್ವಪೂರ್ಣವಾದ ಗುಣವಿಶೇಷಣವಾಗಿದ್ದು, ಯಾರಲ್ಲಿ ಅದು ಹೆಚ್ಚಿನ ಪ್ರಮಾಣದಲ್ಲಿ ಇರುವುದೋ ಅವರು ವ್ಯಕ್ತಿಗತವಾಗಿ ಮತ್ತು ವ್ಯಾವಹಾರಿಕವಾಗಿ ಸಫಲತೆಯನ್ನು ಕಾಣುತ್ತಾರೆ. ಆಶಾವಾದಿ ಜನರು ಬದುಕಿನ ಎಲ್ಲ ಮಜಲುಗಳಲ್ಲಿ ಪರಿಣಾಮಕಾರಿಯಾಗಿ ಹೊರಹೊಮ್ಮುತ್ತಾರೆ.

ಬದುಕಿನಲ್ಲಿ ನಿಮ್ಮ ಬಹುದೊಡ್ಡ ಜವಾಬ್ದಾರಿ ಏನೆಂದರೆ ನಿಮಗೆ ಯಾವ ಕ್ಷೇತ್ರದಲ್ಲಿ ಹೆಚ್ಚು ಒಲವಿದೆ ಎಂಬುದನ್ನು ಕಂಡುಕೊಳ್ಳುವುದು. ಗಮನಿಸಿ ನೋಡಿ, ಜಗತ್ತಿನಲ್ಲಿ ಯಶಸ್ಸು ಕಂಡ ಎಲ್ಲರೂ ಈ ಸೂತ್ರವನ್ನು ಹಿಡಿದೇ ಮೇಲಕ್ಕೇರಿದವರಾಗಿರುತ್ತಾರೆ. ತಾವು ಮಾಡುವ ಯಾವ ಕೆಲಸ ಬೇರೆಯವರಿಗಿಂತ ಭಿನ್ನವಾಗಿರುತ್ತದೆ ಎಂಬುದು ಅವರಿಗೆ ಸ್ಪಷ್ಟವಾಗಿ ಗೊತ್ತಿರುತ್ತದೆ. ನಂತರದಲ್ಲಿ ಆ ಕ್ಷೇತ್ರದ ಮೇಲೆ ತಮ್ಮ ಸಂಪೂರ್ಣ ಧ್ಯಾನವನ್ನು ಕೇಂದ್ರೀಕರಿಸುತ್ತಾರೆ. ನಿಮ್ಮ ಯೋಗ್ಯತೆಗೆ ತಕ್ಕಂತೆ ನೀವು ಮಾಡುವ ಕೆಲಸದಲ್ಲೂ ನೀವು ಔನ್ನತ್ಯವನ್ನು ಪಡೆಯುವುದು ಖಂಡಿತವಾಗಿ ಸಾಧ್ಯವಿದೆ. ಇದು ನನ್ನ ಆದ್ಯತೆಯ ಕ್ಷೇತ್ರ, ಇದರಲ್ಲಿ ನಾನು ನೂರಕ್ಕೆ ನೂರು ಪ್ರಥಮ ಸ್ಥಾನಕ್ಕೇರುತ್ತೇನೆ ಎಂದು ಪಣತೊಟ್ಟು ಹೊರಡಿ, ಆ ಕೆಲಸ ನೀವಂದುಕೊಂಡಂತೆ ಆಗುತ್ತದೆ.

21ನೇ ಶತಮಾನದಲ್ಲಿ ನಮಗೆ ಎಲ್ಲ ಕಡೆಯಿಂದ ಮಾಹಿತಿಯ ಮಹಾಪೂರವೇ ಹರಿದುಬರುತ್ತಲಿದೆ. ನಿಮ್ಮ ಕ್ಷೇತ್ರದಲ್ಲಿ ಶಾಂತವಾಗಿ, ಸ್ಪಷ್ಟವಾಗಿ, ಸರ್ವಶ್ರೇಷ್ಠತೆಯನ್ನು ಸಾಧಿಸಬೇಕೆಂದಾದಲ್ಲಿ ನಿಯತವಾಗಿ ತಂತ್ರಜ್ಞಾನ ಮತ್ತು ಸಂಚಾರ ಸಾಧನಗಳನ್ನು ತೊರೆದು ನೀವು ನಿಮ್ಮ ಧ್ಯೇಯಕ್ಕೆ ಸಮಯ ಮೀಸಲಿಡಬೇಕು. ನೀವು ಈ ದಿಸೆಯಲ್ಲಿ ಏಕಾಗ್ರತೆ ಸಾಧಿಸದೇ ಇದ್ದರೆ ಗುರಿ ತಲುಪಲಾರಿರಿ. ಹೆಚ್ಚು ಮೌಲ್ಯಯುತ ವಸ್ತುಗಳನ್ನು ನಿಮ್ಮ ಬಳಿ ಹೆಚ್ಚಿಸಿಕೊಳ್ಳಬೇಕೆಂದಾದಲ್ಲಿ ಕಡಿಮೆ ಮೌಲ್ಯದ ಹಲವು ಸಂಗತಿಗಳನ್ನು ನೀವು ತ್ಯಜಿಸಬೇಕಾಗುತ್ತದೆ. ಪ್ರತಿ ಕೆಲಸಕ್ಕೆ ಕೈ ಹಾಕುವಾಗಲೂ ಇದು ಮಹತ್ವಪೂರ್ಣವಾದದ್ದಾ? ಎಂದು ನಿಮಗೆ ನೀವೇ ಪ್ರಶ್ನೆಮಾಡಿಕೊಂಡು ನಂತರ ಮುನ್ನಡೆಯಿರಿ. ಅದೃಷ್ಟ ಕೈಕೊಡದಿದ್ದರೆ, ನೀವು ಅಂದುಕೊಂಡಿದ್ದೇ ಆಗುವುದರಲ್ಲಿ ಅನುಮಾನವಿಲ್ಲ.

ಮನಸ್ಸಿನ ಭಯ ಮತ್ತು ಚಿಂತನೆ

ಖ್ಯಾತ ಬರಹಗಾರ ಎಕ್ಹಾರ್ಟ್ ಟಾಲ್ ಒಂದು ಮಾತು ಹೇಳಿದ್ದಾನೆ: ನಾನು ಮಾಡುತ್ತಿರುವ ಕೆಲಸದಲ್ಲಿ ನನಗೆ ಸಂತೃಪ್ತಿ ಸಿಗುತ್ತಿದೆಯೇ ಎಂದು ನಿಮಗೆ ನೀವೇ ಒಂದು ಪ್ರಶ್ನೆ ಕೇಳಿಕೊಳ್ಳಿ. ಇಲ್ಲ ಎಂದಾದಲ್ಲಿ ಒಂದು ವಿಚಾರವನ್ನು ಗಮನಿಸಿ, ನಿಮ್ಮ ಭೂತ, ಭವಿಷ್ಯ ಮತ್ತು ವರ್ತಮಾನವನ್ನು ನೀವೇ ಕತ್ತಲಕೂಪಕ್ಕೆ ತಳ್ಳುತ್ತಿದ್ದೀರಿ ಎಂದರ್ಥ. ನೀವು ನಿಮ್ಮ ಕೈಯನ್ನು ಬೆಂಕಿಯ ಕೆನ್ನಾಲಿಗೆ ಮೇಲೆ ಇಡುವುದಿಲ್ಲ ಎಂಬುದರ ಅರ್ಥ ನೀವು ಬೆಂಕಿಗೆ ಹೆದರುತ್ತೀರಿ ಎಂದಲ್ಲ. ಬೆಂಕಿಗೆ ಕೈ ಇಟ್ಟರೆ ಕೈ ಸುಟ್ಟುಹೋಗುತ್ತದೆ ಎಂಬ ಅರಿವು ನಿಮಗಿದೆ ಎಂದರ್ಥ. ಅನವಶ್ಯಕವಾಗಿ ಅಪಾಯವನ್ನು ಮೈಮೇಲೆ ಎಳೆದುಕೊಳ್ಳುವುದು ತರವಲ್ಲ ಎಂಬುದು ನಿಮಗೆ ಗೊತ್ತಿದೆ, ಹಾಗಂತ ಅದರ ಕುರಿತಾಗಿ ನಿಮ್ಮ ಮನದಲ್ಲಿ ಹೆದರಿಕೆ ಇದೆ ಎಂದರ್ಥವಲ್ಲ. ಇದೇನೂ ಮಹಾದೊಡ್ಡ ಸಂಗತಿಯಲ್ಲ, ಸಾಮಾನ್ಯಜ್ಞಾನ ಅಷ್ಟೆ.

ಆದರೆ ಇಂಥದೇ ಸಂಗತಿಗಳನ್ನು ವ್ಯಾವಹಾರಿಕ ಜಗತ್ತಿನಲ್ಲಿ ಅಗತ್ಯ ಬಿದ್ದಾಗ ಬಳಸಿಕೊಳ್ಳುವುದಿದೆಯಲ್ಲ, ಅದು ಜಾಣತನ. ಇದಕ್ಕಿಂತ ಭಿನ್ನವಾದ ಮನೋವೈಜ್ಞಾನಿಕ ಭಯ ಕೂಡ ನಮ್ಮ ಮನಸ್ಸಿನಲ್ಲಿ ಇರುತ್ತದೆ. ಇಂಥ ಪ್ರಸಂಗ ಎದುರಾಗದಿರಲಿ, ಅದಾಗುವುದು ಬೇಡ, ಇದರಿಂದ ನಾನು ಇಕ್ಕಟ್ಟಿಗೆ ಸಿಕ್ಕುವಂತಾಗದಿರಲಿ ಎಂಬ ಸುಖಾಸುಮ್ಮನೆ ಭಯಗಳು ಕೂಡ ನಮ್ಮಲ್ಲಿ ಆಗಾಗ ಕಾಣಿಸಿಕೊಳ್ಳುವುದುಂಟು. ಅಂಥ ಭಯಗಳು ಮನದ ಪರದೆಯ ಮೇಲೆ ಮೂಡಿದಾಗ ನೀವು ಭೌತಿಕವಾಗಿ ಇಲ್ಲೇ ಇರುತ್ತೀರಿ, ಆದರೆ ನಿಮ್ಮ ಮನಸ್ಸು ಭವಿಷ್ಯದ ಬಗ್ಗೆ ಚಿಂತನೆಯಲ್ಲಿ ತೊಡಗಿರುತ್ತದೆ. ಹಾಗಾದಾಗ ಮನದ ಮೂಲೆಯಲ್ಲೊಂದು ವ್ಯಗ್ರತೆಯ ಭಾವ ಮೂಡಿರುತ್ತದೆ. ವರ್ತಮಾನ ಸ್ಥಿತಿಯಲ್ಲಿ ಸಹಜಭಾವದಲ್ಲಿದ್ದರೆ ನಾವು-ನೀವು.

ಜೀವನದ ಉಳಿದ ಭಾಗ

ಮೊದಲ ಬಾರಿಗೆ ಡೈವಿಂಗ್‌ಗೆ ಆಗಮಿಸಿದವರು ಬಹಳ ವಿಚಿತ್ರ ಪ್ರಶ್ನೆಗಳನ್ನು ಕೇಳುತ್ತಾರೆ. ಕೆಲವು ಸಲ ಇನ್‌ಸ್ಟ್ರಕ್ಟರ್‌ಗೆ ಉತ್ತರಿಸಲು ಸಹ ಆಗುವುದಿಲ್ಲ. ಇನ್ನು ಕೆಲವರು, ಕೇಳುವ ಎಲ್ಲ ಪ್ರಶ್ನೆಗಳನ್ನು ಕೇಳಿ, ಸಂದೇಹಗಳನ್ನು ಪರಿಹರಿಸಿಕೊಂಡು ನಂತರ ಡೈವ್ ಮಾಡದಿರಲು ನಿರ್ಧರಿಸುತ್ತಾರೆ. ಬಹುತೇಕ ಜನರ ಪ್ರಶ್ನೆ ಎಷ್ಟು ನಕಾರಾತ್ಮಕವಾಗಿರುತ್ತದೆಂದರೆ ಅವೆಲ್ಲವೂ ಸಾವಿನ ಕುರಿತಾಗಿರುತ್ತದೆ. ''ಸ್ಕೈ ಡೈವಿಂಗ್ ಮಾಡುವಾಗ ಪ್ಯಾರಚೂಟ್ ಬಿಚ್ಚಿಕೊಳ್ಳದಿದ್ದರೆ ಏನಾಗುತ್ತದೆ?'' ಎಂಬುದು ಎಲ್ಲರೂ ಕೇಳುವ ಪ್ರಶ್ನೆ.

ಒಂದು ದಿನ ಕೆಲ ಯುವಕರು ಸ್ಕೈ ಡೈವಿಂಗ್‌ಗೆ ಬಂದರು. ಅವರಲ್ಲಿ ಒಬ್ಬ ಅದೇ ಪ್ರಶ್ನೆ ಕೇಳಿದ- ''ಮೇಲಿಂದ ಜಿಗಿದಾಗ ಪ್ಯಾರಚೂಟ್ ಬಿಚ್ಚಿಕೊಳ್ಳದಿದ್ದರೆ ಏನು ಕತೆ?''

ಅದಕ್ಕೆ ಇನ್‌ಸ್ಟ್ರಕ್ಟರ್ ಹೇಳಿದ- ''ಮತ್ತೊಂದು ಪ್ಯಾರಚೂಟ್ ಅನ್ನು ಬಳಸಿ''.

ಅದಕ್ಕೆ ಆ ಯುವಕ, ''ಅದೂ ಓಪನ್ ಆಗದಿದ್ದರೆ ಏನು ಮಾಡುವುದು?'' ಎಂದ.

ಆಗ ಇನ್‌ಸ್ಟ್ರಕ್ಟರ್, ''ಆಗ ಏನೂ ಮಾಡಲು ಆಗೊಲ್ಲ, ಬೇರೆ ದಾರಿಯಿಲ್ಲ'' ಎಂದು ಹೇಳಿದ.

ಈ ಮಾತಿಗೆ ಮತ್ತಷ್ಟು ಉದ್ವಿಗ್ನನಾದ ಯುವಕ ''ಪ್ಯಾರಚೂಟ್ ಓಪನ್ ಆಗದ ಸನ್ನಿವೇಶದಲ್ಲಿ ನಾವು ಭೂಮಿಗೆ ಬಂದು ಅಪ್ಪಳಿಸಲು ಎಷ್ಟು ಸಮಯ ಬೇಕಾಗುತ್ತದೆ?'' ಎಂದು ಕೇಳಿದ.

ಈ ಪ್ರಶ್ನೆಗೆ ಇನ್‌ಸ್ಟ್ರಕ್ಟರ್ ಸಮಾಧಾನದಿಂದ ಹೇಳಿದ ''ರೆಸ್ಟ್ ಆಫ್ ಯುವರ್ ಲೈಫ್''.

ಜೀವನದಲ್ಲಿ ಬದಲಾವಣೆ

ನನ್ನ ಸ್ನೇಹಿತರೊಬ್ಬರು ಹೇಳಿದ ಪ್ರಸಂಗವಿದು. ಒಮ್ಮೆ ಅವರು ತಮ್ಮ ಗೆಳೆಯನಿಗೆ ಫೋನ್ ಮಾಡಿದರಂತೆ. ಆಗ ಅವರಿಗೆ ಈ ರೆಕಾರ್ಡೆಡ್ ಮೆಸೇಜ್ ಕೇಳಿಸಿತಂತೆ- ''ನಾನು ಈಗ ನಿಮ್ಮೊಂದಿಗೆ ಮಾತನಾಡಲು ಲಭ್ಯವಿಲ್ಲ, ನೀವು ನನಗೆ ಫೋನ್ ಮಾಡಿದ್ದಕ್ಕೆ ಧನ್ಯವಾದಗಳು. ನಾನು ನನ್ನ ಜೀವನದಲ್ಲಿ ಕೆಲವು ಬದಲಾವಣೆಗಳನ್ನು ಮಾಡುತ್ತಿದ್ದೇನೆ. ಬೀಪ್ ಸೌಂಡ್ ಕೇಳಿಸಿದ ನಂತರ ನಿಮ್ಮ ಮೆಸೇಜ್ ಏನೆಂಬುದನ್ನು ಹೇಳಿ, ನಾನು ವಾಪಸ್ ಕರೆ ಮಾಡುತ್ತೇನೆ. ಒಂದು ವೇಳೆ ನಾನು ವಾಪಸ್ ಫೋನ್ ಮಾಡದಿದ್ದರೆ, ನಾನು ಜೀವನದಲ್ಲಿ ಮಾಡಿರುವ ಬದಲಾವಣೆಗಳಲ್ಲಿ ನೀವೂ ಒಬ್ಬರು ಎಂದು ಭಾವಿಸಿ''.

ಎರಡು-ಮೂರು ದಿನಗಳಾದರೂ ಅವರ ಗೆಳೆಯನ ಫೋನ್ ಕರೆ ಬರಲಿಲ್ಲ, ಆತ ಜೀವನದಲ್ಲಿ ಮಾಡಿಕೊಂಡ ಬದಲಾವಣೆಗಳಲ್ಲಿ ತಾನೂ ಸೇರಿದ್ದೇನೆಂಬುದು ಅವರಿಗೆ ಮನವರಿಕೆಯಾಯಿತು.

ಎಂಥ ಜನ ಮಾರ್ರೇ

ಖ್ಯಾತ ಜ್ಯೋತಿಷಿ ಕಬ್ಯಾಡಿ ಜಯರಾಮ ಆಚಾರ್ಯ ಅವರು ಅನುಭವಿಸಿದ ಈ ಸಮಸ್ಯೆ ನಿಮ್ಮದೂ ಆಗಿರಬಹುದು. ಅದನ್ನು ಅವರೇ ಹೇಳ್ತಾರೆ ಕೇಳಿ. ''ಜ್ವರ ಬಂದು ಎರಡು ದಿನ ಮಲಗಿದ್ದ ವಿಷಯ ಗೊತ್ತಾಗಿ ಫೋನ್ ಮಾಡಿದ ಆತ್ಮೀಯರೆಲ್ಲರೂ ಜ್ವರ ಹೇಗಿದೆ ಅಂತ ಕೇಳಿದರು. ಅಪ್ಪಿ ತಪ್ಪಿಯೂ ಈಗ ನೀನು ಹೇಗಿದ್ದೀಯಾ ಅಂತ ಕೇಳಲಿಲ್ಲ, ಇವರಿಗೆಲ್ಲ ನನಗಿಂತಲೂ ಜ್ವರವೇ ಮುಖ್ಯವಾಗಿ ಹೋಯ್ತಲ್ಲಾ, ಎಂಥ ಜನ ಮಾರ್ರೇ..!

ಪತ್ನಿ ಮತ್ತು ಅವಳ ಪ್ರತಿಕ್ರಿಯೆ

ಖ್ಯಾತ ಉದ್ಯಮಿ ಹರ್ಷ್ ಗೋಯಂಕಾ ಕೆಲ ವರ್ಷಗಳ ಹಿಂದೆ ಮಾಡಿದ್ದ ಒಂದು ಟ್ವೀಟ್ ನೆನಪಾಗುತ್ತಿದೆ. ಅದರಲ್ಲಿ ಅವರು ಒಂದು ಹಾಸ್ಯ ಪ್ರಸಂಗವನ್ನು ಹಂಚಿಕೊಂಡಿದ್ದರು.

ನಾನು ನನ್ನ ಹೆಂಡತಿಗೆ ಹೇಳಿದೆ- You are negetive. ಅಷ್ಟಕ್ಕೇ ಅವಳ ಕೋಪ ನೆತ್ತಿಗೇರಿಬಿಟ್ಟಿತು. ಎಲ್ಲಿತ್ತೋ ಕೋಪ... 'ನೀವೇನು ಬಹಳ ಪಾಸಿಟಿವ್ ವ್ಯಕ್ತಿಯಾ? ನೀವು ಪರಮ ಸ್ವಾರ್ಥಿ, ಮಹಾ ಕಂಜೂಸು, ಸಂವೇದನಾರಹಿತ ವ್ಯಕ್ತಿ, ಕಲ್ಲು ಹೃದಯಿ, ನಿಮ್ಮಂಥ ವ್ಯಕ್ತಿ ಜತೆ ನಾನು ಯಾಕೆ ಸಂಸಾರ ಮಾಡುತ್ತಿದ್ದೇನೋ ಗೊತ್ತಿಲ್ಲ, ನಾನು ಚಪ್ಪಲಿಯಲ್ಲಿ ಹೊಡೆದುಕೊಳ್ಳಬೇಕು, ನಿಮ್ಮ ಜತೆ ಇರುವುದಕ್ಕಿಂತ ಹಾಳುಬಾವಿ ಹಾರಿ ಸಾಯೋದು ವಾಸಿ. ನಿಮ್ಮಂಥ ವ್ಯಕ್ತಿ ಜತೆ ಜೀವನ ಸಾಗಿಸುತ್ತಿದ್ದೇನಲ್ಲ.. ನಾನು ಹಿಂದಿನ ಜನ್ಮದಲ್ಲಿ ಅದ್ಯಾವ ಪಾಪ ಮಾಡಿದ್ದೆನೋ ಗೊತ್ತಿಲ್ಲ... ನನ್ನ ಕರ್ಮ..ಕರ್ಮ' ಎಂದು ಏರಿದ ಧ್ವನಿಯಲ್ಲಿ ಕಿರುಚಿದಳು. ನನಗೆ ಮಧ್ಯೆ ಬಾಯಿ ಹಾಕಲು ಅವಕಾಶ ಕೊಡದೇ ಒಂದೇ ಸಮನೆ ಕೋಪ-ತಾಪ ಪ್ರದರ್ಶಿಸಿಬಿಟ್ಟಳು.

ಅಷ್ಟಕ್ಕೂ ನಾನು ಹೇಳಬೇಕೆಂದಿದ್ದುದು 'ನಿನ್ನ ಕೋವಿಡ್ ಟೆಸ್ಟ್ ರಿಪೋರ್ಟ್ ನೆಗೆಟಿವ್ ಬಂದಿದೆ ' ಅಂತ. ಅಷ್ಟರೊಳಗೆ ಇಷ್ಟೆಲ್ಲ ಭಾನಗಡಿ ಆಗಿ, ರಂಬಾರುಡಿ ಜರುಗಿಹೋಯಿತು.

ಖುಷಿಯಾಗಿರುವುದು ಹೇಗೆ?

ದಲೈ ಲಾಮಾ ಅವರು ಬರೆದ 'ಖುಷಿಯಾಗಿರುವುದು ಹೇಗೆ?' ಎಂಬ ಪುಟ್ಟ ಬರಹವನ್ನು ಓದುತ್ತಿದ್ದೆ.

ಕೆಲವೊಮ್ಮೆ ಸಫಲತೆಯ ಖುಷಿಯ ಅನುಭೂತಿ ತಾತ್ಕಾಲಿಕವಾಗಿರುತ್ತದೆ, ಆದರೆ ಯಾವುದಾದರೂ ದುಃಖದ ವಿಚಾರ ಮನಸಿನಲ್ಲಿ ತುಂಬಾ ದಿನಗಳ ತನಕ ನಿರಾಶಾದಾಯಕ ಭಾವವನ್ನು ಮೂಡಿಸಿರುತ್ತದೆ. ಹೀಗಾದಾಗ ನಮ್ಮ ಖುಷಿ ದಿನದಿಂದ ದಿನಕ್ಕೆ ಕಡಿಮೆಯಾಗುತ್ತ ಹೋಗುತ್ತದೆ. ಮನೋವಿಜ್ಞಾನಿಗಳ ಪ್ರಕಾರ, ಈ ಪ್ರಕ್ರಿಯೆಗೆ 'ಪರಿಸ್ಥಿತಿಗೆ ಹೊಂದಿಕೊಳ್ಳುವ ಸ್ಥಿತಿ' ಎನ್ನಲಾಗುತ್ತದೆ. ಈ ಸಿದ್ಧಾಂತ ನಮ್ಮ ದೈನಂದಿನ ಚಟುವಟಿಕೆಗಳಲ್ಲಿ ಹಾಸುಹೊಕ್ಕಾಗಿರುತ್ತದೆ.

ವೇತನದಲ್ಲಿ ಹೆಚ್ಚಳವಾದಾಗ, ಹೊಸ ಕಾರು ಖರೀದಿಸಿದಾಗ, ಸ್ನೇಹಿತರ ಹೊಗಳಿಕೆಯ ಮಾತುಗಳು ಇವೆಲ್ಲವೂ ನಮಗೆ ಕೆಲ ದಿನಗಳ ತನಕ ಖುಷಿಯನ್ನು ಕೊಡುತ್ತಲೇ ಇರುತ್ತವೆ. ಇವೆಲ್ಲವೂ ತಾತ್ಕಾಲಿಕ. ಮತ್ತೆ ಕೆಲದಿನಗಳಲ್ಲಿ ನಾವು ಖುಷಿಯ ಸಾಮಾನ್ಯ ಸ್ಥಿತಿಗೆ ಮರಳುತ್ತೇವೆ. ಅದೇ ರೀತಿ ಮಿತ್ರನೊಬ್ಬ ನಮ್ಮ ಬಗ್ಗೆ ಕಟಕಿಯಾಡಿದಾಗ, ರಿಪೇರಿಗೆ ಹೋಗಿ ಬಂದ ಕಾರು ಕೈಕೊಟ್ಟಾಗ, ಹೀಗೆ ಸಣ್ಣಪುಟ್ಟ ಸಂಗತಿಗಳು ನಮ್ಮನ್ನು ಮತ್ತೆ ದುಃಖಕ್ಕೆ ತಳ್ಳುತ್ತವೆ.

ಆದರೆ ಕೆಲವೇ ದಿನಗಳಲ್ಲಿ ಅವೆಲ್ಲವೂ ತೆರೆಮರೆಗೆ ಸರಿದು ಮತ್ತೆ ಖುಷಿಯ ಸಹಜಸ್ಥಿತಿಗೆ ಬರುತ್ತೇವೆ. ಬಾಹ್ಯ ಪ್ರಪಂಚದ ಇಂಥ ಅನೇಕ ಘಟನೆಗಳ ಹೊರತಾಗಿಯೂ ನಾವು ಸ್ವಂತ ಖುಷಿಯ ಅನುಭೂತಿಗೆ ಮರಳಿ ಬರುವುದು ಸಾಧ್ಯವಿದೆ. ಹಾಗಾದರೆ ಅದನ್ನು ನಿರ್ಧರಿಸುವ ಸಂಗತಿ ಏನು? ಅಂಥ ಪ್ರತಿಕೂಲ ಸಂಗತಿಗಳಿದ್ದಾಗಲೂ ನಮ್ಮ ಖುಷಿಯ ಸ್ಥಿತಿಯನ್ನು ಇನ್ನಷ್ಟು ಹೆಚ್ಚಿಸಿಕೊಳ್ಳುವುದು ಹೇಗೆ? ನಮಗೆ ಪ್ರಕೃತಿದತ್ತವಾಗಿ ದಕ್ಕಿರುವ ಖುಷಿಯ ಜತೆಗೆ ನಮ್ಮ ಮನಸ್ಸಿನಲ್ಲಿ ನಾವೇ ಸ್ಥಾಪನೆ ಮಾಡಿಕೊಳ್ಳಬಹುದಾದ ಕೆಲವು ದಿಟ್ಟ ನಿರ್ಧಾರಗಳಿಂದ ನಮ್ಮ ಖುಷಿಯನ್ನು ಇನ್ನಷ್ಟು ಹೆಚ್ಚಿಸಿಕೊಳ್ಳುವುದು ಸಾಧ್ಯವಿದೆ. ಪ್ರತಿ ಬಾರಿಯೂ ಸಣ್ಣಪುಟ್ಟ ಗೆಲುವುಗಳ ಕಾರಣದಿಂದ ಸಿಗುವ ಖುಷಿ ನಮ್ಮ ದೃಷ್ಟಿಕೋನವನ್ನು ಅವಲಂಬಿಸಿರುತ್ತದೆ. ಸುಖ ಅಥವಾ ದುಃಖ ಅದನ್ನು ಸ್ವೀಕರಿಸುವುದು ಮತ್ತು ಮನಸ್ಸನ್ನು ಸದಾ ಉಲ್ಲಸಿತವಾಗಿ ಇಟ್ಟುಕೊಳ್ಳುವುದು, ಸ್ಥಿತಪ್ರಜ್ಞ ಮನಃಸ್ಥಿತಿಯನ್ನು ಕಾಯ್ದುಕೊಳ್ಳುವುದು ಇವೆಲ್ಲವೂ ನಮ್ಮೊಳಗಿನ ವಿಶೇಷ ತಾಕತ್ತು.

ರ್ಹಿನೊಟಿಲೆಕ್ಸೊಮೆನಿಯಾ ಅಂದರೆ ಮೂಗು ಅಗೆಯುವ ಚಟ

ತಿಳಿರು ತೋರಣ

ಶ್ರೀವತ್ಸ ಜೋಶಿ

vveditoped@gmail.com

srivathsajoshi@yahoo.com

ಅಸಹ್ಯ ಎನಿಸುವ ವಿಷಯವಿದು ಹೇಗಪ್ಪಾ ಓದುವುದು ಎಂದುಕೊಳ್ಳುವವರು ದಯವಿಟ್ಟು ಮುಂದೆ ಓದಬೇಡಿ. ಒತ್ತಾಯವಿಲ್ಲ. ಆದರೆ ಇಂಥ ವಿಷಯಗಳ ಬಗ್ಗೆ ಬರೆದಾಗ ಪ್ರತಿಕ್ರಿಯೆಗಳು ಹೇಗಿರುತ್ತವೆಂದು ಒಂದು ಅನುಭವದ ಮಾತು ಹೇಳುತ್ತೇನೆ: 'ವಿಜಯ ಕರ್ನಾಟಕ' ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ 'ಪರಾಗಸ್ಪರ್ಶ' ಅಂಕಣದಲ್ಲಿ ಒಮ್ಮೆ ಇದೇ ವಿಷಯದ ಬಗ್ಗೆ ಬರೆದಿದ್ದೆ. ಫಿಮೇಲ್ ಓದುಗರೊಬ್ಬರು ಇಮೇಲ್‌ನಲ್ಲಿ (ಆಗಿನ್ನೂ ಫೇಸ್‌ಬುಕ್ ಬಾಲ್ಯಾವಸ್ಥೆಯಲ್ಲಿತ್ತು, ವಾಟ್ಸ್ಯಾಪ್ ಹುಟ್ಟಿರಲಿಲ್ಲ) 'ವ್ಯಾಆಆಆಆಆಕ್!' ಎಂದು ಏಳೂವರೆ ಅಕ್ಷರಗಳ ಒಂದೇಒಂದು ವಾಕ್ಯದ ಪ್ರತಿಕ್ರಿಯೆ ಬರೆದಿದ್ದರು. ನಾನೇನೂ ಅದರಿಂದ ಘಾಸಿಗೊಳ್ಳಲಿಲ್ಲ, ಜಗಳಕ್ಕಿಳಿಯಲಿಲ್ಲ. ಅವರು ಜನ್ಮದಾರಭ್ಯ ಅದುವರೆಗೆ ಒಮ್ಮೆಯೂ ಮೂಗಿನಲ್ಲಿ ಬೆರಳು ತೂರಿಸದ ಪರಮಸ್ವಚ್ಛ 'ಕ್ಲೀನೋಪಾಟ್ರಾ' ಇರಬಹುದು ಎಂದುಕೊಂಡು ಸುಮ್ಮನಾದೆ. ತದ್ವಿರುದ್ಧವಾಗಿ, ಆಮೇಲೆ ನಾನೊಮ್ಮೆ ಬೆಂಗಳೂರಿಗೆ ಭೇಟಿಯಿತ್ತಾಗ ಅಲ್ಲಿ ಯಾವುದೋ ಒಂದು ಸಮಾರಂಭದಲ್ಲಿ ಭಾಗವಹಿಸಿದ್ದಾಗ ನನಗೆ ಗುರುತಿರದಿದ್ದ ಗಂಡಸೊಬ್ಬರು ಬಂದು 'ಮೂಗಿನಲ್ಲಿ ಬೆರಳು ತೂರಿಸುವುದರ ಬಗ್ಗೆ ನೀವು ವಿಜಯ ಕರ್ನಾಟಕದಲ್ಲಿ ಬರೆದದ್ದು ಲಘು ಹಾಸ್ಯದೊಂದಿಗೆ ಮಾಹಿತಿಭರಿತವಾಗಿತ್ತು. ನನಗೆ ಸ್ವಲ್ಪ ಆ ಚಟ ಇರುವುದರಿಂದ ಹೆಚ್ಚು ಆಪ್ತ ಮತ್ತು ಉಪಯುಕ್ತ ಎನಿಸಿತು. ನಿಮಗೆ ಥ್ಯಾಂಕ್ಸ್!' ಎಂದರು. ಆಗಲೂ ಅಷ್ಟೇ. ನಾನು ಅಗತ್ಯಕ್ಕಿಂತ ಹೆಚ್ಚಿಗೆ ಹಿಗ್ಗು ತೋರಲಿಲ್ಲ. 'ಆ ಅಂಕಣಬರಹ ಪ್ರಕಟವಾಗಿ ಒಂದೆರಡು ವರ್ಷಗಳೇ ಕಳೆದಿದ್ದರೂ ನೆನಪಿಟ್ಟುಕೊಂಡಿದ್ದೀರಲ್ಲ, ಗ್ರೇಟ್!' ಎಂದು ಅವರಿಗೇ ತುಸು ಫೀಲ್-ಗುಡ್-ಫ್ಯಾಕ್ಟರ್ ಒದಗಿಸಿದೆ, ಖುಷಿಪಟ್ಟರು. ಲೋಕೋ ಭಿನ್ನರುಚಿಃ ಎನ್ನುವುದು ಇದಕ್ಕೇ ಅಲ್ಲವೇ?

ಹಾಗಾಗಿ, ಇವತ್ತಿನ 'ತಿಳಿರುತೋರಣ'ವನ್ನು ಬೇಕಿದ್ರೆ ಓದಿ ಇಲ್ಲಾದ್ರೆ ಬಿಡಿ. ನಿಮ್ಮಿಷ್ಟ ನಿಮ್ಮ ಆಯ್ಕೆ. ಇದನ್ನು ಸವಿನಯವಾಗಿಯೇ ಹೇಳುತ್ತಿದ್ದೇನೆ, ಧಾರ್ಷ್ಟ್ಯದ ಧ್ವನಿಯಿಂದಲ್ಲ. ಮುಜುಗರ ಆಗಲಿಕ್ಕಿಲ್ಲ, ಮಜಾ ಅನಿಸುವ ಹಾಗೇ ಇರಬಹುದು ಎಂದುಕೊಂಡು ಓದನ್ನು ಮುಂದುವರಿಸುತ್ತೀರಾದರೆ ನಿಮಗೆ ಸ್ವಾಗತ. ನೇರವಾಗಿ ಒಂದು ಪ್ರಶ್ನೆಯಿಂದಲೇ ಆರಂಭಿಸೋಣ: 'ನಿಮಗೆ ಮೂಗಿನಲ್ಲಿ ಬೆರಳು ತೂರಿಸುವ ಅಭ್ಯಾಸವಿದೆಯೇ?' - ಇದು ನಾನು ನಿಮಗೆ ಕೇಳುತ್ತಿರುವ ಪ್ರಶ್ನೆಯಲ್ಲ. ಈ ಪ್ರಶ್ನೆ ಎದುರಾದದ್ದು, 30 ವರ್ಷಗಳ ಹಿಂದೆ ಅಮೆರಿಕದ ವಿಸ್ಕಾನ್ಸಿನ್ ಸಂಸ್ಥಾನದ ಪ್ರಜೆಗಳ ಪೈಕಿ ಆಯ್ದ ಒಂದುಸಾವಿರ ಜನರಿಗೆ. ವಿಸ್ಕಾನ್ಸಿನ್ ವಿಶ್ವವಿದ್ಯಾಲಯದ ಇಬ್ಬರು ಸಂಶೋಧಕ ಪ್ರಾಧ್ಯಾಪಕರು- ಪ್ರೊ. ಜೇಮ್ಸ್ ಜೆಫರ್ಸನ್ ಮತ್ತು ಪ್ರೊ. ಟ್ರೆಂಟ್ ಥಾಮ್ಸನ್- 1994ರಲ್ಲಿ ನಡೆಸಿದ ಒಂದು ಅಧ್ಯಯನಕ್ಕೆ ಆ ಒಂದುಸಾವಿರ ಮಂದಿ ಯಾದೃಚ್ಛಿಕವಾಗಿ ಆಯ್ಕೆಯಾದ ಸಮೀಕ್ಷಾರ್ಥಿಗಳಾಗಿದ್ದರು.

ಹೇಗಾಗಿರಬೇಡ ಅವರಿಗೆಲ್ಲ? ವಿಶ್ವವಿದ್ಯಾಲಯದ ಮುದ್ರೆಯಿರುವ ಅಂಚೆ ಲಕೋಟೆ ತೆರೆದು ನೋಡಿದರೆ ಈ ರೀತಿಯದೊಂದು ಮುಜುಗರ ತರಿಸುವ ವಿಷಯದ ಸಮೀಕ್ಷೆ! ಅದೇನೂ ಎಪ್ರಿಲ್‌ಫೂಲ್ ತಂತ್ರ ಆಗಿರಲಿಲ್ಲ. ಗಂಭೀರವಾದ, ಕ್ರಮಬದ್ಧವಾದ ಅಧ್ಯಯನ ಉದ್ದೇಶವಿದ್ದ ಸಮೀಕ್ಷೆ. ಪ್ರಶ್ನಾವಳಿಯ ಜತೆಗೆ ಕವರಿಂಗ್ ಲೆಟರ್‌ನಲ್ಲಿ ಒಂದು ಕಿರುಟಿಪ್ಪಣಿ- ''ವಿಸ್ಕಾನ್ಸಿನ್ ವಿಶ್ವವಿದ್ಯಾಲಯವು, ಸಾರ್ವತ್ರಿಕವಾದ ಮತ್ತು ಸಾರ್ವಕಾಲಿಕವಾದ 'ಮೂಗಿನಲ್ಲಿ ಬೆರಳು ತೂರಿಸಿ ಅಗೆಯುವ' ಅಭ್ಯಾಸದ ಕುರಿತು ಅಧ್ಯಯನ ನಡೆಸಲು ಇಚ್ಛಿಸಿದೆ. ಮೂಗಿನಲ್ಲಿ ಬೆರಳು ತೂರಿಸುವುದು ನಿಮಗೆ ತೀರಾ ಸಾಮಾನ್ಯವಾದ ಕ್ರಿಯೆ ಎನಿಸಬಹುದು. ಆದರೆ ಇದಕ್ಕೆ Rhinotillexomania ಎಂಬ ವೈಜ್ಞಾನಿಕ ಹೆಸರಿದೆ (ಗ್ರೀಕ್ ಭಾಷೆಯಲ್ಲಿ rhino ಅಂದರೆ ಮೂಗು, tillexo ಅಂದರೆ ಅಗೆಯುವುದು, mania ಅಂದರೆ ಹುಚ್ಚು). ಇದೊಂದು ಕಾಯಿಲೆಯೇ? ಚಟವೇ? ಅಥವಾ ಒಳ್ಳೆಯ ಆರೋಗ್ಯಕರ ಅಭ್ಯಾಸವೇ? ಎಂದು ತಿಳಿಯಲು ನಾವು ಈ ಸಮೀಕ್ಷೆ ಕೈಗೊಂಡಿದ್ದೇವೆ. ನಿಮ್ಮ ಭಾಗವಹಿಸುವಿಕೆ ಮುಖ್ಯವಾಗುತ್ತದೆ''.

ಸಾವಿರದಲ್ಲಿ 254 ಮಂದಿ ಆ ಸಮೀಕ್ಷೆಯ ಪ್ರಶ್ನಾವಳಿಯನ್ನು ಪ್ರಾಮಾಣಿಕವಾಗಿ ಉತ್ತರಿಸಿದರು. ಅದರಲ್ಲಿ 91 ಪ್ರತಿಶತ ಜನರು ತಾವು ಯಾವಾಗಲಾದರೂ ಒಮ್ಮೆ ಮೂಗಿನೊಳಗೆ ಬೆರಳು ಹಾಕಿ ಸ್ವಚ್ಛ ಮಾಡಿಕೊಳ್ಳುವುದಿದೆ ಎಂದು ತಿಳಿಸಿದರು. ಉಳಿದ 9 ಪ್ರತಿಶತ ಜನರು ತಮಗೆ ಆ ದುರಭ್ಯಾಸ ಇಲ್ಲವೇಇಲ್ಲ ಎಂದುಬಿಟ್ಟರು. ಅವರೆಲ್ಲ ಸುಳ್ಳು ಹೇಳಿದರೋ ಅಥವಾ ಚಿಕ್ಕವರಿದ್ದಾಗ ತಾವು ಹಾಗೆ ಮಾಡುತ್ತಿದ್ದದ್ದು ಅವರಿಗೆ ನೆನಪಾಗಲಿಲ್ಲವೋ ಗೊತ್ತಿಲ್ಲ. ಒಪ್ಪಿಕೊಂಡವರಲ್ಲಿ 26 ಶೇಕಡಾದಷ್ಟು ಜನ ಪ್ರತಿದಿನ ಒಮ್ಮೆಯಾದರೂ ಬೆರಳು ತೂರಿಸಿ ಮೂಗು ಕ್ಲೀನ್ ಮಾಡಿಕೊಳ್ಳುತ್ತೇವೆ ಎಂದರು. 22 ಶೇಕಡಾದಷ್ಟು ಜನ ದಿನಕ್ಕೆ ಎರಡರಿಂದ ಐದು ಸಲ ಮೂಗಿನೊಳಗೆ ಬೆರಳು ಹೋಗುತ್ತದೆ ಎಂದು ತಿಳಿಸಿದರು. ಮೂವರು ಮಹಾನುಭಾವರಂತೂ ಹೆಚ್ಚೂಕಡಿಮೆ ಗಂಟೆಗೊಂದಾವರ್ತಿ ತಮ್ಮ ಗಣಿಗಾರಿಕೆ ಯಂತ್ರ ಕಾರ್ಯನಿರ್ವಹಿಸುತ್ತದೆ ಎಂದು ಹೆಮ್ಮೆಯಿಂದಲೇ ಉತ್ತರಿಸಿದರು!

ಮತ್ತೂ ಕೆಲವು ಸ್ವಾರಸ್ಯಕರ ಅಂಕಿ-ಅಂಶಗಳು ಸಮೀಕ್ಷೆಯಿಂದ ತಿಳಿದುಬಂದವು, ನಿರ್ದಿಷ್ಟವಾಗಿ 'ನೀವೇಕೆ ಮೂಗಿನೊಳಗೆ ಬೆರಳು ತೂರಿಸುತ್ತೀರಿ?' ಎಂಬ ಪ್ರಶ್ನೆಗೆ ಬಂದ ಉತ್ತರಗಳಿಂದ. 83 ಶೇಕಡಾದಷ್ಟು ಜನರಿಗೆ ಅದು ಮೂಗನ್ನು ಸ್ವಚ್ಛಗೊಳಿಸುವ ಪ್ರಕ್ರಿಯೆ. 66 ಶೇಕಡಾ ಜನರಿಗೆ ಮೂಗಿನೊಳಗೆ ಒಣಗಿದ ಶ್ಲೇಷ್ಮವು ಉಂಟುಮಾಡುವ ಕಿರಿಕಿರಿ ತಪ್ಪಿಸಲು ಅದೊಂದು ಅನಿವಾರ್ಯ ಕರ್ಮ. ಶೇಕಡಾ 17ರಷ್ಟು ಜನರಿಗೆ ಏನೋ ಒಂಥರ ಆನಂದ ಕೊಡುವ ಚಟ. ಒಬ್ಬ ತರ್ಲೆ ಸಮೀಕ್ಷಾರ್ಥಿಗಂತೂ ಲೈಂಗಿಕ ಸಮಾಗಮದಷ್ಟೇ ಉದ್ರೇಕ-ಉದ್ದೀಪನ ಕೊಡುವ ಸುಲಭೋಪಾಯ! 'ಮೂಗಿನೊಳಗೆ ತೂರಿಸಲು ನೀವು ಯಾವ ಬೆರಳನ್ನು ಬಳಸುತ್ತೀರಿ?' ಎಂಬ ಪ್ರಶ್ನೆಯೂ ಸಮೀಕ್ಷೆಯಲ್ಲಿತ್ತು. 65 ಪ್ರತಿಶತ ಜನರು ತಮ್ಮ ನಾಸಿಕನಿರ್ಮಲೀಕರಣಕ್ಕೆ ತೋರುಬೆರಳನ್ನು ಬಳಸಿದರೆ 20 ಶೇಕಡಾ ಮಂದಿ ಕಿರುಬೆರಳನ್ನು ಉಪಯೋಗಿಸುವವರು. ಅವರಿಗೆ ಮೂಗೆಂದರೆ ಗೋವರ್ಧನಗಿರಿ ಇದ್ದಂತೆ ಎಂದುಕೊಳ್ಳೋಣ. 15 ಪ್ರತಿಶತ ಜನರು ಈ ಕೆಲಸಕ್ಕೆ ಹೆಬ್ಬೆರಳೇ ಸೂಕ್ತ ಎಂದವರೂ ಇದ್ದರು. ಅಬ್ಬಾ! ಎಷ್ಟು ದೊಡ್ಡ ಹೊಳ್ಳೆಗಳಿರಬಹುದು ಅವರ ಮೂಗಿನವು!

'ಮೂಗಿನ ಕಸ ತೆಗೆದಮೇಲೆ ಅದನ್ನೇನು (ಮೂಗನ್ನಲ್ಲ, ಕಸವನ್ನು) ಮಾಡುತ್ತೀರಿ?' ಎಂದು ಸಮೀಕ್ಷೆಯಲ್ಲಿದ್ದ ಪ್ರಶ್ನೆಗೆ ಶೇಕಡಾ 24 ಮಂದಿ ಆ ಕಸವನ್ನು ಕಸದಬುಟ್ಟಿಗೆ ಎಸೆಯುತ್ತೇವೆ ಎಂದರು. 30 ಶೇಕಡಾದಷ್ಟು ಜನ ಹೀಗೇ ಎಲ್ಲೆಂದರಲ್ಲಿ ಹಾರಿಸಿಬಿಡುತ್ತೇವೆ ಎಂದು ಬಿಂದಾಸ್ ಆಗಿ ಉತ್ತರಿಸಿದರು. ಶೇ.38ರಷ್ಟು ಜನರು ಆ ಕಸವನ್ನು ತಾವು ಕುಳಿತ ಪೀಠೋಪಕರಣಗಳ ಕೆಳಭಾಗಕ್ಕೆ ಅಂಟಿಸಿಬಿಡುತ್ತೇವೆ ಎಂದವರೂ ಇದ್ದರು. ಉಳಿದ 8 ಪ್ರತಿಶತದವರ ಪ್ರತಿಕ್ರಿಯೆ ಏನಿತ್ತು? ಕಸವನ್ನು 'ಕಸ್ತೂರಿ ಮಾತ್ರೆ'ಯಂತೆ ಗುಳುಂ ಮಾಡಿಬಿಡುತ್ತೇವೆ ಎಂದು ಯಾವುದೇ ನಾಚಿಕೆಯಿಲ್ಲದೆ ತಿಳಿಸಿದ್ದರು. ಥೂ... ಛೀ... ಎಂದು ಮೂಗು ಮುರಿಯಬೇಡಿ ಪ್ಲೀಸ್. ಮೂಗಿನ ಕಸದ ಉಪ್ಪುಪ್ಪು ರುಚಿ ಚೆನ್ನಾಗಿರುತ್ತದೆ ಎಂದು ಸಮರ್ಥನೆಯೂ ಇತ್ತಂತೆ! ಒಟ್ಟಿನಲ್ಲಿ ಈ ಗ್ರೌಂಡ್‌ಬ್ರೇಕಿಂಗ್ ಸ್ಟಡಿಯಿಂದ ತಿಳಿದುಬಂದದ್ದೇನು? ಸಮೀಕ್ಷೆಗೆ ಉತ್ತರಿಸಿದವರು ಕೇವಲ 254 ಮಂದಿಯಾದರೂ ಅವರ ಉತ್ತರಗಳನ್ನು ಸಾರ್ವತ್ರಿಕರಣಗೊಳಿಸಿದರೆ, ಮೂಗಿನಲ್ಲಿ ಬೆರಳು ತೂರಿಸುವುದು ಒಂದು ಯೂನಿವರ್ಸಲ್ ಚಟ ಎನ್ನುವುದಂತೂ ದಿಟವಾಯಿತು. ಹೆಚ್ಚಿನವರು ಅದನ್ನು ಒಪ್ಪಿಕೊಳ್ಳಲಿಕ್ಕೆ ರೆಡಿಯಿರುವುದಿಲ್ಲ ಅಷ್ಟೇ. ತೆಗೆದ ಕಸದ ವಿಲೇವಾರಿ ವಿಧಾನಗಳೂ ಬಹುತೇಕ ಯೂನಿವರ್ಸಲ್ ಆಗಿಯೇ ಇವೆ. ನಾವೂ ಹಾಗೇನೇ ಎನ್ನುವಂತೆ ಇವೆ.

ಉಗುರು ಕಚ್ಚುವ, ಪದೇ ಪದೇ ಬೆರಳುಗಳ ಲಟಿಕೆ ಮುರಿಯುವ, ನಾಲಗೆಯನ್ನು ಮೀಸೆಗೆ ತಾಗಿಸುವ... ಮುಂತಾದ ಹಲವು ಚಟಗಳಂತೆಯೇ ಇದು ಕೂಡ. ಈ ಅಭ್ಯಾಸ ಅದೆಷ್ಟು ಸಾಮಾನ್ಯವೆಂಬುದಕ್ಕೆ, ಅಮೆರಿಕದ ಪತ್ರಿಕೆಯೊಂದರಲ್ಲಿ ಆಪ್ತಸಲಹೆ ಅಂಕಣಕಾರ್ತಿಯೊಬ್ಬಳು ಓದುಗರು ಕೇಳಿದ್ದ ಪ್ರಶ್ನೆಗೆ ಕೊಟ್ಟ ಉತ್ತರವೇ ನಿದರ್ಶನ. 'I am an avid nose-picker. Is this bad for my nose?' ಎಂದು ಒಬ್ಬರು ಓದುಗರು ಪ್ರಶ್ನೆ ಕೇಳಿದ್ದರು. ಆಪ್ತಸಲಹೆ ಅಂಕಣಕಾರ್ತಿಯ ಉತ್ತರ ಹೀಗಿತ್ತು: Nose picking is a more common pastime than most folks, big and small, would like to admit. I can bet that some of you reading this column in the newspaper are picking right now! ಮುದ್ರಿತ ಪತ್ರಿಕೆಯನ್ನು ಎರಡೂ ಕೈಗಳಲ್ಲಿ ಹಿಡಿದು ಓದುವುದಾದ್ದರಿಂದ ಏಕಕಾಲಕ್ಕೇ ಗಣಿಗಾರಿಕೆ ಕಷ್ಟ. ಇ-ಪೇಪರ್ ಓದುವವರಿಗಾದರೆ ಅದಕ್ಕೆ ಹೆಚ್ಚು ಸ್ವಾತಂತ್ರ್ಯ. ಅಂಕಣಕಾರ್ತಿ ಸ್ವಲ್ಪ ಹಳೆಕಾಲದವಳಿರಬೇಕು.

ವಿಸ್ಕಾನ್ಸಿನ್ ವಿಶ್ವವಿದ್ಯಾಲಯವು ನಡೆಸಿದ ಸಮೀಕ್ಷೆ ಮತ್ತು ಅಧ್ಯಯನದಿಂದ ಪ್ರೇರಣೆ ಪಡೆದೂ ಇರಬಹುದು, ಬೆಂಗಳೂರಿನ ನಿಮ್ಹಾನ್ಸ್‌ನ ಇಬ್ಬರು ಸೈಕಿಯಾಟ್ರಿಸ್ಟ್‌ಗಳು- ಡಾ.ಚಿತ್ತರಂಜನ ಅಂದ್ರಾದೆ ಮತ್ತು ಡಾ.ಬಿ.ಎಸ್.ಶ್ರೀಹರಿ ಎಂಬುವವರೂ ರ್ಹಿನೊಟಿಲೆಕ್ಸೊಮೆನಿಯಾ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಜರ್ನಲ್ ಆಫ್ ಕ್ಲಿನಿಕಲ್ ಸೈಕಿಯಾಟ್ರಿಯಲ್ಲಿ ಪ್ರಬಂಧ ಮಂಡಿಸಿದ್ದಾರೆ. ದಿನದಲ್ಲಿ ನಾಲ್ಕೈದು ಬಾರಿ ಕ್ಷಣಿಕವಾಗಿ ಮೂಗಿನಲ್ಲಿ ಬೆರಳು ತೂರಿಸುವುದನ್ನು ವಯಸ್ಕರೆಲ್ಲ ಮಾಡಿಯೇಮಾಡುತ್ತಾರೆ. ಅದರಿಂದ ಅಪಾಯವೇನೂ ಇಲ್ಲ. ವಿಪರೀತವಾದರೆ ಮಾತ್ರ ಅದೊಂದು ಮನೋದೌರ್ಬಲ್ಯ ಎಂದು ಪರಿಗಣಿಸಲಾಗುತ್ತದೆ. ಮಾತ್ರವಲ್ಲ ಮೂಗಿನ ಹೊಳ್ಳೆಗಳ ಸೂಕ್ಷ್ಮ ಅಂಗಾಂಶಗಳು ಹರಿದು ರಕ್ತ ಸೋರಬಲ್ಲದು, ಕೈಬೆರಳುಗಳಿಗೆ ಅಂಟಿಕೊಂಡಿರುವ ಸೂಕ್ಷ್ಮಜೀವಿಗಳು ಮೊದಲೇ ರಕ್ತಪಿಪಾಸು ಆಗಿರುತ್ತವೆ, ಅವುಗಳಿಗೆ ಔತಣ ಒದಗಿಸಿದಂತಾಗುತ್ತದೆ. ಹಾಗಾಗದಂತೆ ಎಚ್ಚರ ಬೇಕು. ಎಲ್ಲರೆದುರಿಗೆ ಮೂಗಿನಲ್ಲಿ ಬೆರಳು ತೂರಿಸಿ ಅಸಹ್ಯವಾಗಿಸಬಾರದು ಎಂದಿದ್ದರೆ ಸ್ನಾನದ ವೇಳೆ ಮೂಗನ್ನೂ ಸ್ವಚ್ಛಗೊಳಿಸುವುದು ಒಳ್ಳೆಯದು. ಮೂಗಿನ ಕಸವನ್ನು ಗುಳಿಗೆಗಳಾಗಿಸಿ ತಿನ್ನುವುದಂತೂ ಅನಾಗರಿಕ ವರ್ತನೆಯೇ. ಆದರೆ ಸಂಶೋಧನೆಗಳಿಂದ ತಿಳಿದುಬಂದಿರುವ ಅಂಶವೇನೆಂದರೆ ಅದರಿಂದ ದೇಹಕ್ಕೆ ಅಂಥದೇನೂ ಅಪಾಯವಿಲ್ಲ, ಮೂಗಿನಲ್ಲಿ ಮತ್ತು ಗಂಟಲಲ್ಲಿ ಉಂಟಾಗುವ ಶ್ಲೇಷ್ಮವು ಒಳಗಿಂದೊಳಗೇ ನಮ್ಮ ಶರೀರದೊಳಕ್ಕೆ ಹೋಗುವುದು ಪ್ರಕೃತಿನಿರ್ಮಿತ ಕ್ರಿಯೆಯೇ; ರೋಗನಿರೋಧಕ ಶಕ್ತಿ ಬೆಳೆಸಲು ಅದು ಉಪಯುಕ್ತವೇ; ಆದರೆ ಸಹಜವಾಗಿ ಆಗುವುದಷ್ಟೇ ಸಾಕಾಗುತ್ತದೆ. ನಾವು ಮೂಗಿನಿಂದ ಅಗೆದು ಬಾಯಿಯ ಮೂಲಕ ಸಪ್ಲಿಮೆಂಟರಿ ಡೋಸೇಜ್ ಥರ ಕೊಡುವುದು ಬೇಕಾಗಿಲ್ಲ. ಚಿಕ್ಕ ಮಕ್ಕಳು ಹಾಗೆ ಮಾಡುತ್ತಿದ್ದರೂ ಅವರಿಂದ ಆ ಅಭ್ಯಾಸ ಬಿಡಿಸಬೇಕು.

ಒಂದಂತೂ ನಿಜ. ಬೇಕಿದ್ದರೆ ಚಟವೆನ್ನಿ, ಇಲ್ಲ ಕಾಯಿಲೆಯೆನ್ನಿ, ಇದು ಸರ್ವವ್ಯಾಪಿ ಎನ್ನುವುದರಲ್ಲಿ ಅನುಮಾನವಿಲ್ಲ. 'ತಾರೇ ಜಮೀನ್ ಪರ್' ಚಿತ್ರದಲ್ಲಿ ಬಾಲಕ ಈಶಾನ್‌ಗೆ ಮೂಗಿನಲ್ಲಿ ಬೆರಳು ತೂರಿಸುವ ಚಟ ಇತ್ತು. ಪಾಪ ಸಿನಿಮಾ ಪಾತ್ರವನ್ನೇಕೆ ದೂರಬೇಕು, ಟ್ರಾಫಿಕ್ ಸಿಗ್ನಲ್‌ನಲ್ಲಿ ವಾಹನ ನಿಲ್ಲಿಸಬೇಕಾಗಿ ಬರುವ ಒಂದೆರಡು ನಿಮಿಷ ಅವಧಿಯನ್ನು ಮೂಗು ಕ್ಲೀನ್ ಮಾಡುವುದಕ್ಕೆ ಬಳಸುವ ಅದೆಷ್ಟು ಚಾಲಕರು ನಮ್ಮಲ್ಲೇ ಇಲ್ಲ? ಜನಸಾಮಾನ್ಯರಷ್ಟೇ ಅಂತಲ್ಲ, ಸೆಲೆಬ್ರಿಟಿಗಳೂ ರಾಜಕಾರಣಿಗಳೂ ರಾಜಾರೋಷವಾಗಿ ಗಣಿಗಾರಿಕೆ ಮಾಡುವವರೇ. ಬಿಹಾರದ ಲಾಲೂ ಮಹಾಶಯರನ್ನು, ಕರ್ನಾಟಕದ ಕೆಲ ರಾಜಕಾರಣಿಗಳನ್ನೂ, ಒಬ್ಬ ಸುದ್ದಿನಿರೂಪಕರನ್ನೂ, ಟಿವಿ ಕೆಮರಾ ಎದುರಿಗೇ ನಿಸ್ಸಂಕೋಚವಾಗಿ ಅವರು ಗಣಿಗಾರಿಕೆ ಮಾಡುವುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು. ವರ್ಷಗಳ ಹಿಂದೆ ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯಾಗಿದ್ದ ಜಾನ್ ಮೆಕ್‌ಕೈನ್ ಪ್ರಚಾರಸಭೆಯೊಂದರಲ್ಲಿ ಮೂಗಿನೊಳಗೆ ಬೆರಳು ತಿರುಗಿಸುತ್ತ ಮಾತನಾಡಿದ್ದರ ವಿಡಿಯೊ ಇಂಟರ್‌ನೆಟ್‌ನಲ್ಲಿ ಹರಿದಾಡಿತ್ತು. ನಾವೇ ಮಾಡಿಕೊಳ್ಳುವಾಗ ಅಪರಿಮಿತ ಆನಂದವನ್ನು ಕೊಡುವ ಈ ಪ್ರಕ್ರಿಯೆ ಬೇರೆಯವರು ಮಾಡುವುದನ್ನು ನೋಡುವಾಗ ಮಾತ್ರ ಅಸಹ್ಯ ಅಂತನಿಸುತ್ತದೆ. ಅದೊಂದೇ ಈ ಜಾಡ್ಯಕ್ಕೆ ಅಂಟಿರುವ ಶಾಪ.

ಇನ್ನೊಬ್ಬ ಮೇಧಾವಿ ಪುರಾತನ ವಸ್ತುಶಾಸ್ತ್ರಜ್ಞ ಡಾ.ವಿಲ್ಬರ್ಟ್ ಲೀಕಿ ಎಂಬಾತ ಹೊರಗೆಡಹಿರುವ ಒಂದು ಸಂಗತಿಯೂ ಸ್ವಾರಸ್ಯಕರವಾಗಿದೆ. ಏನೆಂದರೆ- ಕ್ರಿಸ್ತಪೂರ್ವ 1300ರ ಕಾಲದಲ್ಲೂ ಮೂಗಿನೊಳಗೆ ಬೆರಳು ತೂರಿಸುವ ಅಭ್ಯಾಸ ಜನಸಾಮಾನ್ಯರಿಗಷ್ಟೇ ಇದ್ದದ್ದಲ್ಲ, ಈಜಿಪ್ಟ್‌ನ ಖ್ಯಾತ ಫರೋ(ರಾಜ) ಟುಟಂಖಾಮೆನ್ ಆ ಕೆಲಸಕ್ಕೊಬ್ಬ ಸೇವಕನನ್ನೂ ನೇಮಿಸಿಕೊಂಡಿದ್ದನಂತೆ! ಆ ಮೂಗಗಸನ ಸಂಬಳದ ಲೆಕ್ಕಾಚಾರ (ಮೂರು ಆಕಳುಗಳ ತಲೆ, ಆಹಾರ ಸಾಮಗ್ರಿ ಮತ್ತು ವಸತಿ ಸೌಲಭ್ಯ) ಬರೆದಿಟ್ಟ ಒಂದು 'ಪೆಪಿರಸ್' ಈಜಿಪ್ಟ್‌ನಲ್ಲಿ ಉತ್ಖನನ ಮಾಡಿದಾಗ ಸಿಕ್ಕಿದೆಯಂತೆ. ಅಂದರೆ, ಮೂಗು ಕ್ಲೀನ್ ಮಾಡಲಿಕ್ಕೂ ಸೇವಕರು! ಅಥವಾ ಶಬ್ದಾಲಂಕಾರದಲ್ಲಿ ಹೇಳುವುದಾದರೆ, ಸಿಂಬಳ ತೆಗೆಯಲಿಕ್ಕೆ ಸಂಬಳ ಕೊಟ್ಟು ನೇಮಕಾತಿ! ಕೂದಲು ಕತ್ತರಿಸಲು ಕ್ಷೌರಿಕರನ್ನು, ಹುಳುಕುಹಲ್ಲು ತೆಗೆಯಲು ದಂತವೈದ್ಯರನ್ನು, ಕಿವಿಯೊಳಗಿನ ಮೇಣ ತೆಗೆಯುವವರನ್ನು (ಮುಂಬಯಿಯಂಥ ನಗರಗಳಲ್ಲಿ ಈ ದಂಧೆಯನ್ನು ಮಾಡಿಕೊಂಡವರೂ ಇರುತ್ತಾರೆ), ಷೂ ಪಾಲಿಷ್ ಮಾಡಿಕೊಡುವವರನ್ನು ನಾವು ಅವಲಂಬಿಸುವುದಿದೆ, ಅದೆಲ್ಲ ನಮಗೇನೂ ವಿಶೇಷ ಅಂತನ್ನಿಸುವುದಿಲ್ಲ. ನಾಸಿಕನಿರ್ಮಲೀಕರಣಕ್ಕೆ ನೌಕರರನ್ನು ಇಟ್ಟುಕೊಳ್ಳುವುದು ಮಾತ್ರ ವಿಚಿತ್ರವಾಗಿ ಕಾಣುತ್ತದೆ. ಬಹುಶಃ ಈಜಿಪ್ಟ್ ಫರೋ ಸಂಸ್ಕೃತಿಯ ಕಾಲಕ್ಕೇ ಅದು ನಿಂತುಹೋಗಿರಬಹುದು. ಈಗಿನ ಕಾಲದಲ್ಲಿ ಮೂಗು-ಮಾರ್ಜನ ಏನಿದ್ದರೂ ಸ್ವ-ಸಹಾಯ ಪದ್ಧತಿ.

ಈಜಿಪ್ಟ್‌ನ ಟುಟಂಖಾಮೆನ್ ಕಥೆಯನ್ನು ಕೇಳಿದಾಗ ನಮಗೆ ಲಂಕೆಯ ರಾವಣನ ನೆನಪಾದರೆ ಆಶ್ಚರ್ಯವಿಲ್ಲ. ರಾವಣನಿಗೇನಾದರೂ ರ್ಹಿನೊಟಿಲೆಕ್ಸೊಮೆನಿಯಾ ಚಟ ಇದ್ದಿದ್ದರೆ? ಅವನ ಹತ್ತು ಮೂಗುಗಳ ಇಪ್ಪತ್ತು ಹೊಳ್ಳೆಗಳನ್ನು ಕ್ಲೀನ್ ಮಾಡಲಿಕ್ಕೆ ಎರಡು ಕೈಗಳ ಎಲ್ಲ ಬೆರಳುಗಳನ್ನು ಉಪಯೋಗಿಸಿದರೂ ಅವೆಲ್ಲಿ ಸಾಕಾಗುತ್ತಿದ್ದವು? ಹಾಗಾಗಿ ರಾವಣನೂ ಆ ಕೆಲಸಕ್ಕಾಗಿ ನೌಕರರನ್ನು ನೇಮಿಸಬೇಕಾಗುತ್ತಿತ್ತು. ಆದಿಕವಿ ವಾಲ್ಮೀಕಿ ಈಬಗ್ಗೆ ಏನೂ ಹೇಳಿದಂತಿಲ್ಲ, ಅಂದಹಾಗೆ ರಾವಣನ ತಮ್ಮ ಕುಂಭಕರ್ಣನ ಮೂಗಿನ ಹೊಳ್ಳೆಗಳ ವಿಚಾರವೊಂದಿದೆ. ಕುಂಭಕರ್ಣನು ಗೊರಕೆ ಹೊಡೆಯುತ್ತಿದ್ದಾಗ ಹತ್ತಿರ ಹೋದ ಹನುಮಂತ ಅವನ ಮೂಗಿನ ಹೊಳ್ಳೆಯೊಳಗೆ ಸೆಳೆಯಲ್ಪಟ್ಟು ಶ್ವಾಸಕೋಶದೊಳಕ್ಕೆ ಹೋದನಂತೆ. ಪವನಸುತನೆಂದ ಮೇಲೆ ಗಾಳಿಯಂತೆಯೇ ಒಳಹೋಗುವುದು ಅವನಿಗೇನೂ ಕಷ್ಟವಾಗಿರಲಿಕ್ಕಿಲ್ಲ. ಆದರೆ ಶ್ವಾಸಕೋಶದೊಳಕ್ಕೆ ಫಾರಿನ್ ಬಾಡಿಯೊಂದು (ವೈದ್ಯಕೀಯ ಪರಿಭಾಷೆಯಲ್ಲಿ, ಮನುಷ್ಯದೇಹವನ್ನು ಸೇರುವ ಬಾಹ್ಯ ವಸ್ತುವಿಗೆ foreign body ಎಂದು ಹೇಳುವುದು. ಕುಂಭಕರ್ಣನ ಮಟ್ಟಿಗೆ ಹನುಮಂತ ಎಲ್ಲ ರೀತಿಯಲ್ಲೂ ಫಾರಿನ್ ಬಾಡಿಯೇ) ಹೊಕ್ಕಾಗ ಕುಂಭಕರ್ಣ ನಿದ್ದೆಯಲ್ಲೇ ಸೀನಿದನಂತೆ. ಆ ಸೀನಿನೊಂದಿಗೆ ಹನುಮಂತ ಹೊರಗೆ ಸಿಡಿದು ಕೆಲ ಗಾವುದ ದೂರ ಹೋಗಿ ಬಿದ್ದನಂತೆ. ಮರದಿಂದ ಕೆಳಗೆ ಹಾರುವ ಅನುಭವ ಚೆನ್ನಾಗಿದ್ದುದರಿಂದ ಅವನು ಕೈಕಾಲು ಮುರಿದುಕೊಳ್ಳಲಿಲ್ಲ. ಆದರೂ ಕುಂಭಕರ್ಣನ ಮೂಗಿನ ಗಾತ್ರ ಅಂಥದು! ಇದು ಯಾವ ರಾಮಾಯಣದಲ್ಲಿದೆ ಎಂದು ಕೇಳಬೇಡಿ. ನಾನೋದಿದ್ದು ಲಾಂಗೂಲಾಚಾರ್ಯ ಪಾ.ವೆಂ. ಅವರ 'ಲೋಕದ ಡೊಂಕು' ಸಂಕಲನದ 'ನಾಸಿಕಾವಿಲಾಸಂ' ಎಂಬ ಹರಟೆಯಲ್ಲಿ. ಆದರೆ ಮಹತ್ತ್ವದ ಅಂಶವೊಂದನ್ನು ನಾವಿಲ್ಲಿ ಗಮನಿಸಬೇಕು. ಕುಂಭಕರ್ಣನಂಥ ದಾನವನ ಮೂಗಿನಿಂದ ಹೊರಗೆ ಸಿಡಿದ ಹನುಮಂತ ನಮಗೆ ಪೂಜ್ಯನೇ. ಅಂದಮೇಲೆ ಹುಲುಮಾನವರ ಮೂಗಿನಿಂದ ಹೊರ ಬರುವ ವಸ್ತುವಿನ ಬಗ್ಗೆ ತಾತ್ಸಾರವೇಕೆ? ಅದೂ ಗೌರವಾರ್ಹವೇ!

ಮೂಗಿನಲ್ಲಿ ಬೆರಳು ತೂರಿಸುವುದರ ಬಗ್ಗೆ ಕವಿಕಲ್ಪನೆಗಳು ಇಲ್ಲದಿದ್ದರೆ ಕವಿಗಳು ಹೀಗೆ ಕಲ್ಪಿಸಬಹುದು ಎಂದು ನಾವೇ ಕಲ್ಪನೆ ಮಾಡಲಿಕ್ಕಡ್ಡಿಯಿಲ್ಲ. ಉದಾಹರಣೆಗೆ ನಮಗೆ ಗೊತ್ತಿರುವ ಕೆಲ ಕನ್ನಡ ಕವಿಗಳು ಒಂದುವೇಳೆ ಮೂಗಿನಲ್ಲಿ ಬೆರಳು ತೂರಿಸುವ ವಿಷಯವನ್ನು ತಮ್ಮ ಕೃತಿಗಳಲ್ಲಿ ತೂರಿಸುತ್ತಿದ್ದರೆ ಹೇಗಿರುತ್ತಿತ್ತು? ''ತೂರಿ ಬಾ ಜಾರಿ ಬಾ... ಮುಗಿಲ ಸಾರವೇ ಬಾ ಬಾ...'' ಎಂದ ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರು ''ತೂರಿ ಬಾ ಜಾರಿ ಬಾ... ಮೂಗಿನ ಸಾರವೇ ಬಾ ಬಾ'' ಎಂದು ಬರೆಯುತ್ತಿದ್ದರು; ''ಧಾರಾಕಾರ ಸುರಿಯುತ್ತಿರುವ ಮೂಗ ನೋಡಿದರೆ ನೆನಪಾಗುವುದು ಜೋಗ...'' ಎಂದ ಡುಂಡಿರಾಜರು ಮೂಗಿನ ಹೊಳ್ಳೆಗಳಲ್ಲಿ ತೋರುಬೆರಳೆಂಬ ಜೆಸಿಬಿಯಿಂದ ಗಣಿಗಾರಿಕೆ ನಡೆವುದನ್ನು ಕಂಡರೆ ಜೋಗದ ಬದಲಿಗೆ ಕೋಲಾರ, ಕುದುರೆಮುಖ, ಬಳ್ಳಾರಿಗಳನ್ನು ನೆನಪಿಸಿಕೊಳ್ಳುತ್ತಿದ್ದರು; ಇನ್ನು ಕುವೆಂಪು ಏನಾದರೂ ಈ ಸಬ್ಜೆಕ್ಟ್ ಬಗ್ಗೆ ಹಳಗನ್ನಡದಲ್ಲಿ ನಾಟಕ ಬರೆದಿದ್ದರೆ ಅದಕ್ಕೆ 'ಬೆರಳ್‌ಗೆ ಕೊರಳ್' ಎನ್ನುವ ಬದಲು 'ಮೂಗಿಗೆ ಬೆರಳ್' ಎಂದೇ ಹೆಸರಿಡುತ್ತಿದ್ದರೇನೊ!

ಅಂತೂ ಮೂಗಿನಲ್ಲಿ ಬೆರಳು ತೂರಿಸುವ ವಿಷಯದ ಮೇಲೂ ಹೀಗೊಂದು ಹರಟೆ ಹೊಸೆಯಬಹುದೇ ಎಂದು ನೀವೀಗ ಮೂಗಿನ ಮೇಲೆ (ಒಳಗೆ ಅಲ್ಲ!) ಬೆರಳಿಟ್ಟಿರಾ?

ಸಂಸ್ಕೃತಕ್ಕೂ, ಸಂತನ ಸಾಧನೆಗೂ ಸಂದ ಜ್ಞಾನಪೀಠ



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com
vinayakavbhat@autoaxle.com

ಮೇ 16, 2025ರಂದು ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆದ ಸಮಾರಂಭದಲ್ಲಿ, ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಂಸ್ಕೃತ ಭಾಷೆಯ ಶ್ರೇಷ್ಠ ವಿದ್ವಾಂಸ, ರಾಮಾನಂದ ಪರಂಪರೆಯ ಜಗದ್ಗುರು, ಸ್ವಾಮಿ ರಾಮಭದ್ರಾಚಾರ್ಯ ಅವರಿಗೆ ಸಮಗ್ರ ಸಂಸ್ಕೃತ ಸಾಹಿತ್ಯಕ್ಕೆ ಅವರು ನೀಡಿದ ಕೊಡುಗೆಯನ್ನು ಗುರುತಿಸಿ, 58ನೇ ಜ್ಞಾನಪೀಠ ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ರಾಷ್ಟ್ರಪತಿಗಳು, ''ರಾಮಭದ್ರಾಚಾರ್ಯಜಿ ಅವರು ಶ್ರೇಷ್ಠತೆಗೆ ಸ್ಫೂರ್ತಿದಾಯಕ ಉದಾಹರಣೆಯಾಗಿದ್ದಾರೆ. ಅವರು ದೈಹಿಕವಾಗಿ ಅಶಕ್ತರಾಗಿದ್ದರೂ, ತಮ್ಮ ದೈವಿಕ ದೃಷ್ಟಿಯಿಂದ ಸಾಹಿತ್ಯ ಮತ್ತು ಸಮಾಜಕ್ಕೆ ಅಸಾಧಾರಣ ಸೇವೆ ಸಲ್ಲಿಸಿದ್ದಾರೆ'' ಎಂದರು. ದೇವಭಾಷೆ ಸಂಸ್ಕೃತಕ್ಕೆ 2006ರಲ್ಲಿ ಮೊದಲಬಾರಿ ಈ ಪ್ರಶಸ್ತಿಯ ಗೌರವ ಸಂದಿತ್ತಾದರೂ, ಶುದ್ಧ ಸನಾತನಿ ಸನ್ಯಾಸಿಯೊಬ್ಬರಿಗೆ ಜ್ಞಾನಪೀಠ ದೊರಕಿದ್ದು ಇದೇ ಮೊದಲಿರಬೇಕು. ರಾಮಭದ್ರಾಚಾರ್ಯರಿಗೆ 2015ರಲ್ಲಿ ಭಾರತದ 2ನೇ ಅತ್ಯುನ್ನತ ನಾಗರಿಕ ಗೌರವವಾದ ಪದ್ಮವಿಭೂಷಣ ಪ್ರಶಸ್ತಿಯನ್ನು ಮತ್ತು 2021ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಫೆಲೋಶಿಪ್ ಅನ್ನು ನೀಡಲಾಗಿತ್ತು ಎಂಬುದನ್ನಿಲ್ಲಿ ಸ್ಮರಿಸಬಹುದು.

''ಅರೆ! ಜಾತ್ಯತೀತ ರಾಷ್ಟ್ರದಲ್ಲಿ ಕಾವಿಧಾರಿಯೊಬ್ಬರಿಗೆ ರಾಷ್ಟ್ರಮಟ್ಟದ ಪ್ರತಿಷ್ಠಿತ ಗೌರವವನ್ನು ಕೊಡಮಾಡುವುದು ಅಂದರೇನು? ಬೇರೆ ಯಾರೂ ಸಿಗಲಿಲ್ಲವಾ? ಇದು ಹಿಂದೂಗಳ ಓಲೈಕೆಯಲ್ಲದೆ ಮತ್ತೇನು? ಹೇಗಿದ್ದರೂ ಕೇಂದ್ರದಲ್ಲಿ ಬಿಜೆಪಿ ಸರಕಾರವಿದೆ ಮತ್ತು ರಾಮಭದ್ರಾಚಾರ್ಯರು ಪ್ರಧಾನಿ ಮೋದಿಯವರಿಗೆ ಅತ್ಯಾಪ್ತರು ಕೂಡ. ಅಷ್ಟೇ ಅಲ್ಲದೆ, ಇವರು ವಿಶ್ವ ಹಿಂದೂ ಪರಿಷತ್‌ನೊಂದಿಗೆ ನಿಕಟ ಸಂಪರ್ಕ ಹೊಂದಿರುವವರು ಮತ್ತು ರಾಮಮಂದಿರದ ಹೋರಾಟದಲ್ಲಿ ನಿರ್ಣಾಯಕ ಪಾತ್ರ ವಹಿಸಿರುವವರು. ಇಷ್ಟೆಲ್ಲಾ ಇದ್ದಮೇಲೆ ಕೇಳಬೇಕೇ? ಮೋದಿಯವರೇ ಇವರಿಗೆ ಪ್ರಶಸ್ತಿ ಸಿಗುವಂತೆ ಮಾಡಿದ್ದು'' ಎಂದೆಲ್ಲಾ ಇಷ್ಟೊತ್ತಿಗೆ ಎಡಚರು ಅರಚಲು ಶುರುಮಾಡಬೇಕಿತ್ತು. ಆದರೆ ಯಾಕೋ ಎಲ್ಲರೂ ಸುಮ್ಮನಿದ್ದಾರಪ್ಪ! ನನ್ನ ಪ್ರಕಾರ, ಸ್ವಾಮಿ ರಾಮಭದ್ರಾಚಾರ್ಯರ ಯೋಗ್ಯತೆ ಮತ್ತು ಸಾಹಿತ್ಯಕ್ಕೆ ಅವರು ನೀಡಿದ ಯೋಗದಾನಗಳು ಇವರುಗಳ ಬಾಯಿ ಮುಚ್ಚಿಸಿರಲಿಕ್ಕೆ ಸಾಕು.

ಇನ್ನೊಂದು ವಿಷಯ ಹೇಳಬೇಕು, ಈ ಜ್ಞಾನಪೀಠ ಪ್ರಶಸ್ತಿಯನ್ನು ಕೇಂದ್ರ ಸರಕಾರ ಅಥವಾ ಅದರ ಅಂಗಸಂಸ್ಥೆಗಳು ನೀಡುತ್ತವೆ ಎಂಬ ತಪ್ಪು ಕಲ್ಪನೆಯೂ ಜನರಲ್ಲಿ ವ್ಯಾಪಕವಾಗಿದೆ. ಆದರೆ ವಾಸ್ತವವೇ ಬೇರೆ. ರಾಷ್ಟ್ರಪತಿಗಳು ನೀಡುತ್ತಾರಾದರೂ, ಈ ಪ್ರಶಸ್ತಿಯನ್ನು ಕೇಂದ್ರ ಸರಕಾರದಿಂದ ನೀಡುವುದಲ್ಲ; ಅದು 'ಜ್ಞಾನಪೀಠ ಟ್ರಸ್ಟ್' ಎಂಬ ಖಾಸಗಿ ಸಂಸ್ಥೆಯಿಂದ ಕೊಡಲ್ಪಡುತ್ತದೆ. ಭಾರತೀಯ ಜ್ಞಾನಪೀಠ, ಒಂದು ಸಂಸ್ಥೆಯಾಗಿ ಸ್ಥಾಪನೆಯಾಗಿದ್ದು 1944ರಲ್ಲಿ. ಶಾಂತಿ ಪ್ರಸಾದ್ ಜೈನ್ ಅವರು ಇದರ ಸ್ಥಾಪಕರು. ಅವರ ಕುಟುಂಬದವರೇ ಈಗಲೂ ಈ ವಿಶ್ವಸ್ಥ ಮಂಡಲಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಭಾರತೀಯ ಭಾಷೆಗಳಲ್ಲಿ ರಚಿತವಾಗಿರುವ ಅತ್ಯುತ್ಕೃಷ್ಟ ಸಾಹಿತ್ಯ ಕೃತಿಗಳಿಗೆ ಸಲ್ಲುವ ಗೌರವ 'ಜ್ಞಾನಪೀಠ' ಪ್ರಶಸ್ತಿಯಾಗಿದ್ದು, 1982ರಿಂದ ಇದನ್ನು ಒಂದು ನಿರ್ದಿಷ್ಟ ಕೃತಿಯ ಬದಲಿಗೆ, ಯಾವುದಾದರೂ ಭಾರತೀಯ ಭಾಷಾ ಸಾಹಿತ್ಯಕ್ಕೆ ನೀಡಿದ ಸಮಗ್ರ ಕೊಡುಗೆಯನ್ನು ಗುರುತಿಸಿ ನೀಡಲಾಗುತ್ತಿದೆ. ಈವರೆಗೆ ಹಿಂದಿ ಭಾಷೆಯ ಸಾಹಿತಿಗಳು 11 ಬಾರಿ ಈ ಪ್ರಶಸ್ತಿ ಪಡೆದು, ಹಿಂದಿಯನ್ನು ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿ ಪಡೆದ ಭಾಷೆಯನ್ನಾಗಿ ಮಾಡಿದ್ದರೆ, ನಮ್ಮ ಕನ್ನಡ ಭಾಷೆಯು 8 ಬಾರಿ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡು 2ನೇ ಸ್ಥಾನದಲ್ಲಿದೆ.

ಪ್ರಸ್ತುತ, ಪ್ರಶಸ್ತಿ ವಿಜೇತ ಜಗದ್ಗುರು ರಾಮಭದ್ರಾಚಾರ್ಯರ ಕುರಿತು ಸ್ವಲ್ಪ ಹೇಳುವುದಾದರೆ, ಇವರು ಚಿತ್ರಕೂಟದಲ್ಲಿರುವ 'ತುಳಸಿಪೀಠ' ಧಾರ್ಮಿಕ ಮತ್ತು ಸಾಮಾಜಿಕ ಸೇವಾಸಂಸ್ಥೆಯ ಸ್ಥಾಪಕರು. ಜತೆಗೆ, ಅಂಗವಿಕಲ ವಿಶ್ವವಿದ್ಯಾಲಯದ ಸ್ಥಾಪಕರು ಮತ್ತು ಆಜೀವ ಕುಲಪತಿಗಳೂ ಹೌದು. ಇವರದು ಬಹು ಆಯಾಮದ ವ್ಯಕ್ತಿತ್ವ. ಆಧ್ಯಾತ್ಮಿಕ ವಿಭೂತಿ ಪುರುಷ, ಶಿಕ್ಷಣತಜ್ಞ, ಸಂಸ್ಕೃತ ಭಾಷೆಯ ಶ್ರೇಷ್ಠ

ವಿದ್ವಾಂಸ, ಕವಿ, ಲೇಖಕ, ವ್ಯಾಖ್ಯಾನಕಾರ, ತತ್ವಜ್ಞಾನಿ, ಸಂಗೀತ ಸಂಯೋಜಕ, ಗಾಯಕ, ನಾಟಕಕಾರ, ಕಥಾಕೀರ್ತನಕಾರ ಹೀಗೆ ನಾನಾ ಮಗ್ಗಲುಗಳಲ್ಲಿನ ಅಪರೂಪದ ಸಾಧಕರಾಗಿರುವ ಇವರು 22 ಭಾಷೆಗಳಲ್ಲಿ ಸಲೀಸಾಗಿ ಮಾತನಾಡಬಲ್ಲವರು. ಭೋಜ್‌ಪುರಿ, ಸಂಸ್ಕೃತ, ಹಿಂದಿ ಮತ್ತಿತರ ಭಾಷೆಗಳಲ್ಲಿ ಆಶುಕವಿತ್ವ ಶಕ್ತಿ ಇರುವವರು. ಇವರು ಇಲ್ಲಿಯವರೆಗೆ 240ಕ್ಕೂ ಹೆಚ್ಚು ಪುಸ್ತಕಗಳನ್ನೂ, 50ಕ್ಕೂ ಹೆಚ್ಚು ಪ್ರಬಂಧಗಳನ್ನೂ ಬರೆದಿದ್ದಾರೆ. ರಾಮಚರಿತ ಮಾನಸ ಮತ್ತು ಹನುಮಾನ್ ಚಾಲೀಸಾದ ವ್ಯಾಖ್ಯಾನಗಳು, ಅಷ್ಟಾಧ್ಯಾಯಿ ಸಂಸ್ಕೃತ ವ್ಯಾಖ್ಯಾನ ಮತ್ತು ಪ್ರಸ್ಥಾನತ್ರಯೀ ಗ್ರಂಥಗಳ ಸಂಸ್ಕೃತ ವ್ಯಾಖ್ಯಾನಗಳು ಇವರ ಕೃತಿಗಳಲ್ಲಿ ಸೇರಿವೆ.

1950ರ ಮಕರ ಸಂಕ್ರಾಂತಿಯ ದಿನದಂದು, ಉತ್ತರ ಪ್ರದೇಶದ ಜೌನ್‌ಪುರ ಜಿಲ್ಲೆಯ ಗ್ರಾಮವೊಂದರಲ್ಲಿ ರಾಜದೇವ್ ಮಿಶ್ರಾ ಮತ್ತು ಶಚಿದೇವಿ ದಂಪತಿಗೆ ಜನಿಸಿದ ಆಚಾರ್ಯರ ಜನ್ಮನಾಮ ಗಿರಿಧರ. ಇವರ ಆರಂಭಿಕ ಶಿಕ್ಷಣವು ಅಜ್ಜನಿಂದಲೇ ಆಯಿತು. ರಾಮಾಯಣ ಮತ್ತು ಮಹಾಭಾರತದ ವಿವಿಧ ಪ್ರಸಂಗಗಳನ್ನು ಅಜ್ಜ ಇವರಿಗೆ ನಿತ್ಯ ಹೇಳುತ್ತಿದ್ದರು. ಗಿರಿಧರರು 3ನೇ ವಯಸ್ಸಿನಲ್ಲೇ ಅವಧಿ ಭಾಷೆಯಲ್ಲಿ ತಮ್ಮ ಮೊದಲ ಕಾವ್ಯವನ್ನು ರಚಿಸಿ ಅಚ್ಚರಿ ಮೂಡಿಸಿದ್ದರು. ಕೃಷ್ಣನ ಸಾಕುತಾಯಿ ಯಶೋದೆಯು, ಕೃಷ್ಣನನ್ನು ನೋಯಿಸಿದ್ದಕ್ಕಾಗಿ ಗೋಪಿಯ ಜತೆ ಜಗಳವಾಡಿದ ಸಂದರ್ಭವನ್ನು ಆಚಾರ್ಯರು ಈ ಕಾವ್ಯದಲ್ಲಿ ವರ್ಣಿಸಿದ್ದರು. 5ನೇ ವಯಸ್ಸಿನಲ್ಲಿ ತನ್ನ ನೆರೆಯವರ ಸಹಾಯದಿಂದ ಸಂಪೂರ್ಣ ಭಗವದ್ಗೀತೆಯನ್ನು ಅಧ್ಯಾಯ ಮತ್ತು ಶ್ಲೋಕಸಂಖ್ಯೆಗಳೊಂದಿಗೆ 15 ದಿನಗಳಲ್ಲಿ ಕಂಠಪಾಠ ಮಾಡಿದ್ದ ಗಿರಿಧರರು, 7ನೇ ವಯಸ್ಸಿನಲ್ಲಿ ಅಜ್ಜನ ಸಹಾಯದಿಂದ 60 ದಿನಗಳಲ್ಲಿ, ಸುಮಾರು 10,000 ಪದ್ಯಗಳನ್ನೊಳಗೊಂಡ ರಾಮಚರಿತ ಮಾನಸವನ್ನು ಅಧ್ಯಾಯ ಮತ್ತು ಶ್ಲೋಕ ಸಂಖ್ಯೆಯೊಂದಿಗೆ ಕಂಠಪಾಠ ಮಾಡಿದ್ದರು. ನಂತರ, ವೇದಗಳು, ಉಪನಿಷತ್ತುಗಳು, ಸಂಸ್ಕೃತ ವ್ಯಾಕರಣದ ಕೃತಿಗಳು, ಭಾಗವತ ಹಾಗೂ ತುಳಸಿದಾಸರ ಎಲ್ಲ ಕೃತಿಗಳನ್ನು ಕಂಠಪಾಠ ಮಾಡಿ ಮುಗಿಸಿದ್ದರು.

17 ವರ್ಷದವರೆಗೆ ಗಿರಿಧರರು ಯಾವುದೇ ಔಪಚಾರಿಕ ಶಾಲಾ ಶಿಕ್ಷಣವನ್ನು ಪಡೆಯದಿದ್ದರೂ, ಅನೇಕ ಪ್ರಮುಖ ಸಾಹಿತ್ಯ ಕೃತಿಗಳನ್ನು ಬೇರೆಯವರಿಂದ ಕೇಳುವ ಮೂಲಕ ಕಲಿತಿದ್ದರು. ಅವರು ಕಥಾವಾಚಕ ಆಗಲಿ ಎಂದು ಕುಟುಂಬವು ಬಯಸಿದ್ದರೆ, ಅಧ್ಯಯನವನ್ನು ಮುಂದುವರಿಸುವುದು ಗಿರಿಧರರ ಆಶಯವಾಗಿತ್ತು. ಅದರಂತೆ, ಸಂಸ್ಕೃತ ವ್ಯಾಕರಣ, ಹಿಂದಿ, ಇಂಗ್ಲಿಷ್ ಮುಂತಾದ ವಿಷಯಗಳ ಅಧ್ಯಯನಕ್ಕೆಂದು ತಂದೆಯವರು ಗಿರಿಧರರನ್ನು ಹತ್ತಿರದ ಜೌನ್‌ಪುರದ ಸಂಸ್ಕೃತ ಕಾಲೇಜಿಗೆ ಸೇರಿಸಿದರು. 'ಏಕಪಾಠೀ'ಯಾಗಿದ್ದ, ಅಂದರೆ ವಿಷಯವನ್ನು ಒಮ್ಮೆ ಕೇಳುವ ಮೂಲಕ ಕಂಠಪಾಠ ಮಾಡುವ ಸಾಮರ್ಥ್ಯ ಹೊಂದಿದ್ದ ಆಚಾರ್ಯರು ಕೇವಲ 3 ತಿಂಗಳಲ್ಲಿ ವರದರಾಜನ ಸಂಪೂರ್ಣ ಲಘುಸಿದ್ಧಾಂತ ಕೌಮುದಿಯನ್ನು ಕಂಠಪಾಠ ಮಾಡಿ ಕರಗತ ಮಾಡಿಕೊಂಡರು. ನಂತರ, ಸಂಸ್ಕೃತ ಕಾಲೇಜಿನಲ್ಲಿ ಸಂಸ್ಕೃತ ಛಂದಸ್ಸಿನ ಕುರಿತಾದ 'ಚಂದ್ರಪ್ರಭಾ' ಎಂಬ ಕೃತಿಯನ್ನು ಅಧ್ಯಯನ ಮಾಡುವಾಗ, ಛಂದಸ್ಸಿನ 8 ಗಣಗಳನ್ನು ಕಲಿತ ಮರುದಿನವೇ ಭುಜಂಗಪ್ರಯಾತ ಛಂದಸ್ಸಿನಲ್ಲಿ ತಮ್ಮ ಮೊದಲ ಸಂಸ್ಕೃತ ಪದ್ಯವನ್ನು ರಚಿಸಿದ್ದರು.

1971ರಲ್ಲಿ ಗಿರಿಧರರು ವ್ಯಾಕರಣದಲ್ಲಿನ ಉನ್ನತ ಅಧ್ಯಯನಕ್ಕಾಗಿ ವಾರಾಣಸಿಯ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಸೇರಿಕೊಂಡರು ಮತ್ತು ಪದವಿಯ ಅಂತಿಮ ಪರೀಕ್ಷೆಯಲ್ಲಿ ಅಗ್ರಸ್ಥಾನ ಪಡೆದರು. ಸ್ನಾತಕೋತ್ತರ ಪದವಿಯನ್ನು ಪಡೆಯುತ್ತಿರುವಾಗ ನವದೆಹಲಿಯಲ್ಲಿ ನಡೆಯುತ್ತಿದ್ದ ಅಖಿಲ ಭಾರತ ಸಂಸ್ಕೃತ ಸಮ್ಮೇಳನದಲ್ಲಿ ಭಾಗವಹಿಸಿ, ವ್ಯಾಕರಣ, ಸಾಂಖ್ಯ, ನ್ಯಾಯ, ವೇದಾಂತ ಮತ್ತು ಸಂಸ್ಕೃತ ಅಂತ್ಯಾಕ್ಷರಿ ವಿಭಾಗಗಳಲ್ಲಿ 5 ಚಿನ್ನದ ಪದಕಗಳನ್ನು ಗೆದ್ದರು. ಮುಂದೆ ವ್ಯಾಕರಣದಲ್ಲಿ ಅಂತಿಮ ಆಚಾರ್ಯ ಪರೀಕ್ಷೆಗಳಲ್ಲೂ ಅಗ್ರಸ್ಥಾನ ಪಡೆದು, 7 ಚಿನ್ನದ ಪದಕಗಳು ಮತ್ತು ಕುಲಪತಿಯ ಚಿನ್ನದ ಪದಕವನ್ನು ಗೆದ್ದರು. ಗಿರಿಧರರು ವ್ಯಾಕರಣ ವಿಷಯದಲ್ಲಿ ಮಾತ್ರ ಸ್ನಾತಕೋತ್ತರ ಪದವಿಗೆ ದಾಖಲಾಗಿದ್ದರೂ, ವಿಶ್ವವಿದ್ಯಾಲಯದಲ್ಲಿ ಕಲಿತ ಎಲ್ಲಾ ವಿಷಯಗಳಲ್ಲೂ 'ಆಚಾರ್ಯ' ಎಂದು ಘೋಷಿಸಲ್ಪಟ್ಟಿದ್ದು ಅವರ ಪಾಂಡಿತ್ಯಕ್ಕೆ ಹಿಡಿದ ಕೈಗನ್ನಡಿ.

ಸ್ನಾತಕೋತ್ತರ ಪದವಿಯ ನಂತರ ಗಿರಿಧರರು ಅದೇ ಸಂಸ್ಥೆಯಲ್ಲಿ ಸಂಸ್ಕೃತ ವ್ಯಾಕರಣದಲ್ಲಿ 'ವಿದ್ಯಾವಾರಿಧಿ' ಪದವಿಯನ್ನು ಪೂರ್ಣಗೊಳಿಸಿದರು. ನಂತರ, ಯುಜಿಸಿ ಅವರಿಗೆ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದ ವ್ಯಾಕರಣ ವಿಭಾಗದ ಮುಖ್ಯಸ್ಥ ಸ್ಥಾನಕ್ಕೆ ಆಹ್ವಾನಿಸಿದರೂ ಗಿರಿಧರರು ಅದನ್ನು ಒಪ್ಪಿಕೊಳ್ಳದೆ, ಸಾಹಿತ್ಯ, ಧರ್ಮ, ಸಮಾಜ ಮತ್ತು ಅಂಗವಿಕಲರ ಸೇವೆಗೆ ಬದುಕನ್ನು ಮುಡಿಪಾಗಿಡಲು ನಿರ್ಧರಿಸಿದರು. ಮುಂದೆ, ಕೇವಲ 13 ದಿನಗಳಲ್ಲಿ ರಚಿಸಿದ ಪಾಣಿನಿ ನ್ಯಾಯಶಾಸ್ತ್ರ ಪ್ರಬಂಧಕ್ಕಾಗಿ ಅವರಿಗೆ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯವು 'ವಾಚಸ್ಪತಿ' ಪದವಿಯನ್ನು ನೀಡಿ ಗೌರವಿಸಿತು. ಆಚಾರ್ಯರು ಬ್ರಹ್ಮಸೂತ್ರ, ಭಗವದ್ಗೀತೆ ಮತ್ತು 11 ಉಪನಿಷತ್ತುಗಳ ಮೇಲೆ 'ಶ್ರೀರಾಘವಕೃಪಾ ಭಾಷ್ಯಂ' ಎಂಬ ಶೀರ್ಷಿಕೆಯಲ್ಲಿ ಸಂಸ್ಕೃತದಲ್ಲಿ ವ್ಯಾಖ್ಯಾನಗಳನ್ನು ಮಾಡಿ ಈ ಕಾಲದಲ್ಲೂ ಪ್ರಸ್ಥಾನತ್ರಯಿಯ ಮೇಲೆ ಭಾಷ್ಯ ಬರೆಯಬಹುದು ಎಂಬುದನ್ನು ತೋರಿಸಿಕೊಟ್ಟರು. ಅವರ ಸಾಹಿತ್ಯವು ಹಲವಾರು ನದಿಗಳು ಏಕಕಾಲದಲ್ಲಿ ಪ್ರವಹಿಸುವಂತೆ, ಶಿವ-ಪಾರ್ವತಿಯರ ತಾಂಡವ ಮತ್ತು ಲಾಸ್ಯಗಳನ್ನು ಆನಂದಿಸಿದಂತೆ; ಇವರ 'ಶ್ರೀ ಭಾರ್ಗವ ರಾಘವೀಯಂ' ಕಾವ್ಯವು, ಭಾರವಿಯ 'ಕಿರಾತಾರ್ಜುನೀಯಂ', ಶ್ರೀಹರ್ಷನ 'ನೈಷಧೀಯ ಚರಿತೆ' ಮತ್ತು ಮಾಘನ 'ಶಿಶುಪಾಲವಧೆ' ಮುಂತಾದ ಸಂಸ್ಕೃತ ಮಹಾಕಾವ್ಯಗಳ ಸಾಲಿನಲ್ಲಿ ನಿಲ್ಲುವಂಥದ್ದು ಎನ್ನುವವರಿದ್ದಾರೆ.

ಒಬ್ಬ ಸದೃಢ ಮನುಷ್ಯನಿಗೇ, ಆಚಾರ್ಯರು ಮಾಡಿದಷ್ಟು ಅಧ್ಯಯನವನ್ನು, ಸಾಹಿತ್ಯ ಸೃಜನೆಯನ್ನು ಕನಸಿನಲ್ಲೂ ಕೈಗೊಳ್ಳುವುದು ಸಾಧ್ಯವಿಲ್ಲವೇನೋ. ಆದರೆ, ಆಚಾರ್ಯರು ದೃಷ್ಟಿಯ ಸಹಾಯವಿಲ್ಲದೆಯೇ ಈ ಎಲ್ಲ ಸಾಧನೆಗಳನ್ನೂ ಮಾಡಿದ್ದಾರೆಂದರೆ ಅದು ಅಚ್ಚರಿಯೇ. ಹೌದು, ಆಚಾರ್ಯರು ಹುಟ್ಟಿ 2 ತಿಂಗಳಾಗುವಷ್ಟರಲ್ಲಿ ಯಾತನಾಮಯ 'ಟ್ರಾಕೋಮಾ' ಸೋಂಕಿಗೆ ತುತ್ತಾಗಿ ಶಾಶ್ವತವಾಗಿ ದೃಷ್ಟಿಯನ್ನು ಕಳೆದುಕೊಂಡರು. ಚಿಕಿತ್ಸೆಗೆಂದು ಅನೇಕ ವೈದ್ಯರನ್ನು ಸಂಪರ್ಕಿಸಿದರೂ ಪ್ರಯೋಜನವಾಗಲಿಲ್ಲ. ಅಂದಿನಿಂದ ಆಚಾರ್ಯರು ಕತ್ತಲೆಯ ಬದುಕನ್ನು ಬದುಕಿದ್ದಾರೆ, ಬಾಹ್ಯದೃಷ್ಟಿಯ ನೆರವಿಲ್ಲದೆಯೇ ಅಂತರ್‌ದೃಷ್ಟಿಯಿಂದಲೇ ಎಲ್ಲವನ್ನೂ ಸಾಧಿಸಿದ್ದಾರೆ. ಅಂಧರು ಬಳಸುವ 'ಬ್ರೈಲ್' ಲಿಪಿಯನ್ನು ಬಳಸಲು ಇವರು ಒಪ್ಪದ ಕಾರಣ, ಓದಲು ಅಥವಾ ಬರೆಯಲು ಇವರಿಗೆ ಇಂದಿಗೂ ಸಾಧ್ಯವಿಲ್ಲ; ಶ್ರವಣದಿಂದಷ್ಟೇ ಕಲಿಕೆಯಾಗಬೇಕು ಮತ್ತು ಬೇರೆಯವರಿಗೆ ಬಾಯಿಂದ ಹೇಳುವ ಮೂಲಕವಷ್ಟೇ ಇವರು ತಮ್ಮ ಸಾಹಿತ್ಯವನ್ನು ಸೃಷ್ಟಿಸಬೇಕು.

ಆಚಾರ್ಯರ ಪ್ರತಿಭೆ ಮತ್ತು ಸಾಮರ್ಥ್ಯಗಳಿಂದ ಪ್ರಭಾವಿತರಾಗಿದ್ದ ಇಂದಿರಾ ಗಾಂಧಿಯವರು ಪ್ರಧಾನಿಯಾಗಿದ್ದಾಗ ಒಮ್ಮೆ ಇವರನ್ನು ದೆಹಲಿಯಲ್ಲಿ ಭೇಟಿಯಾದಾಗ, ಇವರ ಕಣ್ಣುಗಳ ಚಿಕಿತ್ಸೆಗೆಂದು ಸ್ವಂತ ಖರ್ಚಿನಲ್ಲಿ ಅಮೆರಿಕಕ್ಕೆ ಕಳುಹಿಸುವುದಾಗಿ ಪ್ರಸ್ತಾಪಿಸಿದರು. ಆದರೆ ಇದನ್ನು ನಯವಾಗಿ ನಿರಾಕರಿಸಿದ ಆಚಾರ್ಯರು, 'ಕಿಂ ದೃಷ್ಟವ್ಯಂ ಪತಿತಜಗತಿ ವ್ಯಾಪ್ತದೋಷೇಯಪ್ಯಸತ್ಯೇ....' ಎಂಬ ಸಂಸ್ಕೃತ ಶ್ಲೋಕದ ಮೂಲಕ ಇಂದಿರಾರಿಗೆ ಉತ್ತರಿಸಿದರು. ಅಂದರೆ, 'ಸುಳ್ಳು ಮತ್ತು ದುರ್ಗುಣಗಳಿಂದ ತುಂಬಿದ ಈ ಪತಿತಲೋಕದಲ್ಲಿ ನಾನು ನೋಡಲು ಆಸೆಪಡುವುದಿಲ್ಲ. ನಾನು ಶ್ರೀರಾಮನನ್ನು ಮಾತ್ರ ನೋಡಲಿಚ್ಛಿಸುವವನು. ನೋಡಬೇಕಾದುದನ್ನು ಒಳದೃಷ್ಟಿಯಿಂದ ನಿತ್ಯ ನೋಡುತ್ತಿರುವ ನನಗೆ ಈ ಬಾಹ್ಯದೃಷ್ಟಿಯಿಂದ ಏನಾಗಬೇಕಿದೆ' ಎಂದಿದ್ದರಂತೆ ಆಚಾರ್ಯರು.

ಆಚಾರ್ಯರ ಧೋರಣೆಯನ್ನು ಪುಷ್ಟೀಕರಿಸುವ, ಆಚಾರ್ಯರೂ ಆಗಾಗ ಹೇಳುವ ಸಂಸ್ಕೃತದ ಪ್ರಸಿದ್ಧ ಮಾತಿದು- 'ಅನೇಕಸಂಶಯೋಚ್ಛೇದಿ, ಪರೋಕ್ಷಾರ್ಥಸ್ಯ ದರ್ಶಕಮ್ । ಸರ್ವಸ್ಯ ಲೋಚನಂ ಶಾಸ್ತ್ರಂ, ಯಸ್ಯ ನಾಸ್ತ್ಯಂಧ ಏವ ಸಃ'- ಅಂದರೆ, ಸಕಲ ಸಂಶಯಗಳನ್ನು ಪರಿಹರಿಸಿ ಪರೋಕ್ಷ ಜ್ಞಾನದ ಅರಿವನ್ನು ಮೂಡಿಸುವ ಸನಾತನ ಶಾಸ್ತ್ರವಿಜ್ಞಾನವೇ ಮನುಷ್ಯನಿಗೆ ನಿಜವಾದ ಕಣ್ಣುಗಳು; ಯಾರಿಗೆ ಈ ಸನಾತನ ಶಾಸ್ತ್ರಜ್ಞಾನದ ಅರಿವಿಲ್ಲವೋ, ಅಂಥವರು ಕಣ್ಣಿದ್ದರೂ ಅಂಧರು ಎಂದರ್ಥ. ಯೋಗ್ಯತಾಸಂಪನ್ನರು ಪೀಠದಲ್ಲಿ ಕುಳಿತಾಗ ಆ ಪೀಠಕ್ಕೇ ಗೌರವ ದೊರೆಯುವಂತೆ, ಶ್ರೀ ರಾಮಭದ್ರಾಚಾರ್ಯರಂಥ ನಿಜಾರ್ಥದ ಜ್ಞಾನಿಗಳಿಗೆ ಕೊಡಮಾಡಿದ್ದರಿಂದ 'ಜ್ಞಾನಪೀಠ' ಪ್ರಶಸ್ತಿಗಿದ್ದ ಘನತೆ-ಗೌರವಗಳು ನೂರ್ಮಡಿಯಾದಂತಾಯಿತು.

ಕಳ್ಳಬೆಕ್ಕಿನ ಕಥನದಲ್ಲಿದೆಯೇ ಕಾವಿಯ ಕರಾಮತ್ತು?!

ರಸದೌತಣ
ಯಗಟಿ ರಘು ನಾಡಿಗ್
vveditoped@gmail.com
naadigru@gmail.com

ತಾವಿದ್ದ ಕಾರು ಮನೆಯ ಹತ್ತಿರವೇ ಬಂದಿದ್ದರೂ ಅವಧೂತರು ಕೆಲ ಕ್ಷಣದವರೆಗೆ ಅದರಿಂದ ಕೆಳಗಿಳಿಯಲಿಲ್ಲ. ಅವರ ಉಸಿರಾಟವು ವಾಡಿಕೆಯಂತಿರದೆ ತೀವ್ರಗತಿಯಲ್ಲಿದ್ದುದನ್ನು ಕಾರೊಳಗಿದ್ದ ಶಿಷ್ಯರು ಮತ್ತು ಚಾಲಕ ಗಮನಿಸಿದರು. ಅವಧೂತರ ದೇಹಭಾಷೆಯನ್ನು ಅರಿತಿದ್ದ ಅವರಿಗೆ, ಸದ್ಯದಲ್ಲೇ ಯಾರಿಗೋ ಗ್ರಹಚಾರ ವಕ್ಕರಿಸಿಕೊಂಡಿದೆ ಎಂಬುದು ಖಾತ್ರಿಯಾಗಿತ್ತು. ಆದರೆ ಅವಧೂತರ ದೃಷ್ಟಿಯು ತಮ್ಮ ಮನೆಯೆದುರು ನಿಂತಿದ್ದ ಆ ಕೇಸರಿ ಬಣ್ಣದ ಕಾರಿನಿಂದ ಆಚೀಚೆ ಕದಲದೆ ಸ್ಥಿರವಾಗಿತ್ತು. 'ಹಾಗಾದರೆ, ಮಠದ ಸ್ವಾಮೀಜಿಯ ಮೇಲೆ ಅವಧೂತರಿಗೆ ಕೋಪ ಬಂದಿದೆಯೇ? ವಾರಾಣಸಿಗೆ ತೆರಳುವಂತೆ ಅವಧೂತರು ಸೂಚಿಸಿದ್ದರ ಹೊರತಾಗಿಯೂ ಸ್ವಾಮೀಜಿ ಹೀಗೆ ಮನೆಗೆ ಬಂದಿದ್ದರ ಹಿಂದೆ ಏನಾದರೂ ಸಮೀಕರಣಗಳಿವೆಯೇ?' ಎಂದೆಲ್ಲಾ ಶಿಷ್ಯರು ಮನದಲ್ಲಿ ಲೆಕ್ಕಿಸುತ್ತಿದ್ದರು.

ಆದರೆ ಅದು ಕೆಲವೇ ಕ್ಷಣದವರೆಗಿನ ಒಂದು 'ಸ್ಥಿತ್ಯಂತರ' ಅಷ್ಟೇ! ಅವಧೂತರ ಮನದಲ್ಲಿ ಬೀಸುತ್ತಿದ್ದ ಬಿರುಗಾಳಿ ನಿಂತಿತು, ಸಾತ್ವಿಕ ಕೋಪಕ್ಕೆ ಒಡ್ಡಿಕೊಂಡಿದ್ದ ಅವರ ಮನೋಸಾಗರದ ಉಬ್ಬರ ಇಳಿಯಿತು. ಎರಡೂ ಕೈಗಳನ್ನು ಒಮ್ಮೆ ಪರಸ್ಪರ ತಿಕ್ಕಿಕೊಂಡು ಅದರ ಶಾಖವನ್ನು ಮುಖಕ್ಕೆ ಸವರಿಕೊಂಡ ಅವಧೂತರು, ಒಮ್ಮೆ ಲಘುವಾಗಿ ಗಂಟಲು ಸರಿಮಾಡಿಕೊಂಡರು. ಅದು ಕಾರಿನಿಂದ ಕೆಳಗಿಳಿಯುವುದಕ್ಕೆ ಅವರು ಸಜ್ಜಾಗಿದ್ದುದರ ಸೂಚಕ.

ಅಷ್ಟು ಹೊತ್ತಿಗೆ, ಅವಧೂತರು ಮರಳಿದ್ದು ಗೊತ್ತಾಗಿ ಮನೆಯೊಳಗಿಂದ ಒಂದಷ್ಟು ತಲೆಗಳು ಕಿಟಕಿಯಿಂದಾಚೆಗೆ ಹಣಕಿದವು. ಅವುಗಳಲ್ಲಿ ಮಠದ ಸ್ವಾಮೀಜಿಯ ತಲೆಯೂ ಸೇರಿತ್ತು. ಮನೆಯೊಳಗಿಂದ ಹೊರಬಂದ ಸ್ವಾಮೀಜಿ, ಅವಧೂತರೆಡೆಗೆ ಧಾವಿಸಿ ಕೈಮುಗಿದು ನಿಂತರು, ಏನೂ ಮಾತನಾಡದೆಯೇ ಅವರ ಕಂಗಳನ್ನೇ ನೋಡುತ್ತಾ ನಿಂತುಬಿಟ್ಟರು. ಎಡಗೈಯಲ್ಲಿ ಒಮ್ಮೆ ಗಡ್ಡವನ್ನು ನೀವಿಕೊಂಡ ಅವಧೂತರು, ''ಮಠದ ಸ್ವಾಮೀಜಿ ಬಂದಿದ್ದಾರೆ, ಪಾದಪೂಜೆಗೆ ಸಜ್ಜುಮಾಡ್ರಯ್ಯಾ...'' ಎಂದು ತಮ್ಮೊಂದಿಗಿದ್ದ ಶಿಷ್ಯರಿಗೆ ಆಜ್ಞಾಪಿಸಿದರು. ಶಿಷ್ಯರಿಗೋ ಅಯೋಮಯ. ಆದರೆ ಅವಧೂತರ ನಿಲುವು ಅಚಲವಾಗಿತ್ತು. ಕೆಲ ಕ್ಷಣದ ಹಿಂದೆ, ಮಠದ ಸ್ವಾಮೀಜಿಯ ಮೇಲೆ ಅವರಿಗೆ ಅಸಮಾಧಾನ ಮತ್ತು ಕೋಪ ಉಂಟಾಗಿದ್ದು ನಿಜ. ಆದರೆ, ಅದಕ್ಕಿಂತ ಮಿಗಿಲಾಗಿ ಅವರು 'ಮನೆಗೆ ಬಂದಿರುವ ಅತಿಥಿ' ಎಂಬ ದಿವ್ಯಪ್ರಜ್ಞೆಯು ಆ ಅಸಮಾಧಾನ ಮತ್ತು ಕೋಪವನ್ನು ಬದಿಗೆ ಸರಿಸಿತ್ತು. 'ಅತಿಥಿ ದೇವೋಭವ' ಎಂಬ ಆಶಯಕ್ಕೆ ಅವಧೂತರ ಹೃದಯವೈಶಾಲ್ಯವೂ ಸೇರಿಕೊಂಡಿದ್ದರ ಪರಿಣಾಮವದು. ಜತೆಗೆ, ಅವರು ಗುರುಪೀಠವೊಂದನ್ನು ಪ್ರತಿನಿಧಿಸುವ ಚೇತನವಾಗಿದ್ದುದರಿಂದ 'ಸ್ಥಾನಕ್ಕೆ ಸಲ್ಲಬೇಕಾದ ಮರ್ಯಾದೆ ಸಲ್ಲಬೇಕು' ಎಂಬ ಗ್ರಹಿಕೆಯು ಹೆಚ್ಚು ತೂಕವನ್ನು ತೂಗಿತ್ತು. ಹೀಗಾಗಿ ಸ್ವಾಮೀಜಿಯ ಪಾದಪೂಜೆಗೆ ಸಜ್ಜಾಗುವಂತೆ ಅವರು ಶಿಷ್ಯಗಣಕ್ಕೆ ಸೂಚಿಸಿದ್ದು. ಕೆಲ ಕ್ಷಣದ ಹಿಂದೆ ಬಿರುಗಾಳಿ ಮತ್ತು ಜ್ವಾಲಾಮುಖಿಯ ಪ್ರತಿರೂಪದಂತೆ ಕಂಡಿದ್ದ ಅವಧೂತರು ಈಗ, ತಂಗಾಳಿಯಾಗಿ ಮತ್ತು ನಂದಾದೀಪದ ದಿವ್ಯಕಾಂತಿಯಾಗಿ ಮಾರ್ಪಟ್ಟಿದ್ದರು. ಹೀಗಾಗಿ, ವಯಸ್ಸಿನಲ್ಲಿ ತಮಗಿಂತ ಸಾಕಷ್ಟು ಚಿಕ್ಕವರಾಗಿದ್ದರೂ ಸ್ವಾಮೀಜಿಯೆಡೆಗೆ ಗೌರವ ತೋರಿ, ಅವರ ಕೈಹಿಡಿದುಕೊಂಡು ಮನೆಯೊಳಗೆ ಕರೆತಂದರು.

ಆದರೆ, ನಖಶಿಖಾಂತವಾಗಿ ಆಂದೋಲನಕ್ಕೆ ಒಳಗಾಗಿದ್ದ ಸ್ವಾಮೀಜಿ ಈ ಆತಿಥ್ಯವನ್ನು ಸ್ವೀಕರಿಸುವ ಸ್ಥಿತಿಯಲ್ಲಿರಲಿಲ್ಲ. ಅವರ ಶರೀರ ಲಘುವಾಗಿ ಕಂಪಿಸುತ್ತಿತ್ತು, ಮಾತಾಡಲು ಹೊರಟರೆ ಕಂಠ ಗದ್ಗದಿತವಾಗಿತ್ತು. ಕಾವಿಯಂಥ 'ಪರಮ-ಪವಿತ್ರ' ಸಂಕೇತವನ್ನು ಧರಿಸಿಯೂ ತಮ್ಮ ಕಡೆಯಿಂದ ಆಗಿರುವ ಅಪಚಾರವನ್ನು ಮನಗಂಡು ಅವರೊಳಗೆ ಸ್ಫುರಿಸಿದ್ದ ತಪ್ಪಿತಸ್ಥ ಭಾವನೆಯ ಫಲಶ್ರುತಿ ಅದು. ಮಾತಿಗೆ ದೇಹ ಮತ್ತು ಮನಸ್ಸು ಸಹಕರಿಸದಿದ್ದರೂ, ಇದ್ದಬದ್ದ ಶಕ್ತಿಯನ್ನೆಲ್ಲಾ ಒಗ್ಗೂಡಿಸಿಕೊಂಡ ಸ್ವಾಮೀಜಿ, ''ಬುದ್ಧೀ, ನಿಮ್ಮ ಕಾಲಿಗೆ ಬೀಳ್ತೀನಿ. ದಯವಿಟ್ಟು ನನಗೆ ಪಾದಪೂಜೆ ಮಾಡಿಸಬೇಡಿ. ನಿಮ್ಮೊಂದಿಗೆ ಏಕಾಂತದಲ್ಲಿ ಒಂದಿಷ್ಟು ಮಾತಾಡುವುದಿದೆ. ಆ ಸೌಭಾಗ್ಯವನ್ನಷ್ಟೇ ನನಗೆ ದೊರಕಿಸಿಕೊಟ್ಟರೆ ಸಾಕು'' ಎಂದು ಅವಧೂತರಿಗೆ ಮಾತ್ರವೇ ಕೇಳಿಸುವಷ್ಟು ಮೆಲುದನಿಯಲ್ಲಿ ಹೇಳುತ್ತಾ ಮತ್ತೊಮ್ಮೆ ಕೈಮುಗಿದರು.

ಭಾಗ-5

ಅಧ್ಯಾತ್ಮದ ಸಿದ್ಧಿ ಮತ್ತು ಸಾಧನೆಯಲ್ಲಿ ಸ್ವಾಮೀಜಿ ಇನ್ನಷ್ಟು ಮೆಟ್ಟಿಲುಗಳನ್ನು ಹತ್ತುವುದು ಬಾಕಿಯಿದ್ದರೂ, ಗುರುಪೀಠವೊಂದನ್ನು ಪ್ರತಿನಿಧಿಸುವ ಅವರ 'ಸ್ವಾಮಿತ್ವ'ವನ್ನು ಗೌರವಿಸಬೇಕು ಹಾಗೂ ಅವರೆಡೆಗೆ ಭಕ್ತರಿಗಿರುವ ಶ್ರದ್ಧಾಭಕ್ತಿಗಳಿಗೆ ಧಕ್ಕೆಯಾಗಬಾರದು ಎಂಬ ಆಶಯದೊಂದಿಗೆ ಪಾದಪೂಜೆಗೆ ಸೂಚಿಸಿದ್ದರು ಅವಧೂತರು. ಆದರೆ, ಬೇರೆಯದೇ ಹೊಯ್ದಾಟದಲ್ಲಿ ಅಕ್ಷರಶಃ ತರಗೆಲೆಯಾಗಿದ್ದ ಸ್ವಾಮೀಜಿ ಏಕಾಂತದ ಸಮಾಲೋಚನೆಗೆ ಕೋರಿದ್ದರಿಂದ ಅವಧೂತರು ಅದಕ್ಕೆ ಒಪ್ಪಿ ಕೋಣೆಯೊಳಗೆ ಅವರನ್ನು ಕರೆದೊಯ್ದರು. ಅವಧೂತರು ಒಂದೆರಡು ದಿನ ಊರಿನಲ್ಲಿ ಇಲ್ಲದಿದ್ದ ಕಾರಣಕ್ಕೆ, ಸಮಸ್ಯೆಗಳಿಗೆ ಪರಿಹಾರ ಕೇಳಿಕೊಂಡು ಬರುವವರು ಅಂದು ಅಲ್ಲಿರಲಿಲ್ಲ. ಅಲ್ಲಿದ್ದುದು ಮನೆಯ ಕೆಲ ಜನರು, ಸ್ವಾಮೀಜಿಯ ಜತೆಗಿದ್ದ ಆಪ್ತರು ಹಾಗೂ ಅವಧೂತರ ನಾಲ್ಕಾರು ಶಿಷ್ಯರು. ಹೀಗಾಗಿ, ಅವಧೂತರು ಕಾರಿನಿಂದ ಇಳಿದ ಕ್ಷಣದಿಂದ ಮೊದಲ್ಗೊಂಡು ಕೋಣೆಯೊಳಗೆ ಸಾಗುವವರೆಗೆ ಜತೆಯಾದ ಸ್ವಾಮೀಜಿಯ ದೇಹಭಾಷೆ-ಮೌನಭಾಷೆ-ಮೆದುಭಾಷೆ ಕಂಡಿದ್ದು ಕೇಳಿದ್ದು ಅವಧೂತರಿಗೆ ಮಾತ್ರವೇ!

ಪಟ್ಟಣದ ಸಮಾಜಸೇವಾ ಸಂಸ್ಥೆಯಿಂದ ಬೀಳ್ಕೊಂಡು ಹೀಗೆ ಮನೆಗೆ ಬರುವವರೆಗೂ ಅವಧೂತರು ಹೇಳಿದ ಪ್ರಸಂಗಗಳನ್ನೂ, ಸಾಕ್ಷಿಯಾಗಿಸಿದ ಸಂದರ್ಭಗಳನ್ನೂ ಮೈಗೂಡಿಸಿಕೊಂಡಿದ್ದ ಶಿಷ್ಯರು, ಈಗ ಮಠದ ಸ್ವಾಮೀಜಿ ಅವಧೂತರ ಮನೆಗೇ ಧಾವಿಸಿ ಬಂದಿದ್ದರ ಹಿಂದೆ ಇರಬಹುದಾದ ಕಾರಣ ಮತ್ತು ಸಾಧ್ಯಾಸಾಧ್ಯತೆಗಳನ್ನು 'ಇಂಟರ್‌ಲಿಂಕ್' ಮಾಡುವ ಕಸರತ್ತಿಗೆ ಒಳಗೊಳಗೇ ಒಡ್ಡಿಕೊಂಡಿದ್ದರು. ಅಂದರೆ, ಬಡ ವಿದ್ಯಾರ್ಥಿನಿ ಶಾರದೆಯು ಅಲ್ಲಿ ವಿದ್ಯಾರ್ಥಿ ನಿಲಯದಲ್ಲಿ ಎದುರಿಸುತ್ತಿರಬಹುದಾದ ದೈಹಿಕ-ಮಾನಸಿಕ ಕಿರಿಕಿರಿ, ಅವಳು ಹಾದುಹೋಗುತ್ತಿರುವ ಮತ್ತು ಹೊರಗೆಲ್ಲೂ ಹೇಳಿಕೊಳ್ಳಲಾಗದ ತೊಳಲಾಟ ಇತ್ಯಾದಿಗಳಿಗೂ, ವಾರಾಣಸಿಗೆ ತೆರಳಬೇಕೆಂಬ ಅವಧೂತರ ಸೂಚನೆಯ ಹೊರತಾಗಿಯೂ ಸ್ವಾಮೀಜಿ ಹೀಗೆ ಏಕಾಏಕಿ ಅವರಿದ್ದಲ್ಲಿಗೇ ಬಂದಿರುವುದಕ್ಕೂ ಏನಾದರೂ ಸಂಬಂಧವಿದೆಯೇ? ಸಾಮಾಜಿಕ-ಧಾರ್ಮಿಕ-ಆಧ್ಯಾತ್ಮಿಕ ಆಯಾಮಗಳಿಂದ ಕೂಡಿದೆ ಎಂದು ತಾವು ಅಂದುಕೊಂಡಿದ್ದ ಸಮಾಜಸೇವಾ ಸಂಸ್ಥೆಯ ಚಟುವಟಿಕೆಗಳಲ್ಲಿ 'ದಿವ್ಯಪರಿಮಳ' ಹೊಮ್ಮುವ ಬದಲು 'ಮುಗ್ಗುಲುವಾಸನೆ' ಹೊಡೆಯುತ್ತಿದೆಯೇ? ಎಂಬೆಲ್ಲಾ ಶಂಕೆಗಳನ್ನು ಇಟ್ಟುಕೊಂಡು ಶಿಷ್ಯರು ತಮ್ಮತಮ್ಮಲ್ಲೇ ಪಿಸುಗುಡುತ್ತಿದ್ದರು.

ಕೆಲ ಕ್ಷಣದ ನಂತರ ಕೋಣೆಯ ಬಾಗಿಲು ತೆರೆದುಕೊಂಡಿತು. ಅಲ್ಲಿಂದ ಮೊದಲು ಹೊರಬಂದಿದ್ದು ಸ್ವಾಮೀಜಿ, ನಂತರ ಅವಧೂತರು. ಸ್ವಾಮೀಜಿಯ ಕಣ್ಣುಗಳಲ್ಲಿ ಕಂಡೂ ಕಾಣದಂತೆ ನೀರು ಪೊರೆಗಟ್ಟಿತ್ತು. ಲಘುವಾದ ಗದ್ಗದಿತ ಕಂಠದಲ್ಲೇ ಸ್ವಾಮೀಜಿ, ''ನಮಗೆ ಹೊರಡುವುದಕ್ಕೆ ಅಪ್ಪಣೆ ಕೊಡಿ ಬುದ್ಧೀ...'' ಎಂದರು. ಅಭಯಮುದ್ರೆಯಿತ್ತ ಅವಧೂತರು ಸ್ವಾಮೀಜಿಯನ್ನು ಬೀಳ್ಕೊಟ್ಟರು. ಮನೆಯ ಹಜಾರದಲ್ಲಿದ್ದ ಆರಾಮಕುರ್ಚಿಯಲ್ಲಿ ಅರೆಕ್ಷಣ ವಿರಮಿಸಿ, ಕಂಗಳನ್ನು ಮುಚ್ಚಿಕೊಂಡು ಕೈಬೆರಳುಗಳಲ್ಲಿ ಅದೇನೋ ಲೆಕ್ಕಾಚಾರ ಹಾಕಿ, ಒಂದೆರಡು ಬಾರಿ ನೀಳವಾಗಿ ಉಸಿರೆಳೆದುಕೊಂಡರು. ನಂತರ ಶಿಷ್ಯರೊಬ್ಬರ ಕಡೆಗೆ ತಿರುಗಿ, ''ಸ್ನಾನಕ್ಕೆ ಸಿದ್ಧಮಾಡ್ರಪ್ಪಾ'' ಎಂದರು. ಅದು ತಮ್ಮನ್ನೂ ಒಳಗೊಂಡಂತೆ ಶಿಷ್ಯರೆಲ್ಲರೂ ಪ್ರಯಾಣದ ದಣಿವನ್ನು ಕಳೆದುಕೊಳ್ಳಲೆಂದು ಸ್ನಾನ ಮಾಡಿ, ತರುವಾಯ ಸಂಜೆಯ ಆರತಿಗೆ ಸಜ್ಜಾಗಬೇಕು ಎಂಬುದಕ್ಕೆ ಅವಧೂತರು ಹೊರಡಿಸಿದ 'ದಿವ್ಯಫರ್ಮಾನು'.

ಅಂತೆಯೇ ಎಲ್ಲರ ಸ್ನಾನವಾಗಿ, ದೇವರು-ಗುರುಗಳ ಪಟಗಳಿಗೆ ಆರತಿ ಮಾಡಿದ್ದಾಯಿತು. ಎರಡು ದಿನಗಳ ಪ್ರಯಾಣದಿಂದ ಬಳಲಿದ್ದ ಶಿಷ್ಯರಿಗೆ ಕೊಂಚ ವಿರಮಿಸಬೇಕು ಎನಿಸುತ್ತಿದ್ದರೂ, ಶಾರದೆಯ ಕಥೆಯ ಮುಂದುವರಿದ ಭಾಗವನ್ನು ಕೇಳುವ ತವಕವೂ ಜತೆಗೇ ಹೆಡೆಯಾಡಿಸುತ್ತಿತ್ತು. ಅದನ್ನು ಅರಿತವರಂತೆ ಅವಧೂತರು, ''ಬನ್ನಿ, ಎಲ್ಲರೂ ಹಿತ್ತಲಿಗೆ ಹೋಗೋಣ'' ಎಂದು ಕರೆದೊಯ್ದರು. ಅದು ಬೇಸಗೆಯಾದ್ದರಿಂದ, ಮನೆಯೊಳಗಿಗಿಂತ ಅಂಗಳದಲ್ಲೋ ಹಿತ್ತಲಲ್ಲೋ ವಿರಮಿಸುವುದಕ್ಕೆ ಅವಧೂತರು ಆದ್ಯತೆ ನೀಡುತ್ತಿದ್ದರು. ಜತೆಗೆ ಅಂದು ಹುಣ್ಣಿಮೆಯ ಬೆಳದಿಂಗಳೂ ಮೈಚೆಲ್ಲಿಕೊಂಡಿತ್ತು. ಅವಧೂತರ ಸುತ್ತ ಕೂತು ಶಾರದೆಯ ಕಥೆ ಕೇಳುವುದಕ್ಕೆ ಶಿಷ್ಯರಿಗೆ ಇದಕ್ಕಿಂತ ಸೊಗಸಾದ ವಾತಾವರಣ ಸಿಗುವುದುಂಟೇ? ಇದಕ್ಕೆ ತಕ್ಕಂತೆ, ಬಿಸಿಬಿಸಿ ಕಾಫಿಯಿದ್ದ ಕೆಟಲ್ ಮತ್ತು ಈರುಳ್ಳಿ ಪಕೋಡಾ ತುಂಬಿದ್ದ ಬಿದಿರಿನ ಹೆಡಿಗೆ ಅಡುಗೆಮನೆಯಿಂದ ಹಿತ್ತಲಿಗೆ ಬಂತು. ಸರಿ, ಜಮುಖಾನ ಹಾಸಿ ಎಲ್ಲರೂ ಜಮೆಯಾದರು.

ಅವಧೂತರು ಇನ್ನೇನು ಮಾತಿಗೆ ಶುರುವಿಟ್ಟುಕೊಳ್ಳಬೇಕು ಎನ್ನುವಷ್ಟರಲ್ಲಿ ಶಿಷ್ಯರೊಬ್ಬರು, ''ಗುರುಗಳೇ, ಆ ಸಂಸ್ಥೆಯಿಂದ ಬೀಳ್ಕೊಂಡು ಹೊರಟಾಗ ಮಾರ್ಗಮಧ್ಯದಲ್ಲಿ ಕರೆ ಮಾಡಿದ ಮ್ಯಾನೇಜರ್ ತಮ್ಮ ತಪ್ಪನ್ನು ಮನ್ನಿಸುವಂತೆ ಅಳುತ್ತಾ ಅಲವತ್ತುಕೊಂಡರು. ಅದನ್ನು ಕೇಳಿಸಿಕೊಂಡ ನಾವೂ ಒಂದಷ್ಟು ಲೆಕ್ಕಾಚಾರ ಹಾಕಿಕೊಂಡಿದ್ದೆವು. ಇಂದು ನೋಡಿದರೆ, ನಿಮ್ಮ ಸೂಚನೆಯಂತೆ ಉನ್ನತ ವ್ಯಾಸಂಗಕ್ಕೆಂದು ಮತ್ತು ಸಂಸ್ಥೆಯ ಶ್ರೇಯೋಭಿವೃದ್ಧಿಗೆ ಪ್ರಾರ್ಥಿಸಲೆಂದು ವಾರಾಣಸಿಗೆ ತೆರಳಬೇಕಿದ್ದ ಮಠದ ಸ್ವಾಮೀಜಿ ಅಲ್ಲಿಗೆ ಹೋಗುವ ಬದಲು ನಿಮ್ಮಲ್ಲಿಗೆ ದೌಡಾಯಿಸಿ ಬಂದರು. ನೀವಾಗೇ ಪಾದಪೂಜೆಗೆ ಶಿಷ್ಯರಿಗೆ ಸೂಚಿಸಿದರೂ, ಅದನ್ನು ಸ್ವೀಕರಿಸಲು ಅವರ ಮನಸ್ಸು ಒಪ್ಪಲಿಲ್ಲ. ಇದು ತಪ್ಪಿತಸ್ಥ ಭಾವನೆಯ ದ್ಯೋತಕವೇ? ಹಾಗಾದರೆ ಸಂಸ್ಥೆಯ ಆವರಣದಲ್ಲಿರುವ ಕಳ್ಳಬೆಕ್ಕು ಯಾರು? ಅದು ಸಂಸ್ಥೆಯ ಮ್ಯಾನೇಜರ್ ಅವರೇ? ಅಥವಾ... ಅಥವಾ.... ಸ್ವತಃ ಸ್ವಾಮೀಜಿಯೇ? ಮಠದೊಳಗಿನ ಈ ಮಾರ್ಜಾಲವೇ ಆ ಸಮಾಜಸೇವಾ ಸಂಸ್ಥೆಗೆ ಮಬ್ಬಾಗಿ ಮುಸುಕಿದೆಯೇ?'' ಎಂಬ ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸಿದರು.

ಈ ಮಾತಿಗೆ ಮನದುಂಬಿ ನಕ್ಕ ಅವಧೂತರು, ''ಅಯ್ಯಾ, ಕಳ್ಳಬೆಕ್ಕಿನ ಕಥಾನಕದ ಕ್ಲೈಮ್ಯಾಕ್ಸ್ ಕೇಳಲು ನೀವೆಲ್ಲಾ ಅದೆಷ್ಟು ಚಡಪಡಿಸುತ್ತಿದ್ದೀರಿ ಅಂತ ನನಗೂ ಗೊತ್ತು. ಇಷ್ಟನ್ನೇ ಹೇಳಿರೋ ನಾನು ಅದನ್ನು ಹೇಳದೇ ಇರುತ್ತೇನೆಯೇ? ಆದರೆ ಅದಕ್ಕೂ ಮುನ್ನ ಒಂದು ಸೂಕ್ಷ್ಮವನ್ನು ನಮ್ಮ ಜನರು ಅರ್ಥಮಾಡಿಕೊಳ್ಳಬೇಕು. ಸಮಾಜದ ವಿವಿಧ ಸ್ತರಗಳಲ್ಲಿನ ಉದ್ಯೋಗ, ಕಸುಬು, ವ್ಯವಹಾರ ಇತ್ಯಾದಿಗಳಿಗೆ ಒಂದೊಂದು ಕಾರ್ಯಶೈಲಿ, ಅದಕ್ಕೊಂದು ಸೂಚಿತ ಸಮವಸ್ತ್ರ ಇರುತ್ತದೆ. ಹೊಲ-ಗದ್ದೆಯಲ್ಲಿ ಬೆವರು ಸುರಿಸಿ ಗೇಯುವವನು ಸೂಟು-ಬೂಟು ಹಾಕುವುದಿಲ್ಲ; ಕಚೇರಿಯಲ್ಲಿ ಅಧಿಕಾರಿಯಾಗಿರುವವನು ಪಟ್ಟಾಪಟ್ಟಿ ಚಡ್ಡಿ ಮತ್ತು ಬನಿಯನ್ ಧರಿಸಿದ್ದರೆ ಅದು ಅವನಿಗೆ ಶೋಭೆಯಲ್ಲ; ಗಿಜಿಗಿಜಿ ಮಾರುಕಟ್ಟೆಯಲ್ಲಿ ಮೂಟೆಗಳ ನಡುವೆ ವ್ಯವಹರಿಸುವ ವ್ಯಾಪಾರಿಗೆ 'ರೇಷ್ಮೆ ಮಗುಟ-ಶಲ್ಯ' ಧರಿಸು ಅಂತ ಯಾರಾದರೂ ಹೇಳಿದರೆ ಅದು ಮುಠ್ಠಾಳತನವಾದೀತು. ಆಯಾ ವಲಯಕ್ಕೆ ಅದರದ್ದೇ ಆದ ಸಮವಸ್ತ್ರವಿದೆ. ಇವನ್ನು ಹೊರತುಪಡಿಸಿದ ಇನ್ನೂ ಮೂರು ಸಮವಸ್ತ್ರಗಳಿವೆ. ಅವುಗಳೇ- 'ಖಾಕಿ, ಖಾದಿ ಮತ್ತು ಕಾವಿ'. ಕಾರ್ಯಭಾರದ ನಿಮಿತ್ತ ಧಾರಣೆಗೆಂದು ಇವನ್ನು ಆಯ್ಕೆ ಮಾಡಿಕೊಂಡವರು ಭಾರಿ ಹುಷಾರಾಗಿರಬೇಕು. ಇವು ನಿರ್ದಿಷ್ಟ 'ಅಧಿಕಾರ-ಭಾಗ್ಯ'ವನ್ನು ದಕ್ಕಿಸಿಕೊಡುವ ದಿರಿಸುಗಳು ಎಂದೇ ಬಹುತೇಕರು ಭಾವಿಸಿದ್ದಾರೆ. ಒಂದು ಮಟ್ಟಕ್ಕೆ ಆ ಗ್ರಹಿಕೆ ನಿಜವೂ ಹೌದು. ಆದರೆ ಅದಕ್ಕಿಂತ ಮಿಗಿಲಾಗಿ ಈ ಮೂರು ದಿರಿಸುಗಳು ಸಮವಸ್ತ್ರಗಳಷ್ಟೇ ಅಲ್ಲ, 'ಸೆರಗಿನ ಕೆಂಡಗಳೂ' ಹೌದು ಎಂಬುದು ಅಪ್ರಿಯಸತ್ಯ..'' ಎಂದು ಹೇಳಿ ಗಡ್ಡವನ್ನೊಮ್ಮೆ ನೀವಿಕೊಂಡರು.

ಆಗ ಶಿಷ್ಯರೊಬ್ಬರು, ''ಗುರುಗಳೇ, ನೀವು ಕಥೆಯನ್ನು ಮುಂದುವರಿಸುತ್ತಲೇ ಇಲ್ಲ'' ಎಂದು ಲಘುವಾಗಿ ಅಸಮಾಧಾನವನ್ನು ತೋಡಿಕೊಂಡರು, ಲೋಕಾಭಿರಾಮದ ಮಾತಿನ ವೇಳೆ ಗುರುಗಳು ಕೋಪಗೊಳ್ಳುವುದಿಲ್ಲ ಎಂಬ ಧೈರ್ಯದಲ್ಲಿ.

ಅದಕ್ಕೆ ಅವಧೂತರು, ''ತಾಳ್ಮೆ ಇರಲಿ ಕಣಯ್ಯಾ, ಮೊದಲು ಎದುರಿಗೆ ಎಟ್ಟಿರುವ ಬಿಸಿಬಿಸಿ ಪಕೋಡಾ-ಕಾಫಿಯ ಸಮಾರಾಧನೆ ಆಗಲಿ. ರಾತ್ರಿ ಊಟವಾದ ಮೇಲೆ ಬೆಳದಿಂಗಳಲ್ಲಿ ಎಲ್ಲರೂ ಈ ಹಿತ್ತಲಲ್ಲೇ ಮಲಗ್ತೀವಲ್ಲಾ... ಆಗ ಕಥೆ ಮುಂದುವರಿಸುವೆ'' ಎಂದು ಹೇಳಿ ಕಣ್ಣು ಮಿಟುಕಿಸಿದರು...

(ಮುಂದುವರಿಯುವುದು)

ಧಾರಾವಾಹಿ ನಿರ್ಮಿಸುವ ಪ್ರೊಡಕ್ಷನ್ ಹೌಸ್: ಸೋಪ್ ಫ್ಯಾಕ್ಟರಿ

ಸಿನಿಗನ್ನಡ

ಇತ್ತೀಚೆಗೆ ಪಕ್ಕದ ರಾಜ್ಯದ ಪುಣ್ಯಾತ್ಮರೊಬ್ಬರು ಸಿನಿಮಾ ಒಂದು ಬಿಡುಗಡೆ ಆಗಿ ಒಂದು ವಾರ ಆಗೋವರೆಗೂ ಅದನ್ನು ವಿಮರ್ಶೆ ಮಾಡಬಾರದು ಅಂತ ಕೋರ್ಟಿಗೆ ಹೋಗಿದ್ದರು. ನೆಗೆಟಿವ್ ವಿಮರ್ಶೆ ಮಾಡೋರ ವಿರುದ್ಧದ ಈ ಹೋರಾಟಕ್ಕೆ ಕೋರ್ಟ್‌ನಲ್ಲಿ ಅವರಿಗೆ ಪಾಸಿಟಿವ್ ಪ್ರತಿಕ್ರಿಯೆ ಸಿಕ್ಕಿದ್ದರೂ ಇನ್ನೂ ಅಂತಿಮ ತೀರ್ಪು ಬಂದಿಲ್ಲ. ವಿಶೇಷವಾಗಿ ಅವರು ಯುಟ್ಯೂಬರ್‌ಗಳನ್ನು ಗಮನದಲ್ಲಿಟ್ಟುಕೊಂಡು ಈ ಕಾನೂನು ಹೋರಾಟ ನಡೆಸುತ್ತಿದ್ದಾರಂತೆ. ಕನ್ನಡದ ನಟ ಆದಿತ್ಯ ಕೂಡಾ ತಮ್ಮ 'ಮುಂದುವರೆದ ಅಧ್ಯಾಯ' ಚಿತ್ರದ ಬಗ್ಗೆ ಕೆಟ್ಟದಾಗಿ ವಿಮರ್ಶೆ ಮಾಡಿದ್ದ ಯುಟ್ಯೂಬರ್‌ಗಳ ಮೇಲೆ ರಾಂಗ್ ಆಗಿದ್ದರು. ನಿರ್ದೇಶಕ ಎ.ಪಿ.ಅರ್ಜುನ್ ಕೂಡಾ ಕೆಟ್ಟದಾಗಿ ಸಿನಿಮಾ ವಿಮರ್ಶೆ ಮಾಡುವ ಯುಟ್ಯೂಬರ್‌ಗಳ ಮೇಲೆ 'ಪೊಗರು' ಚಿತ್ರದ ಪತ್ರಿಕಾಗೋಷ್ಠಿಯಲ್ಲಿ ಹರಿಹಾಯ್ದಿದ್ದರು. ಆದಿತ್ಯ ಅವರದ್ದು ಅದರ ಮುಂದುವರೆದ ಅಧ್ಯಾಯ ಆಗಿತ್ತು ಅಷ್ಟೇ. ಆದಿತ್ಯ ತಮ್ಮ ಚಿತ್ರದ ಹೆಸರಿಗೆ ತಕ್ಕಂತೆ ಇನ್ನೂ ಸ್ವಲ್ಪ ಮುಂದುವರಿದು ವಾಣಿಜ್ಯ ಮಂಡಳಿಯ ಚೇಂಬರ್‌ವರೆಗೂ ಈ ವಿಷಯವನ್ನು ತೆಗೆದುಕೊಂಡು ಹೋಗಿದ್ದರು. ಅಲ್ಲಿ, ಯುಟ್ಯೂಬರ್‌ಗಳ ಮೇಲೆ ಕ್ರಮ ತೆಗೆದುಕೊಳ್ಳುವ ಭರವಸೆ ಸಿಕ್ಕಿತ್ತಾದರೂ ಚೇಂಬರ್ ಇನ್ನೂ ಯಾವ ಕ್ರಮ ತೆಗೆದುಕೊಂಡ ಬಗ್ಗೆ ವರದಿ ಆಗಿಲ್ಲ. ಈಗ ಈ ವಿಷಯ ಕೋರ್ಟ್‌ನ ಮೆಟ್ಟಿಲೇರಿದೆ. ಆದರೆ ಈ ವಿಷಯಕ್ಕೆ ನೆಟ್ಟಿಗರು ಮಾತ್ರ 'ಇದು ಕೆಟ್ಟ ಬೆಳವಣಿಗೆ, ನಿಮ್ಮ ಸಿನಿಮಾ ನೋಡಿದವರೆಲ್ಲ, ಚೆನ್ನಾಗಿದೆ ಅಂತಲೇ ವಿಮರ್ಶೆ ಮಾಡಬೇಕಾ?' ಅಂತ ಪ್ರಶ್ನಿಸಿದ್ದಾರೆ. ಸಿನಿಮಾ ಚೆನ್ನಾಗಿದೆ ಅಂತ ವಿಮರ್ಶೆ ಮಾಡ್ತೀವಿ ದುಡ್ಡು ಕೊಡಿ ಅಂತ ಹಿಂದೆ ಬೀಳುವ ಯುಟ್ಯೂಬರ್‌ಗಳು ಇರೋದು ಸತ್ಯ. ಅವರ ಈ ದಂಧೆ ನಿರ್ಮಾಪಕರ ಪಾಲಿಗೆ ಕಂಟಕವಾಗಿರೋದು ಕೂಡ ಸತ್ಯ. ಕೆಲವರಂತೂ ನಿರ್ಮಾಪಕರು ಹಣ ಕೊಡದಿದ್ದರೆ, ಸಿನಿಮಾ ವಿಮರ್ಶೆಯನ್ನ 'ರೋಸ್ಟ್' ಅಂತಲೇ ಕರೆದುಕೊಂಡು ಬಯ್ಯಲು ತುದಿಗಾಲಲ್ಲಿ ರೆಡಿಯಾಗಿರುತ್ತಾರೆ. ಅವರ ಈ ದಂಧೆಯ ವಿರುದ್ಧ ಮಾತಾಡೋದು ಸರಿ. ಆದರೆ, ತೀರಾ ಕೋರ್ಟಿಗೆ ಹೋಗಿ ನಮ್ಮ ಚಿತ್ರ ಹೇಗಿದ್ದರೂ ಅದನ್ನು ಚೆನ್ನಾಗಿದೆ ಅನ್ನಬೇಕು. ಇಲ್ಲದಿದ್ದರೆ, ವಿಮರ್ಶೆ ಮಾಡೋದೇ ತಪ್ಪು ಎನ್ನುವಂತೆ ನ್ಯಾಯ ಕೇಳುತ್ತಿರೋದು ಮಾತ್ರ ಸರಿ ಅಲ್ಲ ಅನ್ನೋದು ಬಹುತೇಕರ ಅಭಿಪ್ರಾಯ.

ತುಂಟರಗಾಳಿ
ಹರಿ ಪರಾಕ್
vveditoped@gmail.com
hariparaak@gmail.com

ಲೂಸ್ ಟಾಕ್

ನವೆಂಬರ್ ಕನ್ನಡಿಗ

- **ನಮಸ್ಕಾರ ಸ್ವಾಭಿಮಾನಿ ಕನ್ನಡಿಗರಿಗೆ. ಕರ್ನಾಟಕದಲ್ಲಿ ಕನ್ನಡಿಗರು, ಪರಭಾಷೆಯವರ ಮಧ್ಯೆ ದಿನಾ ಜಟಾಪಟಿ ನಡೀತಾ ಇದೆ. ನೀವು ಇನ್ನೂ ಮಲಗೇ ಇದ್ದೀರಲ್ಲ?**
- ಹಲೋ ಬಾಸ್, ಇದು ಜೂನ್, ನವೆಂಬರ್ ಅಲ್ಲ, ಮನೇಲಿ ಕ್ಯಾಲೆಂಡರ್ ಹಾಕ್ಕೊಂಡಿದ್ದೀರೋ ಇಲ್ವೋ?
- **ಹೋ, ಅಂದ್ರೆ ನಿಮ್ಮ ಅಭಿಮಾನ 3 ದಿನದಾ ಬಾಳೂ ಅಲ್ವಾ... ನೀವು ನವೆಂಬರ್‌ನಲ್ಲಿ ಮಾತ್ರ ಕನ್ನಡಿಗರಾ? ಹೋಗ್ಲಿ, ಬೆಂಗಳೂರಲ್ಲಿ ಕನ್ನಡ ಮಾತಾಡದೇ ಇದ್ರೆ, ಕನ್ನಡ ಹಾಡು ಹಾಕದಿದ್ರೆ, ಕನ್ನಡದಲ್ಲಿ ಬೋರ್ಡ್ ಹಾಕದಿದ್ರೆ ನಮ್ಮವರು ಹೊರಗಿನವರ ಮೇಲೆ ಕೈ ಮಾಡ್ತಾರಲ್ಲ ಇದು ಸರೀನಾ?**
- ಮತ್ತೆ, ಬೋರ್ಡಿಗಿಲ್ಲದ ವರಲ್ಲಾ ಇಲ್ಲಿಗೆ ಬಂದು, ಕನ್ನಡ ಬೋರ್ಡ್ ಹಾಕಲ್ಲ ಅಂದ್ರೆ, ಸುಮ್ನೆ ಇರ್ಬೇಕಾ. ಕುವೆಂಪು ಅವರೇ ಹೇಳಿದ್ದಾರಲ್ಲ, ಕನ್ನಡಕ್ಕಾಗಿ ಕೈ ಎತ್ತು ಅಂತ. ಇಲ್ಲಾ ಅಂದ್ರೆ ನಾವ್ ತಲೆ ಎತ್ಕೊಂಡ್ ಓಡಾಡೋಕಾಗುತ್ತಾ.
- **ಸರ್, ಕುವೆಂಪು ಅವರು ಹೇಳಿದ್ದು ಬೇರೆ ಅರ್ಥದಲ್ಲಿ. ಹೋಗ್ಲಿ ಬಿಡಿ, ನೀವು ಕನ್ನಡ ರಕ್ಷಕರು ಅಲ್ವಾ? ಹಾಗಿದ್ರೆ ಕನ್ನಡಕ್ಕಾಗಿ ಹೋರಾಡಿದ ಒಂದಿಬ್ಬರು ಮಹನೀಯರ ಹೆಸರು ಹೇಳಿ ನೋಡೋಣ?**
- ನಾರಾಯಣಗೌಡ್ರು, ರೂಪೇಶ್ ರಾಜಣ್ಣ, ಕಿರಿಕ್ ಕೀರ್ತಿ, ಮತ್ತೆ... ಇನ್ನೊಂದಿಬ್ರು ಇದ್ದಾರೆ, ಇರಿ ಹೇಳ್ತೀನಿ
- **ಅಯ್ಯೋ ಸಾಕು ಬಿಡಿ, ಓವರ್ ಡೋಸ್ ಆಗೋಯ್ತು. ಸರಿ, ಸಾಫ್ಟ್‌ವೇರ್ ಕಂಪನಿಗಳಲ್ಲಿ ಕನ್ನಡವನ್ನ, ಕನ್ನಡಿಗರನ್ನ ನಿರ್ಲಕ್ಷ್ಯ ಮಾಡ್ತಿದಾರೆ. ನೀವು ಅಲ್ಲಿ ಕೆಲಸ ಮಾಡ್ತಾ ಇದ್ರೆ ಏನ್ ಮಾಡ್ತಿದ್ರಿ?**
- ನಾನು ಅಂಥವರ ಕೈಕೆಳಗೆ ಕೆಲಸ ಮಾಡೋದೇ ಇಲ್ಲ, ಬೇಕಿದ್ರೆ ಸರಕಾರಿ ಕೆಲಸಕ್ಕೆ ಸೇರಿ, ಟೇಬಲ್ ಕೆಳಗೆ ಕೈ ಇಟ್ಕೊಂಡ್ ಜೀವನ ಮಾಡ್ತೀನಿ.
- **ಓಹೋ, ಟೇಬಲ್ ಮ್ಯಾನರ್ಸ್ ಬಗ್ಗೆ ಮಾತಾಡ್ತಾ ಇದ್ದೀರಿ. ಆದ್ರೆ ಈ ಟೈಮ್ ಟೇಬಲ್ ಹಾಕ್ಕೊಂಡು, ನವೆಂಬರ್ ಬಂದಾಗ ಮಾತ್ರ 'ಕನ್ನಡ, ಕನ್ನಡ' ಅನ್ನೋರಿಗೆ ನಿಮ್ಮ ಕಿವಿಮಾತು?**
- ಏನಿಲ್ಲ ಬಿಡ್ರೀ, ಅದರಲ್ಲಿ ತಪ್ಪೇನಿದೆ? ಅವರಿಗೆ ಒಳ್ಳೆ ಟೈಮ್ ಸೆನ್ಸ್ ಇದೆ ಅಂತ ಅಪ್ರಿಶಿಯೇಟ್ ಮಾಡ್ಬೇಕು.

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ರಾತ್ರಿ ವೇಳೆ ಸಿಡಿಲು, ಗುಡುಗು ಸಹಿತ ಭಾರಿ ಮಳೆ ಬಂದು ರಸ್ತೆಗಳೆಲ್ಲ ಅಸ್ತವ್ಯಸ್ತವಾಗಿದ್ದವು. ಸೋಮು ತನ್ನ ಗಾಡಿ ಮೇಲೆ ಆ ಮಳೆಯಲ್ಲೇ ಹೊರಗೆ ಹೊರಟ. ಅವನು ಹಾಕಿಕೊಂಡಿದ್ದ ಜರ್ಕಿನ್‌ನ ಜಿಪ್ ಕಿತ್ತುಹೋಗಿತ್ತು. ಹಾಗಾಗಿ, ಅದು ಗಾಳಿಗೆ ಅಗಲ ಆಗಿ ಹಾರಾಡುತ್ತಾ ತೊಂದರೆ ಕೊಡುತ್ತಿತ್ತು. ಹೀಗಾಗಿ ಸೋಮು ಅದನ್ನು ಬಿಚ್ಚಿ ಅದರ ಜಿಪ್ ಬೆನ್ನಿನ ಮೇಲೆ ಬರುವಂತೆ, ಅದರ ಹಿಂಭಾಗ ತನ್ನ ಎದೆ ಮೇಲೆ ಬರುವಂತೆ ಮಾಡಿ ಹಾಕಿಕೊಂಡು ಹೊರಟ. ಸ್ವಲ್ಪ ಹೊತ್ತಿನ ನಂತರ, ರಾತ್ರಿ ಮನೆಯಲ್ಲೇ ಇದ್ದ ಖೇಮುಗೆ ಒಂದ್ ಕಾಲ್ ಬಂತು. ನೋಡಿದ್ರೆ, ಸೋಮುದು. ಕಾಲ್ ಎತ್ತಿದ ತಕ್ಷಣ, ''ಖೇಮು, ಆಕ್ಸಿಡೆಂಟ್ ಆಗಿದೆ, ಹೈವೇ ಪಕ್ಕ ಗಾಡಿ ಸ್ಕಿಡ್ ಆಗಿ ಪಕ್ಕದ ಹಳ್ಳಕ್ಕೆ ಬಿದ್ದಿದ್ದೇನೆ. ಬೇಗ ಬಾ'' ಅಂತ ಲೊಕೇಶನ್ ಹೇಳಿದ ಸೋಮು. ಹೈ ವೇ ರೋಡಿನ ಪಕ್ಕ ದಲ್ಲೇ ಮನೆಯಿದ್ದ ಖೇಮು ಸುರಿಯುವ ಮಳೆಯಲ್ಲೇ ಅವಸರವಾಗಿ ಗಾಡಿ ಹತ್ತಿ ಹೈವೇನಲ್ಲಿ ಹೊರಟ. ಸೋಮು ಹೇಳಿದ ಲೊಕೇಶನ್ ತಲುಪಿದಾಗ ಅಲ್ಲಿ ಸೋಮು ಗಾಡಿ ಬಿದ್ದಿತ್ತು. ಪಕ್ಕದಲ್ಲಿ ಬಗ್ಗಿ ನೋಡಿದಾಗ ಆಳವಾದ ಹಳ್ಳದಲ್ಲಿ ಬಿದ್ದಿದ್ದ ಸೋಮು ಕಾಣಿಸಿದ. ಖೇಮು ಏನೇ ಪ್ರಯತ್ನ ಪಟ್ಟರೂ ಆಸ್ಪತ್ರೆಗೆ ಕರೆದುಕೊಂಡು ಹೋದಾಗ, ಅಲ್ಲಿನ ವೈದ್ಯರು, ಆಸ್ಪತ್ರೆಗೆ ತರೋಕೆ ಮುಂಚೇನೇ ಇವರ ಪ್ರಾಣ ಹೋಗಿದೆ ಅಂತ ಹೇಳಿಬಿಟ್ಟರು. ದುಃಖದಲ್ಲಿ ಕೂತಿದ್ದ ಖೇಮುವನ್ನು ಪೊಲೀಸರು ವಿಚಾರಿಸಲು ಬಂದರು. ಖೇಮುವನ್ನು ಪೊಲೀಸ್ ಆಫೀಸರ್ ಕೇಳಿದ ''ನೀವು ಅಲ್ಲಿಗೆ ಹೋದಾಗ ಅವರ ಪ್ರಾಣ ಹೋಗಿತ್ತಾ?''. ಅದಕ್ಕೆ ಖೇಮು ಹೇಳಿದ, ''ಇಲ್ಲಾ ಸರ್, ಆಕ್ಸಿಡೆಂಟ್ ಆಗಿ ಬಿದ್ದ ರಭಸಕ್ಕೆ ಸೋಮುನ ತಲೆ ಉಲ್ಟಾ ತಿರುಗಿಕೊಂಡಿತ್ತು. ನಾನು ಅದನ್ನ ಸರಿ ಮಾಡಿದೆ. ತಕ್ಷಣ ಪ್ರಾಣ ಹೋಯ್ತು''

ಲೈನ್‌ಮ್ಯಾನ್

- **ಒಂದರ ಹಿಂದೆ ಒಂದು ಧಾರಾವಾಹಿ ನಿರ್ಮಿಸುವ ಪ್ರೊಡಕ್ಷನ್ ಹೌಸ್**
- 'ಸೋಪ್' ಫ್ಯಾಕ್ಟರಿ
- **ಸೋತವರನ್ನು ಆಡಿಕೊಳ್ಳೋ ಮಂದಿ, ಆಡಿಕೊಂಡು ಸಾಕಾದಾಗ ಏನಂತಾರೆ?**
- ಅಯ್ಯೋ, ಹೋಗ್ಲಿ ಬಿಡಿ, ದಿನಾ ಸೋಲೋರಿಗೆ ನಗೋರ್ಯಾರು
- **ಯಾರೋ ಕಿರಿಕಿರಿ ಮಾಡಿದ್ರು ಅಂತ ಆ ಸಿಟ್ಟನ್ನ ಊಟದ ಮೇಲೆ ತೋರಿಸುವವರಿಗೆ ಒಂದು ಮಾತು**
- ಅವ್ರ್ಯಾರೋ ತಲೆ ತಿಂದ್ರು ಅಂತ, ನಾವು ತಿನ್ನೋದು ಬಿಡೋಕಾಗುತ್ತಾ..
- **ಬೆಟ್ಟದ ತುದಿಯಲ್ಲಿ ನಿಂತಿದ್ದ ಸೋಮು: ನನ್ನ ಜೀವನದಲ್ಲಿ ನಂಗೆ ಬೆನ್ನು ತಟ್ಟೋರೇ ಯಾರೂ ಇಲ್ಲ**
- ಖೇಮು: ನಾನಿದ್ದೀನಿ. ಆದ್ರೆ ಈಗ ಬೆನ್ನು ತಟ್ಟಿದ್ರೆ, ನಿಂಗೇ ಕಷ್ಟ, ಬ್ಯಾಡ ಬಿಡು.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:152

ಇಂದು ಫಿಫಾ ಕ್ಲಬ್‌ಗೆ ಚಾಲನೆ

ಮಿಯಾಮಿ: ಫುಟ್‌ಬಾಲ್ ಕ್ಲಬ್‌ಗಳ ಫಿಫಾ ಕ್ಲಬ್ ವಿಶ್ವಕಪ್ 2025 ಹೊಸ ಸ್ವರೂಪದೊಂದಿಗೆ 21ನೇ ಆವೃತ್ತಿಗೆ ಸಜ್ಜಾಗಿದೆ. ಫ್ಲೋರಿಡಾದ ಮಿಯಾಮಿ ಗಾರ್ಡನ್ಸ್‌ನಲ್ಲಿರುವ ಹಾರ್ಡ್ ರಾಕ್ ಕ್ರೀಡಾಂಗಣದಲ್ಲಿ ಭಾರತೀಯ ಕಾಲಮಾನ ಜೂನ್ 15ರ ಮುಂಜಾನೆ 5.30ಕ್ಕೆ ನಡೆಯುವ ಪಂದ್ಯಾವಳಿಯ ಉದ್ಘಾಟನಾ ಪಂದ್ಯದಲ್ಲಿ ಈಜಿಪ್ಟ್‌ನ ಅಲ್ ಅಹ್ಲಿ ಮತ್ತು ಲಿಯೋನೆಲ್ ಮೆಸ್ಸಿ ನಾಯಕತ್ವದ ಇಂಟರ್ ಮಿಯಾಮಿ ತಂಡಗಳು ಸೆಣಸಾಟ ನಡೆಸಲಿವೆ. ಈ ಆವೃತ್ತಿಯಲ್ಲಿ ಮೊದಲ ಬಾರಿಗೆ 32 ತಂಡಗಳು ಆಡಲಿದ್ದು, ತಂಡಗಳನ್ನು ತಲಾ ನಾಲ್ಕು ತಂಡಗಳಂತೆ ಎಂಟು ಗುಂಪು ಗಳಾಗಿ ವಿಂಗಡಿಸಲಾಗಿದೆ. ಈ ಹಿಂದೆ ಗರಿಷ್ಠ 7 ತಂಡಗಳಷ್ಟೇ ಆಡುತ್ತಿದ್ದವು. ಅಮೆರಿಕದ 12 ತಾಣಗಳಲ್ಲಿ ಒಟ್ಟು 63 ಪಂದ್ಯಗಳು ನಡೆಯಲಿವೆ. ಪ್ರತಿ ಗುಂಪಿನ ಅಗ್ರ 2 ತಂಡಗಳು ನಾಕೌಟ್ ಹಂತಕ್ಕೇರಲಿವೆ. ಜೂನ್ 28ರಿಂದ ಜುಲೈ 1ರವರೆಗೆ ಪ್ರಿ ಕ್ವಾರ್ಟರ್ ಫೈನಲ್, ಜುಲೈ 4ಮತ್ತು 5ರಂದು ಕ್ವಾರ್ಟರ್ ಫೈನಲ್, ಜುಲೈ 8-9ರಂದು ಸೆಮಿಫೈನಲ್, ಮತ್ತು ಜುಲೈ 13ರಂದು ಫೈನಲ್ ನಡೆಯಲಿದೆ. ಟೂರ್ನಿಯ ಬಹುಮಾನ ಮೊತ್ತ 8,607 ಕೋಟಿ ರೂ. ಆಗಿದ್ದು, ವಿಜೇತ ತಂಡ ₹344 ಕೋಟಿ ಬಹುಮಾನ ಸಹಿತ ₹1,076 ಕೋಟಿ. ಸಿಗಲಿದೆ.

ಕೊಹ್ಲಿ ಟ್ವೀಟ್ ವೈರಲ್

Virat Kohli
@imVkohli · Follow
Aiden Markram is a delight to watch!
6:31 PM · Mar 24, 2018
80K Reply Copy link

ಲಂಡನ್: ಆಸ್ಟ್ರೇಲಿಯಾ ವಿರುದ್ಧದ ಟೆಸ್ಟ್ ವಿಶ್ವ ಚಾಂಪಿಯನ್‌ಶಿಪ್ ಫೈನಲ್ ಪಂದ್ಯದ ದ್ವಿತೀಯ ಇನಿಂಗ್ಸ್‌ನಲ್ಲಿ ಅಜೇಯ ಶತಕ ಬಾರಿಸಿದ ದಕ್ಷಿಣ ಆಫ್ರಿಕಾದ ಆರಂಭಿಕ ಬ್ಯಾಟರ್ ಏಡೆನ್ ಮಾರ್ಕ್ರಮ್ ಈ ಶತಕದ ಮೂಲಕ ಹಲವು ದಾಖಲೆ ಬರೆದಿದ್ದಾರೆ. ಇದೀಗ ಮಾರ್ಕ್ರಮ್ ಬಗ್ಗೆ ವಿರಾಟ್ ಕೊಹ್ಲಿ 7 ವರ್ಷಗಳ ಹಿಂದೆ ಮೆಚ್ಚುಗೆ ಸೂಚಿಸಿದ್ದ ಟ್ವೀಟ್ ಕೂಡ ವೈರಲ್ ಆಗಿದೆ. ಆಸೀಸ್ ದಾಳಿಗೆ ಸಡ್ಡು ಹೊಡೆದು ನಿಂತ ಮಾರ್ಕ್ರಮ್ ಟೆಸ್ಟ್ ಚಾಂಪಿಯನ್ ಫೈನಲ್‌ನಲ್ಲಿ ಶತಕ ಬಾರಿಸಿದ ಮೂರನೇ ಬ್ಯಾಟರ್ ಎನಿಸಿದ್ದಾರೆ. ಇದಕ್ಕೂ ಮುನ್ನ ಆಸ್ಟ್ರೇಲಿಯಾದ ಆಟಗಾರರಾದ ಟ್ರಾವಿಸ್ ಹೆಡ್(163) ಮತ್ತು ಸ್ಟೀವನ್ ಸ್ಮಿತ್(121) ಫೈನಲ್ ಪಂದ್ಯದಲ್ಲಿ ಭಾರತದ ವಿರುದ್ಧ ಶತಕ ಬಾರಿಸಿದ್ದರು.

ವೈಟ್‌ಬಾಲ್ ಸರಣಿ

ಲಂಡನ್: ಜೂನ್ 28 ರಿಂದ ಪ್ರಾರಂಭವಾಗುವ ವೈಟ್-ಬಾಲ್ ಸರಣಿಗೆ ಇಂಗ್ಲೆಂಡ್ ಮಹಿಳಾ ತಂಡವು ಭಾರತ ಮಹಿಳಾ ತಂಡದ ಆತಿಥ್ಯ ವಹಿಸಲು ಸಜ್ಜಾಗಿದೆ. ಎರಡೂ ತಂಡಗಳು ಐದು ಟಿ20 ಮತ್ತು ಮೂರು ಏಕದಿನ ಪಂದ್ಯಗ ಳಲ್ಲಿ ಮುಖಾಮುಖಿಯಾಗಲಿವೆ. ಸರಣಿ ಆರಂಭಕ್ಕೂ ಮುನ್ನವೇ ಇಸಿಬಿ (ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ) 5 ಪಂದ್ಯಗಳ ಟಿ20 ಸರಣಿಗಾಗಿ ಇಂಗ್ಲೆಂಡ್ ಮಹಿಳಾ ತಂಡವನ್ನು ಪ್ರಕಟಿಸಿದೆ.

27 ವರ್ಷಗಳ ಬಳಿಕ ಐಸಿಸಿ ಟ್ರೋಫಿ ಗೆದ್ದು ಹೊಸ ಇತಿಹಾಸ ಬರೆದ ದಕ್ಷಿಣ ಆಫ್ರಿಕಾ |

ಹರಿಣಗಳ ದಶಕಗಳ ಕನಸು ನನಸು

ಮಾರ್ಕ್ರಮ್ ಮತ್ತು ನಾಯಕ ತೆಂಬಾ ಆಟಕ್ಕೆ ಒಲಿದ ಟೆಸ್ಟ್ ಚಾಂಪಿಯನ್‌ಶಿಪ್

ಲಂಡನ್: ಕ್ರಿಕೆಟ್ ಕಾಶಿ ಲಂಡನ್‌ನ ಲಾರ್ಡ್ಸ್ ಮೈದಾನದಲ್ಲಿ ನಡೆದ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ 5 ವಿಕೆಟ್‌ಗಳ ಭರ್ಜರಿ ಗೆಲುವು ಸಾಧಿಸಿದ ದಕ್ಷಿಣ ಆಫ್ರಿಕಾ ಮೊದಲ ಬಾರಿಗೆ ಐಸಿಸಿ ಐಸಿಸಿ ಟ್ರೋಫಿ ಗೆದ್ದು ಹೊಸ ಇತಿಹಾಸ ಬರೆದಿದೆ.

2025ರ ಸಾಲಿನ ಟೆಸ್ಟ್ ಚಾಂಪಿಯನ್‌ಶಿಪ್ ಗೆದ್ದ ದ. ಆಫ್ರಿಕಾ, ನಿರ್ಣಾಯಕ ಪಂದ್ಯದಲ್ಲಿ ಬಲಿಷ್ಠ ಆಸೀಸ್ ತಂಡವನ್ನು ಐದು ವಿಕೆಟ್‌ಗಳಿಂದ ಮಣಿಸುವ ಮೂಲಕ ತಮ್ಮ ಚೋಕರ್ಸ್ ಹಣೆಪಟ್ಟಿಯನ್ನು ಯಶಸ್ವಿಯಾಗಿ ಕಳಚಿಕೊಂಡಿದೆ. 27 ವರ್ಷಗಳ ಹಿಂದೆ ಬಿಳಿಯರ ಆಡಳಿತ ಕೊನೆಗೊಳಿಸಿ ವಿಶ್ವ ಕ್ರಿಕೆಟ್‌ಗೆ ಮರಳಿದ ಬಳಿಕ ದ. ಆಫ್ರಿಕಾ ಈ ತನಕ ಯಾವುದೇ ಐಸಿಸಿ ಟ್ರೋಫಿ ಗೆದ್ದಿಲ್ಲ. ಹೀಗಾಗಿ ಈ ಗೆಲುವು ದ.ಆಫ್ರಿಕನ್ನರ ಸಂಭ್ರಮಕ್ಕೆ ಕಾರಣವಾಗಿದೆ.

282 ರನ್‌ಗಳ ಗುರಿಯನ್ನು ಬೆಂಬತ್ತಿದ ಹರಿಣಗಳು ಆರಂಭಿಕ ಆಟಗಾರ ಏಡೆನ್ ಮಾರ್ಕ್ರಾಮ್ ಅವರ ದಾಖಲೆಯ ಶತಕ (136ರನ್ 207 ಎಸೆತ) ಮತ್ತು ನಾಯಕ ತೆಂಬಾ ಬವುಮಾ (69 ರನ್, 116 ಎಸೆತ) ಅವರ ಜವಾಬ್ದಾರಿಯುತ ಆಟದ ಮೂಲಕ ಅರ್ಹವಾಗಿಯೇ ಐತಿಹಾಸಿಕ ಗೆಲುವನ್ನು ತಮ್ಮದಾಗಿಸಿಕೊಂಡಿವೆ. ಈ ಜೋಡಿ 3ನೇ ವಿಕೆಟ್‌ಗೆ 147 ರನ್‌ಗಳ ಅದ್ಭುತ ಜೊತೆಯಾಟವಾಡಿ ತಂಡದ ಗೆಲುವಿಗೆ ಅಮೂಲ್ಯ ಕೊಡುಗೆ ನೀಡಿದರು.

ಐಸಿಸಿ ಟೂರ್ನಿಯ ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ಪರ ಮೊದಲ ಶತಕ ಸಿಡಿಸಿದ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಪಾತ್ರರಾದ ಏಡೆನ್ ಮಾರ್ಕ್ರಾಮ್ 207 ಎಸೆತಗಳಲ್ಲಿ 14 ಬೌಂಡರಿ ಸಹಿತ 136 ರನ್ ಗಳಿಸಿ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು. ಗೆಲುವಿಗೆ 282 ರನ್‌ಗಳ ಗುರಿ ಪಡೆದಿದ್ದ ಆಫ್ರಿಕಾ ಮೂರನೇ ದಿನದಾಟದ ಅಂತ್ಯಕ್ಕೆ 2 ವಿಕೆಟ್ ನಷ್ಟಕ್ಕೆ 213 ರನ್ ಗಳಿಸಿ ಸುಭದ್ರ ಸ್ಥಿತಿಯಲ್ಲಿತ್ತು. 4ನೇ ದಿನದಾಟದಲ್ಲಿ 69 ರನ್‌ಗಳ ಹಿನ್ನಡೆಯೊಂದಿಗೆ ಕ್ರೀಸ್ ಆರಂಭಿಸಿದ ದಕ್ಷಿಣ ಆಫ್ರಿಕಾ ತಂಡ ನಾಯಕ ತೆಂಬ ಬವುಮಾ ಮತ್ತು ಮಾರ್ಕ್ರಂ ಅವರ ವಿಕೆಟ್ ಕಳೆದುಕೊಂಡ ಹೊರತಾಗಿಯೂ ಗೆಲುವಿನ ದಡ ಸೇರಿತು. ಅಂತಿಮ ಕ್ಷಣದಲ್ಲಿ ಮಿಚೆಲ್ ಸ್ಟಾರ್ಕ್ ಮತ್ತು ಪ್ಯಾಟ್ ಕಮ್ಮಿನ್ಸ್ ಮಾರಕ ಬೌಲಿಂಗ್ ಸಂಘಟಿಸಿದರೂ ಅಂತಿಮವಾಗಿ ದಕ್ಷಿಣ ಆಫ್ರಿಕಾ 5 ವಿಕೆಟ್‌ಗಳ ಗೆಲುವು ಸಾಧಿಸಿ ಟ್ರೋಫಿಗೆ ಮುತ್ತಿಟ್ಟಿತು.

ಇದಕ್ಕೂ ಮೊದಲು ಬ್ಯಾಟ್ ಬೀಸಿದ್ದ ಆಸ್ಟ್ರೇಲಿಯಾ ಎರಡನೇ ಇನ್ನಿಂಗ್ಸ್‌ನಲ್ಲಿ 207 ರನ್‌ಗಳಿಗೆ ಆಲೌಟ್ ಆಗಿತ್ತು. ಬ್ಯಾಟಿಂಗ್‌ನಲ್ಲೂ ಮಿಂಚಿದ ಮಿಚೆಲ್ ಸ್ಟಾರ್ಕ್ 58 ರನ್ ಹೊಡೆದರೆ ಹೇಜಲ್‌ವುಡ್ 17 ರನ್ ಹೊಡೆದು ಔಟಾದರು. ದ. ಆಫ್ರಿಕಾ ಪರ ಕಗಿಸೊ ರಬಾಡ 4 ವಿಕೆಟ್, ಲುಂಗಿ ಎನ್‌ಗಿಡಿ 3 ವಿಕೆಟ್ ಪಡೆದರು. ಜಾನ್ಸೆನ್, ಮುಲ್ಡರ್, ಮಾರ್ಕ್ರಾಮ್ ತಲಾ ಒಂದೊಂದು ವಿಕೆಟ್ ಪಡೆದರು.

ಬೌಲರ್‌ಗಳ ಪರಾಕ್ರಮ

ಚಾಂಪಿಯನ್‌ಶಿಪ್ ಟೆಸ್ಟ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ನಾಯಕ ತೆಂಬಾ ಬವುಮಾ ಟಾಸ್ ಗೆದ್ದು ಫೀಲ್ಡಿಂಗ್ ಆಯ್ದುಕೊಂಡಿದ್ದರು. ಕಾಂಗರೂಗಳು ಮೊದಲ ಇನ್ನಿಂಗ್ಸ್‌ನಲ್ಲಿ 56.4 ಓವರ್‌ಗಳಲ್ಲಿ ಎಲ್ಲ ವಿಕೆಟ್‌ಗಳನ್ನು ಕಳೆದುಕೊಂಡು 212 ರನ್ ಗಳಿಸಿದರೆ ಆಸೀಸ್ ಬೌಲರ್‌ಗಳ ಮಾರಕ ದಾಳಿಗೆ ನಲುಗಿದ್ದ ದಕ್ಷಿಣ ಆಫ್ರಿಕಾ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ 57.1 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡು ಕೇವಲ 138 ರನ್ ಗಳಿಸಲಷ್ಟೇ ಶಕ್ತವಾಗಿತ್ತು. ಮೊದಲ ಇನ್ನಿಂಗ್ಸ್‌ನಲ್ಲಿ 74 ರನ್‌ಗಳ ಮುನ್ನಡೆ ಕಾಯ್ದುಕೊಂಡ ಆಸ್ಟ್ರೇಲಿಯಾ 2ನೇ ಇನ್ನಿಂಗ್ಸ್‌ನಲ್ಲಿ 65 ಓವರ್‌ಗಳಲ್ಲಿ 207 ರನ್‌ಗೆ ಆಲೌಟ್ ಆಗಿತ್ತು. 282 ರನ್‌ಗಳ ಗುರಿ ಗೆಲುವಿನ ಗುರಿ ಪಡೆದ ದ. ಆಫ್ರಿಕಾ ಈ ಬಾರಿ ಎಡವಲಿಲ್ಲ. ದಕ್ಷಿಣ ಆಫ್ರಿಕಾ ಪರ ಮೊದಲ ಇನ್ನಿಂಗ್ಸ್‌ನಲ್ಲಿ 5 ಎರಡನೇ ಇನ್ನಿಂಗ್ಸ್‌ನಲ್ಲಿ 4 ವಿಕೆಟ್ ಪಡೆದ ಕಗಿಸೋ ರಬಾಡಾ ಒಟ್ಟು 9 ವಿಕೆಟ್ ಕಬಳಿಸಿ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು.

ಡಬ್ಲ್ಯುಟಿಸಿ ಫೈನಲ್ ಆತಿಥ್ಯ ಭಾರತದ ಮನವಿ ತಿರಸ್ಕೃತ

ಲಂಡನ್: ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ ಮುಂದಿನ ಮೂರು ಆವೃತ್ತಿಗಳಾದ 2027, 2029 ಮತ್ತು 2031ರಲ್ಲಿ ನಿಗದಿಯಾಗಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯವನ್ನು ಇಂಗ್ಲೆಂಡ್‌ನಲ್ಲಿಯೇ ಆಯೋಜಿಸುವುದನ್ನು ಮುಂದುವರಿಸಲು ನಿರ್ಧರಿಸಿದೆ. ಫೈನಲ್ ಆಯೋಜಿಸುವ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಮನವಿಯನ್ನು ಐಸಿಸಿ ತಿರಸ್ಕರಿಸಿದೆ ಎನ್ನಲಾಗಿದೆ. 2019 ರಲ್ಲಿ ಆರಂಭವಾದ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನ ಮೂರು ಆವೃತ್ತಿ ಕೂಡ ಇಂಗ್ಲೆಂಡ್‌ನಲ್ಲಿಯೇ ನಡೆದಿದೆ. 2021 ರಲ್ಲಿ ನ್ಯೂಜಿಲೆಂಡ್ ಸೌತಾಂಪ್ಟನ್‌ನಲ್ಲಿ ಮತ್ತು 2023 ರಲ್ಲಿ ಆಸ್ಟ್ರೇಲಿಯಾ ದಿ ಓವಲ್‌ನಲ್ಲಿ ಗೆಲುವು ಸಾಧಿಸಿತ್ತು. ಐತಿಹಾಸಿಕ ಲಾರ್ಡ್ಸ್ ಕ್ರಿಕೆಟ್ ಮೈದಾನದಲ್ಲಿ ನಡೆದ 2025ರ ಸಾಲಿನ ಟೆಸ್ಟ್ ಚಾಂಪಿಯನ್‌ಶಿಪ್‌ನಲ್ಲಿ ದ. ಆಫ್ರಿಕಾ ಗೆಲುವಿನ ಭಾಷ್ಯ ಬರೆದಿದೆ. ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯವನ್ನು ಕ್ರಿಕೆಟ್ ಆಡುವ ವಿವಿಧ ರಾಷ್ಟ್ರಗಳ ನಡುವೆ ಪರ್ಯಾಯವಾಗಿ ನಡೆಸಬೇಕೆಂಬ ಒತ್ತಾಯ ಪದೇ ಪದೆ ಕೇಳಿ ಬಂದರೂ ಐಸಿಸಿ ಮಾತ್ರ ಈ ಆತಿಥ್ಯವನ್ನು ಇಂಗ್ಲೆಂಡ್‌ಗೆ ಮೀಸಲಿರಿಸಿದೆ. ಮುಂದಿನ ತಿಂಗಳು ಸಿಂಗಾಪುರದಲ್ಲಿ ನಡೆಯಲಿರುವ ಐಸಿಸಿಯ ವಾರ್ಷಿಕ ಸಮ್ಮೇಳನದಲ್ಲಿ ಆತಿಥ್ಯದ ಅಂತಿಮ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ.

ಗೆಲುವು ತಂದು ಕೊಟ್ಟ ಶತಕದ ಜೊತೆಯಾಟ

2ನೇ ಇನ್ನಿಂಗ್ಸ್‌ನಲ್ಲಿ 70 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡು ದ. ಆಫ್ರಿಕಾ ಸಂಕಷ್ಟಕ್ಕೀಡಾಗಿತ್ತು. ಈ ವೇಳೆ ಜೊತೆಯಾದ ನಾಯಕ ತೆಂಬಾ ಮತ್ತು ಮಾರ್ಕ್ರಂ ಜೋಡಿ 3ನೇ ವಿಕೆಟಿಗೆ ಬರೋಬ್ಬರಿ 147 ರನ್‌ಗಳ ಜೊತೆಯಾಟ ನೀಡಿತು. ಆಸೀಸ್ ಬೌಲರ್‌ಗಳನ್ನು ಸಮರ್ಥವಾಗಿ ಎದುರಿಸಿ ಕ್ರೀಸ್‌ನಲ್ಲಿ ಭದ್ರವಾಗಿ ನೆಲೆಯೂರಿದ ತೆಂಬಾ 116 ಎಸೆತಗಳಲ್ಲಿ 69 ರನ್ ಗಳಿಸಿ ಔಟಾದರು. ಇದರ ಬೆನ್ನಲ್ಲೇ ಮಾರ್ಕ್ರಂ 207 ಎಸೆತಗಳಲ್ಲಿ 136 ರನ್ ಬಾರಿಸಿ ಔಟಾದರು. ರಾಯಲ್ ರಿಕಲ್ಟನ್ (6), ಮುಲ್ಡರ್ ಮತ್ತು (27) ಸ್ಟಬ್ಸ್ (8 ರನ್) ಬೇಗನೇ ಔಟಾದಾಗ ದ. ಆಫ್ರಿಕಾ ತಂಡದಲ್ಲಿ ಆತಂಕ ಮನೆ ಮಾಡಿತ್ತು. ಅಂತಿಮವಾಗಿ ಡೇವಿಡ್ ಬೆಡಿಂಗ್ಹ್ಯಾಮ್ ಅಜೇಯ 21 ರನ್, ಕೈಲ್ ವೆರ್ರೆನ್ ಅಜೇಯ 4 ರನ್ ಕೊಡುಗೆ ನೀಡಿ ತಂಡವನ್ನು ಗೆಲುವಿನ ದಡ ಸೇರಿಸಿದರು.

ಐಸಿಸಿ ಟೆಸ್ಟ್ ಚಾಂಪಿಯನ್

2019ರಲ್ಲಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಆರಂಭಿಸಲಾಯಿತು. ಚೊಚ್ಚಲ ಆವೃತ್ತಿಯಲ್ಲಿ ನ್ಯೂಜಿಲೆಂಡ್ ಚಾಂಪಿಯನ್ ಪಟ್ಟ ಅಲಂಕರಿಸಿತ್ತು. ಆದರೆ 2021-25ರ 2ನೇ ಆವೃತ್ತಿಯಲ್ಲಿ ಆಸ್ಟ್ರೇಲಿಯಾ ಚಾಂಪಿಯನ್ ಆಗಿ ಹೊರಹೊಮ್ಮಿತ್ತು. ಈ ಎರಡೂ ಆವೃತ್ತಿಗಳಲ್ಲೂ ಟೀಂ ಇಂಡಿಯಾ ರನ್ನರ್ ಅಪ್ ಪ್ರಶಸ್ತಿಗೆ ಪಾತ್ರವಾಗಿತ್ತು. ಇದೀಗ ಮೂರನೇ ಆವೃತ್ತಿಯಲ್ಲಿ ದಕ್ಷಿಣ ಆಫ್ರಿಕಾ ಚಾಂಪಿಯನ್ ಕಿರೀಟವನ್ನು ಮುಡಿಗೇರಿಸಿಕೊಂಡಿದೆ.

ಕಳಚಿದ ಚೋಕರ್ಸ್ ಹಣೆಪಟ್ಟಿ

ದಕ್ಷಿಣ ಆಫ್ರಿಕಾ ತಂಡ ಇಲ್ಲಿಯವರೆಗೆ ವಿಶ್ವಕಪ್, ಟಿ20 ಲೀಗ್ ಹಂತದಲ್ಲಿ ಉತ್ತಮ ಪ್ರದರ್ಶನ ನೀಡಿ ಸೆಮಿಫೈನಲ್ ಪ್ರವೇಶಿಸುತ್ತಿತ್ತು. ಆದ್ರೆ ಪ್ರತಿ ಬಾರಿಯೂ ಪ್ರತಿ ಬಾರಿಯೂ ಸೆಮಿಫೈನಲ್, ಫೈನಲ್‌ನಲ್ಲಿ ಸೋತು ಕಣ್ಣೀರಿನ ವಿದಾಯ ಹೇಳುತ್ತಿತ್ತು. ಐಸಿಸಿ ಏಕದಿನ ವಿಶ್ವಕಪ್‌ನಲ್ಲಿ ದ. ಆಫ್ರಿಕಾ 5 ಬಾರಿ ಸೆಮಿಫೈನಲ್‌ನಲ್ಲೇ ಸೋತಿತ್ತು. 1992, 1999, 2007, 2015, 2023 ರಲ್ಲಿ ಸೋಲು ಕಂಡಿತ್ತು. ಇತ್ತೀಚಿನ ಚಾಂಪಿಯನ್ಸ್ ಟ್ರೋಫಿ ಟೂರ್ನಿಯ ಸೆಮಿ ಫೈನಲ್‌ನಲ್ಲಿ ಕಿವೀಸ್ ವಿರುದ್ಧ ಸೋತಿತ್ತು. ಕಳೆದ ವರ್ಷ ಟಿ20 ವಿಶ್ವಕಪ್ ಫೈನಲ್‌ನಲ್ಲಿ ಭಾರತದ ವಿರುದ್ಧ ಸೋತಿತ್ತು. ವಿಶ್ವಕಪ್‌ನ ಲೀಗ್ ಹಂತದಲ್ಲಿ ಅದ್ಭುತ ಪ್ರದರ್ಶನ ತೋರಿ ಪದೇ ಪದೆ ನಾಕೌಟ್ ಪಂದ್ಯಗಳಲ್ಲಿ ಎಡವುತ್ತಿರುವ ಕಾರಣ ಆಫ್ರಿಕಾಗೆ ಚೋಕರ್ಸ್ ಪಟ್ಟ ಅಂಟಿಕೊಂಡಿತ್ತು.

ಸಮಾಚಾರ ಸಣ್ಣದಲ್ಲ

ಟ್ಯಾಗೋರ್ ಮನೆಗೆ ಹಾನಿ

ಢಾಕಾ: ಬಾಂಗ್ಲಾದೇಶದ ಸಿರಾಜ್‌ಗಂಜ್ ಜಿಲ್ಲೆಯಲ್ಲಿರುವ ನೊಬೆಲ್ ಪುರಸ್ಕೃತ ರವೀಂದ್ರನಾಥ ಟ್ಯಾಗೋರ್ ಅವರ ನಿವಾಸದ ಮೇಲೆ ಕಿಡಿಗೇಡಿಗಳು ದಾಳಿ ನಡೆಸಿ ಪುಡಿಗಟ್ಟಿದ್ದಾರೆ. ಸದ್ಯ ವಸ್ತು ಸಂಗ್ರಹಾಲಯವಾಗಿರುವ ಟ್ಯಾಗೋರ್ ನಿವಾಸ ಕುಂಚೇರಿಬಾರಿಯಲ್ಲಿ ಪ್ರವಾಸಿಗ ಮತ್ತು ಸಿಬ್ಬಂದಿ ನಡುವೆ ಕ್ಷುಲ್ಲಕ ಕಾರಣಕ್ಕೆ ಜಗಳ ಉಂಟಾಗಿದೆ. ಈ ಜಗಳ ತಾರಕಕ್ಕೇರಿ ಸಾರ್ವಜನಿಕರ ನಡುವೆ ದೊಡ್ಡ ಗಲಾಟೆಯೇ ಉಂಟಾಗಿದೆ. ಉದ್ರಿಕ್ತರ ಗುಂಪು ಮ್ಯೂಸಿಯಂ ಮೇಲೆ ದಾಳಿ ನಡೆಸಿ, ಹಾನಿ ಮಾಡಿದ್ದಾರೆ.



ಕದನ ವಿರಾಮಕ್ಕೆ ಮತ ಹಾಕದ ಭಾರತ: ಕೈ ಕಿಡಿ

ದೆಹಲಿ: ಗಾಜಾದಲ್ಲಿನ ಇಸ್ರೇಲ್-ಹಮಾಸ್ ಕದನ ವಿರಾಮಕ್ಕೆ ವಿಶ್ವಸಂಸ್ಥೆಯ ಮಹಾಸಭೆ ನಿರ್ಣಯ ಕೈಗೊಂಡಿದ್ದು, ಭಾರತ ಮತದಾನದಿಂದ ದೂರ ಉಳಿದಿದೆ. ಕೇಂದ್ರ ಸರಕಾರದ ಈ ನಡೆಯನ್ನು ಶನಿವಾರ ಟೀಕಿಸಿರುವ ಕಾಂಗ್ರೆಸ್ ನಾಯಕರು, 'ಭಾರತ ಸರಕಾರದ ವಿದೇಶಾಂಗ ನೀತಿ ಪೂರ್ಣ ಹದಗೆಟ್ಟಿದೆ' ಎಂದು ಕಿಡಿಕಾರಿದ್ದಾರೆ. ಯುದ್ಧ, ನರಮೇಧ ವಿರುದ್ಧ ಮತ್ತು ನ್ಯಾಯಕ್ಕಾಗಿ ಭಾರತ ತಾತ್ವಿಕ ನಿಲುವು ತ್ಯಜಿಸಿದೆಯೇ? ಇದಕ್ಕೆ ಕೇಂದ್ರ ಸರಕಾರ ಉತ್ತರ ನೀಡಬೇಕು ಎಂದು ಪ್ರತಿಪಕ್ಷಗಳು ಬಯಸಿವೆ. ವಿದೇಶಾಂಗ ನೀತಿಯಲ್ಲಿ ಪದೇ ಪದೇ ಪ್ರಮಾದವಾಗುತ್ತಿದೆ. ಈ ಬಗ್ಗೆ ವಿದೇಶಾಂಗ ಸಚಿವರಿಗೆ ಪ್ರಧಾನಿ ಮೋದಿ ಕರೆ ಮಾಡಿ ಸ್ಪಷ್ಟ ಹೊಣೆಗಾರಿಕೆ ವಹಿಸಬೇಕು ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ 'ಎಕ್ಸ್' ಸಂದೇಶದಲ್ಲಿ ಆಗ್ರಹಿಸಿದ್ದಾರೆ.

{ ಪ್ರಿಯಾಂಕಾ ವಾದ್ರಾ } ಕಾಂಗ್ರೆಸ್ ಸಂಸದೆ

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಒಂದಿಡೀ ಸಮುದಾಯವನ್ನೇ ನಾಶ ಮಾಡುತ್ತಿರುವಾಗ ನಮ್ಮ ಮೌನ ಸರಿಯಲ್ಲ. ಇನ್ನೊಂದೆಡೆ ಇರಾನ್ ಮೇಲೆಯೂ ದಾಳಿ ಮಾಡುತ್ತಿದ್ದಾರೆ. ಒಂದು ದೇಶದ ಸಾರ್ವಭೌಮತ್ವ ಮತ್ತು ಅಂತಾರಾಷ್ಟ್ರೀಯ ಮಾನದಂಡಗಳ ಉಲ್ಲಂಘನೆ. ಇರಾನ್ ಸೇನಾನಿಗಳು, ವಿಜ್ಞಾನಿಗಳ ಹತ್ಯೆ. ಇದಕ್ಕೆ ನಮ್ಮ ಹರ್ಷೋದ್ಗಾರ ಸರಿಯಲ್ಲ.

ದುರಂತಕ್ಕೆ ಮುನ್ನ ಎಐ-171 ವಿಮಾನ ಸತತ 16 ಗಂಟೆ ಹಾರಾಟ | ಪ್ಯಾರಿಸ್‌ನಿಂದ ದೆಹಲಿಗೆ 6590 ಕಿಮೀ ದೂರ 14 ಗಂಟೆ ಸಂಚಾರ

ಪ್ಯಾರಿಸ್‌ನಿಂದ ದೆಹಲಿ, ಬಳಿಕ ಅಹಮದಾಬಾದ್!

ದೆಹಲಿ: ಅಹಮದಾಬಾದ್ ನಗರದಲ್ಲಿನ ಮೇಘನಿ ನಗರದ ಬಿಜೆ ವೈದ್ಯಕೀಯ ಕಾಲೇಜು ಹಾಸ್ಟೆಲ್‌ನ ಬಹುಮಹಡಿ ಕಟ್ಟಡದ ಮೇಲೆ ಪತನಗೊಂಡು 274 ಜೀವಗಳ ಬಲಿಪಡೆದ ಏರ್ ಇಂಡಿಯ 'ಎಐ-171' ವಿಮಾನ, ಈ ದುರಂತಕ್ಕೂ ಮುನ್ನ ಸತತವಾಗಿ 16 ಗಂಟೆಗಳ ಕಾಲ 7300 ಕಿಮೀಗಳಿಗೂ ಅಧಿಕ ದೂರ ಹಾರಾಟ ನಡೆಸಿ ದಣಿದಿತ್ತು ಎಂಬುದು ತಿಳಿದುಬಂದಿದೆ.

ಫ್ರಾನ್ಸ್ ರಾಜಧಾನಿ ನಗರ ಪ್ಯಾರಿಸ್‌ನಿಂದ ಭಾರತದ ರಾಜಧಾನಿ ನಗರ ದೆಹಲಿಗೆ ಎಐ-171 ವಿಮಾನ ಹಾರಾಟ ನಡೆಸಿತ್ತು. ಆ ಬಳಿಕ ದೆಹಲಿಯಿಂದ ಗುಜರಾತ್‌ನ ಅಹಮದಾಬಾದ್ ನಗರಕ್ಕೆ ಹಾರಿ ಬಂದಿತ್ತು. ಬಳಿಕ ಇಂಗ್ಲೆಂಡ್‌ನತ್ತ ಹೊರಟಿತ್ತು ಎಂದು ನಾಗರಿಕ ವಿಮಾನಯಾನ ಇಲಾಖೆ ಕಾರ್ಯದರ್ಶಿ ಸಮೀರ್ ಕುಮಾರ್ ಸಿನ್ಹಾ ಶನಿವಾರ ಸುದ್ದಿಗಾರರಿಗೆ ಮಾಹಿತಿ ನೀಡಿದ್ದಾರೆ.

ಏರ್ ಇಂಡಿಯ ವಿಮಾನ ದುರಂತದ 48 ಗಂಟೆ ಬಳಿಕ ಮೊದಲ ಸುದ್ದಿಗೋಷ್ಠಿ ನಡೆಸಿದ ಅವರು, ಜೂ.12ರಂದು ಅಹಮದಾಬಾದ್‌ನ ವಿಮಾನ ನಿಲ್ದಾಣದಿಂದ ತುಸು ದೂರದಲ್ಲಿ ಅಪಘಾತಕ್ಕೀಡಾಗುವುದಕ್ಕೂ ಮುನ್ನ ಇದೇ(ಎಐ-171) ವಿಮಾನ ಬಿಡುವಿಲ್ಲದಂತೆ ಹಾರಾಟ ನಡೆಸಿತ್ತು. ಆದರೆ, ಈ 16 ಗಂಟೆಗಳಿಗೂ ಅಧಿಕ ಕಾಲದ ವಿಮಾನ ಹಾರಾಟದಲ್ಲಿ ಯಾವುದೇ ಸಮಸ್ಯೆ ಕಾಣಿಸಿಕೊಂಡಿರಲಿಲ್ಲ ಎಂದು ವಿವರಿಸಿದರು. ವಿಮಾನಯಾನ ಸಚಿವ ರಾಮಮೋಹನ್ ನಾಯ್ಡು ಮಾತನಾಡಿ, ಶುಕ್ರವಾರ ಸಂಜೆಯೇ ಬ್ಲ್ಯಾಕ್ ಬಾಕ್ಸ್ ಸಿಕ್ಕಿದ್ದು, ಅದನ್ನು 'ಡಿಕೋಡ್' ಮಾಡಲಾಗುತ್ತಿದೆ. ದುರಂತಕ್ಕೆ ಮುನ್ನ ವಿಮಾನದಲ್ಲಿ ಆಗಿದ್ದಾದರೂ ಏನು? ಅಪಘಾತಕ್ಕೆ ನಿಖರವಾದ ಕಾರಣವೇನು ಎನ್ನುವ ಮಾಹಿತಿ ಇದರಿಂದ ತಿಳಿದುಬರಲಿದೆ. ಎಎಐಬಿ ತನಿಖೆ ಪೂರ್ಣಗೊಳಿಸಿ ಬಳಿಕ ವರದಿ ನೀಡಲಿದೆ. ಆಗ ದುರಂತಕ್ಕೆ ಕಾರಣವಾದ ನಿಖರ ಅಂಶ ಸ್ಪಷ್ಟವಾಗಿ ತಿಳಿದುಬರಲಿದೆ ಎಂದರು. ದುರಂತದ ಬಗ್ಗೆ ಬ್ರಿಟನ್, ಅಮೆರಿಕ ಕೂಡಾ ತನಿಖೆ ನಡೆಸುತ್ತಿವೆ. ಕೇಂದ್ರ ಸರಕಾರದ ಉನ್ನತ ಮಟ್ಟದ ಸಮಿತಿ ಸಹ ತನಿಖೆ ನಡೆಸುತ್ತಿದೆ ಎಂದರು.

ಛಿದ್ರದೇಹದ ತುಣುಕುಗಳು ಪತ್ತೆ

ಈ ಮಧ್ಯೆ, ಎಐ-171 ವಿಮಾನ ಪತನವಾಗಿ ಹೊತ್ತಿ ಉರಿದು ಭಸ್ಮವಾದ ಸ್ಥಳದ ಸುತ್ತಮುತ್ತಲೂ ಶೋಧ ನಡೆಸುತ್ತಿರುವ ಅಹಮದಾಬಾದ್ ಅಗ್ನಿಶಾಮಕ ಮತ್ತು ತುರ್ತು ಸೇವೆ (ಎಎಫ್‌ಇಎಸ್) ದಳದ ಸಿಬ್ಬಂದಿ ಕಳೆದ 24 ಗಂಟೆಗಳಲ್ಲಿ ಮತ್ತೊಂದು ಶವ ಮತ್ತು ಛಿದ್ರವಾದ ದೇಹದ ಕೆಲವು ಭಾಗಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಹೆಚ್ಚುವರಿ ಮುಖ್ಯ ಅಗ್ನಿಶಾಮಕ ಅಧಿಕಾರಿ ಜಯೇಶ್ ಖಾಡಿಯಾ, ಅಪಘಾತ ಸ್ಥಳದಲ್ಲಿ ತನಿಖೆಯಲ್ಲಿ ವಿಧಿವಿಜ್ಞಾನ ಮತ್ತು ವಾಯುಯಾನ ತಜ್ಞರಿಗೆ ಸಹಾಯ ಮಾಡುತ್ತಿರುವ ಅಗ್ನಿಶಾಮಕ ದಳದ ಸಿಬ್ಬಂದಿ ಶುಕ್ರವಾರ ಸುಟ್ಟುಹೋದ ಹಾಸ್ಟೆಲ್ ಕ್ಯಾಂಟೀನ್‌ನ ಅವಶೇಷಗಳಡಿ ಛಿದ್ರವಾಗಿರುವ ಮೃತದೇಹದ ಕೆಲವು ಭಾಗಗಳನ್ನು ಹೊರತೆಗೆದಿದ್ದಾರೆ. ಅದಲ್ಲದೇ ಶನಿವಾರ ಬೆಳಗ್ಗೆ ಒಂದು ಶವ ಪತ್ತೆ ಯಾಗಿದೆ ಎಂದಿದ್ದಾರೆ. ವಿಮಾನದ ಬಾಲ ರೆಕ್ಕೆ ಕ್ಯಾಂಟೀನ್‌ನ ಹಾನಿಗೊಳಗಾದ ಕಟ್ಟಡದ ಮೇಲೆ ಸಿಲುಕಿಕೊಂಡಿದ್ದರಿಂದ, ಅದನ್ನು ಉರುಳಿಸಲು ಕ್ರೇನ್ಗಳನ್ನು ಬಳಸಲಾಗುತ್ತಿದೆ. ಏರ್ ಇಂಡಿಯ ಅಧಿಕಾರಿಗಳು ಸ್ಥಳಕ್ಕೆ ಬಂದ ನಂತರ ನಾವು ಕಟ್ಟಡದಿಂದ ವಿಮಾನದ ಬಾಲ ಭಾಗ ದ ಕಿರುರೆಕ್ಕೆಗಳನ್ನು ತೆಗೆದು ಕೆಳಗೆ ತರಲು ನಿರ್ಧರಿಸಿದ್ದೇವೆ ಎಂದು ಖಾಡಿಯಾ ಹೇಳಿದರು.

ಸರಕಾರಿ ಆಸ್ಪತ್ರೆಗೆ 270 ಮೃತದೇಹ ರವಾನೆ

ಅಹಮದಾಬಾದ್: ನಗರದ ಹೊರವಲಯದ ಜನವಸತಿ ಪ್ರದೇಶ ದಲ್ಲಿ ಏರ್ ಇಂಡಿಯ ಎಐ 171 ವಿಮಾನ ಪತನವಾಗಿ ಮೃತಪಟ್ಟವರಲ್ಲಿ ಒಟ್ಟು 270 ಜನರ ಮೃತದೇಹಗಳನ್ನು ಅಹಮದಾಬಾದ್ ಸಿವಿಲ್ ಆಸ್ಪತ್ರೆಗೆ ತರಲಾಗಿದೆ ಎಂದು ವೈದ್ಯರು ಶನಿವಾರ ತಿಳಿಸಿದ್ದಾರೆ. ಈ ಬಗ್ಗೆ ಮಾತನಾಡಿದ ಬಿಜೆ ವೈದ್ಯಕೀಯ ಕಾಲೇಜಿನ ಕಿರಿಯ ವೈದ್ಯರ ಸಂಘದ ಅಧ್ಯಕ್ಷ ಡಾ. ಧವಲ್ ಗಮೇಟಿ, 'ಎಐ-171 ವಿಮಾನ ಪತನ ಸ್ಥಳದಿಂದ ಜೂ.12ರ ಸಂಜೆ ಯಿಂದ ಇಲ್ಲಿಯವರೆಗೆ 270 ಮೃತದೇಹಗಳು ಅಹಮ ದಾಬಾದ್ ಸರಕಾರಿ ಆಸ್ಪತ್ರೆಗೆ ಬಂದು ಸೇರಿವೆ ಎಂದು ಹೇಳಿದರು. ಮೃತ ವ್ಯಕ್ತಿಗಳ ಸಂಬಂಧಿಕರಿಂದ ಡಿಎನ್‌ಎ ಮಾದರಿ ಸಂಗ್ರಹಿಸಿ, ಮೃತದೇಹಗಳಿಗೆ ಹೋಲಿಸಿ ನೋಡಿ ಮೃತದೇಹಗಳನ್ನು ಗುರುತಿಸುವ ಪ್ರಕ್ರಿಯೆ ಪ್ರಸ್ತುತ ನಡೆಯುತ್ತಿದೆ. ಈ ಪ್ರಕ್ರಿಯೆ ಪೂರ್ಣಗೊಂಡ ನಂತರ ಮೃತದೇಹಗಳನ್ನು ಕುಟುಂಬವರ್ಗ ದವರಿಗೆ ಹಸ್ತಾಂತರಿಸಲಾ ಗುವುದು ಎಂದು ತಿಳಿಸಿದರು. ಅಂತೆಯೇ ಕಳೆದ 24 ಗಂಟೆಗಳಲ್ಲಿ ಮೇಘನಿ ನಗರ ಪ್ರದೇಶದ ವಿಮಾನ ಅಪಘಾತ ಸ್ಥಳದಿಂದ ಕೆಲವು ಮಾನವ ದೇಹದ ಭಾಗಗಳನ್ನು ಮತ್ತು ಒಂದು ಶವವನ್ನು ವಶಪಡಿಸಿಕೊಂಡಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಮೇ ಡೇ, ಮೇ ಡೇ.. ಲಿಫ್ಟ್ ಮಾಡಲಾಗುತ್ತಿಲ್ಲ...

ಕ್ಯಾಪ್ಟನ್ ಸುಮಿತ್ ಕಡೆಕ್ಷಣದ 5 ಸೆಕೆಂಡ್ ಆಡಿಯೊ ಲಭ್ಯ

- ದೆಹಲಿ-ಅಹಮದಾಬಾದ್ 775 ಕಿಮೀ, 1 ಗಂಟೆ 45 ನಿಮಿಷ
- ಮತ್ತೆ ಅಹಮದಾಬಾದ್‌ನಿಂದ ಇಂಗ್ಲೆಡ್‌ನತ್ತ ಹೊರಟಿದ್ದ ವಿಮಾನ



ಅಹಮದಾಬಾದ್: ಗುಜರಾತ್ ರಾಜ್ಯದ ಅಹಮದಾಬಾದ್ ನಗರದಲ್ಲಿ ಏರ್ ಇಂಡಿಯ ಸಂಸ್ಥೆ 'ಎಐ 171' ವಿಮಾನ ದುರಂತಕ್ಕೀಡಾಗುವ ಕೊನೆಯ ಕ್ಷಣಕ್ಕೂ ಮುನ್ನ ವಿಮಾನದ ಪೈಲಟ್ ಸುಮಿತ್ ಸಭ ರ್ವಾಲ್, ಏರ್ ಟ್ರಾಫಿಕ್ ಕಂಟ್ರೋಲ್ ಸೆಂಟರ್(ಎಟಿಸಿ)ಗೆ ನೀಡಿದ ಕಟ್ಟಕಡೆಯ 5 ಸೆಕೆಂಡ್‌ಗಳ ಸಂದೇಶದ ಆಡಿಯೊ ಮಾಧ್ಯಮಗಳಿಗೆ ಲಭ್ಯವಾಗಿದೆ.

ಅಹಮದಾಬಾದ್‌ನ ಸರದಾರ್ ವಲ್ಲಭಭಾಯಿ ಪಟೇಲ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ರನ್‌ವೇಯಿಂದ ಜೂನ್ 12ರ ಮಧ್ಯಾಹ್ನ 1 ಗಂಟೆ 38 ನಿಮಿಷ 50 ಸೆಕೆಂಡ್ ಆಗಿದ್ದಾಗ ಆಕಾಶಕ್ಕೆ ಜಿಗಿದ ವಿಮಾನ ನಂತರದ 30 ಸೆಕೆಂಡ್‌ಗಳಲ್ಲಿಯೇ ಪತನವಾಗಿದೆ. ಅದಕ್ಕೂ ಮೊದಲು, ಪತನಕ್ಕೆ ಕೆಲವೇ ಕ್ಷಣಗಳ ಮೊದಲು ವಿಮಾನದ ಪೈಲಟ್ ಸುಮಿತ್ ಸಭರ್ವಾಲ್, 'ಮೇ ಡೇ... ಮೇ ಡೇ... ವಿಮಾನ ಲಿಫ್ಟ್ ಆಗುತ್ತಿಲ್ಲ, ಒತ್ತಡವಿಲ್ಲ, ಶಕ್ತಿ ಕಳೆದುಕೊಳ್ಳುತ್ತಿದೆ, ಮೇಲೇರಿಸಲು ಸಾಧ್ಯವಾಗುತ್ತಿಲ್ಲ' ಎಂಬ ಸಂದೇಶ ವನ್ನು ರವಾನಿಸಿದ್ದಾರೆ. ಆ ನಂತರದ ಕೆಲ ಸೆಕೆಂಡ್‌ಗಳಲ್ಲಿಯೇ ಎಐ 171 ವಿಮಾನ ಬಿಜೆ ವೈದ್ಯಕೀಯ ಕಾಲೇಜಿನ ಹಾಸ್ಟೆಲ್ ಕಟ್ಟಡದ ಮೇಲೆ ಪತನವಾಗಿದೆ.

ರನ್‌ವೇಯಿಂದ ಮೇಲಕ್ಕೆ ಜಿಗಿದ ವಿಮಾನಕ್ಕೆ 625 ಅಡಿ ಎತ್ತರವನ್ನಷ್ಟೇ ತಲುಪಲು ಸಾಧ್ಯವಾಗಿದೆ. ಆ ಬಳಿಕ ನಿಮಿಷಕ್ಕೆ 475 ಅಡಿಗಳಷ್ಟು ವೇಗದಲ್ಲಿ ಕುಸಿಯಲಾರಂಭಿಸಿದೆ. ತಕ್ಷಣವೇ ಪೈಲಟ್ ಸುಮಿತ್ ಸಭರ್ವಾಲ್ ಮತ್ತು ಸಹ-ಪೈಲಟ್ ಕ್ಲೈವ್ ಕುಂದರ್ ವಿಮಾನ ಸಂಚಾರ ನಿಯಂತ್ರಣ(ಎಟಿಸಿ) ಕೇಂದ್ರಕ್ಕೆ 'ಮೇ ಡೇ' ಸಂದೇಶ ರವಾನಿಸಿದ್ದಾರೆ. ಮರುಕ್ಷಣವೇ 'ಎಟಿಸಿ' ವಿಮಾನದ ಕಾಕ್‌ಪಿಟ್‌ನಲ್ಲಿದ್ದ ಪೈಲಟ್ ಮತ್ತು ಸಹ ಪೈಲಟ್‌ಗಳನ್ನು ಸಂಪರ್ಕಿಸಿ ಮಾರ್ಗ ದರ್ಶನ ಮಾಡಲೆತ್ನಿಸಿದರೂ ಪ್ರಯೋಜವಾಗಿಲ್ಲ. ಎಟಿ ಸಿಯು ಕರೆಗಳಿಗೆ ಉತ್ತರಿಸಲು ಪೈಲಟ್‌ಗಳಾಗಲೀ, ವಿಮಾನವಾಗಲೀ ಇರಲೇ ಇಲ್ಲ.

ಪ್ರಧಾನಿ ನೆತನ್ಯಾಹು ಸುರಕ್ಷಿತ ಸ್ಥಳಕ್ಕೆ | ಟೆಹರಾನ್ ಬೂದಿ ಮಾಡುತ್ತೇವೆ: ಇಸ್ರೇಲ್

ಇಸ್ರೇಲ್ ಮೇಲೆ ಇರಾನ್ ಪ್ರತೀಕಾರ ದಾಳಿ

ಟೆಲ್‌ಅವಿವ್/ಟೆಹರಾನ್: ಧಾರ್ಮಿಕ ಕೇಂದ್ರಗಳಿರುವ ಜೆರುಸಲೇಂ ಮೇಲೆಯೇ ಇರಾನ್ ಸೇನಾಪಡೆಗಳು ದಾಳಿ ನಡೆಸುತ್ತಿರುವುದಕ್ಕೆ ಕಿಡಿಕಾರುತ್ತಿರುವ ಇಸ್ರೇಲ್, ಜೆರುಸಲೇಂ ಮೇಲಿನ ದಾಳಿಯನ್ನು ಇರಾನ್ ತಕ್ಷಣವೇ ನಿಲ್ಲಿಸಬೇಕು. ಇಲ್ಲವಾದಲ್ಲಿ ಟೆಹರಾನ್ ನಗರವನ್ನು ಸಂಪೂರ್ಣ ಸುಟ್ಟು ಬೂದಿ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಎರಡೂ ದೇಶಗಳ ಮಧ್ಯೆ ಕ್ಷಿಪಣಿ ದಾಳಿ, ಡ್ರೋನ್ ಬಳಸಿ ದಾಳಿ ನಡೆಸುವುದು ಶನಿವಾರವೂ ಮುಂದುವರಿದಿದೆ. ಶನಿವಾರ ಹಲವು ಸಂದರ್ಭ ಇಸ್ರೇಲ್‌ನ ನಗರಗಳಲ್ಲಿ ಸೈರನ್ ಬಾರಿ ಮೊಳಗುತ್ತಲೇ ಇತ್ತು. ಜನರೂ ಭಯದಿಂದ ಸುರಕ್ಷಿತ ಸ್ಥಳಗಳನ್ನು ಅರಸಿ ಓಡುವುದು ನಡೆದೇ ಇತ್ತು.

ಅಮೆರಿಕ, ಬ್ರಿಟನ್, ಫ್ರಾನ್ಸ್‌ಗೆ ಎಚ್ಚರಿಕೆ: ಟೆಲ್ ಅವಿವ್, ಜೆರುಸಲೇಂ ಸೇರಿದಂತೆ ಇಸ್ರೇಲ್‌ನ ವಿವಿಧ ನಗರಗಳ ಮೇಲೆ ಇರಾನ್ ಕ್ಷಿಪಣಿ ದಾಳಿ ನಡೆಸುತ್ತಿದೆ. ಇಸ್ರೇಲ್ ಮೇಲಿನ ಪ್ರತೀಕಾರದ ದಾಳಿಯನ್ನೇನಾದರೂ ಹಿಮ್ಮೆಟ್ಟಿಸಲು ಅಮೆರಿಕ, ಬ್ರಿಟನ್, ಫ್ರಾನ್ ದೇಶಗಳೇನಾದರೂ ಪ್ರಯತ್ನಿಸಿದರೆ ಮೂರೂ ದೇಶಗಳ ಪ್ರಾದೇಶಿಕ ಸೇನಾನೆಲೆಗಳ ಮೇಲೆ ದಾಳಿ ಮಾಡುವುದಾಗಿ ಇರಾನ್ ಬೆದರಿಕೆ ಹಾಕಿದೆ.

ಪರ್ಷಿಯನ್ ಗಲ್ಫ್ ದೇಶಗಳಲ್ಲಿನ ಮೂರೂ ದೇಶಗಳ ಸೇನಾನೆಲೆಗಳು, ಕೆಂಪು ಸಮುದ್ರದಲ್ಲಿನ ನೌಕಾಪಡೆ ಹಡಗುಗಳು, ಪ್ರಾದೇಶಿಕ ವಾಯುನೆಲೆಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುವುದಾಗಿ ಇರಾನ್ ಸರಕಾರ ಹೇಳಿರುವುದಾಗಿ ಟೆಹರಾನ್ ಮಾಧ್ಯಮ ವರದಿ ಮಾಡಿದೆ.

ಭಾರತ ಸಹಾಯವಾಣಿ: ಇಸ್ರೇಲ್-ಇರಾನ್ ನಡುವಿನ ಸೇನಾ ಸಂಘರ್ಷ ತೀವ್ರಗೊಳ್ಳುತ್ತಿರುವುದರಿಂದ ಇಸ್ರೇಲ್ ರಾಜಧಾನಿ ಟೆಲ್‌ಅವೀವ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಸಹಾಯವಾಣಿ ಆರಂಭಿಸಿದೆ. ಆ ಮೂಲಕ ಇಸ್ರೇಲ್‌ನಲ್ಲಿರುವ ಭಾರತ ಮೂಲದ ನಾಗರಿಕರಿಗೆ ನೆರವಾಗಲು ಸಿದ್ಧತೆ ಮಾಡಿಕೊಂಡಿದೆ. ಇಸ್ರೇಲ್ ಅಧಿಕಾರಿಗಳು ಸೂಚಿಸುವ ಸುರಕ್ಷತಾ ಕ್ರಮಗಳನ್ನು ಪಾಲಿಸುವಂತೆಯೂ ಇಸ್ರೇಲ್‌ಗೆ ವಲಸೆ ಬಂದಿರುವ ಭಾರತೀಯ ಪ್ರಜೆಗಳಿಗೆ ಸಲಹೆ ನೀಡಿದೆ.

ಶುಭಾಂಶು ಶುಕ್ಲಾ ಗಗನಯಾನ 19ಕ್ಕೆ

ದೆಹಲಿ: ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ, ಪೋಲೆಂಟ್ ಮತ್ತು ಹಂಗೆರಿಯ ಇತರೆ ಮೂವರು ಗಗನಾಯಾತ್ರಿಗಳನ್ನು ಹೊತ್ತು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ಹೊರಟಿರುವ 'ಆಕ್ಸಿಯಮ್ -4' ಗಗನನೌಕೆ ಇದೇ ಜೂ.19ರಂದು ಅಮೆರಿಕದ ಫ್ಲೋರಿಡಾ ದಲ್ಲಿರುವ 'ನಾಸಾ'ದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಉಡಾವಣೆಗೊಳ್ಳಲಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಶನಿವಾರ ಪ್ರಕಟಣೆ ಮೂಲಕ ತಿಳಿಸಿದೆ.

ಆಕ್ಸಿಯಮ್ ಸ್ಪೇಸ್ ಮತ್ತು ಸ್ಪೇಸ್‌ಎಕ್ಸ್ ಕಂಪನಿಗಳ ತಂತ್ರಜ್ಞರು ಜತೆಗೂಡಿ ಫಾಲ್ಕನ್ 9 ರಾಕೆಟ್‌ನ ಉಡಾವಣಾ ವಾಹನದಲ್ಲಿ ಕಂಡುಬಂದ ದ್ರವ ಆಮ್ಲಜನಕ ಸೋರಿಕೆ ಸಮಸ್ಯೆಯನ್ನು ಸರಿಪಡಿಸಿದ್ದಾರೆ. ಹಾಗಾಗಿ ಗಗನನೌಕೆಯ ಉಡ್ಡಯನಕ್ಕೆ ಜೂ.19ರಂದು ದಿನ ನಿಗದಿಪಡಿಸಲಾಗಿದೆ ಎಂದು ಇಸ್ರೊ ತಿಳಿಸಿದೆ. ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ(ಐಎಸ್‌ಎಸ್)ದಲ್ಲಿರುವ ಜ್ವೆಜ್ಡಾ ಸೇವಾ ಮಾಡ್ಯೂಲ್‌ನಲ್ಲಿನ ಒತ್ತಡ ಸಮಸ್ಯೆಯನ್ನು ಸರಿಪಡಿಸಲು ನಾಸಾ ತಂತ್ರಜ್ಞರ ಜತೆ ಕಾರ್ಯನಿರ್ವಹಿಸುತ್ತಿದ್ದೇವೆ ಎಂದು ಆಕ್ಸಿಯಮ್ ಸ್ಪೇಸ್ ಕಂಪನಿ ತಿಳಿಸಿದೆ.

ಮೊದಲಿಗೆ ಮೇ 29ರಂದು ಗಗನನೌಕೆ ಉಡಾವಣೆಗೆ ನಿರ್ಧರಿಸಲಾಗಿತ್ತು. ಆ ಬಳಿಕ ಜೂ.8, ಜೂ.10 ಮತ್ತು ಜೂ.11ರಂದು ಉಡಾವಣೆಗೆ ದಿನ ನಿಗದಿಪಡಿಸಿ ತಾಂತ್ರಿಕ ಕಾರಣಗಳಿಂದ ಮುಂದೂಡಲಾಗಿದೆ. ಎಲಾನ್ ಮಸ್ಕ್ ಒಡೆತನದ 'ಸ್ಪೇಸ್‌ಎಕ್ಸ್' ಕಂಪನಿಯ 'ಫಾಲ್ಕನ್ -9' ರಾಕೆಟ್‌ನಲ್ಲಿ ಉಡಾವಣೆಗೊಳ್ಳಬೇಕಿದ್ದ ಆಕ್ಸಿಯಮ್-4 ಬಾಹ್ಯಾಕಾಶ ಯಾನದ ಗಗನನೌಕೆಮಿಷನ್ ದ್ರವ ಆಮ್ಲಜನಕ ಸೋರಿಕೆ ದೋಷ ಕಡೆ ಕ್ಷಣದಲ್ಲಿ ಕಂಡುಬಂದಿದ್ದರಿಂದ ಉಡಾವಣೆ ಹಲವು ಬಾರಿ ಮುಂದೂಡಿಕೆಯಾಗಿದೆ.

ಸಮಾಚಾರ ಸಣ್ಣದಲ್ಲ

ಜೂ.21ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ

ಬೆಂಗಳೂರು: ಕಲಾದರ್ಪಣ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆ ಜೂ.21 ರಂದು ಬೆಳಗ್ಗೆ 8 ಗಂಟೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿದೆ. ಸಮಾರಂಭದಲ್ಲಿ ಕಲಾ ದರ್ಪಣ ಆರ್ಟ್ ರಿಫ್ಲೆಕ್ಟ್ಸ್ ಸಂಸ್ಥೆಯ ಪ್ರತಿಭಾ ವೇದಿಕೆ ಸೀಸನ್ 5 ಸಂಭ್ರಮದ ಅಂಗವಾಗಿ ವಿವಿಧ ಕ್ಷೇತ್ರ ಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ಸಾಧಕ ಗಣ್ಯರಿಗೆ ಕಲಾದರ್ಪಣ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಜಾವಾಣಿ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್, ನಟ ಅಭಿಷೇಕ್ ಉಪಸ್ಥಿತರಿರುತ್ತಾರೆ. ಈ ಬಾರಿ ಪ್ರಶಸ್ತಿಗೆ ಸಮಾಜ ಸೇವಕ ಟಿವಿ ಬಾಬು, ಬಿಬಿಎಂಪಿ ಮಾಜಿ ಅಧ್ಯಕ್ಷ ಎಂ.ಶಿವರಾಜು, ಸಮಾಜ ಸೇವಕಿ ಶೈಲಶ್ರೀ ಹುಗ್ಗಿ, ಒಮಾನ್ ದೇಶದ ಮಸ್ಕತ್ ಕನ್ನಡದ ಯುವ ಗಾಯಕ ಅನನ್ಯ ಪ್ರಸಾದ್ ಹಾಗೂ ಬಾಲ ಗಾಯಕರಾದ ಆಯುಷ್ ಮರಾಠ ಆಯ್ಕೆಯಾಗಿದ್ದಾರೆ. ಮಕ್ಕಳಿಗಾಗಿ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿದೆ. 8 ವರ್ಷದ ಒಳಗಿನ ಮಕ್ಕಳು, 12ವರ್ಷದ ಒಳಗಿನ ಮಕ್ಕಳು, 18ವರ್ಷದ ಒಳಗಿನ ಮಕ್ಕಳು ಮತ್ತು 18 ವರ್ಷ ಮೇಲ್ಪಟ್ಟವರಿಗೆ ಹೀಗೆ 4 ವರ್ಗದಲ್ಲಿ ನಡೆಯಲಿದ್ದು ಭಾಗವಹಿಸಿದ ಎಲ್ಲರಿಗೂ ಬಹುಮಾನ ಹಾಗೂ ಪ್ರಮಾಣಪತ್ರ ನೀಡಲಾಗುವುದು. ಆಸಕ್ತರು ಮೊ.9380671947 ಸಂಖ್ಯೆಗೆ ಕರೆ ಮಾಡಿ ನೊಂದಾಯಿಸಲು ಕೋರಲಾಗಿದೆ.

ಪುಸ್ತಕ ಖರೀದಿಗೆ ತೊಡಕು ನಿವಾರಿಸಿ

ಬೆಂಗಳೂರು: ಗ್ರಂಥಾಲಯ ಇಲಾಖೆಯಿಂದ ಖರೀದಿ ಮಾಡುವ ಪುಸ್ತಕಗಳನ್ನು ಏಕಗವಾಕ್ಷಿ ವ್ಯವಸ್ಥೆಯಲ್ಲಿ ತರುವುದಕ್ಕಿರುವ ಕಾನೂನು ತೊಡಕುಗಳನ್ನು ನಿವಾರಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಸಚಿವ ಶಿವರಾಜ ತಂಗಡಗಿ ಮನವಿ ಮಾಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರ ಇತ್ತೀಚೆಗೆ ಹಮ್ಮಿಕೊಂಡಿದ್ದ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ, ಏಕಗವಾಕ್ಷಿ ಯೋಜನೆ ಮುಂದುವರಿಸಲು ಎದುರಾಗಿರುವ ಕಾನೂನು ತೊಡಕನ್ನು ಸರಕಾರವು ತುರ್ತಾಗಿ ನಿವಾರಿಸಬೇಕು ಎಂದು ಪ್ರಾಧಿಕಾರದ ಅಧ್ಯಕ್ಷ ಮಾನಸ ಮನವಿ ಮಾಡಿದ್ದರು. ಆ ವೇಳೆ ಸಕಾರಾತ್ಮಕವಾಗಿ ಸ್ಪಂದಿಸಿದ್ದ ಶಿವರಾಜ ತಂಗಡಗಿ, ಮುಖ್ಯಮಂತ್ರಿ ಅವರ ಗಮನಕ್ಕೆ ತರುವುದಾಗಿ ಭರವಸೆ ನೀಡಿದ್ದರು. ಅದರಂತೆ ಈ ಬಗ್ಗೆ ಅವರು ಪತ್ರ ಬರೆದಿದ್ದಾರೆ. ಈ ಯೋಜನೆಗೆ ಪ್ರತ್ಯೇಕ ಲೆಕ್ಕ ಶೀರ್ಷಿಕೆ ಇರದ ಪರಿಣಾಮ ಗ್ರಂಥಾಲಯ ಕರವನ್ನು ಪುಸ್ತಕ ಖರೀದಿಗೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ತಾಂತ್ರಿಕ ತೊಡಕನ್ನು ಸರಿಪಡಿಸಬೇಕಿದೆ. ಅಗತ್ಯ ಲೆಕ್ಕ ಶೀರ್ಷಿಕೆ ಸೃಜಿಸಲು ಆರ್ಥಿಕ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಬೇಕು' ಎಂದು ತಿಳಿಸಿದ್ದಾರೆ.

ರಷ್ಯನ್ ಭಾಷಾ ಕೇಂದ್ರ ಉದ್ಘಾಟನೆ

ಬೆಂಗಳೂರು: ಬೆಂಗಳೂರು ನಗರ ವಿವಿಯ ಜಾಗತಿಕ ಭಾಷೆಗಳ ಕೇಂದ್ರವು ವಿಶ್ವವಿದ್ಯಾಲಯದ ಹೊಸ ಅಕಾಡೆಮಿಕ್ ಬ್ಲಾಕ್‌ನಲ್ಲಿ ರಷ್ಯನ್ ಭಾಷಾ ಕೇಂದ್ರದ ಉದ್ಘಾಟನೆ ಮಾಡಲಾಯಿತು.ಶವಿವಿಯ ಕುಲಸಚಿವ ಪ್ರೊ. ರಮೇಶ್ ಮಾತನಾಡಿ, ವಿದೇಶಿ ಭಾಷಾ ಶಿಕ್ಷಣದ,ವಿಶೇಷವಾಗಿ ರಷ್ಯನ್ ಭಾಷೆಯ ಮಹತ್ವದ ಬಗ್ಗೆ ಮಾತನಾಡಿ, ಸಾಂಸ್ಕೃತಿಕ ಅರ್ಥವಂತಿಕೆಯನ್ನು ನೀಡುವುದು, ವ್ಯಾಪಾರ ಸಂಬಂಧಗಳನ್ನು ಬಲಪಡಿಸುವುದು ಮತ್ತು ಸಾಹಿತ್ಯದ ಬೆಳವಣಿಗೆಗೆ ಸಹಕಾರಿಯಾಗುವುದು ಎಂದು ಒತ್ತಿ ಹೇಳಿದರು. ರಷ್ಯನ್ ಹೌಸ್ ದೆಹಲಿಯ ನಿರ್ದೇಶಕಿ ಡಾ. ಈ. ಎಸ್. ರೆಮಿಜೋವಾ ಮಾತನಾಡಿ, ರಷ್ಯನ್ ಕೌನ್ಸಿಲ್ ಭಾರತದಲ್ಲಿ ತನ್ನ 60ನೇ ವರ್ಷವನ್ನು ಆಚರಿಸುತ್ತಿದೆ. ಬೆಂಗಳೂರು ಸಿಟಿ ಯೂನಿವರ್ಸಿಟಿಯ ರಷ್ಯನ್ ಭಾಷಾ ಕೇಂದ್ರವು ದಕ್ಷಿಣ ಭಾರತದ ಏಕೈಕ ಕೇಂದ್ರವಾಗಿದೆ. ಈ ಕೇಂದ್ರವು ಪ್ರದರ್ಶನಗಳು, ಚಲನಚಿತ್ರ ಪ್ರದರ್ಶನಗಳು ಮತ್ತು ಶೈಕ್ಷಣಿಕ ಸಹಭಾಗಿತ್ವಗಳ ಮೂಲಕ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ವಿನಿಮಯದ ಕೇಂದ್ರವಾಗಿ ಕಾರ್ಯನಿರ್ವಹಿಸುವ ಉದ್ದೇಶ ಹೊಂದಿದೆ ಎಂದು ಹೇಳಿದರು. ಉದ್ಘಾಟನೆಯ ನಂತರ, ಸಂವಾದ ಕಾರ್ಯಕ್ರಮ ನಡೆಯಿತು. ಇದರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ವಿಭಾಗದ ಪ್ರೊ. ಸಿಂಧು ಜೆ., ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ನಿವೃತ್ತ ಪ್ರೊ. ಕೆ.ಸಿ. ಶಿವರೆಡ್ಡಿ ಹಾಗೂ ರಷ್ಯನ್ ಹೌಸ್ ನವದೆಹಲಿಯ ರಷ್ಯನ್ ಭಾಷಾ ಕೇಂದ್ರದ ಮುಖ್ಯಸ್ಥೆ ಮಿಸ್ ಎಕಟರಿನಾ ದಿನ್ಯಾಕ್ ಭಾಗವಹಿಸಿದ್ದರು. ಅವರು ಕುವೆಂಪು ಮತ್ತು ಪುಷ್ಕಿನ್ ಅವರ ಸಾಹಿತ್ಯ ಪರಂಪರೆಯ ಕುರಿತು ಚರ್ಚಿಸಿದರು.

{ ಎಚ್.ಕೆ.ಪಾಟೀಲ್ } ಸಚಿವ

ಆರ್‌ಸಿಬಿ ಕಾಲ್ತುಳಿತ ದುರಂತದ ಬಳಿಕ ಜನರ ನಿರ್ವಹಣೆ ಮಾಡುವ ಸಲುವಾಗಿ ವಿಶೇಷ ಕಾನೂನಿನ ತರಲು ಚರ್ಚೆ ನಡೆದಿದೆ. ಕಾನೂನು ಮಾಡೋದಕ್ಕೆ ನಮ್ಮ ಇಲಾಖೆ ಕರುಡು ಮಸೂದೆ ಸಿದ್ಧ ಆಗಿದೆ. ಮುಂದಿನ ವಾರದಲ್ಲಿ ಕ್ಯಾಬಿನೇಟ್ ಗಮನಕ್ಕೆ ತರಲಾಗು ವುದು, ಸಂಪುಟ ಒಪ್ಪಿದರೆ, ಶೀಘ್ರವೇ ಕಾರ್ಯರೂಪಕ್ಕೆ ಬರುತ್ತದೆ.



ಕಳಪೆ ಆಹಾರ ಮಾರಾಟದಲ್ಲಿ ಕರ್ನಾಟಕಕ್ಕೆ 2ನೇ ಸ್ಥಾನ | 135 ಆಹಾರ ಮಾರಾಟ ಸಂಸ್ಥೆಗಳ ಪರವಾನಗಿ ರದ್ದು

ಕಳಪೆ ಆಹಾರ ಸೇವನೆ: ಐವರಲ್ಲಿ ಒಬ್ಬರಿಗೆ ಬೊಜ್ಜು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಇತ್ತೀಚಿನ ವರ್ಷಗಳಲ್ಲಿ ಗುಣಮಟ್ಟ ಆಹಾರ ಬದಲಾಗಿ ಕಲಬೆರಕೆ ಆಹಾರ ಸೇರುತ್ತಿರುವ ಪ್ರಕರಣ ಬೆಳಕಿಗೆ ಬರುತ್ತಿದ್ದು, ಇದರ ಪರಿಣಾಮ ದಿಂದ ಐವರಲ್ಲಿ ಒಬ್ಬರಿಗೆ ಬೊಜ್ಜು ಸಮಸ್ಯೆ ಕಾಡುತ್ತಿದೆ.

ಕಲಬೆರಕೆ ಆಹಾರ ಸೇವನೆಯಿಂದ ಅಲ್ಜೈಮರ್, ಪಾರ್ಕಿನ್‌ಸನ್, ಹೃದಯಾಘಾತ, ಕ್ಯಾನ್ಸರ್, ಕಿಡ್ನಿ, ಉದರ, ಮಿದುಳು, ಶ್ವಾಸಕೋಶ ಸಮಸ್ಯೆ, ಮಧುಮೇಹ ಮತ್ತು ರಕ್ತದೊತ್ತಡ ಸೇರಿ ಇನ್ನಿತರ ಗಂಭೀರ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಐದಾರು ತಿಂಗಳಲ್ಲಿ ಕಾಟನ್ ಕ್ಯಾಂಡಿ, ಗೋಬಿ, ಕಬಾಬ್‌ಗೆ ಕೃತಕ ಬಣ್ಣ ಬಳಕೆ ನಿಷೇಧಿಸಲಾಗಿದೆ. ಇಡ್ಲಿ ತಯಾರಿಕೆಯಲ್ಲಿ ಬಳಸುವ ಪ್ಲಾಸ್ಟಿಕ್‌ನಲ್ಲೂ ರಾಸಾಯನಿಕ ಅಂಶ ಪತ್ತೆಯಾಗಿರುವುದು ಆತಂಕ ತಂದೊಡ್ಡಿದ್ದು, ಕಲಬೆರಕೆ ಆಹಾರ ತಯಾರಿಕೆ ಗಂಭೀರತೆ ಸಾಕ್ಷಿಯಾಗಿದೆ. ಅಧ್ಯಯನವೊಂದರ ಪ್ರಕಾರ ಎಣ್ಣೆಯಿಂದ ತಯಾರಿಸಿದ ಪದಾರ್ಥಗಳ ಸೇವನೆಯಿಂದ ಐವರಲ್ಲಿ ಒಬ್ಬರಿಗೆ ಬೊಜ್ಜು ಸಮಸ್ಯೆ ಕಾಡುತ್ತಿದೆ.

ಕಳೆದ ವರ್ಷ 14,200 ವಿವಿಧ ಆಹಾರ ಮಾದರಿ ಪರೀಕ್ಷಿಸಲಾಗಿದ್ದು, ಇದರಲ್ಲಿ 150 ಅಸುರಕ್ಷಿತ, 80 ಕಳಪೆ ಗುಣಮಟ್ಟ ಅಂಶ ಪತ್ತೆಯಾಗಿವೆ. ದೇಶದ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕಳಪೆ ಆಹಾರ ಮಾರಾಟದಲ್ಲಿ ಕರ್ನಾಟಕವೇ 2ನೇ ಸ್ಥಾನದಲ್ಲಿದೆ. ಕಳಪೆ ಗುಣಮಟ್ಟದ ಆಹಾರ ಹಾಗೂ ಕಲಬೆರಕೆ ಆಹಾರ ಮಾರಾಟ ದೃಢಪಟ್ಟ ಹಿನ್ನೆಲೆಯಲ್ಲಿ ಆಹಾರ ಸುರಕ್ಷತೆ, ಮಾನದಂಡಗಳ ಕಾಯಿದೆ ಅನ್ವಯ 2024ರಿಂದ 2025ರ ಮಾರ್ಚ್ 25ರವರೆಗೆ 135 ಆಹಾರ ಮಾರಾಟ ಸಂಸ್ಥೆಗಳ ನೋಂದಣಿ ಹಾಗೂ ಪರವಾನಗಿಯನ್ನು ರಾಜ್ಯದಲ್ಲಿ ರದ್ದುಪಡಿಸಿದೆ. ರಾಜ್ಯದಲ್ಲಿ 6 ಲಕ್ಷಕ್ಕೂ ಅಧಿಕ ಆಹಾರ ಉದ್ದಿಮೆ ಗಳಿಗೆ ಪರವಾನಗಿ ನೀಡಲಾಗಿದೆ. ಅಂದಾಜು 14 ಲಕ್ಷ ಆಹಾರ ಉದ್ದಿಮೆಗಳು ನೋಂದಣಿ ಮಾಡಿಕೊಂಡಿವೆ. ಸಾರ್ವಜನಿಕರಿಗೆ ಗುಣಮಟ್ಟ ಆಹಾರ ಒದಗಿಸುವುದು ಆಹಾರ ಉದ್ದಿಮೆಗಳ ಕರ್ತವ್ಯ. ಆದರೆ, ಬಹುತೇಕ ಹೋಟೆಲ್, ರಸ್ತೆಬದಿಯಲ್ಲಿ ಮಾರಾಟ ಮಾಡುವವರು ಆಹಾರ, ಸಿಹಿ, ಖಾರ ತಿನಿಸು, ಕರಿದ ಪದಾರ್ಥಗಳಲ್ಲಿ ರುಚಿ ಹೆಚ್ಚಿಸಲು, ಬಣ್ಣದಿಂದ ಆಕರ್ಷಿಸಲು ಅಪಾಯಕಾರಿ ರಾಸಾಯನಿಕ ಅಂಶ ಬಳಸಲಾಗುತ್ತಿದೆ.

ದಂಡಕ್ಕೆ ಸೀಮಿತವಾದ ಶಿಕ್ಷೆ

ಹಣ್ಣು, ತರಕಾರಿ ಆಕರ್ಷಕವಾಗಿ ಕಾಣಲು ರಾಸಾಯನಿಕ ಬಳಸಲಾಗುತ್ತದೆ. ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ (ಆಹಾರ ಸುರಕ್ಷತೆ ಹಾಗೂ ಗುಣಮಟ್ಟ ಇಲಾಖೆ) ಹೆಚ್ಚಾಗಿ ಬೆಣ್ಣೆ, ತುಪ್ಪ, ಹಾಲು, ಮೀನು, ಅಡುಗೆ ಎಣ್ಣೆ ಸೇರಿ ಇತರೆ ಆಹಾರ ಪದಾರ್ಥಗಳಲ್ಲಿ ಕಲಬೆರಕೆ ಅಂಶ ಹೆಚ್ಚು ಪತ್ತೆಹಚ್ಚಿದೆ. ಹೋಮ್ ಮೇಡ್ ಚಾಕೊಲೇಟ್, ಮಾಂಸ, ಕೋಳಿ ಉತ್ಪನ್ನ, ಹಣ್ಣು, ತರಕಾರಿ, ಸಿರಿಧಾನ್ಯ, ಜಾಮ್, ಜೆಲ್ಲಿ, ಖಾದ್ಯ ಎಣ್ಣೆ, ಹನಿ, ಬೆಲ್ಲ, ಆಹಾರ, ಕಾಫಿ, ಟೀ ಪುಡಿ, ಮೆಣಸಿನಕಾಯಿ ಪೌಡರ್, ಮಸಾಲೆ ಪದಾರ್ಥ, ದ್ವಿದಳ ಧಾನ್ಯ, ಬೇಕರಿ ಉತ್ಪನ್ನ, ಸಿಹಿ ತಿಂಡಿ, ಪಾನೀಯ, ಸಂಸ್ಕರಿಸಿದ ಆಹಾರ ಹಾಗೂ ಹೆಪ್ಪುಗಟ್ಟಿದ ಆಹಾರದಲ್ಲಿಯೂ ಕಲಬೆರಕೆ ಅಂಶಗಳು ಪತ್ತೆಯಾಗುತ್ತಿವೆ. ಆಹಾರ ಪದಾರ್ಥದಲ್ಲಿ ಅಂಶಗಳು ನಿಗದಿತ ಪ್ರಮಾಣದಲ್ಲಿ ಕಡಿಮೆ ಅಥವಾ ಕಲಬೆರಕೆ ಮಾಡಿದರೆ ಅಂತಹ ಅಪರಾಧಿಗಳಿಗೆ 25 ಸಾವಿರ ರು. ನಿಂದ 10 ಲಕ್ಷ ವರೆಗೆ ದಂಡ ಹಾಗೂ 2 ತಿಂಗಳಿಂದ 7ವರ್ಷದವರೆಗೆ ಜೈಲು ಶಿಕ್ಷೆಯಾಗಲಿದೆ. ರಾಜ್ಯದಲ್ಲಿ ಆಹಾರ ಸುರಕ್ಷತಾ ಅಧಿಕಾರಿಗಳ ಕೊರತೆ ಕಾಡುತ್ತಿದೆ. ನಿಯಮಿತ ತಪಾಸಣೆ ನಡೆಯುತ್ತಿಲ್ಲ .ಕೆಲವೆಡೆ ದಂಡ ವಿಧಿಸಿ ಪ್ರಕರಣ ಕೈಬಿಡಲಾಗುತ್ತಿದೆ.

ಮುಖ್ಯಾಂಶಗಳು

- ಹೋಟೆಲ್‌ಗಳಲ್ಲಿ ಗುಣಮಟ್ಟ ಆಹಾರ ಲಭ್ಯತೆ ಉದ್ದೇಶದಿಂದ ರಾಜ್ಯದ ಎಲ್ಲ ಬಗೆಯ ಹೋಟೆಲ್, ಬೇಕರ್‌ಗಳು, ಆನ್‌ಲೈನ್‌ನಲ್ಲಿ ಫುಡ್ ಡೆಲಿವರಿ ಮಾಡುವ ಕಂಪನಿಗಳು ಆಹಾರ ಸುರಕ್ಷತೆ ತರಬೇತಿ ಮತ್ತು ಪ್ರಮಾಣೀಕರಣ ಪತ್ರ ಕಡ್ಡಾಯ.
- ಕಾಯಿದೆ ಅನ್ವಯ 2006ರಿಂದ ಎಲ್ಲ ಆಹಾರ ಉದ್ದಿಮೆದಾರರು ಪೋಸ್ಟಾಕ್ ಪ್ರಮಾಣಪತ್ರ ಪಡೆಯುವುದು ಕಡ್ಡಾಯವಾಗಿದೆ. ಈ ಬಗ್ಗೆ 2017ರಲ್ಲಿ ಕೇಂದ್ರ ಸರಕಾರ ಆದೇಶ ಹೊರಡಿಸಿದೆ.
- ರಸ್ತೆ ಬದಿ ಹೋಟೆಲ್ ನಡೆಸುತ್ತಿರುವವರು ಸೇರಿ ಎಲ್ಲ ಬಗೆಯ ಹೋಟೆಲ್ ಮಾಲೀಕರು ಕಡ್ಡಾಯವಾಗಿ ಆಹಾರ ವ್ಯಾಪಾರ ನಿರ್ವಾಹಕರಿಗೆ (ಎಫ್‌ಬಿಒ) ಪೋಸ್ಟಾಕ್ ಪತ್ರ ಪಡೆಯಬೇಕು.
- ಪ್ರತಿ ಆಹಾರ ವ್ಯಾಪಾರದ ಕಾರ್ಯಾಚರಣಾ ಆವರಣದ ಆಹಾರ ವಿತರಣೆಯಲ್ಲಿ ಎಲ್ಲ ಅಥವಾ ಕನಿಷ್ಠ 5 ಆಹಾರ ನಿರ್ವಾಹಕರು ಕಡ್ಡಾಯವಾಗಿ ತರಬೇತಿ ಪಡೆಯಬೇಕು.

ಎಸ್‌ಬಿಐ ಸ್ಟಾಫ್ ಯೂನಿಯನ್ ಸಭೆಯಲ್ಲಿ ಆಗ್ರಹ | ಬೆಂಗಳೂರಿನಲ್ಲಿ ನಡೆದ 15ನೇ ಸಾಮಾನ್ಯ ಪರಿಷತ್ ಸಭೆ

ಪ್ರಾಂತೀಯ ಆಧಾರಿತ ನೇಮಕಕ್ಕೆ ಆಗ್ರಹ

ಬೆಂಗಳೂರು: ಗ್ರಾಹಕರಿಗೆ ಉತ್ತಮ ರೀತಿಯ ಸೇವೆ ನೀಡಲು ನೇಮಕಾತಿಗಳನ್ನು ಸ್ಥಳೀಯ ಅಥವಾ ಪ್ರಾಂತೀಯ ಆಧಾರದಲ್ಲಿ ಮಾಡಬೇಕಾಗುತ್ತದೆ. ಇದರೊಂದಿಗೆ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ನೇಮಕ ಸಂಖ್ಯೆಯನ್ನು ಹೆಚ್ಚಿಸಬೇಕು ಎನ್ನುವ ಅಭಿಪ್ರಾಯವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಸ್ಟಾಫ್ ಯೂನಿಯನ್ ಸಾಮಾನ್ಯ ಪರಿಷತ್ ಸಭೆಯಲ್ಲಿ ಆಗ್ರಹಿಸಲಾಗಿದೆ. ಅರಮನೆ ಮೈದಾನದಲ್ಲಿ ನಡೆದ 15ನೇ ಸಾಮನ್ಯ ಪರಿಷತ್ ಸಭೆಯಲ್ಲಿ, ಪ್ರಮುಖ ನಿರ್ಣಯಗಳನ್ನುಕೈಗೊಳ್ಳಲಾಗಿದೆ.

ಸಮಾವೇಶದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬೆಂಗಳೂರು ವೃತ್ತದ ಮುಖ್ಯ ಮಹಾಪ್ರಬಂಧಕರಾದ ಜೂಹಿ ಸ್ಮಿತಾ ಸಿನ್ಹಾ, ಮೇಘಾಲಯ ಹೈಕೋರ್ಟ್‌ನ ಮಾಜಿ ಮುಖ್ಯ ನ್ಯಾಯಮೂರ್ತಿ ಎಸ್. ವೈದ್ಯನಾಥನ್, ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ಸಂಗಾತಿ ಎಲ್. ಚಂದ್ರಶೇಖರ್ ಹಾಗೂ ಅಧ್ಯಕ್ಷ ಪಂಕಜ್ ಕೌಶಿಕ್ ಭಾಗವಹಿಸಿದ್ದರು.

ಛಚಂಛ

ಸಮಾವೇಶದಲ್ಲಿ ಸ್ಥಳೀಯರನ್ನು ನೇಮಿಸಿಕೊಳ್ಳಬೇಕು ಎನ್ನುವ ನಿರ್ಣಯದೊಂದಿಗೆ, ಸಹವರ್ತಿ ವರ್ಗದ ನಿಯಮಿತ ಕೆಲಸದ ಹೊರಗುತ್ತಿಗೆ ನಿಲ್ಲಿಸಬೇಕು. ಸ್ವಚ್ಛಗೊಳಿಸುವ ಮತ್ತು ಗುಡಿಸುವ ಕೆಲಸಗಳಿಗೆ ನಿಯೋಜಿಸಲಾದ ಗುತ್ತಿಗೆ ಕಾರ್ಮಿಕರನ್ನು ತೆರವುಗೊಳಿಸಿ, ತಾತ್ಕಾಲಿಕ ಅಧೀನ ಸಿಬ್ಬಂದಿಯನ್ನು ನಿಯೋಜಿಸಬೇಕು. ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು ರದ್ದುಗೊಳಿಸಿ ಹಳೆ ಪಿಂಚಣಿ ಯೋಜನೆಯನ್ನು ಮರುಸ್ಥಾಪಿಸಲು ಹಾಗೂ ಇತ್ತೀಚೆಗೆ ಕೇಂದ್ರ ಸರಕಾರ ಅನುಮೋದಿಸಿದ ಏಕೀಕೃತ ಪಿಂಚಣಿ ಯೋಜನೆಯನ್ನು ಹಿಂಪಡೆಯಲು ಆಗ್ರಹಿಸಿದ್ದಾರೆ.

3 ಜಿಲ್ಲೆಗಳಿಗೆ ರೆಡ್ ಅಲರ್ಟ್

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಭಾನುವಾರ ಭಾರಿ ಮಳೆಯಾಗಲಿದ್ದು, ಮೂರು ಜಿಲ್ಲೆಗಳಿಗೆ ರೆಡ್ ಅಲರ್ಟ್ ಘೋಷಿಸಲಾಗಿದೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗೆ ರೆಡ್ ಅಲರ್ಟ್ ನೀಡಲಾಗಿದೆ. ಕೆಲವೆಡೆ ಗುಡುಗು ಸಹಿತ ಧಾರಾಕಾರ ಮಳೆಯಾಗುವ ಸಾಧ್ಯತೆ ಇದೆ. ಬೆಳಗಾವಿ, ಧಾರವಾಡ, ಶಿವಮೊಗ್ಗ, ಚಿಕ್ಕಮಗಳೂರು, ಕೊಡುಗು ಜಿಲ್ಲೆಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಬೀದರ್, ಕಲಬುರಗಿ, ವಿಜಯಪುರ, ಯಾದಗಿರಿ, ಗದಗ, ಚಿತ್ರದುರ್ಗ, ಚಾಮರಾಜನಗರ, ಮಂಡ್ಯ, ಮೈಸೂರು, ಕೊಪ್ಪಳ, ಬಳ್ಳಾರಿ, ದಾವಣಗೆರೆ, ಹಾವೇರಿ, ತುಮಕೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಜೋರು ಮಳೆಯಾಗುವ ಬಗ್ಗೆ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಈ ಜಿಲ್ಲೆಗಳಿಗೆ ಯೆಲ್ಲೊ ಅಲರ್ಟ್ ನೀಡಿದೆ. ಕರಾವಳಿಯಲ್ಲಿ ಗಂಟೆಗೆ 40 ರಿಂದ 55 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದ್ದು, ಮೀನುಗಾರರು ಸಮುದ್ರ ಪ್ರದೇಶಕ್ಕೆ ತೆರಳದಂತೆ ಸೂಚಿಸಲಾಗಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಗುಡುಗು ಮತ್ತು ಭಾರಿ ಗಾಳಿ ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ಗಂಟೆಗೆ 30 ರಿಂದ 40 ಕೀ.ಮೀ ವೇಗದಲ್ಲಿ ಗಾಳಿ ಬೀಸಲಿದೆ ಎಂದು ಇಲಾಖೆ ಹೇಳಿದೆ. ಶನಿವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆಗಳ ಅವಧಿಯಲ್ಲಿ ಶಿವಮೊಗ್ಗ ಜಿಲ್ಲೆಯ ಆಗುಂಬೆಯಲ್ಲಿ 11 ಸೆಂಟಿಮೀಟರ್, ಮಂಗಳೂರು ವಿಮಾನ ನಿಲ್ದಾಣದಲ್ಲಿ 9, ಉಡುಪಿ 8, ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನಂಗಡಿ, ಉತ್ತರ ಕನ್ನಡ ಜಿಲ್ಲೆಯ ಗೇರುಸೊಪ್ಪ, ಭಟ್ಕಳ, ಶಕ್ತಿನಗರ, ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ಹಾಗೂ ವಿಜಯಪುರದ ಬಿ.ಬಾಗೇವಾಡಿಯಲ್ಲಿ ತಲಾ 7 ಸೆಂ.ಮೀ ಮಳೆ ದಾಖಲಾಗಿದೆ.

ಕೇಂದ್ರ ಸರಕಾರದ ಮೇಲೆ ಗೂಬೆ ಕೂರಿಸುವ ಪ್ರಯತ್ನ



ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿಯಲ್ಲಿ ಕುಳಿತು ಕೇಂದ್ರದ ಮೇಲೆ ಗೂಬೆ ಕೂರಿ ಸುವ ಪ್ರಯತ್ನ, ಕುತಂತ್ರ ಮತ್ತು ಷಡ್ಯಂತ್ರ ಮಾಡಿ ದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಮುಖ್ಯಮಂತ್ರಿ ದೊಡ್ಡ ಮನಸ್ಸು ಮಾಡಿ, 16ನೇ ಹಣಕಾಸಿನ ಆಯೋಗದ ಸಭೆಯಲ್ಲಿ ಭಾಗವಹಿಸಿದ್ದಾರೆ. ರಾಜ್ಯದ ಪರವಾಗಿ ವಿಚಾರ ಮಂಡನೆ ಮಾಡಿದ್ದು, ಅವರಿಗೆ ಅಭಿನಂದನೆಗಳು. ಕೇಂದ್ರದ ಸಭೆಯಲ್ಲಿ ಭಾಗವಹಿಸಲು ಮುಖ್ಯಮಂತ್ರಿಗಳಿಗೆ ಮುಜುಗರವೇ, ಇವರು ರಾಜ್ಯದ ಮುಖ್ಯಮಂತ್ರಿಯೇ ಅಥವಾ ಕಾಂಗ್ರೆಸಿನ ಮುಖ್ಯಮಂತ್ರಿಗಳೇ ಎಂದು ಬಿಜೆಪಿ ಕೇಳಿತ್ತು. ಹಣಕಾಸಿನ ಆಯೋಗದ ಸಭೆಯಲ್ಲಿ ಭಾಗವಹಿಸಿ ಹಣಕಾಸಿನ ವಿಚಾರ ಪ್ರಸ್ತಾಪ ಮಾಡಿ ಸರಿಪಡಿಸಿ ಎಂದು ಹೇಳಲಾಗಿತ್ತು ಎಂದರು.

ಮುಖ್ಯಮಂತ್ರಿ ಅವರನ್ನು ನೋಡಿದರೆ ಪಾಪ ಅನಿಸುತ್ತದೆ. ಗ್ಯಾರಂಟಿಗಳ ಅನುಷ್ಠಾನಕ್ಕೆ ಹಣ ಕ್ರೋಡೀಕರಿಸಲು ಸಾಧ್ಯವಾಗುತ್ತಿಲ್ಲ. ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳೇ ನಡೆಯುತ್ತಿಲ್ಲ. ಹಾಗಾಗಿ ಕೇಂದ್ರದ ಮೇಲೆ ಆರೋಪ ಮಾಡುತ್ತಿದ್ದಾರೆ. ಕರ್ನಾಟಕವು 100 ರು. ಕೊಟ್ಟರೆ ಕೇವಲ 13 ರು. ಬರುತ್ತಿದೆ ಎಂದು ಅರ್ಧಸತ್ಯವನ್ನಷ್ಟೇ ಅವರು ಹೇಳುತ್ತಿದ್ದಾರೆ. ಬಂದ ಅನುದಾನ ರಾಜ್ಯದಲ್ಲಿ ಸದ್ಬಳಕೆ ಆಗುತ್ತಿಲ್ಲ. ಕೇಂದ್ರ ಸರಕಾರದ ಯೋಜನೆಗಳಿಗೆ ಕತ್ತರಿ ಹಾಕುವ ಕೆಲಸ ಮಾಡುತ್ತಿದ್ದಾರೆ. ರಾಜ್ಯ ಸರಕಾರವು ತನ್ನ ವೈಫಲ್ಯಗಳನ್ನು ಮುಚ್ಚಿ ಹಾಕಲು ಕೇಂದ್ರದ ಮೇಲೆ ಗೂಬೆ ಕೂರಿಸುತ್ತಿದೆ. ಇದ್ಯಾವುದೂ ಸತ್ಯವಲ್ಲ ಎಂದರು.

ಜಾತಿ ಗಣತಿ ವಿಚಾರದಲ್ಲಿ ಈಗ ಜ್ಞಾನೋದಯ: ನಮ್ಮ ಹೋರಾಟಗಳ ಪರಿಣಾಮವಾಗಿ ಸುಮಾರು 3 ತಿಂಗಳ ಹಿಂದೆ ರಾಜ್ಯ ಸರಕಾರಕ್ಕೆ ಮುಜುಗರ ಆಗುತ್ತಿತ್ತು. ಆ ಸಂದರ್ಭದಲ್ಲಿ ಸಿದ್ದರಾಮಯ್ಯನವರು ಕಾಂತರಾಜು ವರದಿ ಅನುಷ್ಠಾನಕ್ಕೆ ತರುವುದಾಗಿ ಹೇಳಿದ್ದರು. ಮುಂದಿನ ಕ್ಯಾಬಿನೆಟ್ ಸಭೆಯಲ್ಲಿ ಮಂಡಿಸುವುದಾಗಿ ಹೇಳಿದರು. 4-5 ಕ್ಯಾಬಿನೆಟ್ ಸಭೆ ಆದರೂ ಅನುಷ್ಠಾನ ಆಗಲಿಲ್ಲ. 10 ವರ್ಷ ಕಳೆದಿದ್ದು, ಅಂಕಿಅಂಶಗಳು ಅವೈಜ್ಞಾನಿಕ. ಇದನ್ನು ತರಾತುರಿಯಲ್ಲಿ ಮಾಡಬಾರದು. ಹೊಸದಾಗಿ ಮಾಡಬೇಕಿದೆ ಎಂದು ಎಲ್ಲವೂ ಚರ್ಚೆ ನಡೆದಿದೆ ಎಂದರು.

ಜಾತಿಗಣತಿ ಕುರಿತು ಕಾಂಗ್ರೆಸಿನ ಡಿ.ಕೆ.ಶಿವಕುಮಾರ್ ಸೇರಿ ಸಚಿವರೂ ವಿರೋಧ ವ್ಯಕ್ತಪಡಿಸಿದ್ದರು. ಇದರ ನಡುವೆ ಈಗ ಅವರಿಗೆ ಜ್ಞಾನೋದಯವಾಗಿದೆ. ಯಾವಾಗ ಆರ್‌ಸಿಬಿ ವಿಜಯೋತ್ಸವದ ಕಾಲ್ತುಳಿತದಲ್ಲಿ 11 ಜನರು ಮೃತಪಟ್ಟರೋ, ಈಗ ವಿಷಯಾಂತರ ಮಾಡಲು ಜಾತಿ ಗಣತಿ ವಿಷಯ ಪ್ರಸ್ತಾಪಿಸಿದ್ದಾರೆ. ಅಂತಿಮವಾಗಿ ಈ ವಿಷಯದಲ್ಲಿ ಇವರು ಏನೂ ಮಾಡಲು ಸಾಧ್ಯವಿಲ್ಲ. ಕೇಂದ್ರವು ಈಗಾಗಲೇ ಜನ ಗಣತಿ, ಜಾತಿ ಜನಗಣತಿ ಮಾಡುವುದಾಗಿ ಘೋಷಿಸಿದೆ. ಜಾತಿ ಗಣತಿ ರಾಜ್ಯ ಸರಕಾರದ ಪರಿಮಿತಿಗೆ ಬರುತ್ತದೆಯೇ ಎಂಬ ಅನುಮಾನಗಳು ಹೆಚ್ಚಾಗಿವೆ. ಗೊಂದಲ ಸೃಷ್ಟಿಸಲು ಇದನ್ನು ಮಾಡುತ್ತಿದ್ದಾರೆ. ತಾರ್ಕಿಕ ಅಂತ್ಯಕ್ಕೆ ಒಯ್ಯುವ ಮನಸ್ಸು ರಾಜ್ಯ ಸರಕಾರ-ಸಿದ್ದರಾಮಯ್ಯನವರಿಗೆ ಇಲ್ಲ ಎಂದರು.

ನಡು ರಸ್ತೆಯಲ್ಲೇ ಹುಟ್ಟುಹಬ್ಬ: ಬಂಧನ

ಬೆಂಗಳೂರು: ನಡು ರಸ್ತೆಯಲ್ಲೇ ಹುಟ್ಟುಹಬ್ಬ ಆಚರಿಸಿಕೊಂಡು ವಾಹನ ಸಂಚಾರಕ್ಕೆ ಅಡಚಣೆ ಉಂಟು ಮಾಡಿದ್ದ ಬೀದಿ ಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷನನ್ನು ವಿದ್ಯಾರಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಕಳೆದ 12 ರಂದು ರಾತ್ರಿ ತನ್ನ ಹುಟ್ಟುಹಬ್ಬ ಆಚರಣೆಗಾಗಿ ಭಕ್ತವತ್ಸಲ ಎಂಬಾತ ನರಸೀಪುರ ಮುಖ್ಯರಸ್ತೆಯಲ್ಲಿ ಬೀದಿಬದಿ ವ್ಯಾಪಾರಸ್ಥರನ್ನು ಸೇರಿಸಿ ಹುಟ್ಟುಹಬ್ಬ ಆಚರಿಸಿಕೊಂಡಿದ್ದಾನೆ.

ಆ ವೇಳೆ ಪಟಾಕಿ ಸಿಡಿಸಿ ಗಲಾಟೆ-ಗದ್ದಲ ಮಾಡಿದ್ದಲ್ಲದೆ ಸಾರ್ವಜನಿಕರಿಗೆ ಉಪದ್ರ ನೀಡಿದ್ದರು. ಹುಟ್ಟುಹಬ್ಬ ಆಚರಣೆಯ ವಿಡಿಯೋವನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿಕೊಂಡಿದ್ದರು. ಪೊಲೀಸರ ಸೋಷಿಯಲ್ ಮೀಡಿಯಾದ ವಿಂಗ್ ಇದನ್ನು ಗಮನಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ಇದೀಗ ಸಂಘದ ಅಧ್ಯಕ್ಷ ಭಕ್ತವತ್ಸಲನನ್ನು ಬಂಧಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸರಕಾರಿ ಶಾಲೆಗಳ ಅಭಿವೃದ್ಧಿಗೆ ಕ್ರಮವಹಿಸಿ

ಬೆಂಗಳೂರು: ಸರ್ವಜ್ಞನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಸರಕಾರಿ ಶಾಲೆಗಳ ಅಭಿವೃದ್ಧಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಇಂಧನ ಸಚಿವ ಕೆ.ಜೆ.ಜಾರ್ಜ್ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಸರ್ವಜ್ಞನಗರ ಕ್ಷೇತ್ರದ ಸುಬ್ಬಣ್ಣಪಾಳ್ಯ ವಾರ್ಡ್ ಆರ್.ಎಸ್.ಪಾಳ್ಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಂಬೆಸಿ ಗಾಲ್ಫ್ ಲಿಂಕ್ಸ್ ತನ್ನ ಸಾಮಾಜಿಕ ಹೊಣೆಗಾರಿಕೆ ನಿಧಿಯಲ್ಲಿ ನಿರ್ಮಿಸಿರುವ 2 ಶಾಲಾ ಕೊಠಡಿಗಳು ಮತ್ತು ಒಂದು ಭೋಜನ ಕೊಠಡಿಯನ್ನು ಉದ್ಘಾಟಿಸಿದ ಬಳಿಕ ಶಾಲೆಯ ಮುಖ್ಯ ಶಿಕ್ಷಕರು ಮತ್ತು ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಚಿವರು, ಪ್ರಾಥಮಿಕ ಶಿಕ್ಷಣ ಆದ್ಯತೆಯಾಗಿರುವುದರಿಂದ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದರು. ಶಾಲೆಯಲ್ಲಿ ಕೆಲವು ಕುಂದುಕೊರತೆಗಳಿರುವ ಬಗ್ಗೆ ವಿದ್ಯಾರ್ಥಿಗಳ ಪೋಷಕರು ಮತ್ತು ಸ್ಥಳೀಯ ಕಾಂಗ್ರೆಸ್ ಮುಖಂಡರು ತಮ್ಮ ಗಮನಕ್ಕೆ ತಂದಾಗ ಪ್ರತಿಕ್ರಿಯಿಸಿದ ಸಚಿವರು, ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವಂತೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚಿಸಿದಲ್ಲದೆ, ಅವಶ್ಯಕತೆ ಇದ್ದರೆ ಬಿಬಿಎಂಪಿ ಮುಖ್ಯ ಆಯುಕ್ತರೊಂದಿಗೆ ಚರ್ಚಿಸುವಂತೆಯೂ ತಿಳಿಸಿದರು. ಹೊಸದಾಗಿ ನಿರ್ಮಿಸಿರುವ ಭೋಜನ ಕೊಠಡಿಯಲ್ಲಿ ಏಕಕಾಲದಲ್ಲಿ 200ರಿಂದ 250 ಮಕ್ಕಳು ಕುಳಿತು ಊಟ ಮಾಡಲು ಅವಕಾಶವಿದೆ. ಇಂತಹ ಭೋಜನ ಕೊಠಡಿ ಜತೆಗೆ ಶಾಲಾ ಕೊಠಡಿಗಳನ್ನು ನಿರ್ಮಿಸಿಕೊಟ್ಟ ಸಚಿವರಿಗೆ ಶಾಲಾ ಮಕ್ಕಳು ಮತ್ತು ಸಿಬ್ಬಂದಿ ಕೃತಜ್ಞತೆ ಸಲ್ಲಿಸಿದರು.

ಯಾರಾಗಲಿದ್ದಾರೆ ಕೆಎಸ್‌ಸಿಎ ಹಂಗಾಮಿ ಕಾರ್ಯದರ್ಶಿ?

ಬೆಂಗಳೂರು: ಆರ್‌ಸಿಬಿ ಸಂಭ್ರಮಾಚರಣೆಯ ವೇಳೆ ನಡೆದ ಕಾಲ್ತುಳಿತ ಪ್ರಕರಣದ ನೈತಿಕ ಹೊಣೆಹೊತ್ತು ಕೆಎಸ್‌ಸಿಎ ಕಾರ್ಯದರ್ಶಿ ಹಾಗೂ ಖಜಾಂಜಿಗಳ ರಾಜೀನಾಮೆಯ ಬೆನ್ನಲ್ಲೇ ಇದೀಗ ಶೀಘ್ರವೇ ಹಂಗಾಮಿ ಕಾರ್ಯದರ್ಶಿ ಹಾಗೂ ಖಜಾಂಜಿ ಯಾರೆಂಬ ಕುತೂಹಲ ಶುರುವಾಗಿದೆ. ಪ್ರಸ್ತುತ ವ್ಯವಸ್ಥಾಪಕ ಸಮಿತಿಯ ಅಧಿಕಾರಾವಧಿ ಸೆಪ್ಟೆಂಬರ್‌ವರೆಗೂ ಇರಲಿದ್ದು, ಅಲ್ಲಿಯವರೆಗೂ ಯಾವುದೇ ಬದಲಾವಣೆ ಮಾಡದಿರಲು ನಿರ್ಧರಿಸಲಾಗಿದೆ. ಮುಂದಿನ ದಿನಗಳಲ್ಲಿ ಮಧ್ಯಂತರ ಅವಧಿಗೆ ಕಾರ್ಯದರ್ಶಿ ಮತ್ತು ಖಜಾಂಚಿಯನ್ನು ನೇಮಿಸಬಹುದು. ಪ್ರಸ್ತುತ ವ್ಯವಸ್ಥಾಪಕ ಸಮಿತಿಯ ಅಧಿಕಾರವಧಿ ಸೆಪ್ಟೆಂಬರ್ 30ಕ್ಕೆ ಮುಕ್ತಾಯವಾಗಲಿದೆ. ಪ್ರಸ್ತುತ ವ್ಯವಸ್ಥಾಪಕ ಸಮಿತಿಯ ಸದಸ್ಯರಾಗಿರುವ ಎಂ.ಎಸ್. ವಿನಯ್ ಮತ್ತು ಕೆ.ವಿ. ಮಂಜುನಾಥ್ ರಾಜು ಅವರು ಹಂಗಾಮಿಯಾಗಿ ಕಾರ್ಯದರ್ಶಿ ಮತ್ತು ಖಜಾಂಚಿ ಹುದ್ದೆ ವಹಿಸಿಕೊಳ್ಳಲು ಮುಂಚೂಣಿಯಲ್ಲಿದ್ದಾರೆ.

ಗಾಯಾಳುಗಳ ಆರೋಗ್ಯ ವಿಚಾರಿಸಿದ ಡಿಸಿಎಂ ಡಿಕೆಶಿ

ಬೆಂಗಳೂರು: ಏರ್ ಇಂಡಿಯಾ ವಿಮಾನ ದುರಂತ ಹಿನ್ನೆಲೆಯಲ್ಲಿ ಅಹಮದಾಬಾದ್‌ನ ಜನರಲ್ ಆಸ್ಪತ್ರೆಗೆ ಕಾಂಗ್ರೆಸ್ ನಾಯಕರು ಭೇಟಿ ನೀಡಿ ಗಾಯಗೊಂಡವರ ಆರೋಗ್ಯ ವಿಚಾರಿಸಿದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಶನಿವಾರ ಅಹಮದಾಬಾದ್‌ಗೆ ಭೇಟಿ ನೀಡಿದ್ದು, ಅವರೊಂದಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್, ಎಐಸಿಸಿ ಕಾರ್ಯದರ್ಶಿ ನಾಸಿರ್ ಹುಸೇನ್, ಎಐಸಿಸಿ ಮಾಧ್ಯಮ ಮತ್ತು ಪ್ರಚಾರ ಘಟಕದ ಅಧ್ಯಕ್ಷ ಪವನ್ ಖೇರಾ ಮತ್ತಿತರರು ಶನಿವಾರ ಸಂಜೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು.

ನಂತರ ವಿಮಾನ ಪತನಗೊಂಡ ವೈದ್ಯಕೀಯ ವಿದ್ಯಾರ್ಥಿಗಳ ಹಾಸ್ಟೆಲ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಆಸ್ಪತ್ರೆ ಬಳಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು, ವಿಮಾನ ದುರಂತದಲ್ಲಿ ಗಾಯಗೊಂಡಿರುವವರ ಪೈಕಿ ಕೆಲವರನ್ನು ಭೇಟಿ ಮಾಡಿದೆವು. ಉಳಿದವರು ತೀರಾ ಸುಟ್ಟ ಪರಿಸ್ಥಿತಿಯಲ್ಲಿರುವ ಕಾರಣ, ಸೂಕ್ಷ್ಮ ಪರಿಸ್ಥಿತಿಯಲ್ಲಿ ಅವರನ್ನು ಭೇಟಿ ಮಾಡುವುದು ಬೇಡ ಎಂಬ ಸಲಹೆಯಿಂದಾಗಿ ಭೇಟಿ ಮಾಡಲಿಲ್ಲ. ಮಲ್ಲಿಕಾರ್ಜುನ ಖರ್ಗೆ ಅವರು ಗಾಯಾಳುಗಳ ಜತೆ ಮಾತನಾಡಿ ಆರೋಗ್ಯ ವಿಚಾರಿಸಿದರು ಎಂದು ಮಾಹಿತಿ ನೀಡಿದರು. ಗಾಯಾಳುಗಳ ಪರಿಸ್ಥಿತಿ ಹೇಗಿದೆ ಎಂದು ಕೇಳಿದಾಗ, ನಾವು ಭೇಟಿ ಮಾಡಿದ ಕೆಲವರು ಚೇತರಿಕೆ ಹಂತದಲ್ಲಿದ್ದಾರೆ. ಸುಟ್ಟ ಗಾಯಾಳುಗಳ ಪೈಕಿ ಸುಮಾರು 35- 40 ಜನರ ಪರಿಸ್ಥಿತಿ ಗಂಭೀರವಾಗಿದೆ ಎಂದು ಪರಿಸ್ಥಿತಿ ವಿವರಿಸಿದರು.



ಗುಜರಾತ್ ಅಹ್ಮದಾಬಾದ್‌ನಲ್ಲಿ ಏರ್ ಇಂಡಿಯಾ ವಿಮಾನ ಪತನಗೊಂಡ ವೈದ್ಯಕೀಯ ವಿದ್ಯಾರ್ಥಿಗಳ ಹಾಸ್ಟೆಲ್ ಸ್ಥಳಕ್ಕೆ ಎಐಸಿಸಿ ಅಧ್ಯಕ್ಷರೊಂದಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಎಐಸಿಸಿ ಕಾರ್ಯದರ್ಶಿ, ರಾಜ್ಯಸಭೆ ಸದಸ್ಯ ನಾಸಿರ್ ಹುಸೇನ್, ಎಐಸಿಸಿ ಮಾಧ್ಯಮ ಮತ್ತು ಪ್ರಚಾರ ಘಟಕದ ಅಧ್ಯಕ್ಷ ಪವನ್ ಖೇರಾ ಮತ್ತಿತರರು ಶನಿವಾರ ಸಂಜೆ ಭೇಟಿ ನೀಡಿದ್ದರು.

ಕ್ರೆಡಲ್‌ನಿಂದ ರನ್ ವಿತ್ ದಿ ವಿಂಡ್ ಮ್ಯಾರಥಾನ್

ಬೆಂಗಳೂರು: ವಿಶ್ವ ಪವನ ದಿನಕ್ಕೆ ಪೂರ್ವಭಾವಿಯಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮವು ಭಾರತೀಯ ಪವನ ಶಕ್ತಿ ಸಂಘದ ಮತ್ತು ಕೇಂದ್ರದ ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯದ ಸಹಯೋಗದೊಂದಿಗೆ ಆಯೋಜಿಸಿದ್ದ ರನ್ ವಿತ್ ದಿ ವಿಂಡ್ ಮ್ಯಾರಥಾನ್ ಯಶಸ್ವಿಯಾಗಿ ಪೂರ್ಣಗೊಂಡಿದೆ.

ಪವನ ಶಕ್ತಿಯ ಅಗಾಧ ಸಾಮರ್ಥ್ಯ ಮತ್ತು ಸುಸ್ಥಿರ ಭವಿಷ್ಯ ರೂಪಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸಲು ಆಯೋಜಿಸಿದ್ದ ರನ್ ವಿತ್ ದಿ ವಿಂಡ್ ಮ್ಯಾರಥಾನ್‌ಗೆ ನಾಗರಬಾವಿಯ ಕ್ರೆಡಲ್ ಕಚೇರಿಯ ಆವರಣದಲ್ಲಿ ಶನಿವಾರ ಚಾಲನೆ ನೀಡಲಾಗಿದ್ದು, ಹಸಿರು, ಸುಸ್ಥಿರ ಕರ್ನಾಟಕದತ್ತ ಸಾಮೂಹಿಕ ಹೆಜ್ಜೆಯ ದ್ಯೋತಕವಾಗಿದ್ದ 2ಕೆ ಮತ್ತು 5ಕೆ ವಿಭಾಗಗಳ ಓಟದಲ್ಲಿ ಶಾಲಾ, ಕಾಲೇಜು ವಿದ್ಯಾರ್ಥಿಗಳು, ವೃತ್ತಿಪರರು, ಸರಕಾರಿ ಅಧಿಕಾರಿಗಳು ಸೇರಿದಂತೆ 500ಕ್ಕೂ ಹೆಚ್ಚು ಓಟಗಾರರು ಉತ್ಸಾಹದಿಂದ ಭಾಗವಹಿಸಿದ್ದರು.

ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ರುದ್ರಪ್ಪಯ್ಯ ಮಾತನಾಡಿ, ನವೀಕರಿಸಬಹುದಾದ ಇಂಧನ ವಲಯವನ್ನು ಮುನ್ನಡೆಸುವಲ್ಲಿ ಪವನ ಶಕ್ತಿ ಪ್ರಮುಖ ಪಾತ್ರ ವಹಿಸುತ್ತದೆ. ಇಂಧನ ಸಚಿವ ಕೆ.ಜೆ. ಜಾರ್ಜ್‌ರ ನಾಯಕತ್ವ ಮತ್ತು ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಅವರ ಮಾರ್ಗದರ್ಶನದಲ್ಲಿ ರಾಜ್ಯವು ಶುದ್ಧ ಇಂಧನದ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದೆ. ನವೀಕರಿಸಬಹುದಾದ ಇಂಧನ ವಲಯದಲ್ಲಿ ಕರ್ನಾಟಕವನ್ನು ದೇಶದಲ್ಲಿಯೇ ನಂಬರ್ ಒನ್ ರಾಜ್ಯವನ್ನಾಗಿಸುವ ಗುರಿ ಹೊಂದಿದ್ದೇವೆ ಎಂದರು.

2024-25ರ ಹಣಕಾಸು ವರ್ಷದಲ್ಲಿ ರಾಜ್ಯ ದಾಖಲೆಯ 1,332 ಮೆಗಾವ್ಯಾಟ್ ಪವನ ಸಾಮರ್ಥ್ಯವನ್ನು ಸೇರ್ಪಡೆಗೊಳಿಸಿದ್ದು, ಇದು ದೇಶದಲ್ಲಿಯೇ ಅತಿ ಹೆಚ್ಚು. ಈ ಮೂಲಕ ಗುಜರಾತ್ ಮತ್ತು ತಮಿಳುನಾಡನ್ನು ನಾವು ಹಿಂದಿಕ್ಕಿದ್ದೇವೆ. ಒಟ್ಟು 7,351 ಮೆಗಾವ್ಯಾಟ್ ಸ್ಥಾಪಿತ ಪವನ ಸಾಮರ್ಥ್ಯದೊಂದಿಗೆ, ರಾಜ್ಯವು ದೇಶದ ಪವನ ವಿದ್ಯುತ್ ವಲಯದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದೆ ಎಂದರು. ಎಂಎನ್‌ಆರ್‌ಇ ನಿರ್ದೇಶಕ ಪಿ.ಕೆ. ದಾಶ್, ಎನ್‌ಐಡಬ್ಲ್ಯುಇನ ಪ್ರಧಾನ ನಿರ್ದೇಶಕ ರಾಜೇಶ್ ಕತ್ಯಾಲ್, ಕೆಎಸ್‌ಪಿಡಿಸಿಎಲ್‌ನ ಸಿಇಒ ಟಿ.ಎಂ. ಶಿವಪ್ರಕಾಶ್, ಕೆಎಸ್‌ಪಿಡಿಸಿಎಲ್ ಪ್ರಧಾನ ವ್ಯವಸ್ಥಾಪಕ ಅಮರನಾಥ್ ಇದ್ದರು.

Kms ASSOCIATES GROUP
kmsassociatesgroup.com

Scan QR code to get more Details

9353263519- Real estate
7483987685- Event
8217824217- Law
8431098947- Spiritual

Free
Education Relating to all sort of Legal and Spiritual Matters to create Awarness in Public Through YouTube Channels

Manjunath Advocate
@AdvocateManjunath · 298K subscribers · 651 videos
ಮಂಜುನಾಥ ಜಿ. ಬಿ.ಎ.ಎಲ್ ಎಲ್.ಬಿ. ...more
kmsassociatesgroup.com
Subscribed

Antaryami
@Antaryamispiritual · 228 subscribers · 41 videos
Manjunath Advocate & Spiritualist, ...more
Subscribed

Provide all sort of Real Estate and Event Services

KMS REAL ESTATE ASSOCIATES
COMPLETE ASSET SOLUTIONS

KMS EVENT ASSOCIATES
COMPLETE EVENT SOLUTIONS

KVC PRODUCTIONS

VIRAT SAI CREATIONS PRESENTS

ನಮ್ಮ ಚಿತ್ರದ ನಿರ್ಮಾಪಕರು
ಸಮೃದ್ಧಿ ವಿ ಮಂಜುನಾಥ್ ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು

GOLDENSTAR GANESH IN
PRODUCTION #3

SRINIVAS RAJU
HESHAM ABDUL WAHAB

ಮಣಿ

ಒಮ್ಮೆಗೇ ಆರು ಎಂಟು ಜಿಲೇಬಿ, ಅಂಬೊಡೆ ಚಪ್ಪರಿಸಿ ತಿಂದಾಗ ಹೊಟ್ಟೆ ತುಂಬುವುದು ಸಹಜ; ಆದರೆ ವಿವಿಧ ತಿನಿಸುಗಳನ್ನು ತಿಂದು ಎಷ್ಟೇ ಹೊಟ್ಟೆ ತುಂಬಿದ್ದರೂ, ಗಸಗಸೆ ಪಾಯಸದ ಹದ ರುಚಿಗೆ ಗೌರವ ಕೊಡಬೇಕೆನ್ನುವುದು ನಮ್ಮೂರಿನವರ ವಾದ. ಅದೂ ಅಲ್ಲದೆ, ಪಾಯಸವು ಎಲ್ಲಾ ಅಡುಗೆಗಳ ತಾಯಿಯಂತೆ! ಪಾಯಸ ಬೇಡವೆಂದರೆ ತಾಯಿಯನ್ನೇ ಬೇಡವೆಂದಂತೆ! ಹಾಗಾಗಿ ಎಲ್ಲರು ಎರಡೆರಡು ಆವರ್ತ ತಾಯಿ ಮೇಲಿನ ಗೌರವ ಮೆರೆಯುತ್ತಾರೆ.

ಭೋಜನಕಾಲೇ ಲಕ್ಷ್ಮೀಕಾಂತ ಸ್ಮರಣೇ!

» ಉಷಾ ನರಸಿಂಹನ್ ಮೈಸೂರು

ಜಿಲ್ಲಾ ಕೇಂದ್ರಗಳಲ್ಲಿ ಓದಿ ಬೆಳೆದ ನಾನು ಮದುವೆಯಾಗಿ ಹೋಗಿದ್ದು ಮಲ್ಲಸಮುದ್ರವೆಂಬ ಪುಟ್ಟ ಹಳ್ಳಿಗೆ. ಹೊಳೇನರಸೀಪುರ ತಾಲ್ಲೂಕಿನ ಚನ್ನರಾಯಪಟ್ಟಣಕ್ಕೂ, ನರಸೀಪುರಕ್ಕೂ ನಟ್ಟನಡುವಿನ ಅಗ್ರಹಾರ ಗೇಟ್‌ನಿಂದ ಅಜಮಾಸು ಮೂರು ಮೈಲು ದೂರದಲ್ಲಿ, ಮುಖ್ಯ ರಸ್ತೆಯಿಂದ ಒಳಗಿರುವ ನಮ್ಮ ಹಳ್ಳಿಗೆ ಟಾರ್ ರಸ್ತೆ, ಸ್ಕೂಲು, ಆಸ್ಪತ್ರೆ, ಬಸ್ಸು ಏನೂ ಸರಿಯಾಗಿ ಬಂದಿರದ ಕಾಲವದು; ಜಿಲ್ಲಾ ಕೇಂದ್ರದ ವ್ಯವಸ್ಥೆ, ಸೌಲಭ್ಯಗಳನ್ನು ಅಷ್ಟು ವರ್ಷ ಅನುಭವಿಸಿದ್ದ ನನಗೆ ಆ ಹಳ್ಳಿಯ ಬದುಕು ಹೊಸತು!

ಮಲ್ಲಸಮುದ್ರದಿಂದ ಎರಡು ಕಿಲೋಮೀಟರ್ ದೂರದಲ್ಲಿ ಹೇಮಾವತಿ ದಂಡೆಯಲ್ಲಿರುವ ಮತ್ತೊಂದು ಹಳ್ಳಿ–ಕಟ್ಟೆ ಹೊಸಳ್ಳಿ, ತುಸು ತಗ್ಗು ಪ್ರದೇಶದಲ್ಲಿರುವ, ಕೆಳಗಿನ ಊರಾದ್ದರಿಂದ ಕೆಳ್ಳೂರು ಎಂದು ಕರೆಸಿಕೊಳ್ಳುವ ಗ್ರಾಮವದು. ಗ್ರಾಮ ಚಿಕ್ಕದು, ಜನಸಂಖ್ಯೆ ಕಡಿಮೆ; ಹಾಗೆಂದು ಹಬ್ಬ ಹರಿದಿನಗಳ ಸಂಭ್ರಮಾಚರಣೆಯಲ್ಲಿ ಎಂದೂ ಹಿಂದೆ ಬಿದ್ದಿಲ್ಲ. ಅದ್ದೂರಿಯಾಗಿ ಮಾಡುವ ಗಣೇಶನ ಮಂಗಳಾರತಿ, ಗೌರಿಪೂಜೆ, ಉಗಾದಿ, ಸಂಕ್ರಾಂತಿಗಳ ಸಡಗರದ ಜೊತೆಗೆ ಚೈತ್ರ ಶುದ್ಧ ನವಮಿಯಲ್ಲಿ ಬರುವ ರಾಮನವಮಿ, ಅದರ ಹಿನ್ನೆಲೆಯಲ್ಲಿ ಪಾಡ್ಯದಿಂದ ಆರಂಭವಾಗುವ ರಾಮೋತ್ಸವ ನಿಮಿತ್ತ ನಿತ್ಯ ವಸಂತಗಳು, ಪೂಜಾ ವಿಧಿ ವಿಧಾನಗಳು, ಹನುಮಜ್ಜಯಂತಿ ಸಂತರ್ಪಣೆಗಳು ನಮ್ಮೂರಿನ ವಿಶೇಷ. ಚಿಕ್ಕ ಅಳತೆಯಲ್ಲಿ ನಡೆಯುವ ಹಾಡು–ಹಸೆ ಸ್ಪರ್ಧೆಗಳು, ಜವ್ವನಿಗರ ರಂಗಿನೋಕುಳಿಯಾಟ... ಕೃಷಿ ಪ್ರಧಾನ ಕುಟುಂಬದ ಏಕತಾನತೆಗೆ ನವಚೇತನವನ್ನು ಹುಮ್ಮಸ್ಸನ್ನು ತುಂಬಿಬಿಡುತ್ತದೆ.

ನಾನು ಮದುವೆಯಾದ ವರ್ಷ, ರಾಮೋತ್ಸವದ ಪ್ರಯುಕ್ತ ನಿತ್ಯವೂ ಒಂಬತ್ತು ದಿನಗಳ ವಸಂತಕ್ಕೂ ಆಹ್ವಾನವಿರುತ್ತಿತ್ತು. ಒಂದೊಂದು ದಿನ ಒಬ್ಬೊಬ್ಬರ ಮನೆಯ ಸೇವಾರ್ಥ, ಘಮ್ಮೆನ್ನುವ ಉದುರುದುರಾದ ಗೊಜ್ಜವಲಕ್ಕಿ, ರಸಾಯನ, ಬಗೆ ಬಗೆಯ ಕೋಸಂಬರಿಗಳು, ಪಾನಕ ಪನಿವಾರದ ಪ್ರಸಾದ. ರಾಮನವಮಿಯಂದು ರಾಮ ಪಟ್ಟಾಭಿಷೇಕ–ಸೀತಾ ಕಲ್ಯಾಣದ ದಿನ ಸಂತರ್ಪಣೆ. ಅದು

ಊರೊಟ್ಟಿನ ಊಟ. ಎಂಟು ದಿನಗಳ ಪರ್ಯಂತ ರಾಮಾಯಣ ಪಾರಾಯಣದ ತರುವಾಯ ರಾಮ ಪಟ್ಟಾಭಿಷೇಕದ ಸಂಭ್ರಮ. ಸಾಂಗೋಪಾಂಗವಾಗಿ ಪೂಜಾ ವಿಧಿಗಳು ಮುಗಿದು, ಮಂಗಳಾರತಿ ತೀರ್ಥ ವಿನಿಯೋಗದ ನಂತರ ಊಟಕ್ಕೆ ಎಲೆ ಹಾಕುವ ಕ್ರಮ. ಪಟ್ಟಣಗಳಲ್ಲಿ ಮಾಡುವಂತೆ ಪೂಜೆಯ ಪಾಡಿಗೆ ಪೂಜೆಯಾಗಲಿ, ಊಟಕ್ಕೆ ಎಲೆ ಹಾಕಿ ಎನ್ನುವ ಅವಸರದ ಕ್ರಮ ಅಲ್ಲಿಲ್ಲ.

ಊರಲ್ಲಿ ಹೇರಳವಾಗಿ ಸಿಗುತ್ತಿದ್ದ ಪರಂಗಿ ಕಾಯಿ, ಸೀಗುಂಬಳದ ಪಲ್ಯಗಳು, ಸೌತೆಕಾಯಿ ಕೋಸಂಬರಿ, ಬೂದುಗುಂಬಳದ ಹುಳಿ/ಮಜ್ಜಿಗೆ ಹುಳಿಗಳು... ಸ್ಥಳೀಯ ತರಕಾರಿಗಳಿಗೆ ಆದ್ಯತೆ. ಎರಡು ಕೈಯ್ಯಗಲದ ಸಟ್ಟುಗದಿಂದ ಎರಡು ಎಲ್ಲರು ವ್ಯವಧಾನದಿಂದಲೇ ಬಂದಿರುತ್ತಾರೆ. ಅದಲ್ಲದೆ ಕಂಠಪೂರ್ತಿ ತಿಂದ ಬೆಳಗಿನ ತಿಂಡಿ ಊಟಕ್ಕೆ ತಡವಾದಷ್ಟು ಒಳ್ಳೆಯದೆನ್ನುತ್ತದೆ.

ಆ ಕಾಲಕ್ಕೆ ಅಲ್ಲಿನ ರಾಮಮಂದಿರ ಚಿಕ್ಕದಾಗಿತ್ತು. ಗ್ರಾಮದ ಎಲ್ಲರ ಮನೆಗಳಲ್ಲೂ ಊಟಕ್ಕೆ ಎಲೆ ಹಾಕುತ್ತಿದ್ದರು. ಎಲ್ಲರ ಮನೆಯು ಬೀಗರು–ಬಿಜ್ಜರು, ಹೆಣ್ಣುಮಕ್ಕಳು, ಮೊಮ್ಮಕ್ಕಳಿಂದ ತುಂಬಿ ತುಳುಕುತ್ತಿತ್ತು. ಎಲ್ಲರ ಮನೆ ಹಜಾರಗಳಲ್ಲಿ ಅವರ ಮನೆಯದೇ ಚಾಪೆ, ನೀರಿನ ತಂಬಿಗೆಗಳನ್ನಿಟ್ಟು ಎಲೆ ಹಾಕುತ್ತಿದ್ದರು. ಬಡಿಸಲು ಗ್ರಾಮದ ಹರಯದ ಗಂಡುಮಕ್ಕಳ ಪಡೆ, ಎಲೆ ಹಾಕಿ, ಗೋಮಯ ಸಾರಿಸಲು ಹೆಂಗಸರು–ಹೆಣ್ಣುಮಕ್ಕಳು. ಹೆಚ್ಚಿ ತುರಿಯುವ ಕೆಲಸ ಹೆಣ್ಣು ಮಕ್ಕಳ್ದಾದರೆ, ತಿರುವಿ ಕೊಡಲು ಗಂಡು ಹೈಕಳು, ಗ್ರೈಂಡರ್‌ಗಳು ಬಂದಿರದಿದ್ದ ಕಾಲವದು... ಕಮ್ಯೂನಿಟಿ ಕಿಚನ್‌ನಂಥ ಪಾಕಶಾಲೆಯಲ್ಲಿ ಊರಿನ ಸುಬ್ಬಣ್ಣ ಮಾವಯ್ಯನವರ ಅಡುಗೆ ಅಧ್ಯಕ್ಷತೆಯಲ್ಲಿ ಎಲೆ ಹಾಕುವಾಗಲೇ ಎರಡು ಗಂಟೆ ಮೀರುತ್ತಿತ್ತು. ಬೆಳಗ್ಗಿನ ಗಡದ್ದಾದ ತಿಂಡಿ, ಹತ್ತಾರು ಸಲ ಕಾಫಿ ಸರಬರಾಜಿನಿಂದ ಯಾರಿಗು ಹಸಿವಾಗುತ್ತಿರಲಿಲ್ಲ.

ಒಂದು ಸಾರಿ ನಾನಲ್ಲಿಗೆ ತಿಂಡಿಗೆ ಹೋಗಿದ್ದೆ. ಆ ದಿನದ ಸಂತರ್ಪಣೆಯ ಮನೆಯ ಯಜಮಾಂತಿ ತಿಂಡಿ ತಿನ್ನುತ್ತಾ ಕೂತಿದ್ದರು. ಮನೆಯಲ್ಲಿ ವಿಶೇಷಗಳು, ಹೆಚ್ಚುಗಟ್ಟಲೆಗಳಿದ್ದಾಗ ಯಾವುದಾದರು ಮನೆಯವರು ಆ ಸಂತರ್ಪಣೆಯನ್ನು ವಹಿಸಿಕೊಳ್ಳುತ್ತಿದ್ದುದು ಉಂಟು. ಅಂಗೈಯಲ್ಲಿ ಹಿಡಿದರೆ ಕೈ ಮೀರಿ ಹೊರ ಹೋಗುತ್ತಿದ್ದ ಅಜಮಾಸು ಎರಡಂಚಿನ ಎತ್ತರದ ಆರು ಇಡ್ಲಿಗಳನ್ನು ಚಟ್ನಿ, ಊರವಟ್ಟಿನ (ಬದನೆಕಾಯಿ ಸಾಸಿವೆ ಗೊಜ್ಜು) ಜೊತೆ ನಂಜಿಕೊಂಡು ತಿನ್ನುತ್ತಿದ್ದರು. ಕಡೆಗೆ ಮೊಸರಿಗೂ ಎರಡು ಇಡ್ಲಿ ಹಾಕಿಸಿಕೊಂಡಿದ್ದರು.

'ಉಷಾ, ಬಂದ್ಯ? ತಿಂಡಿ ತಿನ್ನು. ನಂಗೆ ಕೆಲಸ ಜಾಸ್ತಿ... ತಿಂಡೀನೆ ಸೇರ್ತಿಲ್ಲ' ಅನ್ನುವ ಮಾತೊಂದನ್ನು ಸೇರಿಸುತ್ತಾ ಇನ್ನೊಂದು ಇಡ್ಲಿ ಹಾಕಿಸಿಕೊಂಡರು! ಧಾರಾಳವಾಗಿ ತಿಂಡಿ ತಿನಿಸುಗಳನ್ನು ತಿನ್ನುವ ಜನರಿದ್ದ ಹಳ್ಳಿ ಅದು!

ಸಾರಿಗಾಗಿ ಹಳ್ಳ!

ಆ ದಿನ ಮಂಗಳಾರತಿ, ತೀರ್ಥ ಆಗಿ ಎಲೆ ಹಾಕಿದ್ದರು. ನಾನು ಶೊಳ್ಳು ಮಾವಯ್ಯ (ಶ್ಯಾಮಣ್ಣ)ನವರ ಮನೆಯಲ್ಲಿ ಊಟಕ್ಕೆ ಕೂತಿದ್ದೆ. ಉಪ್ಪು, ಉಪ್ಪಿನಕಾಯಿ, ಕೋಸಂಬರಿದ್ವಯಗಳು, ಪಲ್ಯಗಳು, ಎಲೆಯನ್ನು ಅಲಂಕರಿಸಿದವು. ಸಾಧಾರಣವಾಗಿ ಬಾರಿ ಅನ್ನ ಬಡಿಸಿದರು. ಯಾರೂ ಬೇಡವೆನ್ನಲಿಲ್ಲ. ಹಬೆಯಾಡುತ್ತಾ ಎಲೆಗೆ ತಪಕ್ಕೆಂದು ಬಿದ್ದ ಅನ್ನ ಹರವಾದ ಎಲೆಯ ಅರ್ಧಕ್ಕಿಂತ ಜಾಸ್ತಿ ಭಾಗ ಆಕ್ರಮಿಸಿಕೊಂಡಿತು. ತುಪ್ಪ, ತೊವ್ವೆಯ ಶಾಸ್ತ್ರವಾದ ಮೇಲೆ ಗಂಡಸರು ಪರಿಶಿಂಚಿಸಿ ಚಿತ್ರಾವತಿ ಇಟ್ಟರು. ಎಲ್ಲರ ಕೈಗಳು ಚುರುಕಾದವು. ಹಬೆಯಾಡುವ ಅನ್ನದ ಗುಡ್ಡೆಯನ್ನು ತುದಿ ಬೆರಳಿನಿಂದ ಓಸರಿಸಿ ನಡುವೆ ಸಾರಿಗಾಗಿ ಹಳ್ಳ ಮಾಡಿದರು. ಇಂಗಿನ ಪರಿಮಳದಿಂದ ಘಮ್ಮೆನ್ನುತ್ತಿದ್ದ ಹಿಡಿ ಬಟ್ಟಲನ್ನು ತುಂಬಿದ್ದ ಕುದಿವ ಸಾರನ್ನು ಬಡಿಸಿ ಮುಂದೆ ಹೋಗಿದ್ದೊಂದೇ ನೆಪ. ಸುರ್ ಎನ್ನುವ ಶಬ್ದ ಬಿಟ್ಟರೆ ಏನೂ ಇರಲಿಲ್ಲ! ಎರಡನೇ ಆವರ್ತವೂ ಸಾರು ಸುರಿದು ಉಂಡಮೇಲೆ ಲೋಟಕ್ಕು ಸಾರು ಹಾಕಿಸಿಕೊಂಡರು. ಸಾರಿನ ರುಚಿಯೇ ರುಚಿ!

ಬಾಡಿಸಿಕೊಳ್ಳಲು ಪಳದ್ಯ

ಮುಂದಿನ ಸರದಿ ಮಜ್ಜಿಗೆ ಪಳದ್ಯ, ಆಂಬೊಡೆಯದ್ದು.. ಮಜ್ಜಿಗೆ ಹುಳಿಯೂ ಹೊಸದಲ್ಲ, ಆಂಬೊಡೆಯೂ ಹೊಸದಲ್ಲ. ಅಲ್ಲಿನ ಸಂಕೇತಿಗಳು ಬಡಿಸುವ ಕ್ರಮ ಹೊಸದು. ಮೊರಗಳಲ್ಲಿ ತಂದ ಆಂಬೊಡೆಯನ್ನು ಮುಂಗೈಯಿಂದ ಎಲೆಗೆ ತಳ್ಳಿದರೆ ಕನಿಷ್ಟ ಆರೆಂಟಾದರು ಎಲೆಗೆ ಬೀಳಬೇಕು! ಗರಿಗರಿ ಕುರುಕು ಬೇಡವೆನ್ನಲು ಯಾರಿಗೂ ಮನಸ್ಸು ಬರುವುದಿಲ್ಲ. ದಾಕ್ಷಿಣ್ಯಕ್ಕೆ ಕೈ ಒಡ್ಡಿದರೂ, ಬಡಿಸುವವರಿಗೂ, ಊಟಕ್ಕೆ ಕೂತಿರುವವರಿಗೂ ಚೆನ್ನಾಗೇ ಗೊತ್ತಿರುತ್ತದೆ. ಮನುಷ್ಯರಿಗೆ ನಾಚಿಕೆ ಇರಬಹುದು! ನಾಲಿಗೆಗಲ್ಲ ಎಂದು! ಆಂಬೊಡೆಗು ನಾಚಿಕೆ ಇರುವುದಿಲ್ಲ ಬಿಡಿ! ಹೋಳು ಹೋಳಾದ ಮಜ್ಜಿಗೆ ಪಳದ್ಯದ ಎರಡನೇ ಆವರ್ತ ಮುಗಿದ ಮೇಲೆ ಹುಳಿ ಅನ್ನ, ಜೊತೆಗೆ ಬಾಡಿಸಿಕೊಳ್ಳಲು ಮತ್ತೊಂದಿಷ್ಟು ಮಜ್ಜಿಗೆ ಪಳದ್ಯ... ಹುಳಿಯನ್ನದ ಜೊತೆಗೆ ಜಿಲೇಬಿ ಬಡಿಸುವ ವಾಡಿಕೆ.

ಎಲ್ಲಾ ಅಡುಗೆಯ ತಾಯಿ!

ಹೀಗೇ, ಒಂದು ಸಾರಿ ಚಿರೋಟಿ ಊಟ ಸಿಕ್ಕಿತು; ಚಿರೋಟಿ ಬಡಿಸುವ ಹುಡುಗರು ತಪಕ್ಕೆಂದು ಮೂರು ಚಿರೋಟಿ ಬಡಿಸಿಬಿಟ್ಟರು! ಹೌಹಾರಿದೆ! 'ಹೀಗೆ ಬಡಿಸಿದ್ರೆ ಹೇಗೆ ತಿನ್ನೋದು?' ಅಂತ ಕೇಳಿದರೆ 'ಅಯ್ಯೊ... ಪುಡಿ ಮಾಡಿ ಹಾಲು ಹಾಕಿದರೆ ಒಂದು ಚಿರೋಟಿ, ಒಂದು ನಿಂಬೇಗಾತ್ರ ವಾಗುತ್ತೆ. ಅದನ್ನು ತಿನ್ನೋಕೇನು ಕಷ್ಟ' ಅಂದರು! ಒಳ್ಳೆಯ ಲಾಜಿಕ್ಕು ಅನ್ನಿಸಿತು! ಹುಳಿಯನ್ನ ಬಡಿಸಿದ ಮೇಲೆ ಬಿಸಿ ಬಿಸಿ ತೆಳ್ಳಗಿನ ಗಸಗಸೆ ಹಾಲು... ಎಷ್ಟೇ ಹೊಟ್ಟೆ ತುಂಬಿದ್ದರೂ, ಗಸಗಸೆ ಪಾಯಸದ ಹದ ರುಚಿಗೆ ಗೌರವ ಕೊಡಬೇಕೆನ್ನುವುದು ನಮ್ಮೂರಿನವರ ವಾದ. ಅದೂ ಅಲ್ಲದೆ, ಪಾಯಸವು ಎಲ್ಲಾ ಅಡುಗೆಗಳ ತಾಯಿಯಂತೆ! ಪಾಯಸ ಬೇಡವೆಂದರೆ ತಾಯನ್ನೇ ಬೇಡವೆಂದಂತೆ! ಹಾಗಾಗಿ ಎಲ್ಲರು ಎರಡೆರಡು ಆವರ್ತ ತಾಯಿ ಮೇಲಿನ ಗೌರವ ಮೆರೆಯುತ್ತಾರೆ.

ಎಲ್ಲರಿಗೂ ಬಡಿಸಿದ ಮೇಲೆ ಊರಿನ ಗಂಡು ಮಕ್ಕಳ ಬ್ಯಾಚ್, ಅವರಿಗೆ ಹಿರಿಯರು ಬಡಿಸುತ್ತಾರೆ. ಹುಡುಗರು ನಿರ್ದಾಕ್ಷಿಣ್ಯವಾಗಿ ಹೇಳಿಯೇ ಬಿಡುತ್ತಾರೆ: 'ಬಡಿಸಲು ಸಂಕೋಚ ಮಾಡಿಕೋಬೇಡಿ' ಅಂತ! ಬಹಳಷ್ಟು ಸಲ ಅವರು ಪಂಥಕಟ್ಟಿ ಊಟ ಮಾಡುತ್ತಾರೆ, 'ನಾನು 8 ಚಿರೋಟಿ ತಿಂದೆ, 20 ಜಿಲೇಬಿ, 25 ಆಂಬೊಡೆ, 6 ಲೋಟ ಪಾಯಸ' ಅಂತ ಅವರವರ ನಡುವೆ ಮಾತುಕತೆಯಾಗುತ್ತಿರುತ್ತದೆ. ಅವರಿಗೆ ಸವಾಲೆಸೆದು ನೀನ್ಯಾವ ಮಹಾತಿಂದಿದ್ದು, ನನ್ನ ನೋಡು ಇದು 10ನೇ ಚಿರೋಟಿ, ಆಂಬೊಡೆಯ ಲೆಕ್ಕ ಗೊತ್ತಿಲ್ಲ ಅನ್ನುವವರು ಇದ್ದಾರೆ; ಹಾಗೆ ತಿನ್ನುತ್ತಾರೆ ಕೂಡ.

ಒಂದು ಸಾರಿ ಊರಿನ ಹುಡುಗರು ಮೊದಲ ಬ್ಯಾಚಿನಲ್ಲಿ ಊಟಕ್ಕೆ ಕೂತರೂ, ಮಾಮೂಲಿನಂತೆ ಪೈಪೋಟಿ ಶುರುವಾಯಿತು. ಇಹಪರದ ಪರಿವೆ ಇಲ್ಲದೆ ಪಣ ಕಟ್ಟಿ ಊಟ ಮಾಡತೊಡಗಿದರು. ಅರ್ಧಕೊಳಗ ಪಾಯಸ ಮುಗಿಯಿತು. ಆಂಬೊಡೆಯ ಗೂಡೆ ಬೋರಲು ಬಿತ್ತು. ಆ ದಿನದ ಸಂತರ್ಪಣೆಯ ಯಜಮಾನರು ಅಂಗವಸ್ತ್ರ ಸರಿಪಡಿಸಿಕೊಂಡು ಬಂದು ಪಂಕ್ತಿಯ ಮುಂದೆ ವಿನೀತರಾಗಿ ನಿಂತು ಕೈ ಮುಗಿದು 'ಇನ್ನೂ ಎರಡು ಬ್ಯಾಚ್ ಇದೆ. ಇದಿನ್ನು ಮೊದಲ ಬ್ಯಾಚು. ಹುಡುಗರು ಸಹಕರಿಸಬೇಕು' ಎಂದು ಕೇಳಿಕೊಂಡರು. ಆಯ್ತು ಬಿಡಿ ಎಂದು ಅಸಮಾಧಾನದಿಂದ ಗೊಣಗಿ ಆ ಯುವಕರು ಊಟ ಮುಗಿಸಿದರು.

ಅಡುವುದಾಗಲಿ–ಅಟ್ಟುವುದಾಗಲಿ, ಉಂಬುವುದಾಗಲಿ–ಉಣಿಸುವುದಾಗಲಿ ಸಂಕೇತಿಗಳು ಎತ್ತಿದ ಕೈ. ಅವರ ಈ ಭೋಜನ ಪರಂಪರೆಗೆ ಶರಣು. ಮತ್ತೊಮ್ಮೆ ಆ ಸಂತರ್ಪಣೆ ನೆನೆದು ಭೋಜನಕಾಲೇ ಲಕ್ಷ್ಮೀಕಾಂತ ಸ್ಮರಣೆ ಮಾಡಿ ಅವರ ಈ ಸಂಸ್ಕೃತಿಗೆ ನಮಿಸುವೆ.

ಜಿಲೇಬಿಗೂ ನಾಚಿಕೆ ಇಲ್ಲ

ಆಂಬೊಡೆಯಂತೆಯೇ ಜಿಲೇಬಿಗೂ ನಾಚಿಕೆಯೇ ಇಲ್ಲ! ಒಂದು ಸರಿ ತಳ್ಳಿದರೆ ಆರರಿಂದ ಎಂಟು ಜಿಲೇಬಿ ಎಲೆಯ ಮೇಲೆ; ಎಲ್ಲರೂ ಅಚ್ಚುಕಟ್ಟಾಗಿ ತಿನ್ನುವವರೇ. ಆದ್ದರಿಂದ ಯಾರಿಗೂ ಸಂಕೋಚಕ್ಕೆ ಆಸ್ಪದವಿಲ್ಲ. ಇದರ ಮದ್ಯೆ ಪುಂಖಾನಪುಂಖವಾಗಿ ದೇವರನಾಮ ಹಾಡುತ್ತಾ ಅಂತ್ಯದಲ್ಲಿ ಭೋಜನ ಕಾಲೇ ಲಕ್ಷ್ಮೀಕಾಂತ ಸ್ಮರಣೆ, ಗೋವಿಂದ ಗೋವಿಂದ, ಹರನಮಃ ಪಾರ್ವತಿ ಪತಯೇ ಹರ ಹರ ಮಹಾದೇವ ಅನ್ನುವ ಕೋರಸ್‌ಗಳೂ ಇರುತ್ತದೆ. ನಿನ್ನಂಥ ಸ್ವಾಮಿ ಎನಗಂಟು ನಿನಗಿಲ್ಲ, ನಿನ್ನಂಥ ತಂದೆ ಎನಗುಂಟು ನಿನಗಿಲ್ಲ, ನಿನ್ನರಸಿ ಲಕುಮಿ ಎನಗೆ ತಾಯಿ, ನಿನ್ನ ತಾಯಿಯ ತೋರೋ ಎನ್ನುವ ಉಗಾಭೋಗದ ಭಾವ ಶ್ರಾವ್ಯತೆಗೆ ಎಷ್ಟು ಲೋಟ ಪಾಯಸ ಒಳ ಹೋಗುತ್ತೋ ಆ ದೇವರೇ ಬಲ್ಲ!

ನಿಮ್ಮೂರ ತಿಂಡಿ ಯಾವುದು?

ಇಲ್ಲಿ ವರ್ಣಿಸಿರುವುದು ಒಂದು ಹಳ್ಳಿಯಲ್ಲಿನ ವೈವಿಧ್ಯಮಯ ತಿಂಡಿ, ಊಟದ ರುಚಿ ಮತ್ತು ಅದನ್ನು ಸೇವಿಸುವ ಶೈಲಿಯ ಒಂದು ಬರವಣಿಗೆ. ನಮ್ಮ ನಾಡಿನ ಹಲವು ಪ್ರದೇಶಗಳಲ್ಲಿ ವಿಶಿಷ್ಟ ತಿನಿಸುಗಳನ್ನು ತಯಾರಿಸುತ್ತಾರೆ, ಅದನ್ನು ವೈವಿಧ್ಯಮಯವಾಗಿ ಚಪ್ಪರಿಸಿ ತಿನ್ನುತ್ತಾರೆ! ನಿಮ್ಮ ಹಳ್ಳಿ, ಊರು, ಪ್ರಾಂತ್ಯದಲ್ಲೂ ವೈವಿಧ್ಯಮಯ ತಿನಿಸುಗಳು, ಊಟ ಮತ್ತು ಅದನ್ನು ಸೇವಿಸುವ ಶೈಲಿಯೂ ಇರಬಹುದು; ಅದನ್ನು ಆಕರ್ಷಕವಾಗಿ ಬರೆದು ಕಳಿಸಿ! (virama-post@gmail.com) ಸೂಕ್ತ ಎನಿಸಿದರೆ ಪ್ರಕಟಿಸುತ್ತೇವೆ.

ಅಂತಾರಾಷ್ಟ್ರೀಯ 'ಅಪ್ಪಂದಿರ ದಿನ'ದ ಆಚರಣೆ ಇಂದು ನಡೆಯುತ್ತಿದೆ. ಕೆಲವೇ ವರ್ಷಗಳ ಹಿಂದೆ ನಮ್ಮ ದೇಶದಲ್ಲಿ ವಿಶೇಷವಾಗಿ ಆಚರಣೆ ಆರಂಭಿಸಿದ 'ಫಾದರ್ಸ್ ಡೇ', ವರ್ಷದಿಂದ ವರ್ಷಕ್ಕೆ ಜನಪ್ರಿಯತೆ ಗಳಿಸುತ್ತಿದೆ. ಇಂತಹ ಹಲವು ವಿದೇಶಿ ಆಚರಣೆಗಳು ಒಂದರ ಹಿಂದೆ ಒಂದರಂತೆ ನಮ್ಮ ದೇಶವನ್ನು ಪ್ರವೇಶಿಸುತ್ತಿವೆ ಮತ್ತು ನಮ್ಮವರು ಸಂಭ್ರಮದಿಂದಲೇ ಅವುಗಳನ್ನು ಅಪ್ಪಿಕೊಳ್ಳುತ್ತಿದ್ದಾರೆ!

ಅಪ್ಪ ಎಂದರೆ ಆಲದ ಮರ!

» ವಾಣಿ ಹುಗ್ಗಿ

ತಾಯಿಯ ಸೌಭಾಗ್ಯ. ತಾಯಿ ಮನೆಯೆಂದರೂ ತವರುಮನೆಯ ಆಧಾರವೇ ಅಪ್ಪ. ನನ್ನಪ್ಪ ಹುರಿ ಮೀಸೆಯ ಕಟ್ಟಾಳು, ಕೆಂಡದ ಕಣ್ಣುಗಳಿದ್ದರೂ ಮಮತೆಯ ಸೆಲೆ. ಕಂಚಿನ ಕಂಠ, ಕೃಷ್ಣವರ್ಣದ ನಗುಮೊಗದ ಚೆಲುವ. ಅತೀ ಸಿಟ್ಟಿನಲ್ಲೂ ಶಾಂತ ಸ್ವಭಾವ! ಮಾತುಗಳು ಮನೆ ಕೆಡಿಸಬಾರದೆನ್ನುವ ಸಂಯಮಿ, ಆಡಂಬರವಿಲ್ಲದ ಸರಳ ಜೀವಿ. ಯಾರೊಂದಿಗೂ ಭೇದಭಾವವಿಲ್ಲದ, ಕಪಟವಿಲ್ಲದ ಒಡನಾಡಿ. ಮನಸ್ಸಿನಲ್ಲಿ ವಿರಾಜಮಾನನಾದ ಕಿರೀಟ ತೊಟ್ಟಿರದ ಅರಸ. ಕುಟುಂಬದ ಜವಾಬ್ದಾರಿಯನ್ನು ಎಳೆ ಹೆಗಲುಗಳ ಮೇಲೆ ಹೊತ್ತುಕೊಂಡು ಸಂಸಾರವನ್ನು ಸಾಗಿಸಿದ ಛಲಗಾರ. ಹದಿನೇಳು ವಯಸ್ಸಿಗೇ ಮದುವೆಯಾದವ. ಐದು ಮಕ್ಕಳ ದೊಡ್ಡ ಕುಟುಂಬ, ಅಪ್ಪನ ಜೊತೆ ಸಲಿಗೆ ಕಡಿಮೆ; ಎಲ್ಲಿರಗೂ ಅಪ್ಪನೆಂದರೆ ಭಯ ಮಿಶ್ರಿತ ಪ್ರೀತಿ.

ನಾವೆಲ್ಲ ಸಣ್ಣವರಿದ್ದಾಗ ನಮ್ಮ ತಂಟೆ, ಕಾರುಬಾರು, ಹಠಕ್ಕೆಲ್ಲ ಅಪ್ಪನ ಕೈಏಟೇ ಮದ್ದು! ಮಕ್ಕಳಿಗೆ ಅವರವರ ಸ್ವಂತ ವ್ಯಕ್ತಿತ್ವ ಕಟ್ಟಿಕೊಳ್ಳಲು, ತಮ್ಮದೆ ನಿರ್ಣಯ ತೆಗೆದುಕೊಳ್ಳಲು ಸ್ವಾತಂತ್ರ್ಯ ಕೊಟ್ಟ. ನಾವೆಲ್ಲ ದೊಡ್ಡವರಾದ ಹಾಗೆ ಅಪ್ಪನ ಸಿಟ್ಟು ಇಳಿಯಿತು. ಮೂರು ಹೆಣ್ಣುಮಕ್ಕಳ ಮದುವೆಯ ನಂತರ ಅಪ್ಪ ಏಕದಮ್ ಶಾಂತನಾದ. ಅಪ್ಪ, ಅವ್ವ ಇಬ್ಬರೂ ಶಾಲೆ ಕಲಿತಿಲ್ಲವಾದ್ದರಿಂದ ಮಕ್ಕಳನ್ನೆಲ್ಲ ಉನ್ನತ ಅಭ್ಯಾಸ ಮಾಡಿಸುವ ಆಸೆ. ಮಕ್ಕಳ ವಿದ್ಯಾಭ್ಯಾಸಕ್ಕೆ ಕೊರತೆಯಾಗದಂತೆ, ಭವಿಷ್ಯಕ್ಕೆ ಕುಂದು ಬಾರದಂತೆ ನೋಡಿಕೊಂಡ ಆರ್ಥಿಕ ಶಿಸ್ತುಗಾರ. ನಾನೆಂಬ ಅಹಂ ಇಲ್ಲದ ನಿಸ್ಪೃಹ. ಯಾವುದೇ ವ್ಯಕ್ತಿತ್ವ ವಿಕಸನ ತರಬೇತಿಗೂ ಹೋಗದ ಘನ ವ್ಯಕ್ತಿತ್ವ. ಯಾವುದನ್ನೂ ಪಾಠ ಮಾಡದೆ ಬದುಕಿಯೆ ತೋರಿಸಿ ಉದಾಹರಣೆಯಾಗಿ ಉಳಿದುಬಿಟ್ಟ ಶಿಕ್ಷಕ. ದುಡಿತದಲ್ಲಿಯೇ ಜೀವನ ಸುಖವನ್ನು ಕಂಡ ಕಾಯಕ ಯೋಗಿ. ಕಾಯಕವೇ ಕೈಲಾಸವೆಂದ ಕರ್ಮಯೋಗಿ.

ಅಜ್ಜನೊಂದಿಗೆ ಹೊಟೆಲಿನಲ್ಲಿ, ಜೋಳದ ವ್ಯಾಪಾರಿಯಾಗಿ ಕೈಗೂಡಿದ್ದನಂತೆ. ದೊಡ್ಡ ಉದ್ಯಮಿ ಅಲ್ಲದಿದ್ದರೂ ಕಿರಾಣಿ ಅಂಗಡಿ ವ್ಯಾಪಾರಿಯಾಗಿ ಬೆಳೆದ. ಓಣಿಯ ಮಂದಿಗೆಲ್ಲ ಬೇಕಾದವನಾದ. ಕೈಲಾದ ಸಹಾಯವನ್ನು ಮಾಡಿದ. ಇಂದು ಅವನಿದ್ದಿದ್ದರೆ ಹೊಣೆಗಾರಿಕೆಯಿಂದ ಬಿಡುಗಡೆಯೇ ಇರುತಿರಲಿಲ್ಲ. ಅದಕ್ಕೆ ಆ ದೇವರು ಅರವತ್ತು ವರ್ಷದ ಬದುಕಿಗೇ ನಿವೃತ್ತಿಯನ್ನು ಬರೆದುಬಿಟ್ಟ. ನಿನಗೆ ಸಮಯ ಕಮ್ಮಿ ಇತ್ತೆಂದೆ ರಜೆ ಇಲ್ಲದೆ ದುಡಿಯುತ್ತಿದ್ದೆಯೇನೋ? ಅಪ್ಪನಿಲ್ಲದ ಮನೆಯನ್ನು ಜೀರ್ಣಿಸಿಕೊಳ್ಳುವುದು ಕಷ್ಟ. ಆದರೆ ವಿಧಿಯು ಒಪ್ಪಿಕೊಳ್ಳಲೇಬೇಕಾದ ಅನಿವಾರ್ಯ!

ಅಪ್ಪನೆಂದರೆ ಆಕಾಶವಲ್ಲ, ಅವನು ಆಲದ ಮರದಂತಹ ಆಸರೆ! ಧೈರ್ಯ! ಕೇಳದೆ ವರವನ್ನಿತ್ತ ದೇವರು. ನೀನಿದ್ದಾಗ ನಿನಗೆ ಅಪ್ಪಂದಿರ ದಿನಾಚರಣೆಯ ಶುಭಾಶಯಗಳನ್ನು ತಿಳಿಸಲೇ ಇಲ್ಲ, ಧನ್ಯವಾದ ಹೇಳಲೇ ಇಲ್ಲ. ನೀ ಕೊಟ್ಟ ಎಲ್ಲದಕ್ಕೂ ಧನ್ಯವಾದ, ಹಾಗೆಯೇ ಅಪ್ಪಂದಿರ ದಿನಾಚರಣೆಯ ಶುಭಾಶಯಗಳು ಅಪ್ಪಾ. ನಿನ್ನಂಥ ಅಪ್ಪ ಇಲ್ಲ ಎಂದು ಹಾಡಿ ಕುಣಿಯುವ ಆಸೆ ಮನಸಿನಲ್ಲಿಯೇ ಉಳಿದ ಕಳವಳ. ಅಪ್ಪಾ ನಿನ್ನಾತ್ಮಕ್ಕೆ ಶಾಂತಿ ಸಿಗಲಿ.

ಸಂಭ್ರಮಕ್ಕೆ ಇರಲಿ ಮಿತಿ

» ಡಾ. ಮಹಾಲಕ್ಷ್ಮೀ ಮಹಾನಂದ ಭೂಶಿ

ಬದುಕಿನ ಬಹುತೇಕ ಸಂಕಟಗಳನ್ನು ಸಮಾಜದ ಮುಂದೆ ನಿಂತು ಎದುರಿಸುವುದಾದರೂ ಹೇಗೆ ಎಂಬ ಪ್ರಶ್ನೆಗಳು ಕಾಡುವ ಸಂದರ್ಭದಲ್ಲಿ ಶಿಕ್ಷಣವನ್ನೇ ಮೌಲ್ಯಯುತವಾಗಿ ತೆಗೆದುಕೊಂಡು ಬದುಕುವ ವಿದ್ಯಾರ್ಥಿಗಳ ಮಧ್ಯೆ ಇತ್ತೀಚಿಗೆ ತಂದೆ ಮತ್ತು ತಾಯಿಯ ದಿನಾಚರಣೆಯನ್ನು ಆಚರಿಸುವ ಸಂಪ್ರದಾಯವನ್ನು ಹಲವು ಶಾಲೆಗಳು ಮಾಡುತ್ತಿವೆ; ಈ ಆಚರಣೆ ಹಲವರಿಗೆ ಸಂತಸ ನೀಡಿದರೆ, ಕೆಲವು ಮಕ್ಕಳಿಗೆ ಸಂಕಟ.

ಎಂದಿನಂತೆ ವಾಕಿಂಗ್ ಮುಗಿಸಿ ಒಳಹೋಗುವಾಗ, ಥಟ್ ಅಂತ ನಿಲ್ಲಿಸಿ ಬಿಟ್ಟಿತು ಪಕ್ಕದ ಮನೆಯ ಸುಗಂಧಕ್ಕಾನ ಮುಖದ ನೋವು. 'ಏಕೆ? ಮಗಳು ಸುವ್ವಿ ಮಲಗಿದ್ದಾಳಾ?' ಎಂದಾಗ ಸುಗಂಧಿ ಕಣ್ಣು ಇನ್ನಷ್ಟು ತೇವಗೊಂಡವು/ 'ಮೇಡಂ ರಾತ್ರಿಯಿಂದ ಒಂಥರಾ ಸಂಕಟ. ಸ್ಕೂಲಿನಲ್ಲಿ ಫಾದರ್ಸ್ ಡೇಗೆ ಅಪ್ಪಯ್ಯನ ಕರಕೊಂಡು, ಅವರ ಜೊತೆ ಇರುವ ಫೋಟೋ ತರಲಿಕ್ಕೆ ಸುವ್ವಿಗೆ ಹೇಳಿದಾರಂತೆ. ಎಲ್ಲಿಂದ ತರಲಿ ಮೇಡಂ ಇಲ್ಲದ ಅವಳ ಅಪ್ಪನ ಫೋಟೋ ಮತ್ತು ಅವಳ ಅಪ್ಪನನ್ನು!' ಒಂದೇ ಸಮನೇ ಉಸಿರುಗಟ್ಟಿಸಿ ಅತ್ತಳು.

'ಮೇಡಂ ಸ್ಕೂಲಲ್ಲಿ ನಾವು ಓದುವಾಗ ಇದ್ಯಾವುದು ಇರಲಿಲ್ಲ. ಈಗೇಕೆ?' ಎಂದಳು. 'ಇದನ್ನ ಇತ್ತೀಚಿಗೆ ಕಾನ್ವೆಂಟ್ ಸ್ಕೂಲ್‌ದವರು ಮಾಡ್ತಿರೋದು' ಎಂದೆ.

'ತುಂಬು ಬಸುರಿ ಇದ್ದಾಗ ಇವರ ಅಪ್ಪ ಆಕ್ಸಿಡೆಂಟ್‌ಲ್ಲಿ ತೀರಿದರು, ಮನೇಲಿ ಬಡತನ; ಊರ ಬಿಟ್ಟು ಇವಳನ್ನು ಚೆನ್ನಾಗಿ ಓದಿಸಬೇಕಂತ ಬಂದೆ ಮೇಡಂ ಇಲ್ಲಿ ಹೊಟೇಲ್ ಕೆಲಸಕ್ಕಿದ್ದು ಇವಳನ್ನು ಓದಸ್ತಿರೋದು, ಅವಳಿಗೆ ಅಪ್ಪ ಇಲ್ಲದ್ದು ಗೊತ್ತಿಲ್ಲ ಮೇಡಂ. ಬೇರೆ ಊರಲ್ಲಿ ಕೆಲಸಕ್ಕೆ ಇದಾರೆ ಅಂತಾ ಹೇಳಿದ್ದೇನೆ. ಈಗ ನೋಡಿದ್ರೆ ಅಪ್ಪನ ಕರೆಸು, ಫೋನ್‌ಮಾಡಿಕೊಡು ಅಂತವಳೆ! ಪಿಂಕಿ, ಪರಿ, ಮೋಹನ್, ಶಾನೂಲ್ ಎಲ್ಲರೂ ಕರಕೊಂಡು ಬರ್ತಿದ್ದಾರೆ, ಸೋಹೆಲ್ ಅಪ್ಪ ಬೆಂಗಳೂರಿಂದ ಬರ್ತಿದಾರೆ. ನೀನು ಹೇಳು ಪಪ್ಪಗೆ – ಅಂತಾ ರಾತ್ರಿಯಿಂದ ಹಠ ಹಿಡಿದಿದ್ದಾಳೆ. ಏನ್ ಮಾಡಿ ಸಮಾಧಾನ ಮಾಡಲಿ ತಿಳಿತಿಲ್ಲ.' ಎಂದಳಾಕೆ.

ಬದುಕಿನ ಸಂಕಟಗಳೇ ಹಾಗೇ! ಸಂತೈಸುವವರಿದ್ದರೂ, ಏನನ್ನೂ ಸರಿಪಡಿಸಲಾಗದ ಪರಿಸ್ಥಿತಿ. ಈ ಸ್ಕೂಲುಗಳಲ್ಲಿ ಯಾಕೆ ಈ ಆಚರಣೆ ತಿಳಿತಿಲ್ಲ. ಅಪ್ಪ ಇಲ್ಲದ ಮಕ್ಕಳು ಒಂದೆಡೆಯಾದರೆ, ಗಂಡನ ಕಳೆದುಕೊಂಡ ತಾಯಂದಿರಿಗೆ ಅಪ್ಪನ ಅನುಪಸ್ಥಿತಿ ತುಂಬೋದು ಹೇಗೆ ಅಂತಾ ಕಳವಳ. 'ಸುಗಂಧಿ, ಸಮಾಧಾನ ಮಾಡ್ಕೋ. ಪರಿಸ್ಥಿತಿಗಳನ್ನು ಎದುರಿಸಲೇಬೇಕು. ಅವಳಿಗೆ ರಜೆ ಹಾಕಿಸಿ ಎಲ್ಲಾದರೂ ಕರೆದೊಯ್ಯಿ' ಅಂದೆ. ಅಷ್ಟರೊಳಗೆ ನನ್ನ ಗಂಟಲುಬ್ಬಿ ಬಂತು. ಕಿಟಕಿಯಾಚೆ ಮುಖ ಮಾಡಿ ನಿಂತೆ.

ಅವರ ಶಾಲೆ ನನಗೆ ಗೊತ್ತಿತ್ತು; ಒಂದು ಫೋನ್ ಮಾಡಿ, ಸುವ್ವಿ ವಿಚಾರ ಹೇಳಿದೆ. ಆಗ ಅವರು 'ಮೇಡಂ, ನಾವ್ ಸೆಲೆಬ್ರೆಟ್ ಮಾಡೋ ಖುಷಿಯಲ್ಲಿ ಇಂತಹ ಸಂಗತಿಗಳೇ ನೆನೆಪಿಗೆ ಬರಲ್ಲ, ದಯವಿಟ್ಟು ಕ್ಷಮಿಸಿ' ಎಂದರು. ಅರ್ಧ ಗಂಟೆಯ ಹೊತ್ತಿನಲ್ಲಿ, 'ಶಾಲೆಯಲ್ಲಿ ಫಾದರ್ಸ್ ಡೇ ಸಂಭ್ರಮಾಚರಣೆ ರದ್ದಾಗಿದೆ' ಎಂಬ ಸಂದೇಶವನ್ನು ಸ್ಕೂಲ್ ಗ್ರೂಪ್‌ಲ್ಲಿ ನೋಡಿದ ಕೂಡಲೇ ಸುಗಂಧಿ ಖುಷಿಗೆ ಪಾರವೇ ಇಲ್ಲ.

ಪುಸ್ತಕ ವಿಮಾನ

ಲ್ಯಾಟರೀನಾ: ಒಂದು ಬಹಿಷ್ಕೃತ ಕಥನ!

» ಡಾ. ಶಿವರಾಜ್ ಬ್ಯಾಡರಹಳ್ಳಿ

ಕನ್ನಡ ಕಾದಂಬರಿ ಕಥನ ಪರಂಪರೆಯನ್ನು ಹಿಗ್ಗಿಸಿದ ಮತ್ತು ಬಹು ವಿಶಿಷ್ಟ ಶೈಲಿಯಲ್ಲಿ ಬರೆಯುವ ಮೊನಚು ಬರಹಕ್ಕೆ ಪ್ರಸಿದ್ಧರಾಗಿರುವ ಕುಂವೀಯವರು ಕಥೆಗಾರರಾಗಿ, ಕಾದಂಬರಿಕಾರರಾಗಿ ಪ್ರಸಿದ್ಧರಾಗಿದ್ದಾರೆ. ಹಲವು ಘಟನೆಗಳನ್ನು ರೋಚಕತೆಯಿಂದ ಬರೆದು ನಿಬ್ಬೆರಗಾಗಿಸುವ ಕುಂವೀಯವರು ಹಗಲಿರುಳು ಬರೆಯುವ ಕುಳಿತು ಮಾಂತ್ರಿಕ ಬರಹಗಾರರು. ವಸ್ತು, ವಿಷಯ, ಆಲೋಚನೆಯಲ್ಲಿಯೂ ತಳ ಸಮುದಾಯದ ಅನುಭವ ಪ್ರಪಂಚನ್ನೇ ಆಯ್ಕೆ ಮಾಡಿಕೊಂಡು ನವಿರಾದ ನಿರೂಪಣಾ ಶೈಲಿಯಿಂದ ಓದುಗರನ್ನು ಬೆರಗುಗೊಳಿಸುವ ಕುಂವೀಯವರು ಜನ ಕಥನವನ್ನು ಹಿಡಿಯುವ ಶೈಲಿಯೇ ಸೊಗಸಾದುದು. ಕೊಟ್ಟೂರಿಂದ ದಿಲ್ಲಿಯವರೆಗೆ ಬರೆದರೂ ಅದೇ ವ್ಯಂಗ್ಯ, ವಿಡಂಬನೆ, ಭಾಷೆಯ ಬೆಡಗು.

ಅವರ ಇತ್ತೀಚಿನ 'ಲ್ಯಾಟರೀನಾ' ಕಾದಂಬರಿ ನಾವ್ಯಾರೂ ಯೋಚಿಸದ, ನಿರ್ಲಕ್ಷ್ಯಕ್ಕೆ ಒಳಗಾದ, ಬರೆಯಲಿಕ್ಕೆ ಮೀನ ಮೇಷ ಎಣಿಸುವ, ಈ ಕಾಲದಲ್ಲಿ ನಿಂತು ಆ ದುರ್ದಿನಗಳ ಒಂದು ಸಹಜವಾದ ದೈನಂದಿನ ಕ್ರಿಯೆಯಲ್ಲಿ ಒಂದಾದ 'ಮಲವಿಸರ್ಜನೆ' ಸುತ್ತಾ ಕಟ್ಟಿರುವ ಕಥೆ, ಹೊಸ ಆಯಾಮದಿಂದ ಕೂಡಿದೆ. 'ಲ್ಯಾಟರೀನಾ' ಎನ್ನುವುದು 'ಲೆಟ್ರಿನ್' ಪದದ ಸಂವಾದಿಯಂತೆ ಬಳಸಲಾಗಿದೆ. 'ನೋಂದಾನೊಂದು ಕಾಲದ ಗಲೀಜು ಪ್ರಸಂಗ' ಎಂಬ ಟ್ಯಾಗ್ ಲೈನ್‌ನಿಂದಲೇ ಆರಂಭವಾಗುವ ಈ ಕಾದಂಬರಿ ಒಂದು ಕಾಲದ ಹಳ್ಳಿಯ ಶೌಚಾಲಯ ಕಥನವನ್ನು ಹೇಳಿದರೂ ಅದರಾಚೆಗೂ ಕಾದಂಬರಿ ಸಮಕಾಲೀನ ಸಾಮಾಜಿಕ, ರಾಜಕೀಯ, ಮಠದ ರಾಜಕೀಯವನ್ನು ಎಗ್ಗಿಲ್ಲದೆ ರೋಚಕವಾಗಿ ಚಿತ್ರಿಸುತ್ತದೆ. ಹಲವು ರೂಪಕದಲ್ಲಿ ಇರುವ, ವಿನೋದದಿಂದ ಕೂಡಿರುವ ಈ ಕಾದಂಬರಿ ಹಲವು ಹಳ್ಳಿಗಳನ್ನು ಏಕಕಾಲದಲ್ಲಿ ನೆನಪಿಸುತ್ತದೆ.

ಕುಂವೀಯವರು ತಾನು ಬೆಳೆದ ಪರಿಸರದಲ್ಲೇ ಕಂಡ ಅನುಭವ ಜಗತ್ತನ್ನು ಉತ್ಪ್ರೇಕ್ಷೆಯಿಂದ ಸೊಗಸಾಗಿ ಯಾವುದೇ ವಿಷಯವನ್ನು ಓದುಗರಿಗೆ ದಾಟಿಸುವ ಅವರ ಬುದ್ಧಿಯ ಕರಾಮತ್ತು ಬೆರಗು ಹುಟ್ಟಿಸುತ್ತದೆ. ಕಾದಂಬರಿ 'ಕೊಟ್ಟೂರು'ನ್ನು ಕೇಂದ್ರವಾಗಿ ಇಟ್ಟುಕೊಂಡು ಸಾಗಿದರೂ, ಅಲ್ಲಿಗೆ ಮಾತ್ರ ಸೀಮಿತವಾಗುವುದಿಲ್ಲ. ಆ ಕಾಲದ ಹಳ್ಳಿಗಳ ಸೌಕರ್ಯ ಕೊರತೆಯ ಸಂಕೇತದಂತೆ ಕಂಡರೂ ಅದರಲ್ಲಿರುವ ಸಾಮಾಜಿಕ ಭಿನ್ನ ಭೇಧಗಳು ಸಾವಿರಾರು. ಈ ಕಾದಂಬರಿಯನ್ನು ಓದುತ್ತಿರಬೇಕಾದರೆ ಎಪ್ಪತ್ತರ ದಶಕದಲ್ಲಿ ಕರ್ನಾಟಕದಲ್ಲಿ ಇದ್ದ ಮಲ ಹೊರುವ ಪದ್ಧತಿಯನ್ನು ರದ್ದು ಮಾಡಿದ ಬಿ. ಬಸವಲಿಂಗಪ್ಪ ಅವರೂ ಕೂಡ ನೆನಪಾಗುತ್ತಾರೆ. ಮೂಲ ಸೌಕರ್ಯಗಳಿಲ್ಲದೆ ಅಸಡ ಬಸಡವಾಗಿ ಬದುಕುತ್ತಿದ್ದ ಆವತ್ತಿನ ಜನತೆ ಕಣ್ಣು ಮುಂದೆ ಬರುತ್ತಾರೆ. ಕಾಲ ಕ್ರಮೇಣ ಅಂದಿನ ಹಳ್ಳಿಗಳು ತಮ್ಮ ಹಳೆಯ ಪೊರೆಯನ್ನು ಕಳಚಿಕೊಂಡು ಬದಲಾದದ್ದು ಕೈಗಾರಿಕೀಕರಣದ ನಂತರ.

ಅರವತ್ತು ಎಪ್ಪತ್ತರ ದಶಕದ ಹಳ್ಳಿಗಳು ಶೌಚಾಲಯ ರಹಿತವಾಗಿದ್ದವು. ನಿಸರ್ಗದತ್ತವಾಗಿ ಬದುಕು ಕಟ್ಟಿಕೊಳ್ಳುವು ದರಿಂದ ಕಾಡು, ಗುಡ್ಡ, ಸೌದೆ,ಸೊಪ್ಪು ಎಲ್ಲವೂ ಕೂಗಳತೆ ಯಲ್ಲಿಯೇ ಲಭ್ಯವಾಗುತ್ತಿದ್ದವು. ಕೃಷಿಯನ್ನು ಪ್ರಧಾನವಾದ ಕಸುಬನ್ನಾಗಿ ನಂಬಿ ಬದುಕುವ ಜನತೆ ಶೌಚಾಲಯಕ್ಕೆಂದು ವಿಶೇಷ ಗಮನ ಹರಿಸಿದ್ದುದು ಕಡಿಮೆ. ನಿಸರ್ಗದತ್ತವಾಗಿ ಸಾಗುವ ಇದೊಂದು ಕ್ರಿಯೆ ಬಹಳ ಸುಲಭವಾಗಿ ನಡೆಯುತ್ತಿತ್ತು. ಕಾಲ ಕ್ರಮೇಣ ಸಿರಿವಂತ ಹೆಣ್ಣು ಮಕ್ಕಳು ಪೇಟೆಯಿಂದ ಬಂದು ಹಬ್ಬ ಹರಿದಿನಗಳಲ್ಲಿ ಉಳಿದುಕೊಳ್ಳುವ ಪರಿಪಾಠ ಶುರುವಾದ ಮೇಲೆ ಅವರಿಗೆಂದೇ ಶೌಚಾಲಯಗಳನ್ನು ಕಟ್ಟಿಸಿಕೊಂಡದ್ದು ಉಂಟು.

ಖಾಸಗಿ ಶೌಚಾಲಯ

ಕೊಟ್ಟೂರು ಎಂಬ ಊರಲ್ಲಿ ಶೌಚಾಲಯ ಇಲ್ಲದ ಆ ಕಾಲಕ್ಕೆ ಖಾಸಗಿಯಾಗಿ ಕಟ್ಟಿಸಿಕೊಂಡ ದೊಡ್ಡವರು, ಅದನ್ನು ಕ್ಲೀನ್ ಮಾಡಲು ಬರುವ ದಲಿತ ಹೆಣ್ಣು ಮಗಳು ಬುಟ್ಟಿಯಲ್ಲಿ ಮಲವನ್ನು ಹೊತ್ತು ಸಾಗುವುದರಿಂದ ಕಾದಂಬರಿ ಸಾಗುತ್ತದೆ. ನಂತರ ಶೌಚಾಲಯದ ಸುತ್ತಲೇ ಸುತ್ತುಕೊಳ್ಳುವ ಇಂಥಹ ಸಹಜ ಕ್ರಿಯೆಗಳನ್ನು ಸಮಾಜ ನೋಡುವ ಬಗೆಯನ್ನು, ತೋರುವ ಶೋಷಣೆ ಜಾತಿ ಮೂಲದ್ದು ಎಂಬುದು ಸ್ಪಷ್ಟವಾಗುತ್ತದೆ. ಇದನ್ನು ಲೇಖಕರು ಭಿನ್ನ ಬಗೆಯಲ್ಲಿ ಯೋಚಿಸಿ ನೇರವಾಗಿ ಕಂಡ ಘಟನೆಗಳನ್ನು ಸ್ವಾರಸ್ಯಕರವಾಗಿ ಕಟ್ಟಿದ್ದಾರೆ. ನಿಂಗಮ್ಮಜ್ಜಿ, ಸಿದ್ದಮ್ಮಜಿಯರನ್ನು ಚಿತ್ರಿಸಿರುವ ರೀತಿ ವಿರೋಚಿತವಾಗಿದೆ. ಇಂತಹ ವಿಷಯಗಳನ್ನು ಬರೆಯಲು, ಯೋಚಿಸಲು 'ಮಡಿ'ವಂತ ಬರಹಗಾರರು ಶಿಷ್ಟತೆಯನ್ನು ತೋರುವ ಈ ಕಾಲದಲ್ಲಿ ಇದೊಂದು ಅಪರೂಪದ ಕೃತಿ.

ಶೌಚಾಲಯದ ಸುತ್ತ ಕಿರುಕುಳ ಶೋಷಣೆಯನ್ನು ಹತ್ತಿರದಿಂದ ದಿನವೂ ಗಮನಿಸುತ್ತಿದ್ದ ನಿರೂಪಕ ಒಂದು ಪುಸ್ತಕ ಬರೆದು ಸುದ್ದಿಯಾಗುವುದು, ಇದರ ಜೊತೆಗೆ ಸಾಮಾಜಿಕ ರಾಜಕೀಯ ಕ್ರಿಯಾಚಟುವಟಿಕೆ ಚಾಚಿಕೊಳ್ಳುವುದರ ಮೂಲಕ ಕಥೆ ಸಾಗುತ್ತದೆ. ಹೀಗೆ ಹೊರನೋಟಕ್ಕೆ ಶೌಚಕ್ಕೆ ಸಂಬಂಧಿಸಿದಂತೆ ಇದ್ದರೂ, ಅದರಾಚೆಗೂ ಕೃತಿ ತನ್ನ ನೆಲೆಯನ್ನು ವಿಸ್ತರಿಸಿಕೊಂಡು ಸಾಮಾಜಿಕ ಮೂಲಭೂತ ಸಮಸ್ಯೆಯಾಗಿಯೂ ಚರ್ಚಿಸುತ್ತದೆ. ದೈನಂದಿನ ಚಟುವಟಿಕೆಯ ಭಾಗವಾದ ಈ ಕ್ರಿಯೆಯು ಸಾಮಾಜಿಕ ಶ್ರೇಣಿಕರಣದ ಸಮಸ್ಯೆಯಂತೆ ಬದಲಾಗಿ ಜಾತಿ ತಾರತಮ್ಯ, ಶ್ರೇಷ್ಠತೆಯ ವ್ಯಸನವಾಗಿಯೂ ಕಾಣುವ ಪಾತ್ರಧಾರಿಗಳ ಕಡೆ ಬೆಟ್ಟು ಮಾಡಿ ತೋರಿಸುತ್ತದೆ.



ಲ್ಯಾಟರೀನಾ
ಲೇ: ಕುಂ. ವೀರಭದ್ರಪ್ಪ
ಪ್ರ: ಸಪ್ನ ಬುಕ್ ಹೌಸ್
ಬೆಲೆ ರು.350/-

ಭಾಷೆ, ನಿರೂಪಣಾ ಶೈಲಿ, ವಿಷಯದ ವಿಸ್ತಾರದಿಂದ, ಕನ್ನಡದ ಓದುಗರಿಗೆ ಹೊಸ ಜಗತ್ತನ್ನು ತೆರೆದು ತೋರಿಸುವ ವಿಶಿಷ್ಟ ಕಾದಂಬರಿಯೊಂದನ್ನು ಕುಂವೀ ಅವರು ನೀಡಿದ್ದಾರೆ.

ಬಾಲ್ಯದ ಕಾಡುವ ನೆನಪುಗಳು

ಗ್ರಾಮೀಣ ಅನುಭವನ್ನು ಅನುಭವಿಸಿದ ಬರಹಗಾರರಿಗೆ ಹೆಚ್ಚಾಗಿ ಕಾಡುವುದು ಅವರ ಬಾಲ್ಯವೇ. ನೆನಪಿನ ಸುಳಿಯಿಂದ ದಾಖಲಾಗುವ ವರ್ತಮಾನದ ಈ ಕಾಲದಲ್ಲಿ ಅನುಭವಕ್ಕೆ ಮೀರಿದ್ದನ್ನು ಕಟ್ಟಬಹುದು, ಆದರೆ ಆ ಭಾವ ಪ್ರಪಂಚಕ್ಕೆ ಹೊಕ್ಕಲಿಕ್ಕೆ ಸಾಧ್ಯವಾಗುವುದಿಲ್ಲ. ಲೇಖಕರ ನೆನಪುಗಳನ್ನು ಓದಿದ ತಕ್ಷಣವೇ ಇದೊಂದು ಆತ್ಮಕಥಾನಕದ ಭಾಗದಂತೆ ಎಂದು ಹೇಳುವ ಮಾಮೂಲು ಮಾತಿನಾಚೆಗೆ ಕೃತಿಯನ್ನು ನೋಡಬೇಕಾಗುತ್ತದೆ. ಆ ಕಾಲದ ಸಾಮಾಜಿಕ ಕಟ್ಟು ಪಾಡುಗಳ ಒಳ ತುಡಿತವನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ವಯಸ್ಸಿಗೆ ಮೀರಿದ ತಂಟೆ ಕೋರನಂತೆ ಕಾಣುವ ವೀರಭದ್ರನು ಕಕ್ಕಸ್ಸು ಹೊತ್ತುಕೊಂಡು ಬರುವ ಗರ್ಭಿಣಿ ಹೆಂಗಸಿಗೆ ಸಹಾಯ ಮಾಡುವ ಮತ್ತು ಹೆಣ್ಣಿನ ಶೋಷಣೆಯನ್ನು ತಡೆಗಟ್ಟಲು ಅವುಗಳನ್ನು ನಾಶ ಮಾಡಿಸುವ ಆತನ ಕ್ರಾಂತಿಕಾರಕ ಯೋಚನೆ ವಯಸ್ಸಿಗೆ ಮೀರಿದ್ದು ಎನ್ನುವುದು ಎಂತವರಿಗಾದರೂ ಗೊತ್ತಾಗುತ್ತದೆ. ಆಕ್ರೋಶಕ್ಕೆ ವಯಸ್ಸಿನ ಮಿತಿ ಇರುವುದಿಲ್ಲ. ದೊಡ್ಡ ದೊಡ್ಡ ಕ್ರಾಂತಿಕಾರಿಗಳ ಬಾಲ್ಯವನ್ನು ಅವಲೋಕಿಸಿದರೆ ಇದರ ಚರಿತ್ರೆ ತೆರೆದುಕೊಳ್ಳುತ್ತದೆ. ತನ್ನ ಖಾಸಗಿ ಒಡೆತನದ ಶೌಚಾಲಯಗಳ ಮೇಲೆ ಹಿಡಿತ ಸಾಧಿಸಿಕೊಂಡು ಶೋಷಿಸುವ ಮಂಚಾಲಿ ಶೆಟ್ಟಿಯ ದರ್ಪದ ವಿರುದ್ಧ ಆಕ್ರೋಶ ಭರಿತನಾಗುವ ಈ ಹುಡುಗ ಬೆರಗು ಹುಟ್ಟಿಸುತ್ತಾನೆ. ಹೆಸರಿಗೆ ತಕ್ಕಂತೆ 'ಈರಭದ್ರಿ,' ಶೌಚಾಲಯ ಗೂಡುಗಳನ್ನು ಚಿಂದಿ ಉಡಾಯಿಸಿದರೂ, ಆತನ ಆಕ್ರೋಶ ಅಲ್ಲಿಗೆ ನಿಲ್ಲುವುದಿಲ್ಲ. ಈ ಘಟನೆಗೆ ಕುಂವೀಯವರು ಗಾಂಧಿಯವರ 'ಸ್ವಚ್ಛ' ಕ್ರಿಯಾ ಕಲ್ಪನೆಗೆ ಮುಂದಾಗುವ ಅವರು ಆಶ್ರಮದಲ್ಲಿ ತನ್ನ ಶೌಚಾಲಯವನ್ನು ತಾನೇ ಶುಚಿಗೊಳಿಸುವುದರ ಮೂಲಕ ಒಂದು ಸಂದೇಶ ಕೊಟ್ಟ ಪ್ರಸಂಗವನ್ನು ಜೋಡಿಸಿ ಕಾದಂಬರಿಗೆ ಒಂದು ಸಾಮಾಜಿಕ ಕಾಳಜಿಯನ್ನು ತಂದುಕೊಟ್ಟಿದ್ದಾರೆ. ರಂಗಾರಿ ಮಾಧವರಾವ್ ಮತ್ತು ಕಸ್ತೂರಿ ಬಾಯಿ ಪಾತ್ರಗಳನ್ನು ಗಾಂಧಿ ಚಿಂತನೆಯ ರೂಪಕಗಳಂತೆ ಬಳಸಿರುವುದರಿಂದ ಗಾಂಧೀಜಿಯ ಸಮ ಸಮಾಜದ ಕಲ್ಪನೆಯೂ ಮುಖ್ಯ ಎನ್ನುವುದನ್ನು ಬಿಂಬಿಸಲಾಗಿದೆ. ಲೇಖಕ ಅಲಿಯಾಸ್ 'ಸಂಬು' ಪ್ರಗತಿಪರ ಸಾಹಿತಿಯ ಇಮೇಜನ್ನು ಉಳಿಸಿಕೊಂಡು ಆ ಹುಡುಗನಿಗೆ ಧೈರ್ಯ ತುಂಬುತ್ತಾನೆ. ಕ್ರಾಂತಿಕಾರಕ ಹೆಜ್ಜೆಗಳನ್ನು ಚಿಕ್ಕವಯಸ್ಸಿನಲ್ಲೆಯೇ ತುಳಿಯುವ ಆತನ ಮನಸ್ಸು ಜಾತಿ ರಹಿತ ಸಮಾಜವನ್ನು ಕಟ್ಟಬೇಕೆಂಬ ಹಂಬಲ ಸಹಜವಾಗಿ ಆರಂಭವಾಗುತ್ತದೆ. ಜೊತೆಗೆ ಪ್ರೀತಿ ಪ್ರೇಮಕ್ಕೂ ಜಾಗ ಇರುವ ಈ ಕಥಾ ಹಂದರದಲ್ಲಿ ಬರಹಗಾರ 'ಸಂಬು' ಊರ ಯಜಮಾನನ ಮಗಳನ್ನು ಪ್ರೀತಿಯ ಬಲೆಯಲ್ಲಿ ಕೆಡವಿ ಮದುವೆ ಮಾಡಿಕೊಂಡು ಅವಳ ಮನಸ್ಸನ್ನು ಹೋರಾಟ ಮುಖಿಯಾಗಿ ಬದಲಾಯಿಸುವ ಸಂಬುವಿನ ಮನಸ್ಸು ಕ್ರಾಂತಿಯ ಕಡೆ ಎಳೆಯುತ್ತದೆ. ಹೀಗಾಗಿ ಆತ ಮಾಡುವ ಹೋರಾಟ ಹುಡುಗಾಟಿಕೆಯಾದುದಲ್ಲ. ಕ್ರಾಂತಿಯ ಕಿಡಿಯ ರೂಪ ಎಂದು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಜಾತಿ ತಾರತಮ್ಯದಂತೆಯೇ ಇರುವ ಇಂದಿನ ಸಾರ್ವಜನಿಕ ಶೌಚಾಲಯಗಳು ಮತ್ತು ಖಾಸಗಿ ಒಡೆತನದಲ್ಲಿರುವ ಶೌಚಾಲಯಗಳನ್ನು ನೋಡಿದರೆ ಸುಲಭವಾಗಿ ಅರ್ಥೈಸಿಕೊಳ್ಳಬಹುದು. ಈ ಮಲ ಎತ್ತುವ ಕಾರ್ಯವನ್ನು ಕೆಳಜಾತಿಯ ಜನರು ಮಾತ್ರ ಮಾಡುತ್ತಾರೆ. ಜಾಗತೀಕರಣದ ಭರಾಟೆಯಲ್ಲಿ ಕೆಲವು ಕೌಶಲ್ಯ ಕಲೆಗಳು ಜಾತಿಯನ್ನು, ವರ್ಗವನ್ನು ಮೀರಿ ದಾಟುತ್ತಿದ್ದರೂ ಕೆಲವು ಮಾತ್ರ ಆ ಸಮುದಾಯದಲ್ಲಿಯೇ ಉಳಿದುಬಿಟ್ಟಿದೆ. ಸಂವಿಧಾನದ ಪ್ರಜ್ಞೆ ಜಾಗೃತವಾಗದಿದ್ದರೆ ಶೋಷಣೆಯನ್ನು ತಪ್ಪಿಸಿಕೊಳ್ಳಲು ಆ ದೇವರಿಂದಲೂ ಸಾಧ್ಯವಿಲ್ಲ ಎಂಬುದನ್ನು ಬಾಬಾ ಸಾಹೇಬರು ತಂದ ಕಾನೂನು ಹಲವು ರೀತಿಯಲ್ಲಿ ಹೇಳುತ್ತದೆ. ಹೊಲಸು, ಮತೀಯತೆ, ಕೊಳಕುತನಗಳು ಮೇಲ್ನೋಟಕ್ಕಿಂತ ಒಳಗಿನ ಕೊಳಕುಗಳು ಬಲು ಅಪಾಯಕಾರಿ ಎನ್ನುವುದನ್ನು ಪ್ರತಿ ಘಟನೆಯಲ್ಲಿಯೂ ಹೇಳುತ್ತಾ ಬಂದಿದ್ದಾರೆ.

ಶೌಚೇಶ್ವರ ಸ್ವಾಮೀಜಿ

ಕಾದಂಬರಿಯಲ್ಲಿ ಪಾತ್ರವಾಗಿ ಬರುವ ಶೌಚೇಶ್ವರ ಸ್ವಾಮೀಜಿಗಳು, ನಕಲಿ ಜಾತಿವಾದಿ ಸ್ವಾಮೀಜಿಯನ್ನು ಗೇಲಿ ಮಾಡುವ ಪ್ರಸಂಗ ಸ್ವಾರಸ್ಯಕರವಾಗಿದೆ. ಸನಾತನಿ ತೆವಲು ಸ್ವಾಮೀಜಿಗಳು, ಡೋಂಗಿ ರಾಜಕೀಯ ವ್ಯಕ್ತಿಗಳನ್ನು, ಉಧೋ ಉಧೋ ಎಂದು ಹಾಡಿ ಹೊಗಳುವ ಭಟ್ಟಂಗಿಗಳನ್ನು ಮಠದ ಚೇಲಾಗಳನ್ನು ಹಿಗ್ಗಾ ಮುಗ್ಗಾ ತಮಾಷೆಯಿಂದ ಗೇಲಿಮಾಡಿರುವುದು ಓದುಗರಲ್ಲಿ ಕಚಗುಳಿ ಇಡುತ್ತದೆ.ಹೀಗೆ ಹೆಸರಿಗೆ ತಕ್ಕಂತೆ ಇರುವ ಈ ಕಥಾನಕ ರೋಚಕವಾಗಿ ಸಿನಿಮಾ ನೋಡಿದಂತೆ ಭಾಸವಾಗುತ್ತದೆ. ಕುಂವೀಯವರು ತಾನು ನಂಬಿದ ಸಿದ್ಧಾಂತಗಳನ್ನು ಸಾಮಾಜಿಕ ಕಾಳಜಿಯಿಂದ ಬದಲಾಯಿಸುವ ಒಬ್ಬ ಬದ್ಧತೆಯ ಬರಹಗಾರರಾಗಿ ವಿಶಿಷ್ಟ ಅನುಭವವನ್ನು ನೀಡುತ್ತಾರೆ. ಕಾದಂಬರಿಯಲ್ಲಿ ಬಳಸಿರುವ ಹಂದಿಗಳು, ಎಮ್ಮೆಗಳು, ಹಸುಗಳು, ನಾಯಿಗಳು ಒಣಗೇಡಿ, ಕಿಡಿಗೇಡಿ ದಗಾಕೊರರನ್ನು ಮಾತಿನ ಚಾಟಿಯಲ್ಲಿ ಬೀಸಿ ರೂಪಕದಲ್ಲಿ ಬಯಲು ಮಾಡಿರುವ ಬರಹಗಳು ಕಥನದುದ್ದಕ್ಕೂ ಕಾಣುತ್ತದೆ. ಯಾವುದನ್ನು ಬರಹಗಾರ ನೇರವಾಗಿ ಹೇಳಲು ಸಾಧ್ಯವಾಗುವುದಿಲ್ಲವೋ ಅಂತದ್ದನ್ನು ರೂಪಕ ಭಾಷೆಯಲ್ಲಿ ಬಳಸಿ ಮೋಡಿ ಮಾಡುವ ಗುಣ ತನ್ನ ಎಲ್ಲಾ ಕಥೆ ಕಾದಂಬರಿಯಲ್ಲಿ ಸಮರ್ಥವಾಗಿ ದುಡಿಸಿಕೊಂಡಿರುವ ಕುಂವೀಯವರು ಬರೆಯುವುದಕ್ಕೆ ಕೂತರೆ ಕೆಂಡವನ್ನು, ಕರಿ ಮಣಿಯನ್ನು, ಕೂದಲನ್ನು ಕತೆಯಾಗಿ ಕಟ್ಟುವ ಅವರ ಅದ್ಭುತ ಪ್ರತಿಭಾ ಶಕ್ತಿ ಅಕ್ಷಯ ಪಾತ್ರೆಯನ್ನು ಮೀರಿಸುವಂತಿದೆ. 'ಪ್ರತಿಷ್ಠಿತ ಸಮಾಜದ ಹುಸಿ ಮೌಲ್ಯವನ್ನು ಗಾಂಭೀರ್ಯವನ್ನು ಚುಚ್ಚಿ ವಿಡಂಬಿಸಿ ಘಾಸಿಗೊಳಿಸುವುದರಲ್ಲಿ ನಿಷ್ಣಾತರಾಗಿರುವ ಕುಂವೀಯವರು ಕಾದಂಬರಿ ಲೋಕಕ್ಕೆ ವಿನೂತನ ತಿರುವು ನೀಡಿದ ಅಪೂರ್ವ ಕತೆಗಾರ'ಎಂದು ಅಭಿಪ್ರಾಯ ಪಟ್ಟಿರುವ ಡಾ.ಕೆ. ಮರುಳಸಿದ್ದಪ್ಪ ಅವರ ಮಾತು ಕುಂವೀಯವರ ಒಟ್ಟು ಕಥನ ಸಾಹಿತ್ಯವನ್ನು ಓದಿದವರಿಗೆ ಸತ್ಯವೆನಿಸುತ್ತದೆ.

ಗೋವುಗಳನ್ನು ಪವಿತ್ರವೆಂದು ನಂಬಿಸುವ, ತಲೆ ತುಂಬಾ ಮಲಿನತೆಯನ್ನೇ ತುಂಬಿಸಿಕೊಂಡಿರುವ, ಸಮಾಜಕ್ಕೆ ಕಂಟಕರಾಗಿರುವ ಕೆಲವು ಸ್ವಾಮೀಜಿಗಳನ್ನು ತಿವಿತ ಬರಹದಿಂದ ಬೆತ್ತಲುಗೊಳಿಸಿದ್ದಾರೆ. ಸಾಮಾಜಿಕವಾಗಿ ಮತ್ತಷ್ಟು ಬದಲಾಗದೆ ಕೊಳೆಯುತ್ತಿರುವ ತಮ್ಮ ಬುದ್ಧಿ ಭಾವಗಳನ್ನು ಬದಲು ಮಾಡಲು ಹೋರಾಟವೇ ಪ್ರಧಾನವಾಗಿ ಬೇಕು ಎಂಬ ಆಶಯದೊಂದಿಗೆ ಮಲ ಹೊರುವ ದಲಿತ ಮಹಿಳೆಯರ, ಕಡು ಕಷ್ಟಗಳ ಬವಣೆಯಲ್ಲಿ ಸರಮಾಲೆಯಾಗಿ ಅಂಟಿಕೊಂಡಿರುವ ಶೋಷಣಾ ಜಗತ್ತನ್ನು ಸಮಕಾಲೀನ ವಿದ್ಯಮಾನಗಳ ಜೊತೆ ಸಮೀಕರಿಸಿ ಕಟ್ಟಿರುವ ಕಥನ ಮನ ಕಲಕುತ್ತದೆ.

ಹಾಗಾಗಿಯೇ ಇದು ಕನ್ನಡ ಕಾದಂಬರಿ ಲೋಕಕ್ಕೆ ವಿನೂತನ ಕಾದಂಬರಿ. ಬಟ್ಟೆ ಹೊಲಸಾದರೆ ತೊಳೆಯಬಹುದು; ಮನಸ್ಸು ಬುದ್ಧಿ ಹೊಲಸಾದರೆ ತೊಳೆಯಲು ಬಾರದು ಎಂಬ ವಿವೇಕವನ್ನು ಸಮಾಜದಲ್ಲಿ ಬಿತ್ತಲು ನಿರಂತರವಾಗಿ ಪ್ರಯತ್ನ ಮಾಡುತ್ತಿರುವ ಕುಂವೀಯವರು ಈ ಕಾದಂಬರಿಯಲ್ಲಿಯೂ ತನ್ನ ಸಾಂವಿಧಾನಿಕ ಹಕ್ಕು, ಹಕ್ಕೊತ್ತಾಯಗಳಿಂದ ಸಮಾಜದ ಕೆಳವರ್ಗದವರ, ದಲಿತರ ಸ್ಥಿತಿ ಬದಲಾಗಬೇಕಿದೆ ಎಂಬುದನ್ನು ಗಲೀಜು ಎಂದು ನಾವು ನೀವು ಭಾವಿಸುವ 'ಮಲವಿಸರ್ಜನಾ' ಲೋಕವನ್ನು ತೆರೆದು ತೋರಿಸಿಕೊಟ್ಟಿದ್ದಾರೆ. ಓದುತ್ತಾ ಓದುತ್ತಲೇ ಮರೆತ ಲೋಕವು ಕಣ್ಣ ಮುಂದೆ ತೆರೆದುಕೊಳ್ಳುತ್ತದೆ. ಭಾಷೆ, ನಿರೂಪಣಾ ಶೈಲಿ, ವಿಷಯದ ವಿಸ್ತಾರದಿಂದ, ಕನ್ನಡದ ಓದುಗರಿಗೆ ಹೊಸ ಜಗತ್ತನ್ನು ತೆರೆದು ತೋರಿಸುವ ವಿಶಿಷ್ಟ ಕಾದಂಬರಿ ಇದು.

ಅಪರೂಪದ ಪ್ರವಾಸ ಕಥನ

» ಶಶಿ

ಈ ಪುಸ್ತಕದಲ್ಲಿ ಅಡಗಿರುವ ಹಲವು ವಿಶೇಷಗಳಲ್ಲಿ ಪುಸ್ತಕದ ಶೀರ್ಷಿಕೆಯೂ ಒಂದು. 'ಹಾರೈಸಿ ತೆರೆದ ಕಣ್ಣ ಕೋರೈಸೋ ನೂರು ಬಣ್ಣ' ಎಂಬ ಪುಸ್ತಕದ ಹೆಸರೇ ಒಂದು ಪುಟ್ಟ ಕವನದಂತಿದ್ದು, ಹಲವು ಧ್ವನಿಗಳನ್ನು ಹೊರಡಿಸುತ್ತದೆ. ಇನ್ನೊಂದು ವಿಶೇಷತೆ ಎಂದರೆ, ಪುಸ್ತಕದ ಮುಖಪುಟ : ನಮ್ಮ ನಾಡಿನ ಖ್ಯಾತ ಮುಖಪುಟ ಕಲಾವಿದರಾದ ಅಪಾರ ಅವರು ರೂಪಿಸಿರುವ ಈ ಮುಖಪುಟ ಮತ್ತು ಅಲ್ಲಿ ಬಳಸಿರುವ ಚಿತ್ರವು ಇಡೀ ಪುಸ್ತಕದ ಭಾವವನ್ನು ಹಿಡಿದಿಟ್ಟಿದೆ. ಇದು ಛಾಯಾಗ್ರಾಹಕರೊಬ್ಬರು ಕಂಡ ಜಗತ್ತಿನ ಬಣ್ಣ ಬಣ್ಣದ ಕಥನ ಮತ್ತು ಚಿತ್ರಗಳು. ಪುಸ್ತಕದ ಲೇಖಕರು ಜಗತ್ತಿನ 22ಕ್ಕೂ ಅಧಿಕ ದೇಶಗಳಲ್ಲಿ ಪ್ರವಾಸ ಮಾಡಿದ್ದು, ಅಲ್ಲಿನ ಅಪರೂಪದ ಸಂಗತಿಗಳನ್ನು ಚಿತ್ರ ಸಹಿತ ಇಲ್ಲಿ ದಾಖಲಿಸಿದ್ದಾರೆ. ಅವರ ಪ್ರವಾಸದಲ್ಲಿ 'ಆಫ್ ಬೀಟ್' ಜಾಗಗಳೇ ಅಧಿಕ; ಉದಾಹರಣೆಗೆ 'ಹಾಯ್ ಮೆಂಟವಯ್' ಬರಹವನ್ನು ನೋಡಬಹುದು (ಪುಟ 190). ಇಂಡೋನೇಷ್ಯಾದಲ್ಲಿರುವ ಬಹುದೂರದ ದ್ವೀಪಕ್ಕೆ ಹೋಗಿ, ಅಲ್ಲಿನ ಮೂಲನಿವಾಸಿಗಳನ್ನು ಮಾತನಾಡಿಸಿ, ಅವರ ಛಾಯಾ ಚಿತ್ರಗಳನ್ನು ಸೆರೆಹಿಡಿದು ಇಲ್ಲಿ ಪ್ರಸ್ತುತಪಡಿಸಿರುವ ರೀತಿ ಅನನ್ಯ. ಬಹುಷಃ ಈ ಬರಹದಲ್ಲಿ ದಾಖಲಿಸಿರುವ ಆ ಬುಡಕಟ್ಟು ಜನರ ಜೀವನಪದ್ಧತಿಯನ್ನು ನೋಡಿರುವ ಕನ್ನಡಿಗರಲ್ಲಿ ಇವರೇ ಮೊದಲು ಇರಬಹುದು. ಅದೇ ರೀತಿ ಇಂಡೋನೇಷ್ಯಾದ ಕಂಬಳದ ಕುರಿತ ಲೇಖನವೂ ವಿಶಿಷ್ಟ ಮತ್ತು ನಮ್ಮ ರಾಜ್ಯದ ಕರಾವಳಿಯ ಕಂಬಳಕ್ಕೆ ಸಂವಾದಿಯಾಗಿರುವ ಜನಪದ ಕಲೆಯೊಂದನ್ನು ಪ್ರಸ್ತುತಪಡಿಸಿ, ಕುತೂಹಲ ಹುಟ್ಟಿಸುತ್ತದೆ.

ದುಬೈ ನಗರದ ಸಂಗೀತ ವಿಶ್ವಕೋಶ ಇಂತೆಸಾರ್ ಸಲೀಮ್ ಎಂಬ ಲೇಖನವು (ಪುಟ 60), ಲೇಖಕರ ವಿಭಿನ್ನ ಆಸಕ್ತಿಗೆ ಒಂದು ನಿದರ್ಶನ. ಸಾಮಾನ್ಯ ಪ್ರವಾಸಿಗರು ತುಳಿಯದ ಹಾದಿಯಲ್ಲಿ ನಡೆದು, ಆಯಾ ದೇಶಗಳ ಅಪರೂಪದ ಸಂಗತಿಗಳನ್ನು ಗುರುತಿಸಿ, ಮಾಹಿತಿ ಸಂಗ್ರಹಿಸಿ, ಪ್ರಸ್ತುತಪಡಿಸುವ ಲೇಖಕರ ಕೌಶಲ ನಿಜಕ್ಕೂ ಬೆರಗುಹುಟ್ಟಿಸುವಂತಹದ್ದು. ದುಬೈನಂತಹ 'ಮಾಯಾ ನಗರಿ'ಯಲ್ಲಿ, ಸಂಗೀತ ವಿಶ್ವಕೋಶವೆಂದೇ ಹೆಸರಾದ ಸಲೀಮ್‌ರ ಆಸಕ್ತಿಯು ಗಮನ ಸೆಳೆಯುತ್ತದೆ; ಆ ವ್ಯಕ್ತಿಯು ಪಾಕಿಸ್ತಾನದ ಮೂಲದವನು! ಈ ಪುಸ್ತಕದ ಇನ್ನೊಂದು ವೈಶಿಷ್ಟ್ಯವೆಂದರೆ, ಪ್ರತಿ ಪುಟದಲ್ಲೂ ಹರಡಿರುವ ಉತ್ತಮ ಫೋಟೋಗಳು. ಕಪ್ಪು ಬಿಳುಪಿನಲ್ಲಿದ್ದರೂ, ಆ ಚಿತ್ರಗಳ ಮೆರಗು ಕಡಿಮೆಯಾಗಿಲ್ಲ! ಯುರೋಪಿನ ಹಲವು ದೇಶಗಳ ಪರಿಚಯ, ಅಲ್ಲಿನ ಫೋಟೋಗಳು ಇಲ್ಲಿವೆ; ಭೂತಾನ್ ಕುರಿತ ಬರಹಗಳು ಗಮನ ಸೆಳೆಯುತ್ತವೆ. ಫೋಟೋಗಳ ಆಯ್ಕೆಯಲ್ಲೂ ವಿಶೇಷ ಕೌಶಲ ಕಾಣುತ್ತದೆ; ನೂರಾರು ಫೋಟೋಗಳಿದ್ದರೂ, ಏಕತಾನತೆ ಕಾಡಿಲ್ಲ, ಪ್ರತಿ ಫೋಟೋವನ್ನೂ ನೋಡಿ, ಅಲ್ಲಿನ ವಿಶೇಷವನ್ನು ಗುರುತಿಸುವುದೇ ಓದುವ ಸುಖಕ್ಕೆ ಮುದ ನೀಡುತ್ತದೆ. 41 ಬರಹಗಳು ಮತ್ತು ನೂರಾರು ಫೋಟೋಗಳಿರುವ ಈ ಪುಸ್ತಕವು, ಕನ್ನಡಿಗ ಛಾಯಾಗ್ರಾಹಕನೊಬ್ಬನ ಅಪೂರ್ವ ಸಾಹಸದಂತೆ ಮೂಡಿಬಂದಿರುವಂತೂ ನಿಜ.



ಹಾರೈಸಿ ತೆರೆದ ಕಣ್ಣ ಕೋರೈಸೋ ನೂರು ಬಣ್ಣ
ಲೇ: ಡಿ.ಜಿ.ಮಲ್ಲಿಕಾರ್ಜುನ
ಪ್ರ: ನವಕರ್ನಾಟಕ ಬೆಂಗಳೂರು
ಬೆಲೆ ರು. 250/-

ನೂರಾರು ಫೋಟೋಗಳನ್ನು ಒಳಗೊಂಡ ಈ ಪುಸ್ತಕವು ಜಗತ್ತಿನ ಹಲವು ದೇಶಗಳ ಪರಿಚಯವನ್ನು ಪ್ರವಾಸ ಕಥನದ ಮೂಲಕ ಮಾಡಿಕೊಟ್ಟಿದೆ.

ಭಾವ ತುಂಬಿದ ಗೀತೆಗಳು

» ವಿನೀತ

ಕವಯಿತ್ರಿ ಅಪರ್ಣಾ ಹೆಗಡೆಯವರ ಚೊಚ್ಚಲ ಕವನ ಸಂಕಲನ 'ನಾದದೊಲುಮೆ' ಹಲವು ಕಾರಣಗಳಿಗಾಗಿ ಗಮನ ಸೆಳೆಯುತ್ತದೆ. ಇಲ್ಲಿನ ಹೆಚ್ಚಿನ ಕವನಗಳಲ್ಲಿ ನಾದವೇ ಪ್ರಮುಖವಾಗಿದ್ದು, ಭಾವವೂ ತುಂಬಿಕೊಂಡಿದೆ ಮತ್ತು ಮನಸ್ಸಿನ ವೀಣೆಯನ್ನು ಮಿಡಿಯುವ ಶಕ್ತಿ ಹೊಂದಿವೆ. ''ಇಲ್ಲಿಯ ಕವಿತೆಗಳು ಭಾವಪೂರ್ಣವಾಗಿವೆ. ಹಲವಾರು ಕವಿತೆಗಳಲ್ಲಿ ಗೇಯ ಗುಣವಿದೆ. ಎಷ್ಟೋ ಕಡೆ ಗದ್ಯದಂತೆ ಭಾಸವಾಗುವ ಹಲವಾರು ವಾಕ್ಯಗಳು ಇಲಿನ ಕವಿತೆಯೊಳಗೆ ನುಸುಳಿ ಕುಳಿತಿವೆ. ಕೃಷ್ಣ ರಾಧೆ, ಪ್ರೇಮ ಒಲವು, ಸಂಕಟ ದುಃಖ, ಪ್ರಕೃತಿ ಚೆಲುವು, ಮಳೆ ಹೊಳೆ, ಚಂದ್ರ ಬೆಳದಿಂಗಳು, ನಾದ ರಾಗ, ನವಿಲು ನಾಟ್ಯ – ಹೀಗೆ ಬೆರಗಿನ ನೋಟಕ್ಕೆ ಸಿಕ್ಕ ಎಲ್ಲಾ ಸಂಗತಿಗಳು ಇಲ್ಲಿ ಕವಿತೆಯಾಗಲುಹವಣಿಸಿವೆ. ಅಪರ್ಣಾ ಅವರು ಅಕ್ಷರಗಳಿಗೆ ಅರ್ಪಣಾಭಾವದಿಂದ ಶರಣಾಗಿದ್ದಾರೆ. ತಲ್ಲೀನತೆ, ತನ್ಮಯತೆ ಇಲ್ಲಿನ ಕವಿತೆಗಳ ಹಲವಾರು ಸಾಲುಗಳಿಲಗೆ ಜೀವ ತುಂಬಿದೆ. ಅಪರ್ಣಾ ಅವರು ಇನ್ನಷ್ಟು ಬರೆಯಲಿ, ಮತ್ತಷ್ಟು ಮಾಗಲಿ, ಕವಿತೆಗಳು ನಳನಳಿಸಲಿ'' (ಬೆನ್ನುಡಿಯಲ್ಲಿ ಸಿಂಧುಚಂದ್ರ ಶಿರಸಿ). ಈ ಸಂಕಲನದ ಕೆಲವು ಗೀತೆಗಳಿಗೆ ರಾಗಸಂಯೋಜನೆಯಾಗಿ, ಹಾಡಿನ ರೂಪದಲ್ಲಿ ಹೊರಬಂದಿರುವುದು ವಿಶೇಷ. ಅತೀವ ಉತ್ಸಾಹದಿಂದ ಕವಿತೆಗಳನ್ನು ಬರೆಯುವ ಅಪರ್ಣಾ ಹೆಗಡೆಯವರು, ಇನ್ನಷ್ಟು ವೈವಿಧ್ಯಮಯ ವಿಷಯಗಳನ್ನು, ವಸ್ತುಗಳನ್ನು ಆರಿಸಿಕೊಂಡು ಕವಿತೆ ಬರೆಯಬಲ್ಲರು; ಅವರಿಂದ ಇನ್ನಷ್ಟು ಕವಿತೆಗಳನ್ನು ನಿರೀಕ್ಷಿಸೋಣ.



ನಾದದೊಲುಮೆ
ಲೇ: ಅಪರ್ಣಾ ಹೆಗಡೆ
ಪ್ರ: ಸಿನಾಗ್ ಬುಕ್ಸ್ ಬೆಂಗಳೂರು
9620916996
ಬೆಲೆ ರು.99/-

ಮಕ್ಕಳ ಮನ ಮುದಗೊಳಿಸುವ ಕೃತಿ

» ಬೇದ್ರೆ, ಮಂಜುನಾಥ, ಮೈಸೂರು

ಮಂಗಗಳಂತೆ ಮಕ್ಕಳಿಗೆಲ್ಲ
ಇದ್ದರೆ ಉದ್ದನೆ ಬಾಲ!
ಗಿಡ ಗಿಡದಲ್ಲಿ ಕಟ್ಟಬೇಕಿತ್ತು
ಎಲ್ಲಾ ಪ್ರೈಮರಿ ಸ್ಕೂಲ! ....
(ಉದ್ದನ ಬಾಲ ಇದ್ರೆ)
ಹಕ್ಕಿಯಂತೆ ರೆಕ್ಕೆ ಇದ್ರೆ
ಶಾಲೆಯ ತುಂಟ ಮಕ್ಕಳಿಗೆ!
ಬಸ್ಸು ಆಟೊ ಕಾಯ್ತಿರಲಿಲ್ಲ
ಬೇಗನೆ ಬರಲು ಶಾಲೆಗೆ! ....
(ರೆಕ್ಕೆ ಇದ್ರೆ ಮಕ್ಕಳಿಗೆ)

ಎಂತಹ ಸೊಗಸಾದ ಕಲ್ಪನೆ! ಮಕ್ಕಳ ಮುಖದಲ್ಲಿ ನಗು ಅರಳಿಸಿ, ಕುತೂಹಲ ಕೆರಳಿಸಿ, ಇಡೀ ಪದ್ಯವನ್ನು ಇನ್ನೊಮ್ಮೆ, ಮತ್ತೊಮ್ಮೆ ಓದುವಂತೆ ಮಾಡುವ ಈ ಪದ್ಯವೇ ಸಾಕು ಮಕ್ಕಳಿಗಾಗಿ ತುಡಿಯುವ ಪ್ರೊ. ಚಂದ್ರಗೌಡ ಕುಲಕರ್ಣಿಯವರ ಕವಿತೆಗಳು ಎಷ್ಟೊಂದು ಸೊಗಸಾಗಿವೆ ಎಂದು ತೋರಿಸಲು! ಮಕ್ಕಳ ಪದ್ಯಗಳಿಗೆ ಹಾಡಿನ ಉಡುಗೆ ತೊಡಿಸಿ, ವೀಡಿಯೋದಲ್ಲಿ ಸೆರೆಹಿಡಿದು, ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಟ್ಟಿರುವ ಚಂದ್ರಗೌಡ ಕುಲಕರ್ಣಿಯವರು ಮಕ್ಕಳಿಗಾಗಿ ಕಥೆ ಹೇಳಿಸುವುದು, ಹಾಡಿಸುವುದು, ಒಗಟು ಬಿಡಿಸುವುದು, ಚುಟುಕು ಹೇಳಿಸುವುದು, ಬರೆಸುವುದು, ಪದಬಂಧ, ಪದಗೊಲಗಳನ್ನು ರಚಿಸುವುದು ಹೀಗೆ ಮಕ್ಕಳೊಡನೆ ಒಂದಾಗಿ ಬೆರೆಯುತ್ತಿರುವ ಕವಿ ಇವರು.

ಇತ್ತೀಚೆಗೆ ಪ್ರಕಟವಾದ ಚನ್ನಪ್ಪ ಪ್ರತಿಷ್ಠಾನದ ಮಕ್ಕಳ ಸಾಹಿತ್ಯ ಪ್ರಶಸ್ತಿಗೆ ಪಾತ್ರವಾಗಿರುವ ಚಂದ್ರಗೌಡ ಕುಲಕರ್ಣಿ ಅವರ ಚಿಲಿಪಿಲಿ ಶ್ರೀಗಂಧ ಕೃತಿಯಲ್ಲಿ 306 ಮಕ್ಕಳ ಪದ್ಯಗಳಿವೆ. ಕೂಸು ಕಂದನ ರಾಗಲಯವನು, ಹಾಸು ಕೌದಿಯ ಕಸೂತಿ ಸೊಗಸನು, ಖಾಸ ಪದದಲಿ ಪಡಿಮೂಡಿಸುವ ಕನ್ನಡ ನುಡಿ ಚಂದ, ಚಿಲಿಪಿಲಿ ಶ್ರೀಗಂಧ...... ಇವರ ಬಹುತೇಕ ಕವಿತೆಗಳು ಛಂದೋಬದ್ಧ ರಚನೆಗಳಾಗಿವೆ. ಸುಮಧುರ ಭಾವಗೀತೆಗಳಾಗಿವೆ.

ಈ ಸಂಕಲನದ 30 ಗೀತೆಗಳನ್ನು ಮಕ್ಕಳಿಗೆ ಇಷ್ಟವಾಗುವಂತೆ ಸಂಗೀತ ಸಂಯೋಜನೆಗೊಳಿಸಿ; ಮಕ್ಕಳಿಂದ ಹಾಡಿಸಿ, ಧ್ವನಿಮುದ್ರಿಕೆ ಹೊರ ತಂದಿರುವ ಚಂದ್ರಗೌಡ ಕುಲಕರ್ಣಿಯವರು ಮಕ್ಕಳ ಮನೆ-ಮನ ತಲುಪಿ, ರಂಜಿಸಿ, ಅವರ ಭಾವಲೋಕದಲ್ಲಿ ಬಹುಕಾಲ ಉಳಿದು ಮಕ್ಕಳ ಬುದ್ಧಿ-ಭಾವಗಳ ವಿಕಾಸಕ್ಕೆ ನೆರವಾಗಲಿ, ಎಂಬ ಆಶಯ ನುಡಿಗಳನ್ನು ಸೋದಾಹರಣವಾಗಿ ತಮ್ಮ ಮುನ್ನುಡಿಯಲ್ಲಿ ವಿಸ್ತರಿಸಿ ಹೇಳಿದ್ದಾರೆ ಮಕ್ಕಳ ರಂಗಭೂಮಿ ತಜ್ಞ, ಕವಿ, ಸಾಹಿತಿ ಡಾ. ನಿಂಗು ಸೊಲಗಿ ಅವರು.



ಕನ್ನಡ ನುಡಿ ಚಂದ - ಚಿಲಿಪಿಲಿ ಶ್ರೀಗಂಧ
ಲೇ: ಚಂದ್ರಗೌಡ ಕುಲಕರ್ಣಿ
ಪ್ರ: ಚಿಲಿಪಿಲಿ ಪ್ರಕಾಶನ, ಸುಭಾಸ ರಸ್ತೆ, ಧಾರವಾಡ
ಬೆಲೆ ರು. 400/-

ವಿಶ್ವವಾಣಿ ಅಂಕಿತ ಟಾಪ್ ಟೆನ್

1



ಎದೆಯ ಹಣತೆ
(ಬೂಕರ್ ಪ್ರಶಸ್ತಿ ಪಡೆದ ಕಥಾ ಸಂಕಲನ)
ಲೇ: ಬಾನು ಮುಷ್ತಾಕ್
ಪ್ರ: ಅಭಿರುಚಿ ಪ್ರಕಾಶನ, ಮೈಸೂರು
ಬೆಲೆ : ರೂ 250/-

2

ನನ್ನ ಅಪ್ಪ ಕೆಎಸ್‌ನ
(ಮಗ ಕಂಡಂತೆ ಕವಿ ಕೆಎಸ್ ನರಸಿಂಹಸ್ವಾಮಿ)
ಲೇ: ಕೆ.ಎನ್. ಮಹಾಬಲ
ಪ್ರ: ಬಹುರೂಪಿ, ಬೆಂಗಳೂರು
ಬೆಲೆ : ರೂ 200/-

3



ಕೇರಳ ಮಾಂತ್ರಿಕರ ನಿಗೂಢ ಕಥೆಗಳು
(ಪುರಾತನ ಮಾಂತ್ರಿಕರ ನವೀನ ಕಥೆಗಳು)
ಲೇ: ಡಾ। ಸಂಧ್ಯಾ, ಎಸ್. ಪೈ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 180/-

4

ಬಹುತ್ವ ಕರ್ನಾಟಕ
(ಪರಿಕಲ್ಪನಾತ್ಮಕ ಕಥನ)
ಲೇ: ರಹಮತ್ ತರೀಕೆರೆ
ಪ್ರ: ಅಭಿನವ, ಬೆಂಗಳೂರು
ಬೆಲೆ : ರೂ 300/-

5



ಮಾಸ್ತಿ ಕಥಾಲೋಕ
(ಮಾಸ್ತಿಯವರ ಕಥೆಗಳ ಪರಿಚಯ - ವಿಶ್ಲೇಷಣೆ)
ಲೇ: ಎಲ್.ವಿ. ಶಾಂತಕುಮಾರಿ
ಪ್ರ: ವಸಂತ ಪ್ರಕಾಶನ, ಬೆಂಗಳೂರು
ಬೆಲೆ : ರೂ 280/-

6

ಕರ್ನಾಟಕ ಗತವೈಭವ
(ಏಕೀಕರಣಕ್ಕೆ ಹುರಿದುಂಬಿಸಿದ ಕೃತಿ)
ಲೇ: ಆಲೂರ ವೆಂಕಟರಾಯರು
ಪ್ರ: ಆಲೂರು ವೆಂಕಟರಾವ್ ಪ್ರತಿಷ್ಠಾನ, ಧಾರವಾಡ
ಬೆಲೆ : ರೂ 140/-

7



ಕನ್ನಡ ಕಾದಂಬರಿ ಮಾಲೆ
ನೂರು ಕಾದಂಬರಿಗಳ ವಿಶ್ಲೇಷಣೆ)
ಲೇ: ಡಾ। ಬಿ. ಜನಾರ್ದನ ಭಟ್
ಪ್ರ: ಶ್ರೀರಾಮ ಪ್ರಿಂಟರ್ಸ್ ಪಬ್ಲಿಷರ್ಸ್, ಮಂಡ್ಯ
ಬೆಲೆ : ರೂ 650/-

8



ಬೆಂಕಿ ಮತ್ತು ನೀರು
(ಆರ್ಯ ಮತ್ತು ದ್ರಾವಿಡರ ಕುರಿತು)
ಲೇ: ಎನ್.ಕೆ. ಮೋಹನ್‌ರಾಂ
ಪ್ರ: ಆಕ್ರಾಂತ ಪ್ರಕಾಶನ, ಬೆಂಗಳೂರು
ಬೆಲೆ : ರೂ 170/-

9

ಮೂಕ ನಾಯಕ
(ಮಾತಿಲ್ಲದವರ ಮರುದನಿಯಾಗಿ)
ಹಿಂದಿ : ಶ್ಯೊರಾಜ್ ಸಿಂಗ್ ಬೆಚೈನ್
ಅನು : ರೇಣುಕಾ ನಿಡಗುಂದಿ, ರಮೇಶ ಅರೋಲಿ
ಪ್ರ: ಅಹರ್ನಿಶಿ ಪ್ರಕಾಶನ, ಶಿವಮೊಗ್ಗ
ಬೆಲೆ : ರೂ 200/-

10



ಏರುಘಟ್ಟದ ನಡಿಗೆ
(ಪ್ರೊ. ಮಾಧವ ಗಾಡ್ಗೀಳರ ಆತ್ಮಕಥೆ)
ಅನು : ಶಾರದಾ ಗೋಪಾಲ, ನಾಗೇಶ ಹೆಗಡೆ
ಪ್ರ: ಆಕೃತಿ ಆಶಯ ಪಬ್ಲಿಕೇಷನ್ಸ್, ಮಂಗಳೂರು
ಬೆಲೆ : ರೂ 650/- -

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004.
ದೂರವಾಣಿ: 26617100/26617755
ಮೊಬೈಲ್ ನಂ: 9019190502

ಕನ್ನಡದ ಪಳಮೆ

ದಕ್ಷಿಣ ಭಾರತದ ಪ್ರಮುಖ ಭಾಷೆಯಾದ ಕನ್ನಡಕ್ಕೆ ತನ್ನದೇ ಆದ ಪ್ರಾಚೀನತೆ ಇದೆ; ಮೂಲ ದ್ರಾವಿಡದಿಂದ ಸಾವಿರಾರು ವರ್ಷಗಳ ಹಿಂದೆಯೇ ಪ್ರತ್ಯೇಕಗೊಂಡು, ಸ್ವತಂತ್ರವಾಗಿ ಬೆಳೆದ ಕನ್ನಡವು, ಜಗತ್ತಿನ ಅತಿ ಪ್ರಾಚೀನ ಭಾಷೆಗಳಲ್ಲಿ ಒಂದು. ತಮಿಳುಸಹ ಮೂಲ ದ್ರಾವಿಡದಿಂದ ಪ್ರತ್ಯೇಕಗೊಂಡು, ಬೆಳೆದ ಭಾಷೆ. ಆದರೆ, 'ತಮಿಳಿನಿಂದ ಕನ್ನಡ ಜನಿಸಿತು' ಎಂಬ ಹೇಳಿಕೆಯು ಶುದ್ಧ ತಿಳಿಗೇಡಿತನದ, ಕನ್ನಡವನ್ನು ಅಪಹಾಸ್ಯ ಮಾಡಲು ಉದ್ದೇಶಿಸಿದ್ದು ಎನ್ನಬಹುದು. ನಿಮ್ಮ ಪ್ರತಿಕ್ರಿಯೆಗೆ ಸ್ವಾಗತ.

» ಕೆ. ಜನಾರ್ದನ ತುಂಗ

"ತಮಿಳು ಭಾಷೆಯಿಂದ ಕನ್ನಡ ಹುಟ್ಟಿತು'' ಎಂಬ ಅಜ್ಞಾನದ ಮಾತಿಗೆ ಉಗ್ರವಾಗಿ ಪ್ರತಿಕ್ರಿಯೆ ನೀಡುವ ಬದಲು ಕನ್ನಡದ ಪ್ರಾಚೀನತೆಯ ಬಗ್ಗೆ ವಿಚಾರ ಮಾಡುವುದು ಪ್ರಸ್ತುತ ಎಂದು ನನ್ನ ಅಭಿಪ್ರಾಯ. ಕಮಲಹಾಸನ್ ಮಾತು ತಮಿಳಿಗರ ವಸಾಹತುಶಾಹಿ ಅಥವಾ ವಿಸ್ತಾರವಾದಿ ಮನಃಸ್ಥಿತಿಯ ಉದಾಹರಣೆ. ತಮಿಳಿನ ವಿಚಾರ ಹಾಗಿರಲಿ, ಕನ್ನಡದ ಬಗ್ಗೆ ದೊರೆಯುವ ಪ್ರಾಚೀನ ದಾಖಲೆಗಳನ್ನು ವಿಮರ್ಶೆ ಮಾಡೋಣ.

ಕ್ರಿ. ಪೂ. ಒಂದನೇ ಶತಮಾನದಿಂದ ಸಾ.ಶ. ಮೂರನೆಯ ಶತಮಾನದ ವರೆಗೆ ಕರ್ನಾಟಕವನ್ನು ಚುಟುವಂಶದ, ಕನ್ನಡ ಮಾತೃಭಾಷೆಯ ಅರಸರು ಆಳುತ್ತಿದ್ದರು. ನಂತರ, ಚಾಲುಕ್ಯರು, ನೊಳಂಬರು, ಗಂಗರು, ರಾಷ್ಟ್ರಕೂಟರು, ಕಲ್ಯಾಣಿಯ ಚಾಲುಕ್ಯರು, ಹೊಯ್ಸಳರು, ವಿಜಯನಗರ, ನಾಯಕರು, ಮೈಸೂರು ಒಡೆಯರರು, ಹೀಗೆ ಕನ್ನಡದ ಅರಸರೇ ಅವಿಚ್ಛಿನ್ನವಾಗಿ ಕರ್ನಾಟಕವನ್ನು ಆಳಿದರು.

ಚೋಳರ ಕಾಲದಲ್ಲಿ ಬಿಟ್ಟರೆ ಇತರ ಸಾಮ್ರಾಜ್ಯಗಳ ಆಡಳಿತಾವಧಿಯ ತಮಿಳು ಶಾಸನಗಳು ಕರ್ನಾಟಕದಲ್ಲಿ ಕಾಣಸಿಗುವುದು ವಿರಳ. ಹಾಗೆ ನೋಡಿದರೆ ತಮಿಳುನಾಡಿನ ಬಹುಭಾಗವನ್ನು ಕನ್ನಡದ ಅರಸರೇ ದೀರ್ಘಕಾಲ ಆಳಿದ್ದರು. ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ವಿಜಯನಗರ, ಮೈಸೂರು ಒಡೆಯರರ ಸಾಮ್ರಾಜ್ಯ ತಿರುಚಿನಾಪಳ್ಳಿಯವರೆಗೂ ವಿಸ್ತರಿಸಿತ್ತು ಎಂಬ ವಿಚಾರ ತಮಿಳಿಗರಿಗೆ ತಿಳಿಯದ್ದೇನಲ್ಲ.

ಕನ್ನಡನೆಲದ ಪ್ರಸ್ತಾಪ ರಾಮಾಯಣ ಮಹಾಭಾರತಗಳಲ್ಲೂ ಬರುತ್ತದೆ. ಆ ಕಾಲದಲ್ಲೇ ಜ್ಞಾನಿಗಳ, ಋಷಿಮುನಿಗಳ ನೆಲೆವೀಡಾಗಿದ್ದ ಕುಂತಲದೇಶ ಎಂದು ಕರೆಯಲ್ಪಡುತ್ತಿದ್ದ ಕರ್ನಾಟಕದಲ್ಲಿ ಜನರು ತಮ್ಮದೇ ಆದ ಆಡುಭಾಷೆಯೊಂದನ್ನು ಹೊಂದಿದ್ದರು. ರಾಮಾಯಣದ ಸುಂದರ ಕಾಂಡದಲ್ಲಿಯೂ ಹನುಮಂತ ಸೀತೆಯ ಜೊತೆಗೆ ಸಂಭಾಷಣೆ ಪ್ರಾರಂಭಿಸುವ ಮೊದಲು ಬ್ರಾಹ್ಮಣರು ಮಾತನಾಡುವ ಸಂಸ್ಕೃತದಲ್ಲಿ ಮಾತನಾಡಿದರೆ ಸೀತೆಗೆ ಅನುಮಾನ ಬರುವುದಿಲ್ಲವೇ? ಎಂದು ಯೋಚಿಸುತ್ತಾನೆ ಎಂಬ ಶ್ಲೋಕವಿದೆ. ಅಂದರೆ ಬ್ರಾಹ್ಮಣರು ಮಾತನಾಡುವ ಭಾಷೆಗಿಂತ ಬೇರೆಯಾದ ಭಾಷೆಯೊಂದನ್ನು ಇತರರು ಬಳಸುತ್ತಿದ್ದರು ಎಂದು ಊಹಿಸಬಹುದು.

ತಮಿಳುನಾಡಿನಲ್ಲಿ ತಮಿಳು ಆಡುಭಾಷೆಯಾಗಿದ್ದ ಕಾಲದಲ್ಲೇ ಕರ್ನಾಟಕದಲ್ಲಿ ಕನ್ನಡವೂ ಆಡುಭಾಷೆಯಾಗಿತ್ತು. ಆದರೆ ಕರ್ನಾಟಕವು ದಕ್ಷಿಣಕ್ಕಿಂತ ಉತ್ತರದ ಕಡೆ ಹೆಚ್ಚು ಕೊಡು-ಕೊಳೆ ಹೊಂದಿದ್ದರಿಂದ ಉತ್ತರದಲ್ಲಿ ವ್ಯಾಪಕವಾಗಿದ್ದ ಸಂಸ್ಕೃತ ಮತ್ತು ಪ್ರಾಕೃತದಲ್ಲಿ ಕನ್ನಡದ ಕವಿಗಳು ಸಾಹಿತ್ಯವನ್ನು ರಚಿಸಿದರು. ಅದರಲ್ಲಿಯೂ ಜೈನಧರ್ಮವು ಉತ್ತರದಿಂದ ದಕ್ಷಿಣಕ್ಕೆ ಆಗಮಿಸಿ ಪ್ರಭಾವಶಾಲಿಯಾದ ಕಾಲದಲ್ಲಿ (ಸುಮಾರು ಕ್ರಿ.ಪೂ. ಎರಡನೇ ಶತಮಾನದಿಂದ ಕದಂಬರ ಕಾಲದವರೆಗೂ) ಪ್ರಾಕೃತದಲ್ಲಿಯೇ ಸಾಹಿತ್ಯದ ರಚನೆಯಾಯಿತು. ಆ ಕಾಲದ ಸಾಹಿತ್ಯದಲ್ಲಿ ಅಚ್ಚಗನ್ನಡ ಶಬ್ದಗಳ ಬಳಕೆಯಾಗಿರುವುದು ಕನ್ನಡ ಆಡುಭಾಷೆಯಾಗಿತ್ತು ಎಂಬುದಕ್ಕೆ ಸಾಕ್ಷಿ. ಕರ್ನಾಟಕದ ಬ್ರಹ್ಮಗಿರಿ ಶಾಸನದಲ್ಲಿ ''ಇಸಿಲ'' ಎಂಬ ಕನ್ನಡ ಶಬ್ದವು ಬಳಕೆಯಾಗಿದೆ; ಇಸಿಲ ಎಂದರೆ ಕೋಟೆ ಎಂದರ್ಥ. ಈ ಶಾಸನವನ್ನು ಅಶೋಕನ ಕಾಲದಲ್ಲಿ (ಕ್ರಿ. ಪೂ. ಮೂರನೆಯ ಶತಮಾನ) ರಚಿಸಲಾಗಿದೆ. ಕ್ರಿ. ಪೂ. ಒಂದನೆಯ ಶತಮಾನದಲ್ಲಿ ಕರ್ನಾಟಕವನ್ನು ಆಳುತ್ತಿದ್ದ ಹಾಲರಾಜನು 'ಗಾಥಾಸಪ್ತಶತೀ' ಎಂಬ ಗ್ರಂಥವನ್ನು ಬರೆದಿದ್ದಾನೆ. ಈತ ಅಚ್ಚ ಕನ್ನಡಿಗ. ಕನ್ನಡದಲ್ಲಿ ಇಂದಿಗೂ ಅದೇ ಅರ್ಥದಲ್ಲಿಯೇ ಬಳಕೆಯಾಗುತ್ತಿರುವ ಅತ್ತಾ (ಅತ್ತೆ), ತುಪ್ಪ, ಪೊಟ್ಟ (ಹೊಟ್ಟೆ), ಫಲಹೀ (ಹತ್ತಿ), ತೀರ್ ಮುಂತಾದ ಹಲವು ಶಬ್ದಗಳನ್ನು ರಾಷ್ಟ್ರಕವಿ ಗೋವಿಂದ ಪೈ ಗುರುತಿಸಿದ್ದಾರೆ.

ಈಜಿಪ್ಟ್ ದೇಶದಲ್ಲಿ ಪೆಪಿರಸ್ ಕಾಗದದ ಮೇಲೆ ಬರೆದಿರುವ ಪ್ರಾಚೀನ ಗ್ರೀಕ್ ನಾಟಕವೊಂದರಲ್ಲಿಯೂ ಕರಾವಳಿ ಭಾಗದ ಅನೇಕ ಆಡುನುಡಿಗಳನ್ನು ಗ್ರೀಕ್ ಉಚ್ಚಾರಣೆಗೆ ಪರಿವರ್ತಿಸಿ ಬಳಸಿದ್ದುದನ್ನು ಕೂಡಾ ಗೋವಿಂದ ಪೈಗಳು ಗುರುತಿಸಿದ್ದಾರೆ. ನಂತರದ ಕಾಲದ ಅನೇಕ ಶಾಸನಗಳ ಪಠ್ಯ ಮತ್ತು ಲಿಪಿ ಕರ್ನಾಟಕದಲ್ಲಿ ಕನ್ನಡವೇ ಆಡುಭಾಷೆಯಾಗಿದ್ದುದನ್ನು ಸೂಚಿಸುವುದರ ಜೊತೆಜೊತೆಗೆ ಬರೆವಣಿಗೆಯ ಭಾಷೆಯೂ ಆಯಿತು ಎಂಬ ತರ್ಕಕ್ಕೂ ಇಂಬು ನೀಡುತ್ತದೆ.

ಭಾಷಾತಜ್ಞರು ಕ್ರಿಸ್ತಪೂರ್ವಕಾಲದಿಂದಲೂ ತಮಿಳು ಶಾಸನಗಳಲ್ಲಿ ಕನ್ನಡ ಶಬ್ದಗಳನ್ನು ಗುರುತಿಸಿದ್ದಾರೆ. ಅತಿ ಪ್ರಾಚೀನ ಗುರುತುಗಳನ್ನು ಜೈನಧರ್ಮವು ಕರ್ನಾಟಕದಿಂದ ತಮಿಳುನಾಡಿಗೆ ಕಾಲಿಟ್ಟ ಕಾಲದಿಂದಲೇ ಗುರುತಿಸುತ್ತಾರೆ. ಅಂದರೆ ಕರ್ನಾಟಕದ ಜೈನರು ತಮ್ಮ ಧರ್ಮದೊಂದಿಗೆ ಕನ್ನಡವನ್ನೂ ತಮಿಳುನಾಡಿಗೆ ಕೊಂಡೊಯ್ದರು. ಆ ಕಾಲದಲ್ಲಿ ಪ್ರಸ್ತಾಪವಾಗಿದ್ದ ಕನ್ನಡ ಶಬ್ದಗಳೂ ಕನ್ನಡ ಪ್ರತ್ಯೇಕ ಭಾಷೆಯಾಗಿತ್ತು ಎಂಬ ಪುರಾವೆಯನ್ನು ನೀಡುತ್ತವೆ.

ಕನ್ನಡವೇ ಮೊದಲೆ?

ಕನ್ನಡವು ತಮಿಳಿಗಿಂತಲೂ ಮೊದಲು ಎಂಬ ವಾದವೂ ಅಲ್ಲಲ್ಲಿ ಕೇಳಿಬರುತ್ತಿದೆ. ಈ ನಿಟ್ಟಿನಲ್ಲಿ ಸಾಕಷ್ಟು ಸಂಶೋಧನೆ ಅಗತ್ಯ; ಜತೆಗೆ, ತಮಿಳುನಾಡಿನಲ್ಲಿ ಹಲವು ದಶಕಗಳ ಕಾಲ ವಾಸಿಸಿದ್ದ ಡಾ. ಬಿ.ಜಿ.ಎಲ್.ಸ್ವಾಮಿ ಅವರು ಈ ಕುರಿತು ಪ್ರತಿಪಾದಿಸಿದ ವಿಚಾರಗಳನ್ನು ಸಹ ಗಮನಿಸಬೇಕು. ಅವರ 'ತಮಿಳು ತಲೆಗಳ ನಡುವೆ' ಪುಸ್ತಕದಲ್ಲಿ, ತಮಿಳು ಭಾಷಾ ಇತಿಹಾಸವನ್ನು ಕಟ್ಟಿರುವ ಪ್ರಕ್ರಿಯೆಯ ಕೆಲವು 'ಲೂಸ್ ಜಾಯಿಂಟ್'ಗಳನ್ನು ಎತ್ತಿತೋರಿಸಿದ್ದಾರೆ!

ಭಾಷೆ ಮತ್ತು ಲಿಪಿ

ಭಾಷೆಯೊಂದು ವಿಕಸನಹೊಂದಲು ಸಾವಿರಾರು ವರ್ಷ ಅಗತ್ಯ; ಲಿಪಿಯು ನಂತರ ಬಳಕೆಗೆ ಬರುತ್ತದೆ. ಹರಪ್ಪಾ ಲಿಪಿಯನ್ನು ಓದಲು ಬಹುತೇಕ ಯಶಸ್ವಿಯಾಗಿರುವ ಐರಾವತಂ ಮಹಾದೇವನ್ ಬ್ರಾಹ್ಮೀ ಲಿಪಿಯಿಂದ ದಕ್ಷಿಣ ಬ್ರಾಹ್ಮೀ ಮತ್ತು ತಮಿಳು ಬ್ರಾಹ್ಮೀ ಲಿಪಿಗಳು ಹುಟ್ಟಿಕೊಂಡವು; ಕನ್ನಡವು ದಕ್ಷಿಣ ಬ್ರಾಹ್ಮೀ ಲಿಪಿಯಿಂದ ಹುಟ್ಟಿಕೊಂಡಿತು ಎಂದು ತಿಳಿಸಿದ್ದಾರೆ. ಅವರ ಪ್ರಕಾರ ಕನ್ನಡ ಲಿಪಿಯ ಸುಳಿ-ಸುರುಳಿಗಳು ತಮಿಳಿನ ಸುಳಿ-ಸುರುಳಿಗಳಿಗಿಂತ ಭಿನ್ನವಾಗಿದ್ದು ತಮಿಳು ಬ್ರಾಹ್ಮೀ ಲಿಪಿಯಿಂದ ಕನ್ನಡ ಲಿಪಿ ಹುಟ್ಟಿಕೊಂಡಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ತಮಿಳು ಬ್ರಾಹ್ಮೀ ಶಾಸನಗಳಲ್ಲಿ ದಕ್ಷಿಣ ಬ್ರಾಹ್ಮೀ ಲಿಪಿಯ ಕುರುಹುಗಳು ಕಾಣಿಸುತ್ತವೆ; ಹೀಗಾಗಿ ಕನ್ನಡದ ಪ್ರಭಾವ ತಮಿಳು ಭಾಷೆಯ ಮೇಲೆ ಇತ್ತು ಎಂಬುದಕ್ಕೆ ಸಾಕ್ಷಿಗಳು ದೊರೆಯುತ್ತವೆ ಎಂದೂ ಅವರು ಹೇಳಿದ್ದಾರೆ. ಇದಕ್ಕೆ ಪೂರಕವಾಗಿ ಅವರು ಹಲವಾರು ಉದಾಹರಣೆಗಳನ್ನೂ ನೀಡಿದ್ದಾರೆ. ಅವುಗಳಲ್ಲಿ ಕೆಲವನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

ದಕ್ಷಿಣ ಭಾರತದ ಅತಿ ಪ್ರಾಚೀನ ಶಾಸನ ಎಂದು ಗುರುತಿಸಲ್ಪಟ್ಟಿರುವ, ಕನ್ನಡದ ಹಲ್ಮಿಡಿ ಶಾಸನ. (ಐದನೆಯ ಶತಮಾನ)

- ತಮಿಳು ನಾಡಿನ ಕೆಲವು ಶಾಸನಗಳಲ್ಲಿ ಗೌರವಸೂಚಕ ಪ್ರತ್ಯಯಗಳಾದ -ಪ್ಪ, -ಣ್ಣಿ ಮುಂತಾದ ಪ್ರಯೋಗಗಳು ಕಂಡುಬರುತ್ತವೆ.
- ಅಪ್ಪನ್ ಎನ್ನುವುದು ತಮಿಳು ಭಾಷೆಯಲ್ಲಿ ಸಾಕಷ್ಟು ಪ್ರಾಚೀನದಿಂದಲೂ ಬಳಕೆಯಲ್ಲಿದ್ದರೂ ಸಂಗಂ ಸಾಹಿತ್ಯದಲ್ಲಿ ಈ ಶಬ್ದದ ಬಳಕೆ ಇಲ್ಲದಿರುವುದರಿಂದ ಈ ಶಬ್ದವು ಕನ್ನಡದ ಕೊಡುಗೆ ಎಂದು ನಿಷ್ಕರ್ಷೆ ಮಾಡಬಹುದು.
- ಅದೇ ರೀತಿ, ಶಾಸನವೊಂದರಲ್ಲಿ ಕಂಡುಬರುವ ''ತಾಯಿಯರು'' ಎಂಬ ಶಬ್ದ ಕನ್ನಡದ್ದೇ.
- ತಮಿಳುನಾಡಿನ ಗುಹಾಶಾಸನಗಳಲ್ಲಿ ಕಂಡುಬರುವ ಕನ್ನಡ ಶಬ್ದಗಳು ಕರ್ನಾಟಕದಿಂದ ತಮಿಳುನಾಡಿಗೆ ಬಂದ ಜೈನರ ಕೊಡುಗೆ ಎಂಬುದರಲ್ಲಿ ಅನುಮಾನವೇ ಇಲ್ಲ.
- ಪುದುಕೋಟೆಗೆ ಸಮೀಪದ ಸಿತ್ತನ್ನವಾಸಲ್ ಎಂಬ ಪ್ರದೇಶದ ಗುಹೆಯಲ್ಲಿ ಜೈನ ಸನ್ಯಾಸಿಗಳು ಬಳಸುತ್ತಿದ್ದ ಕಲ್ಲು ಮಂಚಗಳ ಮೇಲೆ ತಮಿಳು ಬ್ರಾಹ್ಮೀ ಲಿಪಿಯಲ್ಲಿ ಬರೆದ ಶಾಸನದಲ್ಲಿ (ಕ್ರಿ.ಪೂ. ಒಂದನೇ ಶತಮಾನ) ''ಎರುಮೈ ನಾಟು (ಎಮ್ಮೆ ನಾಡು ಮಹಿಷಮಂಡಲ ಮಹಿಷೂರು - ಮೈಸೂರು), ಕವುಟಿ (ಗವುಡಿ ಗೌಡಿ ಜೈನ ಸನ್ಯಾಸಿನಿ), ಕುಮಳೂರ್ (ಊರ್ ಎನ್ನುವುದು ಕನ್ನಡ ಪ್ರತ್ಯಯ), ಪೊಸಿಲ್ (ಹೊಸ್ತಿಲು), ಅತಿಟ್ಟನಂ (ಅಧಿಷ್ಠಾನ) ಮುಂತಾದ ಕನ್ನಡ ಶಬ್ದಗಳು ಕಾಣಿಸುತ್ತವೆ. ಕೇವಲ ಎರಡು ಸಾಲಿನ ಈ ಶಾಸನದ ತುಂಬ ಕನ್ನಡ ಶಬ್ದಗಳೇ ರಾರಾಜಿಸಿವೆ.
- ಮಹಾದೇವನ್ ಅವರು ತಮಿಳು ಶಾಸನಗಳಲ್ಲಿ ಅಯ್ಯನ್, ಅಪ್ಪ, ಅಣ್ಣಿ, ನಲ್ಲಿಯೂರಾ, ಊರ, ಊರಾ, ಕಂತಿ, ಗಂತಿ, ಆರು, ನಿಸಿದಿಗೆ, ಆಚರಿಕರು, ಮೋನಲ, ಪೊಸಿಲ್, ಎರುಮಿನಾಟು, ಕವುಟಿ ಮುಂತಾದ ಅನೇಕ ಅಚ್ಚಗನ್ನಡ ಶಬ್ದಗಳನ್ನು ಗುರುತಿಸಿದ್ದಾರೆ.
- ಅನೇಕ ಜೈನ ದಾಖಲೆಗಳು ತಮಿಳು ಬ್ರಾಹ್ಮೀ ಲಿಪಿಗಿಂತ ಹೆಚ್ಚಾಗಿ ಪೂರ್ವದ ಹಳಗನ್ನಡವನ್ನು ಹೋಲುತ್ತವೆ.
- ತಮಿಳು ಬ್ರಾಹ್ಮೀ ಲಿಪಿಗಿಂತ ಮೊದಲು ''ವಟ್ಟೆಳುತ್ತು'' ಎಂಬ ಲಿಪಿ ತಮಿಳುನಾಡಿನಲ್ಲಿ ಬಳಕೆಯಲ್ಲಿತ್ತು. ವೃತ್ತಾಕಾರದ ಬರೆಹ ಎಂದು ಇದರರ್ಥ. (ವಟ್ಟೆ-ಒಟ್ಟೆ – ವೃತ್ತಾಕಾರದ ರಂಧ್ರ, ಈ ಶಬ್ದ ಅದೇ ಅರ್ಥದಲ್ಲಿ ಕನ್ನಡದಲ್ಲಿ ಇಂದಿಗೂ ಬಳಕೆಯಲ್ಲಿದೆ) ಇದು ತಮಿಳು ಬ್ರಾಹ್ಮೀಗಿಂತ ಭಿನ್ನವಾಗಿದ್ದು ದಕ್ಷಿಣ ಬ್ರಾಹ್ಮೀ ಮತ್ತು ಅದರಿಂದ ಹುಟ್ಟಿದ ಪೂರ್ವದ ಹಳಗನ್ನಡವನ್ನು ಹೋಲುತ್ತದೆ. ಸಾ.ಶ. ನಾಲ್ಕನೇ ಶತಮಾನದ ವರೆಗೂ ಇದೇ ಲಿಪಿ ಬಳಕೆಯಲ್ಲಿತ್ತು.
- ಸಾ.ಶ. 450ರ ಹಲ್ಮಿಡಿ ಶಾಸನದಲ್ಲಿ ''ಕಲಭೋರನಾ ಅರಿ'' ಎಂಬ ಪ್ರಸ್ತಾಪವಿದೆ. ಇದು ತಮಿಳುನಾಡನ್ನು ಆಳಿದ ಪ್ರಾಚೀನ ಕಲ(ಳ)ಭ್ರರನ್ನು ಸೂಚಿಸುತ್ತದೆ. ಈ ವಂಶದ ರಾಜ ಚಂದನ್ ಕುರ್ರನ್ ಸಾ.ಶ. 270ರಲ್ಲಿ ಬರೆಯಿಸಿದ ಪುಲಂಕುರಿಚಿ ಶಾಸನವು ದೇವಾಲಯ ನಿರ್ಮಾಣದ ಬಗ್ಗೆ ದೊರೆಯುವ ಅತ್ಯಂತ ಹಳೆಯ ಶಾಸನಗಳಲ್ಲೊಂದು. ಈ ಕಳಭ್ರರು ಕನ್ನಡಿಗರು ಎಂದು ಬಹುತೇಕ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಈ ಶಾಸನದಲ್ಲಿ ಅವರು, ಊರು, ಅರುಳಿಟ್ಟಾರ್ ಮುಂತಾದ ಕನ್ನಡ ಪ್ರಯೋಗಗಳನ್ನು ನೋಡಬಹುದು. ಕಳಭ್ರರು ತಮ್ಮ ಶಾಸನಗಳಲ್ಲಿ ಪೂರ್ವದ ಹಳಗನ್ನಡವನ್ನೇ ಬಳಸುತ್ತಿದ್ದರು ಎಂದೂ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.
- ತಮಿಳು ''ಸಂಗಂ'' ಸಾಹಿತ್ಯದ ಹೆಸರೂ ಕೂಡಾ ಕರ್ನಾಟಕದಿಂದ ಆಗಮಿಸಿದ ಜೈನರ ''ಸಂಘ'' ಎಂಬ ಸಂಘಟನೆಯ ದೇಸೀ ರೂಪವೇ ಆಗಿದೆ.
- ತಮಿಳು ಶಾಸನಗಳಲ್ಲಿ ತಂತೆಯ್ (ತಂದೆ), ಮಕನ್ (ಮಗ), ಮಕಳ್ (ಮಗಳು), ತಾಯಿಯರು (ತಾಯಿ + ಗೌರವಸೂಚಕ 'ಯರು'), ಸಲಕನ್ (ಹೆಂಡತಿಯ ಸಹೋದರಿಯ ಗಂಡ ಷಡ್ಡಕ?), ಇಲವರ್ (ಹೆಂಡ ಇಳಿಸುವವರು ಬಿಲ್ಲವರು) ಮುಂತಾದ ಕನ್ನಡ ಪದಗಳು ಕಾಣಿಸುತ್ತವೆ.
- ಕರ್ನಾಟಕದಲ್ಲಿ ಕಂಡು ಬರುವಂತೆಯೇ ಉತ್ತರ ತಮಿಳುನಾಡಿನಲ್ಲಿಯೂ ಕೆಲವು ಶಾಸನಗಳನ್ನು ಪ್ರಾಕೃತದಲ್ಲಿಯೇ ಬರೆಸಲಾಗಿದೆ. ಇದೂ ಕೂಡಾ ಕರ್ನಾಟಕದಲ್ಲಿ ಸಾಹಿತ್ಯ ರಚನೆ ಪ್ರಾಕೃತದಲ್ಲಿದ್ದರೂ ಆಡುಭಾಷೆ ಕನ್ನಡವೇ ಆಗಿತ್ತು ಎಂಬುದಕ್ಕೆ ಪರೋಕ್ಷ ಪುರಾವೆ.

ಇವೆಲ್ಲವನ್ನೂ ಸಮಗ್ರವಾಗಿ ಗಮನಿಸಿದಾಗ ಕನ್ನಡ ಭಾಷೆ ತಮಿಳಿಗಿಂತ ಪ್ರಾಚೀನ ಎನ್ನಲಾಗದಿದ್ದರೂ ತಮಿಳಿನ ಸಮಕಾಲೀನ ಭಾಷೆ ಎನ್ನಬಹುದು. ಕನ್ನಡ ಲಿಪಿಯೂ ದಕ್ಷಿಣ ಬ್ರಾಹ್ಮೀ ಲಿಪಿಯಿಂದ ಹುಟ್ಟಿರುವಂತೆಯೇ ಕನ್ನಡ ಭಾಷೆಯ ಮೂಲವೂ ಶುದ್ಧ ದೇಸೀ ಆಗಿದ್ದು ನಂತರ ಇತರ ಭಾಷೆಗಳ ಕೊಡು-ಕೊಳುವಿಕೆಗಳಿಂದ ಬೆಳೆದು ಆಧುನಿಕ ಸ್ವರೂಪ ಪಡೆದುಕೊಂಡಿದೆ ಎಂದು ಹೇಳಬಹುದು. (ಈ ಲೇಖನವನ್ನು ಬರೆಯಲು ಭಾಷಾತಜ್ಞ, ಹೆಸರಾಂತ ಸಾಹಿತಿ, ಟಿ. ಎಸ್. ಗೋಪಾಲರ ಜೊತೆ ಇತ್ತೀಚೆಗೆ ನಡೆಸಿದ ಸಂಭಾಷಣೆಯಿಂದ ಸಾಕಷ್ಟು ಮಾಹಿತಿ ಸಂಗ್ರಹಿಸಿದ್ದೇನೆ.)

(ಪ್ರತಿಕ್ರಿಯಿಸಿ: viramapost@gmail.com)

ಮದುವೆ ಮುಯ್ಯಿಯಲ್ಲಿ ಅಪಸ್ವರ!

ಹಿಂದೆ ಇದ್ದ ಜೋಯಿಸರ ಸ್ಥಾನದಲ್ಲಿ ಇಂದು ವಿಡಿಯೋದವರು, ಕ್ಯಾಮರಾದವರು ಬಂದು, ಮದುವೆಯ ಆಚರಣೆಗಳನ್ನು ನಿರ್ದೇಶಿಸುತ್ತಿದ್ದಾರೆ; ಇಂತಹ ಸಮಯದಲ್ಲಿ ಇದನ್ನು ಮಾಡಿ ಎಂದು ಹೇಳುತ್ತಿದ್ದಾರೆ! ಮದುವೆ ಮುಹೂರ್ತದ ಹಿಂದಿನ ದಿನವೇ ಆರತಕ್ಷತೆ ನಡೆದು, ಧಾರೆ ಊಟಕ್ಕಿಂತ ಆರತಕ್ಷತೆಯ ಬಫೆಯೆ ಆಕರ್ಷಣೀಯವಾಗುತ್ತಿದೆ!

» ಗೊರೂರು ಶಿವೇಶ್

ಈ ಮೊದಲು ವಾರಗಟ್ಟಲೆ ನಡೆಯುತ್ತಿದ್ದ ಮದುವೆಗಳು ವಾರದಿಂದ ಮೂರುದಿನಕ್ಕೆ, ಅಲ್ಲಿಂದ ಎರಡು ದಿನಕ್ಕೆ, ಈಗೀಗ ಒಂದೇ ದಿನಕ್ಕೆ ಈ ಸಡಗರ ಕುಸಿದರೂ ಅದರ ಮಹತ್ವವೇನೂ ಕಡಿಮೆಯಾಗಿಲ್ಲ. ಮಂಗಳ ಸೂತ್ರಧಾರಣೆಯೆ ಪ್ರಮುಖ ಘಟ್ಟವಾದರೂ ಅದರ ಹಿಂದಿನ ಆಚರಣೆಗಳು, ಸಂಪ್ರದಾಯಗಳು, ವಿಭಿನ್ನ. ಕರ್ನಾಟಕದಲ್ಲೇ, ಉತ್ತರಕರ್ನಾಟಕದಲ್ಲಿ, ಮಲೆನಾಡಿನಲ್ಲಿ, ಕರಾವಳಿಯಲ್ಲಿ, ಕೊಡಗಿನಲ್ಲಿ ಹೀಗೆ ಒಂದೊಂದು ಕಡೆ ಒಂದೊಂದು ರೀತಿಯ ಆಚರಣೆ, ಸಂಪ್ರದಾಯ. ಜತೆಗೆ ಒಂದೊಂದು ಜಾತಿಯಲ್ಲಿ ಒಂದೊಂದು ಬಗೆ! ಒಕ್ಕಲಿಗರಲ್ಲಿ ಗಂಡು ಬೆಳಿಗ್ಗೆ ಮನೆಯಿಂದ ಹೊರಟು ಮಧ್ಯಾಹ್ನಕ್ಕೆ ಮದುವೆ ಮುಗಿಸಿ ಸಂಜೆಯಾಗುವಷ್ಟರಲ್ಲಿ ಹಿಂತಿರುಗಿದರೆ, ಬ್ರಾಹ್ಮಣ, ದೇವಾಂಗ, ದರ್ಜಿಯಂಥ ಜನಾಂಗಗಳಲ್ಲಿ ಹಿಂದಿನ ದಿನ ಸಂಜೆ ಹೋಗಿ ತಂಗಿದ್ದು ಧಾರೆ

ಲಹರಿ

ಮುಗಿಸಿಕೊಂಡು ಬರುವುದು ಪದ್ಧತಿ. ಈ ಆಚರಣೆಗಳು ಈಗ ಬಹಳಷ್ಟು ಸಂದರ್ಭದಲಿ, ಯಾಂತ್ರಿಕ ಎನ್ನುವಷ್ಟರಮಟ್ಟಿಗೆ ನಡೆದುಹೋಗುತ್ತದೆ.

ಕಳೆದ ತಿಂಗಳು ಆತ್ಮೀಯ ಸ್ನೇಹಿತನ ಮದುವೆ. ಬೆಳಿಗ್ಗೆ ಒಂಭತ್ತುವರೆಗೆ ಧಾರೆ. ಬೆಳಿಗ್ಗೆ ಎಂಟೂವರೆಗೆ ಮದುವೆ ಮನೆಗೆ ಹೋದರೆ ಗಂಡು ಬಂದೇ ಇಲ್ಲ. ಫೋನ್ ಮಾಡಿದರೆ ದಾರಿಯಲ್ಲಿ ಇರುವುದಾಗಿ ಮಾರುತ್ತರ ಬಂತು. ಒಂಬತ್ತು ಇಪ್ಪತ್ತಕ್ಕೆ ಬಂದ ಗಂಡು, ಹತ್ತಕ್ಕೆಲ್ಲ ಧಾರೆ ಮುಗಿಯತು.

ಮದುವೆಯ ಹಿಂದಿನ ದಿನ ನಡೆಯುತ್ತಿದ್ದ ಹತ್ತು ಹಲವು ಸಂಪ್ರದಾಯಗಳು ಮರೆಯಾಗಿ ಈಗ ಎರಡೋ-ಮೂರಕ್ಕೆ ಸೀಮಿತವಾಗಿವೆ. ಉಳಿದಂತೆ ಹಿಂದಿನ ದಿನ ಛತ್ರ ಸೇರುವ ಗಂಡಸರು ಇಸ್ಪೀಟಿನಲ್ಲಿ ಮುಳುಗಿದ್ದರೆ, ಇನ್ನು ಹೋಟೆಲ್ ಸೇರಿದವರಿಗೆ ಗುಂಡು ತುಂಡುಗಳ ಸಮಾರಾಧನೆ. ಇವೆರಡು ಹವ್ಯಾಸ ಇಲ್ಲದವರು ಛತ್ರದಲ್ಲಿ ಮಲಗಲು ಜಾಗ ಹುಡುಕಬೇಕಾದ ಪರಿಸ್ಥಿತಿ. ಹೆಂಗಸರಿಗೆ ಕೊಂಚ ಪರ್ವಾಗಿಲ್ಲ. ಬಳೆಶಾಸ್ತ್ರ ಭತ್ತ ಕುಟ್ಟುವ ಶಾಸ್ತ್ರ ಮುಂತಾಗಿ ಬ್ಯುಸಿಯಾಗಿರಬಹುದು.

ಕಳ್ಳನನ್ನು ಹಿಡಿಯಿರಿ!

ಇನ್ನು ಮದುವೆ ಮನೆಯ ಗಂಡು-ಹೆಣ್ಣಿನ ರೂಮಿನಿಂದ ಆಗಾಗ್ಗೆ ಕೇಳಿ ಬರುವ ಅಪಸ್ವರದ ಹಾಡೆಂದರೆ ಕಳ್ಳತನದ್ದು. ಹುಡುಗಿಯ ಚಿಕ್ಕಮ್ಮನದೋ, ಹುಡುಗನ ಅಕ್ಕನದೋ ಒಡವೆ ಕಳುವಾಯಿತೆಂದು ಸುದ್ದಿ ಹಬ್ಬಿದ ತಕ್ಷಣ ಮದುವೆಯ ಶಾಸ್ತ್ರಗಳೆಲ್ಲವೂ ಹಿಂದೆ ಸರಿದು ಎಲ್ಲರ ಗಮನ ಇತ್ತ ಹರಿಯುತ್ತದೆ. 'ಹೂಸ್ದೋಳು ಯಾರಪ್ಪ ಅಂದರೆ ಮಾಸಿದ ಶಾಲೇಳು' ಅನ್ನೋ ಹಾಗೆ ಅಲ್ಲೇ ಓಡಾಡುತ್ತಿದ್ದ ಬಡನೆಂಟರ ಮೇಲೆ ಗುಮಾನಿ ಹರಿದು, ವಿಚಾರಣೆ ಸಾಗಿ, ಅವರು ಪರಿಪರಿ ಬೇಡಿದರೂ ಬಿಡದೆ ಅವರಿಗೆ ಈ ಮದುವೆಯ ಸಹವಾಸ ಸಾಕು, ಸಾಕು ಎನ್ನುವಂತೆ ಮಾಡುತ್ತದೆ. ಕೊನೆಗೆ ಟಾಯ್ಲೆಟ್ ರೂಮಿನಲ್ಲೊ, ಬಾತ್ ರೂಮಿನಲ್ಲೊ ಒಡವೆ ಸಿಕ್ಕಿತೆಂದು ಸುದ್ದಿ ಬರುತ್ತದೆ. ಆದರೆ ಇಲ್ಲಿ ಹೋದ ಮರ್ಯಾದೆ, ಆದ ಅಪಮಾನದ ನೋವು?

ನಾನು ಕಂಡ ಅನೇಕ ಮದುವೆಗಳು ಒಂದು ಸಣ್ಣ ಗಲಾಟೆಯಾದರೂ ಆಗದೆ ಮುಕ್ತಾಯವಾಗಿಲ್ಲ, ಗಂಡಿನ ಮನೆಯವರ ದಬ್ಬಾಳಿಕೆ ಕೆಲವೆಡೆ ಹೆಚ್ಚಾದರೆ, ಇನ್ನೊಮ್ಮೆ ಹೆಣ್ಣಿನ ಮನೆಯವರ ಸಹನೆ ಸ್ಫೋಟವಾಗಿ ಮದುವೆ ಮನೆ ಅಲ್ಲೋಲ-ಕಲ್ಲೋಲ ಆದ ಸಂದರ್ಭ! ಉಪ್ಪಿನಕಾಯಿ, ಹಪ್ಪಳದ ವಿಷಯಕ್ಕೆ ಜಗಳಗಳು ಸಂಭವಿಸಿದ್ದರೆ, ತಿಂಗಳ ಹಿಂದೆ ನಡೆದ ಬೀಗರೂಟದ ಬಾಡಿನೂಟದಲ್ಲಿ ತುಂಡುಗಳು ಕಡಿಮೆಯಾಯಿತೆಂದು ''ಧಡಿ ತೆಗೆದುಕೊಂಡು ಬಡಿದಾಡಿ'' ಪೋಲಿಸ್ ಸ್ಟೇಷನ್ ಮೆಟ್ಟಿಲ ಹತ್ತಿದ ಪ್ರಸಂಗವೂ ನಡೆದಿದೆ.

ಊಟದಲ್ಲಿ ತಕರಾರು

ನಮ್ಮೂರಿನ ಒಬ್ಬ ಗೆಳೆಯ; ಅವನ ಆತ್ಮೀಯತೆಗೆ ಮನಸೋತು, ಲಾರಿ ತುಂಬಾ ಜನ ಹತ್ತಿ ವಧುವಿನ ಊರು ಸಕಲೇಶಪುರದ ಬಳಿ ಹೋಗಿದ್ದೆವು. ತಡವಾಗಿ ಹೋದ ನಮ್ಮನ್ನು ಕಾಯದೆ ಅಲ್ಲಿನ ಸ್ಥಳೀಕರಿಗೆ ಊಟ ಕೊಟ್ಟರೆಂದು, ನಮ್ಮೂರಿನವರು ಖ್ಯಾತೆ ತೆಗೆದರು. ಸರಿ, ಜಗಳ ರಂಗೇರಿ ನಮ್ಮವರು ಯಾರೂ ಊಟ ಮಾಡಬಾರದೆಂದು ನಿರ್ಧರಿಸಿದರು. ಹೀಗಾಗಿ ನಮಗೆಲ್ಲರಿಗೂ ರಾತ್ರಿ ಹೋಟೆಲ್ಲೆ ಗತಿ. ಇದು ಬೆಳಿಗ್ಗೆಯೂ ಮುಂದುವರೆದು ಧಾರೆ ಊಟವನ್ನು ಮಾಡದೆ ತಂದಿದ್ದ ದುಡ್ಡೆಲ್ಲ ಖರ್ಚಾಗಿ ಹೋಟೆಲ್ಲಿ ತಿಂದಿದ್ದ ಇಡ್ಲಿಯೂ ಕರಗಿ, ಕೊನೆಗೆ ಹಸಿದು ಹಣ್ಣಾಗಿ ಆ ಊರಿನವರ ಕೈಯಲ್ಲಿ ಆಗುವಷ್ಟು ಉಗಿಸಿಕೊಂಡು ಮನೆ ಸೇರಿದೆವು. ''ನಾವೇನೂ ಅನ್ನ ಕಾಣದೆ ಇಲ್ಲಿಗೆ ಬಂದಿದ್ದೇವೆಯೆ'' ಎಂದು ಕೂಗಾಡಿ ನಮ್ಮವರು, ಮನೆ ಸೇರಿದರು. ಮದುವೆಗೆ ಹೋಗಿ ಊಟ ಮಾಡದೆ ಬಂದಿದ್ದು ದಾಖಲೆ ಆಗಿ ಉಳಿಯಿತು. ಮುಯ್ಯಿ ಮಾಡಲೆಂದು ತೆಗೆದುಕೊಂಡು ಹೋದ ಹಣ ಊಟ, ತಿಂಡಿಗೆ ಖರ್ಚಾಗಿ ಮುಯ್ಯಿ ಹಣವನ್ನು ಅಲ್ಲಿಗೆ ವಜಾ ಮಾಡಲಾಯಿತು!

ಇನ್ನು ಮದುವೆಗೆ ಜನ ಹೊಡೆಯಲು (ಕರೆತರಲು) ಕೆಲವೆಡೆ ಬಸ್ಸುಗಳನ್ನು ಬಳಸುವವರಾದರೂ, ಈಗಲೂ ನಮ್ಮ ಕಡೆ ಲಾರಿಯೇ ಆಧಾರ. ಲಾರಿಯಲ್ಲಿ ಮುಂದಿನ ನಾಲ್ಕು ವಿ.ಐ.ಪಿ. ಸೀಟುಗಳು, ಹೆಣ್ಣಿಗೆ, ಗಂಡಿಗೆ, ಕಳಸ ಹಿಡಿದ ಹೆಂಗಸರಿಗೆ ಮೀಸಲು. ಹಂದಿಮೂತಿಯ ಟಾಟಾ ಗಾಡಿಯಲ್ಲಿ ಹೆಚ್ಚು ಸೀಟು ಹಿಡಿಯುವುದರಿಂದ ಡ್ರೈವರಿಗೆ ಅರ್ಧ ಸೀಟು ಬಿಟ್ಟು ಉಳಿದೆಲ್ಲ ಕಡೆ ಅಡಕಿರಿದು ನೆರೆದಿರುತ್ತಾರೆ. ಇನ್ನು ಬೀಗರ ಔತಣಕ್ಕಾದರೆ ಕಡ್ಡಾಯವಾಗಿ ಲಾರಿಯೆ! ಲಾರಿಯ ತಲೆಯ ಮೇಲೆ ಕುಳಿತು ಹೀರೊವಿನಂತೆ ಪೋಸ್ ಕೊಟ್ಟದ್ದು ನೆನಪಿದೆ. ನಮ್ಮ ದೊಡ್ಡಮ್ಮನ ಊರು ಬಸವನಹಳ್ಳಿಯಲ್ಲಿ ಬೀಗರೂಟಕ್ಕೆ ಲಾರಿಯಲ್ಲಿ ಹೋದ ಜನ ತಿರುಗಿ ಬರುವಾಗ ಲಾರಿ ಪಲ್ಟಿ ಹೊಡೆದು ಮೂವತ್ತಕ್ಕೂ ಹೆಚ್ಚು ಜನ ಅಸು ನೀಗಿ ಆಗ ತಾನೆ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದ ಯಡಿಯೂರಪ್ಪ ಅಲ್ಲಿಗೆ ಧಾವಿಸಿದ್ದು ನೆನಪಿಗೆ ಬರುತ್ತದೆ. ಆದರೂ ನಮ್ಮೂರಿನ ಜನ ಇನ್ನು ಲಾರಿಯ ಮೇಲೆ ಹೋಗುವುದನ್ನು ಬಿಟ್ಟಿಲ್ಲ. ಲಾರಿ ಬಂದೊಡನೆ ಧಡ ಧಡ ಬಂದು, ಅಲ್ಲಿ ಹಾಸಿರುವ ಚಾಪೆಯ ಮೇಲೆ ಕಾಲು ಚಾಚಿ ಕುಳಿತು ಆರಾಮವಾಗಿ ಹರಟುತ್ತಾ ಪಯಣಿಸುವುದು ಮುಂದುವರೆದಿದೆ.

ಮದುವೆಯ ಸಂದರ್ಭದಲ್ಲಿ ನಡೆಯುವ ಹಲವು ಹತ್ತು ಆಚರಣೆಗಳು ಕ್ರಮೇಣ ಮಾಯವಾಗಿ ಉಳಿದಿರುವ ಆಚರಣೆಗಳಲ್ಲಿ ಪ್ರಮುಖವಾಗಿ ಇರುವುದು ಕಾಶೀಯಾತ್ರೆ. ಉಳ್ಳವರು ಬೆಳ್ಳಿತಟ್ಟೆ, ಬೆಳ್ಳಿಚೊಂಬು, ಚಿನ್ನದ ಉಂಗುರ, ಚೈನು ಇತ್ಯಾದಿ ಸಕಲೆಂಟು ವಸ್ತುಗಳನ್ನು ನೀಡುತ್ತಾ, ಅವುಗಳನ್ನು ವೀಡಿಯೋ ರೆಕಾರ್ಡ್ ಮಾಡುವುದನ್ನು ಮರೆಯುವುದಿಲ್ಲ. ಆದರೂ ಗಡಿಬಿಡಿಯಲ್ಲಿ ಚಪ್ಪಲಿ, ಬಾಸಿಂಗಗಳನ್ನು ಮರೆತು ಕೊನೆಗಳಿಗೆಯಲ್ಲಿ ಹುಡುಗನ ಕಾಲಿನ ಸೈಜು ಕೇಳಿ ಚಪ್ಪಲಿ, ಜೊತೆಗೆ ಛತ್ರಿ, ಬಾಸಿಂಗವನ್ನು ತಂದದ್ದೂ ಉಂಟು.

ಒನಕೆ ಹಿಡಿದ ಸೋದರಮಾವ!

ಇನ್ನು ಕಾಶಿಯಾತ್ರೆ ಸಂದರ್ಭದಲ್ಲಿ ಹುಡುಗಿಯ ಸೋದರಮಾವನ ಕೈಯಲ್ಲಿ ಒನಕೆ ಕೊಟ್ಟು, ಕಿವಿಗೆ ಹಪ್ಪಳ ಸಿಗಿಸಿ, ಮುಖಕ್ಕೆಲ್ಲ ಮಸಿ ಬಳಿದು, ವಿರೂಪ ಮಾಡಿ ಹೈರಣಿಗೆಯ ಜೊತೆಯಲ್ಲಿ ಕರೆತರುವ ಶಾಸ್ತ್ರ ನಮ್ಮಲ್ಲಿದೆ. ನನ್ನ ಅಕ್ಕನ ಮಗಳ ಮದುವೆಯಲ್ಲಿ ನಾನೂ ಈ ಶಿಕ್ಷೆಯನ್ನು ಅನುಭವಿಸಿದ್ದೇನೆ. ಬಹುಶಃ ಅಕ್ಕನ ಮಗಳಿಗೆ ಮೊದಲ ಹಕ್ಕುದಾರನಾದ ಸೋದರಮಾವನಿಗೆ ಆಗುವ ನಿರಾಶೆಯ ಅಭಿವ್ಯಕ್ತಿಯೇ ಈ ವಿರೂಪ! ಮದುವೆಯ ಮಂಟಪಕ್ಕೆ ವಧುವನ್ನು ಕರೆತರುವ ಜವಾಬ್ದಾರಿಯು ಈತನದೆ. ಇದು ಆಚರಣೆಯ ರೂಪದಲ್ಲಿ ಮುಂದುವರಿದುಕೊಂಡು ಬಂದಿದೆ.

ಯಾರು ಮೊದಲು ಜೀರಿಗೆ ಬೆಲ್ಲ ಹಾಕಬೇಕು?

ಮದುವೆಗೆ ಮುಂಚೆ ಹತ್ತಾರು ಬಾರಿ ನೋಡಿದ್ದರೂ ಅಂತರಪಟ ಹಿಡಿಯುವುದು ವಾಡಿಕೆ. ಅಂತರಪಟದೆ ಜಾರಿದಾಗ ಜೀರಿಗೆ, ಬೆಲ್ಲ ಹಾಕಲು ಗಂಡು, ಹೆಣ್ಣಿನಲ್ಲಿ ಪೈಪೋಟಿ ಏರ್ಪಡುತ್ತದೆ. ''ಮೊದಲು ಹಾಕಿದವರಿಗೆ ಇನ್ನೊಬ್ಬರು ಅಡಿಯಾಳಾಗುತ್ತಾರೆ'' ಎಂಬ ನಂಬಿಕೆ, ಈ ಪೈಪೋಟಿಯ ಮೂಲ. ಇನ್ನೂ ಎಲ್ಲಾ ಒಡವೆಯನ್ನು ಹೆಣ್ಣಿನ ಮನೆಯವರೆ ಹಾಕಿದರೂ ತಾಳಿ ತರುವುದು ಮಾತ್ರ ಗಂಡಿನ ಮನೆಯವರೇ. ಇದು ಅಂದಿಗೂ, ಇಂದಿಗೂ ಆಚರಣೆಯ ಭಾಗವಾಗಿ ಉಳಿದಿದೆ. ಅದು ಒಡೆತನದ ಸಂಕೇತವೆಂದು ಭಾವಿಸಿರುವುದು ಇದಕ್ಕೆ ಕಾರಣವಿರಬಹುದು. ತಾಳಿಕಟ್ಟಿದೊಡನೆ ಸಾಕ್ಷಾತ್ಕಾರ ಚಿತ್ರದ ಫಲಿಸಿತು ಒಲವಿನ ಪೂಜಾಫಲ ಗೀತೆ ನುಡಿಸುವುದಂತೂ ಕಡ್ಡಾಯ. ಧಾರೆಗೆ ಮುನ್ನ ಮತ್ತು ನಂತರ ಕೈನೀರು ಬಿಡುವುದು ಇನ್ನೊಂದು ಆಚರಣೆ. ಧಾರೆಗೆ ಮುನ್ನ ಹುಡುಗ-ಹುಡುಗಿಯ ತೀರಾ ಹತ್ತಿರದ ಬಂಧುಗಳಿಗೆ ಇಲ್ಲಿ ಪ್ರಾಧಾನ್ಯ; ಹತ್ತಿರದ ದಾಯಾದಿಗಳು ಕೆಲವೊಮ್ಮೆ ಜಗಳವಾಡಿಕೊಂಡು, ಮಾತು ಬಿಟ್ಟಿದ್ದರೂ ಕೊನೆಗೆ ಒತ್ತಾಯಕ್ಕೆ ಬಂದು ಕೈನೀರು ಬಿಟ್ಟು ನಂತರ ಮಾಯವಾಗುವುದುಂಟು; ಒಂದು ಚೆಂಬು ಹಾಲಿಗೆ ಒಂದು ಬಕೆಟ್ ನೀರು ಹಾಕಿ, ವಧೂವರರು ಹಿಡಿದ ಕಾಯಿಗಳಿಗೆ ಬಿಡುವ ಈ ನೀರನ್ನೆ ಮೊಗೆಮೊಗೆದು ಮತ್ತೆ ಅದನ್ನು ಬಿಡುವುದನ್ನು ಕಾಣಬಹುದು.

ಮದುವೆಯಲ್ಲಿ ನೀಡುವ ಮುಯ್ಯಿ, ಇಲ್ಲವೆ ಉಡುಗೊರೆಗೆ ಅನೇಕ ಅಪಸ್ವರಗಳು; ಕೆಲವೆಡೆ 'ನಿಮ್ಮ ಬರುವಿಕೆಯೇ ಉಡುಗೊರೆ' ಎಂದಿದ್ದರೂ, ಇನ್ನು ಕೆಲ ಬಡವರ ಮದುವೆಯಲ್ಲಿ ವಾಲಗದವರಿಗೆ,ಅಡುಗೆ ಭಟ್ಟರಿಗೆ, ಬೀಗರೂಟಕ್ಕೆ, ಬಂಧುಗಳನ್ನು ಕರೆದೊಯ್ಯಲು ಈ ಮುಯ್ಯಿ ಹಣವೆ ಆಧಾರ. ಕೆಲವು ಮದುವೆಗಳಲ್ಲಿ, ಯಾರು ಎಷ್ಟು ಮುಯ್ಯಿ ಹಣ ನೀಡಿದರು ಎಂದು ಪಟ್ಟಿ ಮಾಡುವುದುಂಟು; ಈ ಪಟ್ಟಿಯ ಅನುಸಾರ, ಅವರಿಗೆ ಪುನಃ ಮುಯ್ಯಿ ಎಂದಾದರೂ ಮಾಡಬೇಕಲ್ಲ, ಅದಕ್ಕೆ!

ಹಿಂದೆ ವಾರದಲ್ಲಿ ನಡೆಯುತ್ತಿದ್ದ ಮದುವೆಗಳು ಈಗ ಗಂಟೆಗಳ ಲೆಕ್ಕಕ್ಕೆ ಇಳಿದಿದೆ. ಹಿಂದೆ ಇದ್ದ ಜೋಯಿಸರ ಸ್ಥಾನಕ್ಕೆ ವಿಡಿಯೋದವರು, ಕ್ಯಾಮರಾದವರು ಬಂದು, ಮದುವೆಯ ಆಚರಣೆಗಳನ್ನು ನಿರ್ದೇಶಿಸುತ್ತಿದ್ದಾರೆ. ಮುಹೂರ್ತದ ಹಿಂದಿನ ದಿನವೆ ಆರತಕ್ಷತೆ ನಡೆದು, ಧಾರೆ ಊಟಕ್ಕಿಂತ ಆರತಕ್ಷತೆಯ ಬಫೆಯೆ ಆಕರ್ಷಣೀಯವಾಗುತ್ತಿದೆ. ಉಡುಗೊರೆಯ ಜಾಗವನ್ನು ಫ್ಲವರ್ ಬೊಕೆಗಳು ಆಕ್ರಮಿಸುತ್ತಿವೆ.

ಹಲವು ಬದಲಾವಣೆಗಳನ್ನು ಕಾಣುತ್ತಿರುವ ಮದುವೆಯ ಆಚರಣೆಗಳು, ಎಲ್ಲರ ಬದುಕಿನ ಮಹತ್ವದ ಘಳಿಗೆಗಳೂ ಹೌದು!

» ಕೆ ಎನ್ ರಂಗನಾಥ್, ಚಿತ್ರದುರ್ಗ

ಆ ಊರಿನ ಜಾತ್ರೆ ಎಂದರೆ ನಮಗೆಲ್ಲಾ ಬಾಲ್ಯದಲ್ಲಿ ಬಹಳ ಕುತೂಹಲ, ಕಾತರ; ನಮ್ಮೂರಿನಿಂದ ಸ್ವಲ್ಪ ದೂರವಿದ್ದ ಪುರ್ಲೆಹಳ್ಳಿಯ ಹೊಸಲು ದಿನ್ನೆಗೆ ಹೋಗಲು ಎತ್ತುಗಾಡಿಯೇ ನಮ್ಮ ವಾಹನ;, ಗಾಡಿಯಲ್ಲಿ ಹಾಸುತ್ತಿದ್ದ ರಗ್ಗು ಚಾಪೆಯೇ ನಮ್ಮ ಆಸನ, ನಮ್ಮ ಅಜ್ಜಿ ಮತ್ತು ದೊಡ್ಡಮ್ಮ ಹೇಳುತ್ತಿದ್ದ ಜನಪದ ಗೀತೆಗಳೆ ನಮ್ಮ ಕಿವಿಗೆ ಇಂಪಾದ ಗಾಯನ.

ಇದೊಂದು ವಿಶಿಷ್ಟ ರೀತಿಯ ಹಬ್ಬದಾಚರಣೆ. ಬಾರೆ ಮುಳ್ಳಿನಿಂದ ತಯಾರಿಸಿದ, 21 ಅಡಿ ಎತ್ತರ ಮುಳ್ಳಿನ ಗುಡಿಯ ಮೇಲಿನ ಕಳಶವನ್ನು ಕೀಳಲು ಐದು ಜನ ಈರಗಾರರು ಪರಸ್ಪರ ಸ್ಪರ್ಧೆ ನಡೆಸುವ ದೃಶ್ಯ ಮೈ ನವಿರೇಳುವಂತಹದ್ದು.

ಇನ್ನು ನಾವು ಇಷ್ಟೆಲ್ಲ ಮಾಡುತ್ತಿದ್ದದು ಜಾತ್ರೆಯಲ್ಲಿ ನಡೆಯುತ್ತಿದ್ದ ಆ ಒಂದು ರಣರೋಚಕ ಪ್ರಸಂಗವನ್ನು ಕಣ್ಣು ತುಂಬಿಕೊಳ್ಳಲಿಕ್ಕೆ. ಅದೇನೆಂದರೆ, ಐದು ಜನ ಈರಗಾರರು (ವೀರರು) ಮೂರು ದಿನಗಳ ಕಾಲ ಉಪವಾಸವಿರುತ್ತಿದ್ದರು; ಬಾರೆ ಮುಳ್ಳಿನ ಕಳ್ಳೆ ಮತ್ತು ಬಂದ್ರೆ ಕಳ್ಳಿಯಿಂದ ಕಟ್ಟಿರುವ 21 ಅಡಿ ಎತ್ತರದ ಮುಳ್ಳಿನ ಗುಡಿಯ ಮೇಲೆ ಐದು ಕಳಶಗಳನ್ನು ಪ್ರತಿಷ್ಠಾಪಿಸಿರಲಾಗುತ್ತಿತ್ತು. ಅದಕ್ಕೆ ಪ್ರಥಮ, ದ್ವಿತೀಯ, ತೃತೀಯ ಹೀಗೆ ಐದು ಸ್ಥಾನಗಳನ್ನ ಕ್ರಮವಾಗಿ ನಿಗದಿಪಡಿಸಿರಲಾಗುತ್ತಿತ್ತು.

ಆ ಕಳಶವನ್ನು ಕೀಳಲು ಸಮೀಪವಿದ್ದ ಅಕ್ಕಳು ಬಾವಿಯಲ್ಲಿ ತಣ್ಣೀರಿನ ಸ್ನಾನ ಮಾಡಿ ಐದು ಜನ ಈರಗಾರರು ಮೆರವಣಿಗೆಯೊಂದಿಗೆ ಗುಡಿಯ ಹತ್ತಿರ ಬರುತ್ತಿದ್ದರು. ನಂತರ ಪೂಜೆ ಪುನಸ್ಕಾರಗಳ ನಂತರ, ಐದು ಜನರ ಮಧ್ಯೆ ಗುಡಿಯನ್ನು ಏರಿ ಕಳಶ ಕೀಳಲು ಸ್ಪರ್ಧೆಯನ್ನು ಏರ್ಪಡಿಸಲಾಗುತ್ತಿತ್ತು. ಆ ಒಂದು ಕ್ಷಣವನ್ನು ಕಣ್ಣು ತುಂಬಿಕೊಳ್ಳಲು ದೂರದ ಊರುಗಳಿಂದ ಮತ್ತು ಪಕ್ಕದ ಆಂಧ್ರಪ್ರದೇಶದಿಂದ ಜನ ಬಂದು ಕಣ್ಣಿನ ರೆಪ್ಪೆಯನ್ನು ಮಿಟುಕಿಸದೆ ಕಾಯುತ್ತಿದ್ದರು. ಇನ್ನೇನು ಈರಗಾರರು ಕಳಶ ಕೀಳಲು ಹತ್ತಬೇಕು ಇತ್ತ ಜನರು ಶಿಳ್ಳೆ ಕೇಕೆಗಳೊಂದಿಗೆ ಆ ದೃಶ್ಯವನ್ನು ಕಣ್ತುಂಬಿಕೊಂಡು ಧೂಳೆಬ್ಬಿಸಿ ಹೊರಡಲು ಸಿದ್ಧರಾಗುತ್ತಿದ್ದರು.

ಕ್ಯಾತಪ್ಪನ ಪರಿಶೆ ಮುಳ್ಳಿನ ಕಳಶ

ಕಳಶ ಕೀಳಲು ತಾ ಮುಂದು ನೀ ಮುಂದು ಎಂದು ಜಿದ್ದಿಗೆ ಬಿದ್ದವರಂತೆ ಬರೀ ಮೈಯಲ್ಲಿ ಬರಿಗಾಲಲ್ಲಿ ಆ ಮುಳ್ಳಿನ ರಾಶಿಯ ಮೇಲೆ ಆಕ್ರೋಶ ಭರಿತರಾಗಿ ಹತ್ತಿ ಕಳಶ ಕೀಳುವುದನ್ನು ನೋಡಿದರೆ ಒಂದು ಕ್ಷಣ ಮೈ ರೋಮಾಂಚನಗೊಳ್ಳುತ್ತಿತ್ತು.

ಇಂದಿಗೂ ಇಂತಹ ಆಚರಣೆಗಳು ನಡೆಯುತ್ತಿವೆಯಾ? ಎಂದು ನೀವು ಕೇಳಬಹುದು: ಹೌದು ಖಂಡಿತವಾಗಿಯೂ ನಡೆಯುತ್ತಿವೆ. ಯಾದವರ ಆರಾಧ್ಯ ದೈವ ಶ್ರೀ ಕ್ಯಾತಪ್ಪನ ಪರೀಶೆ ಇಂದಿಗೂ ಅಷ್ಟೇ ಕಟ್ಟುನಿಟ್ಟಾಗಿ ಶಿಸ್ತು ಬದ್ಧವಾಗಿ ನಡೆದುಕೊಂಡು ಬರುತ್ತಿದೆ. ಪುರಾತನ ಜನಪದ ಆಚರಣೆಗಳು ಸಾಕಷ್ಟು ಇನ್ನೂ ಉಳಿದಿವೆ; ಮುಳ್ಳನ್ನು ಕೀಳುವ ಈ ರೋಚಕ ಆಚರಣೆಯು ನಿಜಕ್ಕೂ ರೋಮಾಂಚನ ಹುಟ್ಟಿಸುತ್ತದೆ!



ರಾಮಾಯಣ ಕೃತಿಯು ಹಲವು ರೂಪಗಳಲ್ಲಿ ಜನರನ್ನು ತಲುಪುತ್ತಲೇ ಇದೆ. ಮೂಲಕ ಕಾವ್ಯ ರಚಿಸಿದ ವಾಲ್ಮೀಕಿಯು, ತನ್ನ ಜೀವಿತಕಾಲ ದಲ್ಲೇ ಈ ಕೃತಿಯನ್ನು ಜನರಿಗೆ ತಲುಪಿಸಿದ್ದನಂತೆ. ರಾಮಾಯಣ ಕಥೆಯನ್ನು ಮರು ರೂಪಿಸುವಲ್ಲಿ, ಶ್ರೀ ರಾಘವೇಶ್ವರ ಭಾರತೀ ಶ್ರೀಗಳು ವಿಶೇಷ ಪರಿಶ್ರಮ ವಹಿಸಿದ್ದಾರೆ; ಅವರ ಲೇಖನಿ ಯಿಂದ ಮೂಡಿ ಬಂದ 'ರಾಮಾವತರಣ' ಕೃತಿಯು ವಿಶೇಷ ಜನಮನ್ನಣೆ ಗಳಿಸಿದೆ; ಹಲವು ಮರು ಮುದ್ರಣಗಳನ್ನೂ ಕಂಡಿದೆ.

ರಾಮ ಕಥೆಗೆ ರೇಖಾ ಚಿತ್ರಗಳ ಮೆರುಗು!

» ಕೆಕ್ಕಾರ ನಾಗರಾಜ ಭಟ್ಟ ಸಿದ್ದಾಪುರ

ಕೃತಿಯೊಂದು ಪ್ರಕಟವಾಗಿ ಕೇವಲ ಮೂರೇ ತಿಂಗಳಲ್ಲಿ ಆರನೇ ಸಲ ಪ್ರಕಟಗೊಳ್ಳುತ್ತಿದೆ ಎಂದರೆ ಆ ಕೃತಿಯ ಹೆಚ್ಚುಗಾರಿಕೆ ಅರಿವಿಗೆ ಬಂದೀತು. ಇಂತಹ ಅಪರೂಪದ ಕೃತಿ 'ಭಾವ ರಾಮಾಯಣದ ರಾಮಾವತರಣ' ಭಾಗವನ್ನು ಬರೆದವರು ಶ್ರೀರಾಮಚಂದ್ರಾಪುರಮಠ ಮಹಾ ಸಂಸ್ಥಾನದ ಶ್ರೀ ರಾಘವೇಶ್ವರ ಭಾರತೀ ಶ್ರೀಗಳು. ವಾಲ್ಮೀಕಿ ರಾಮಾಯಣದ ಮೂಲವನ್ನಿಟು ಕೊಂಡು ಅದರ ಚೌಕಟ್ಟನ್ನು ಮೀರದಂತೆ ವಿಸ್ತರಿಸಿ ಬರೆದ 'ರಾಮಾವತರಣ'ದಲ್ಲಿ ವಾಲ್ಮೀಕಿಗಳ ಭಾವವನ್ನೇ ಬೆಂಬತ್ತಿ ಹೋಗಿ ರಸಪಾಕವನ್ನಾಗಿಸ ಲಾಗಿದೆ. ರಾಮಾವತರಣದಲ್ಲಿ ಆರು ವಿಷಯ ಗಳನ್ನು ವಿಂಗಡಿಸಿ ಆಯಾ ವಿಷಯಗಳ ಹಿನ್ನೆಲೆ- ಮುನ್ನೆಲೆಗಳನ್ನು ಒಗ್ಗೂಡಿಸಿಕೊಂಡು ಕಣ್ಣಿಗೆ ಕಟ್ಟುವಂತೆ ಸಾಂದರ್ಭಿಕ ಕಥೆಗಳನ್ನು ಹೆಣೆದು ಕೊಡಲಾಗಿದೆ. ಕೃತಿಯ ಬೆನ್ನುಡಿಯಲ್ಲಿ ಹೇಳಿ ದಂತೆ, ಈ ಕೃತಿ ಮರ್ಯಾದಾ ಪುರುಷೋತ್ತಮ ಶ್ರೀ ರಾಮನ ಆದರ್ಶ ಬದುಕಿನ ಅದ್ಭುತ ಪಯಣ, ವಾಲ್ಮೀಕಿ ಮಹರ್ಷಿಗಳ ಅನುಪಮ ಕಥಾ ಲಹರಿಯ ಪುನರನುಸಂಧಾನ, ಶ್ರೀ ರಾಮನ ಅವತಾರದವರೆಗಿನ ಸನ್ನಿವೇಶಗಳ ಅಪರೂಪದ ಚಿತ್ರಣ.

ನೂರಾರು ನುಡಿಗಳ ಧ್ವನಿಸುವ ಚಿತ್ರಗಳು

ಕೃತಿಯಲ್ಲಿ ಖ್ಯಾತ ಕಲಾವಿದ ನೀರ್ನಳ್ಳಿ ಗಣಪತಿಯವರ ರೇಖಾ ಚಿತ್ರಗಳು

ಸಾಂದರ್ಭಿಕವಾಗಿ ಮೂಡಿಬಂದಿವೆ. ಪ್ರತಿಯೊಂದು ಚಿತ್ರವೂ ನೂರಾರು ನುಡಿಗಳನ್ನು ಧ್ವನಿಸುವಂತಿದ್ದು ಆಯಾ ಸನ್ನಿವೇಶವನ್ನು ಅಂತರಂಗಕ್ಕೆ ತಲುಪಿಸುವಂತಿವೆ. ರಾಮಾವತರಣ ಕೃತಿಯ ಅಧಿಕೃತ ಬಿಡುಗಡೆ ಕಾರ್ಯಕ್ರಮ ಬೆಂಗಳೂರಿನ ಹೊಸಕೆರೆಹಳ್ಳಿಯ ಪಿ.ಇ.ಎಸ್. ವಿಶ್ವವಿದ್ಯಾಲಯದಲ್ಲಿ ಜರುಗಿತ್ತು. ನಾಡಿನ ಹಲವು ಸಾಹಿತಿಗಳು, ಗಣ್ಯರು, ಇತಿಹಾಸ ಸಂಶೋಧಕರು, ಪತ್ರಿಕಾ ಸಂಪಾದಕರು, ಕಲಾವಿದರು ಸೇರಿದಂತೆ ನೂರಾರು ಗಣ್ಯರು, ಓದುಗರು, ಅಭಿಮಾನಿಗಳು ರಾಮಾವತರಣದ ಬಿಡುಗಡೆಗೆ ಸಾಕ್ಷಿಯಾಗಿದ್ದರು. ಗ್ರಂಥ ಬಿಡುಗಡೆಯೊಂದು ಈ ರೀತಿಯಲ್ಲಿ ವಿಶೇಷವಾಗಿ, ವಿಶಿಷ್ಟವಾಗಿ ನಡೆದದ್ದು ಐತಿಹಾಸಿಕ ದಾಖಲೆ ಎನ್ನುವಂತಾಯಿತು. ಬಿಡುಗಡೆಗೊಂಡ ಕೆಲವೇ ತಿಂಗಳುಗಳಲ್ಲಿ ಈ ಕೃತಿಯು ಹಲವು ಮರು ಮುದ್ರಣಗಳನ್ನು ಕಂಡಿದ್ದು, ಇದನ್ನು ಬೆಂಗಳೂರಿನ ಸಾವಣ್ಣ ಪ್ರಕಾಶನದವರು ಹೊರತಂದಿದ್ದಾರೆ.

ರಾಮಾಯಣ-ಮಹಾಭಾರತ ಎರಡೂ ಜಗತ್ತಿನ ಪ್ರಮುಖ ಪವಿತ್ರ ಗ್ರಂಥಗಳು; ಇವೆರಡನ್ನೂ ಅದೆಷ್ಟು ಜನ ಅದೆಷ್ಟು ಕೋಟಿ ಬಾರಿ ಓದಿರುವರೋ ಲೆಕ್ಕವಿರಿಸಿದವರಿಲ್ಲ. ಇವೆರಡೂ ಗ್ರಂಥಗಳೂ ಹುಲುಮಾನವರಾದ ನಮಗೆ ಧರ್ಮದ ಮಾರ್ಗವನ್ನು ಬೋಧಿಸಿ ಭವಿಷ್ಯದ ಸನ್ಮಾರ್ಗದ ದಾರಿ ತೋರಿವೆ. ಅದರಲ್ಲೂ ವಾಲ್ಮೀಕಿ ರಾಮಾಯಣವಂತೂ ಶ್ರೇಷ್ಠ ಗ್ರಂಥವೆನಿಸಿದ್ದು, ಕಳೆದ ಹಲವು ಶತಮಾನಗಳ ಅವಧಿಯಲ್ಲಿ, ಸಹಸ್ರಾರು ಲೇಖಕರ ಕೃತಿಗಳಿಗೆ ಮೂಲ ವಸ್ತು, ವಿಷಯವನ್ನಿತ್ತಿದೆ. ಈ ಹಿನ್ನೆಲೆಯಲ್ಲಿಯೇ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮಿಗಳವರ ಅಂತಃಚಕ್ಷುವಿಗೆ ಗೋಚರಿಸಿದ ಭಾವರಾಮಾಯಣದ ಪ್ರಥಮ ಭಾಗ ರಾಮಾವತರಣ ಸೃಷ್ಟಿಯಾಗಿದೆ.

ಸಹಜ ಸನ್ನಿವೇಶಗಳ ಚಿತ್ರಣ

'ಭಾವರಾಮಾಯಣ ರಾಮಾವತರಣ' ಕೃತಿಯನ್ನು ಕೈಗೆತ್ತಿಕೊಂಡರೆ ನಾವು ಮನವನ್ನು ಕೇಂದ್ರೀಕರಿಸುವ ಅವಶ್ಯಕತೆಯೆ ಬಾರದೆನ್ನುವುದು ನನ್ನ ಸ್ವಾನುಭವ. ಕೃತಿಯಲ್ಲಿಯ ಸರಳ ಭಾಷೆ, ಸನ್ನಿವೇಶಗಳ ಸಹಜ ವರ್ಣನೆ ನಮ್ಮನ್ನು ಭಾವನೆಯ ಮಾರ್ಗದಲ್ಲಿಯೇ ಆಯಾ ಪ್ರದೇಶಗಳಿಗೆ, ಸನ್ನಿವೇಶಗಳಿಗೆ ಕೊಂಡೊಯ್ದು, ಮನಃಪಟಲದಲ್ಲಿ ಅವುಗಳ ಸ್ಪಷ್ಟ ಚಿತ್ರಣ ಮೂಡಿಸಿ ಪೂರ್ತಿ ಕೃತಿಯನ್ನು ಓದುವಂತೆ ಪ್ರೇರೇಪಿಸುತ್ತದೆ. ದಶರಥ ಮಹಾರಾಜನ ರಾಜ್ಯ ಕೋಸಲನಾಡಿನ ಸುಭಿಕ್ಷ ಕುರಿತು ವರ್ಣನೆ ಓದಿದಾಗ ಸೂರ್ಯವಂಶದ ಮಹತಿ, ಅಲ್ಲಿಯ ಮಣ್ಣಿನ ಮಹತಿ, ಅಲ್ಲಿ ಲಕ್ಷ್ಮಿಯ ಆವಿರ್ಭಾವ, ಸಮೃದ್ಧಿಯ ಜೊತೆಯಿರುವ ಕೋಟೆ, ಯಂತ್ರಾಯುಧಗಳೊಂದಿಗಿನ ಸುರಕ್ಷತೆ, ಅಯೋಧ್ಯೆಯ ವೀರ ಸೈನಿಕರು, ಅಯೋಧ್ಯೆಯ ಆದರಾತಿಥ್ಯದ ಪರಿ, ದಾನಶೀಲತೆಯ ಪರಿಕಲ್ಪನೆಯನ್ನು ಬಿಂಬಿಸುತ್ತದೆ. ಅತಿರಥ ದಶರಥ ಚಕ್ರವರ್ತಿಯ ಪರಾಕ್ರಮ, ಧರ್ಮಪ್ರೀತಿ, ಸಿರಿತನ, ಪ್ರಜಾರಂಜಕತೆ, ಧರ್ಮ-ಅರ್ಥ-ಕಾಮ-ಸತ್ಯದ ಬದುಕಿನ ಪರಿಯನ್ನು ವರ್ಣಿಸುತ್ತ ಧರೆಯೊಳಗೊಂದು ವೈಕುಂಠದ ಖಂಡ ದಶರಥನ ರಾಜ್ಯವಾಗಿತ್ತು ಎಂಬ ಚಿತ್ರಣವನ್ನು ನೀಡುತ್ತದೆ.

ದಶರಥನಿಗಾದ ಯಾಗ ಪ್ರೇರಣೆ, ಮುಗ್ಧ ಮುನಿ ಋಷ್ಯಶೃಂಗರ ಚರಿತ್ರೆ, ಅಶ್ವಮೇಧ-ಪುತ್ರಕಾಮೇಷ್ಟಿ ಯಾಗಗಳ ಸಂಕಲ್ಪ ಇಡೇರಿಕೆ, ಪಾಯಸ ಭಾಗ್ಯದಿಂದ ರಾಮನ ಅವತರಣ ಇವಿಷ್ಟನ್ನೂ ವರ್ಣನಾತ್ಮಕವಾಗಿ ಕಟ್ಟಿಕೊಡುವ ಈ ಕೃತಿಯಲ್ಲಿಯೇ ಹೇಳಿಕೊಂಡಂತೆ, ಒಂದೇ ಒಂದು ಪ್ರೇರಣೆ ದಿವಿಯನ್ನು ಭುವಿಗಿಳಿಸಿ, ಭುವಿಯನ್ನು ದಿವಿಗೆತ್ತಿ, ಭುವಿಯನ್ನೇ ದಿವಿಯಾಗಿಸೀತು ಎಂಬುದನ್ನು ಸಾಬೀತು ಮಾಡಿದೆ. ಮಂತ್ರಿಯೆಂದರೆ ಬುದ್ಧಿಯ ಬೆಳಗು, ಗುರುವೆಂದರೆ ಆತ್ಮದ ಅರಿವು, ಮಡದಿಯೆಂದರೆ ಹೃದಯದ ಹೂವು ಎನ್ನು ವುದನ್ನು ತಿಳಿಸುತ್ತಾ ಎಡವಿದಲ್ಲಿಯೇ ಅಲ್ಲವೇ ಕೈಯೂರಿ ಮೇಲೇಳಬೇಕಾದುದು ಎಂಬ ಸಹಜ ಸತ್ಯ ಎಲ್ಲರಿಗೂ ತಿಳಿದೇ ಇದ್ದರೂ ಪುನಃ ಬುದ್ಧಿಗೆ ಮನವರಿಕೆ ಮಾಡುತ್ತದೆ.

ಮಕ್ಕಳ ನಗು ಹೆತ್ತವರ ನಗ!

'ಮಕ್ಕಳ ನಗುವೇ ತಂದೆ ತಾಯಿಗಳಿಗೆ ನಗವಲ್ಲವೇ!' ಎಂಬ ಅಪ್ಪಟ ಸತ್ಯವನ್ನು ತಿಳಿಸಿಕೊಟ್ಟ ಈ ಕೃತಿ ಅದೆಷ್ಟೋ ಬಾರಿ ಕರುಳೇ ಕಣ್ಣಾಗಿ, ಎಳವೆಯಿಂದ ಧಾರೆಯೆರೆದ ಪ್ರೀತಿಗೆ ಪ್ರತಿಯಾಗಿ, ದೊಡ್ಡ ಶೂನ್ಯವನ್ನೇ ಕಾಣುವ ಹೆತ್ತೊಡಲಿಗೇನೂ ಬರವಿಲ್ಲ ಎಂಬ ಕಟು ಸತ್ಯವನ್ನೂ ವಿಶದಪಡಿಸಿದೆ. ದೀರ್ಘ ಬರಗಾಲದ ನಂತರ, ಸಾವಿರ ವರ್ಷಗಳ ಬಳಿಕ ಮಳೆ ಬಂದಾಗ



ಆ ವರೆಗೆ ಧರೆಯ ಗರ್ಭದಲ್ಲಿ ಹುದುಗಿ, ಕಾದು ಕುಳಿತ ಹುಲ್ಲಿನ ಬೀಜ ಒಮ್ಮೆಲೇ ಚಿಗುರಿ ಹೊರ ಬರುವಂತೆ ಋಷ್ಯಶೃಂಗರ ಆಗಮನದಿಂದ ಸುಭಿಕ್ಷ ನೆಲೆಸುವುದೆಂಬ ಮಹತಿಯನ್ನು ಕೃತಿಯಲ್ಲಿ ತಿಳಿಸಲಾಗಿದೆ. ತನ್ನ ಯೋಗ್ಯತೆಯ ಅರಿವು ತನಗಿರುವುದಾದರೆ ಅಂಥವರು ಬದುಕಿನಲ್ಲಿ ಎಡವುವ ಸಂಭವವು ತೀರಾ ಕಡಿಮೆ ಎಂಬ ಅಹಂ ರಹಿತ ಸಹಜ ನಡವಳಿಕೆಯ ಮಹತ್ವ ತಿಳಿಸುವ ಕೃತಿ ಮುಗ್ಧತೆಯಿರುವಲ್ಲಿ ಮೋಸದ ಸಾಧ್ಯತೆಯೂ ಅಧಿಕವೆಂಬ ಸತ್ಯವನ್ನು ಸಾರುತ್ತದೆ. ಒಟ್ಟಾರೆಯಾಗಿ ಭಾವರಾಮಾ ಯಣದ ರಾಮಾವತರಣ ನಾಂದಿಯು ಗುರುಕರುಣೆಯೊಂದಿರಲು ಕೊರತೆ ಒರತೆಯಾದೀತು ಎಂಬುದನ್ನು ದೃಢಪಡಿಸುತ್ತ ಸಾಹಿತ್ಯಾಸಕ್ತರನ್ನು ಇಂತಹ ಮುಂದಿನ ಕೃತಿಗಳನ್ನು ಕಾಯುವ ಚಾತಕಪಕ್ಷಿಯಾಗುವಂತೆ ಮಾಡಿದೆ.

ನನಗೆ ಶುಗರ್ ಪ್ರಾಬ್ಲೆಮ್ಮು!

» ಕೆ.ಶ್ರೀನಿವಾಸರಾವ್. ಹರಪನಹಳ್ಳಿ

ಮದುವೆ ಊಟದಲ್ಲಿ ಶುಗರ್ ಪ್ರಾಬ್ಲೆಮ್ ಇರುವವರಿಗೆಂದು ನಾಲ್ಕಾರು ಐಸ್ ಕ್ರೀಮ್ ಕೊಂಡೊಯ್ದವರಾರು?

ಅದೊಂದು ಸಿರಿವಂತರ ಮದುವೆ. ವರ ಕಾಶಿ ಯಾತ್ರೆಗೆ ಹೊರಟಿದ್ದಾನೆ. ಮಾವ ಅವನನ್ನು ತಡೆದು ಅಯ್ಯಾ ಅಳಿಮಯ್ಯ, ದಯವಿಟ್ಟು ಹಾಗೆಲ್ಲ ಮಾಡಬೇಡ. ನನ್ನ ಮಗಳನ್ನು ವರಿಸಿ ನನ್ನನ್ನು ಕೃತಾರ್ಥನನ್ನಾಗಿ ಮಾಡು... ಎಂದು ಕೇಳಿ ಕೈಹಿಡಿದು ಕರೆದೊಯ್ದು ಹಸೆಮಣೆಯ ಮೇಲೆ ಕೂರಿಸಬೇಕು. ಇದು ಶಾಸ್ತ್ರ. ಆದರೆ ಇಲ್ಲಿ ಆಗಿದ್ದೇನು?

ಮಾವ ಯಕ್ಷಗಾನದಲ್ಲಿ ಹಾಸ್ಯ ಕಲಾವಿದ. ಕಾಶಿ ಯಾತ್ರೆಗೆ ಹೊರಟ ಭಾವಿ ಅಳಿಮಯ್ಯನ ಕೈಹಿಡಿದು 'ಅಳಿಮಯ್ಯ, ಕ್ಷೇಮವಾಗಿ ಹೋಗಿಬಾ. ಆರೋಗ್ಯದ ಕಡೆ ಲಕ್ಷ್ಯವಿರಲಿ. ಹೊತ್ತುಹೊತ್ತಿಗೆ ಊಟ ಮಾಡು. ಅದೋ ಬಾಗಿಲು' ಎಂದು ಹೊರಬಾಗಿಲು ತೋರಿದ. ಇವನ ಹಾಸ್ಯ ಪ್ರವೃತ್ತಿ ಅರಿತಿದ್ದ ಅತಿಥಿಗಳು ಗೊಳ್ ಎಂದು ನಕ್ಕಿದ್ದರು. ಅಳಿಮಯ್ಯ ಕಕ್ಕಾಬಿಕ್ಕಿ !

ಗಟ್ಟಿಮೇಳ, ಗಟ್ಟಿಮೇಳ.. ಪುರೋಹಿತರು ಕೂಗಿದಾಗ ವರ ಖುಷಿಯಿಂದ ವಧುವಿನ ಕೊರಳಿಗೆ ತಾಳಿಕಟ್ಟಿ ಮೂರು ಬಲವಾದ ಗಂಟು ಹಾಕಿದ. ಅವನಿಗೇನು ಗೊತ್ತು ತಾನು ಅದೆಂತಹ ಆಳದ ಬಾವಿಯಲ್ಲಿ ಬಿದ್ದಿರುವೆನೆಂದು ?! ನೆರೆದವರೆಲ್ಲ ವಧುವರರಿಗೆ ಶುಭ ಹಾರೈಸಿ ಅವರ ಮುಡಿಗೆ ಅಕ್ಷತೆ ಹಾಕಿದರೆ ಹಲವು ಕುಚೇಷ್ಟೆ ಕುಳಗಳು ಪುರೋಹಿತರ ತಲೆಗೆ ಗುರಿಯಿಟ್ಟು ಅಕ್ಷತೆ ಎಸೆದವು.

ಊಟ ಆರಂಭ! ನೂಕುನುಗ್ಗಲು. ನನ್ನ ಪಕ್ಕದಲ್ಲಿ ಒಬ್ಬ ಧಡೂತಿಹೆಂಗಸು ಕುಳಿತಿದ್ದಳು. ಬಂದದ್ದನ್ನೆಲ್ಲ ಹಾಕಿಸಿಕೊಂಡು ಬ್ಯಾಟಿಂಗ್ ಮಾಡುತ್ತಿದ್ದಳು. ಮೊದಲ ಬಾರಿ ಲಾಡು ಬಂದಾಗ ಎರಡು ಹಾಕಿಸಿಕೊಂಡಳು. ಎರಡನೇ ಬಾರಿಬಂದಾಗ ಹಾಕು, ಹಾಕು ಎಂದು ನಾಲ್ಕು ಹಾಕಿಸಿಕೊಂಡಳು. ಜೊತೆಗೆ ಬಡಿಸುವವನಿಗೆ ಬೈಗುಳ ಬೇರೆ! ಹಾಕಯ್ಯ, ನಿಮ್ಮಪ್ಪನ ಮನೆಯಿಂದ ತಂದ ಹಾಗೆ ಮಾಡ್ತೀಯಲ್ಲ !

ವಿಚಿತ್ರವೆಂದರೆ ಒಂದು ನಿಮಿಷದಲ್ಲಿ ಎಲೆಯ ಮೇಲೆ ಲಾಡು ಇರುತ್ತಿರಲಿಲ್ಲ ! ನಿಧಾನವಾಗಿ ವಾರೆ ನೋಟದಿಂದ ನೋಡಿದೆ. ಅವಳ ತೊಡೆಯ ಮೇಲೊಂದು ಕೈಚೀಲ. ಎಲೆಯಲ್ಲಿ ಹಾಕಿದ ಲಾಡುಗಳನ್ನು ನೇರ ಆ ಚೀಲಕ್ಕಿಳಿಸುತ್ತಿದ್ದಳು !

ಒಂದು ಮದುವೆಯಲ್ಲಿ ಪತ್ನಿಯೊಂದಿಗೆ ಮೂಲೆಯ ಕುರ್ಚಿಯಲ್ಲಿ ಕುಳಿತು ಹರಟುತ್ತಿದ್ದೆ. ಎರಡು ಮಕ್ಕಳು ಐಸ್ ಕ್ರೀಂ ಹಿಡಿದು ನನ್ನ ಹಿಂದಿನ ಸಾಲಲ್ಲಿ ಕುಳಿತು ತಿಂದವು. ಎದ್ದುಹೋಗಿ ಮತ್ತೆರಡು ತಂದು ತಿಂದವು. ಹೀಗೆಯೇ ನಾಲ್ಕಾರು ಬಾರಿ

ಪುನರಾವರ್ತನೆಯಾಯಿತು. ಮನೆಗೆ ಹೊರಡಲು ಬಾಗಿಲವರೆಗೆ ಬಂದಾಗ ಐಸ್ ಕ್ರೀಂ ಬಾಕ್ಸ್ ಹಿಡಿದು ಕುಳಿತಿದ್ದವ 'ತಪ್ಪಾಗಿ ಭಾವಿಸಬೇಡಿ. ಈ ವಯಸ್ಸಲ್ಲಿ ಅಷ್ಟೊಂದು ಐಸ್ ಕ್ರೀಂ ತಿನ್ನೋದು ಒಳ್ಳೆಯದಲ್ಲ' ಎಂದ.

'ನನಗೆ ಶುಗರ್ ಪ್ರಾಬ್ಲೆಮ್ಮು! ನಾನೆಲ್ಲಿ ಐಸ್ ಕ್ರೀಂ ತಿಂದೆ? ಯಾವ ಕಾರಣಕ್ಕೂ ನಾನು ಐಸ್‌ಕ್ರೀಮ್, ಪಾಯಸ, ಲಾಡು, ಜಿಲೇಬಿ ತಿನ್ನೊಲ್ಲ, ಡಾಕ್ಟ್ರು ಹೇಳಿದ್ದಾರೆ!'. ಶುಗರ್ ಪ್ರಾಬ್ಲೆಮ್ ಇರುವವರು ಐಸ್ ಕ್ರೀಂ ತಿಂದರೆ, ಅದೆಷ್ಟು ಅಪಾಯಕಾರಿ, ರಕ್ತದ ಸಕ್ಕರೆ ಅಂಶ ಏರುಪೇರಾಗುವ ರೀತಿ ಎಲ್ಲವನ್ನೂ ವೈದ್ಯರು ವರ್ಣಿಸಿದ್ದರಿಂದ, ಐಸ್‌ಕ್ರೀಂ ಎಂದಾಕ್ಷಣ ಭಯ ಬೀಳುವಂತಾಗಿತ್ತು! ಆದರೆ ಅವನೂ ಬೆರಗಾಗಿ ಹೇಳಿದ. 'ಸಾರ್, ಆ ಇಬ್ಬರು ಹುಡುಗರು ನಿಮಗೆ ಎಂದು ಹೇಳಿ ಈಗಾಗಲೇ ನಾಲ್ಕು ಬಾರಿ ಐಸ್ ಕ್ರೀಂ ತೆಗೆದುಕೊಂಡು ಹೋಗಿದ್ದಾರೆ' ನನಗೆ ದಿಗ್ಭ್ರಾಂತಿ!

ಇನ್ನೊಮ್ಮೆ ಸಮಾರಂಭವೊಂದರಲ್ಲಿ ಊಟದಲ್ಲಿ ಪಕ್ಕದಲ್ಲೊಬ್ಬ ಕುಳಿತಿದ್ದ. ನಿಮ್ಮ ಪರಿಚಯ? ಎಂದೆ. ನಾನು ಗಂಡಿನ ಕಡೆಯವ. ನೀವು ಹೆಣ್ಣಿನ ಕಡೆಯವರಾ? ಹಾಗಾಗಿ ಪರಿಚಯ ಇರಲಿಕ್ಕಿಲ್ಲ ಎಂದ. ನನಗಾಗಲೇ ಅರಿವಾಗಿತ್ತು. ಇದಾವುದೋ ಪಡಪೋಶಿ ಗಿರಾಕಿ, ಪುಕ್ಕಟೆ ಊಟ ಹೊಡೆಯಲು ಬಂದವ ಎಂದು. ಏಕೆಂದರೆ ಅಂದು ಇದ್ದುದು ಅರವತ್ತು ವರ್ಷ ಆದವರಿಗೆ ಶಾಂತಿ ಸಮಾರಂಭದ ಊಟ!

ಆತ್ಮ ಸಾಕ್ಷಾತ್ಕಾರದ ಹಾದಿ!

» ಕಾರ್ತಿಕ್ ಕೃಷ್ಣ

ಬಾಲ್ಯದ ದಿನಗಳನ್ನು ನೆನಪಿಸಿಕೊಳ್ಳಿ! ಮೊದಲ ಬಾರಿಗೆ ಸೈಕಲ್ ಏರಿದ್ದು, ನಡುವೆ ಕಾಲು ಹಾಕಿ ಪೆಡಲ್ ತುಳಿದದ್ದು, ಬಿದ್ದು ಗಾಯ ಮಾಡಿಕೊಂಡದ್ದು! ಅದೇ ಅನುಭವವನ್ನು ಇಂದು ಪುನಃ ಅನುಭವಿಸಬಹುದೇ? ಖಂಡಿತ! ಅದಕ್ಕಿಂತಾ ಹೆಚ್ಚಾಗಿ ನಿಮ್ಮ ದೇಹ, ಮನಸ್ಸು, ಪರಿಸರ, ಎಲ್ಲಕ್ಕೂ ಉಪಕಾರಿಯಾಗುವ ನಿಟ್ಟಿನಲ್ಲಿ ಇಂದು ನಾವೆಲ್ಲಾ ಸೈಕ್ಲಿಂಗ್ ಕಡೆ ಹೊರಳುವುದು ಅವಶ್ಯವಾಗಿದೆ.

ಸೈಕ್ಲಿಂಗ್ ಎಂದರೆ ಕೇವಲ ಪೆಡಲ್ ತಿರುಗಿಸುವುದು ಅಲ್ಲ, ಅದು ಸ್ವಾತಂತ್ರ್ಯದ ತಾಜಾ ಅನುಭವ. ಗಾಳಿಯನ್ನು ಭೇದಿಸಿ ಸುಯ್ ಎಂದು ಸಾಗುವುದು, ಸೈಕ್ಲಿಂಗ್ ಮಾಡುವ ಅಷ್ಟೂ ಹೊತ್ತು, ಬಿಡುಗಡೆಯ ಸಮಯ. ಇದೊಂದು ಚಿಂತಾಮುಕ್ತಿ ಯಾನ. ಪ್ರತಿ ದಿನ 30 ನಿಮಿಷ ಸೈಕಲ್ ಓಡಿಸಿದರೆ ನಿಮ್ಮ ಹೃದಯ ಚುರುಕಾಗುತ್ತದೆ, ದೇಹದ ಕೊಬ್ಬು ಕರಗುತ್ತದೆ, ತೂಕ ನಿಯಂತ್ರಣದಲ್ಲಿರುತ್ತದೆ. ಜತೆಗೆ, ಜೀರೋ ಎಮಿಶನ್‌ನಿಂದಾಗಿ ಸೈಕಲ್ ಪರಿಸರ ಸ್ನೇಹಿ; ಸೈಕ್ಲಿಂಗ್ ಮಾಡುವ ಪ್ರತಿಯೊಬ್ಬರೂ ಭೂಮಿಯ ಆರೋಗ್ಯಕ್ಕೂ ಕೊಡುಗೆ ನೀಡುತ್ತಿದ್ದಾರೆ. ಇಲ್ಲಿ ಪೆಟ್ರೋಲ್ ಬದಲು ನಮ್ಮ ಕ್ಯಾಲೋರಿ ಉರಿಯು ತ್ತದೆ! ಜತೆಗೆ ದೈನಂದಿನ ಒತ್ತಡವನ್ನು ಕಡಿಮೆ ಮಾಡು ತ್ತದೆ. ಒಮ್ಮೆ ಊಹಿಸಿ ಸಾಯಂಕಾಲದ ತಂಪಾದ ಗಾಳಿಯಲ್ಲಿ, ತಾವು ಇಷ್ಟಪಡುವ ಸಂಗೀತದೊಂದಿಗೆ, ನಿಮ್ಮ ನೆಚ್ಚಿನ ರಸ್ತೆ ಮೇಲೆ ಸೈಕಲ್ ಓಡಿಸುತ್ತಿರುವ ದೃಶ್ಯ. ಇದು ಕೇವಲ ದಾರಿಯ ಪ್ರಯಾಣವಲ್ಲ, ಅದು ಆತ್ಮಸಾಕ್ಷಾತ್ಕಾರದ ಹಾದಿ!

ಓದುವ ವೇಗ ಹೆಚ್ಚಿಸಲು ಏನು ಮಾಡಬಹುದು?

ಡಾ. ನಾಗರಾಜ್ ಶೆಣೈ, ಬೆಂಗಳೂರು

- **ಭಟ್ರೇ, ನಾನು ಸಹ ನಿಮ್ಮ ಹಾಗೆ ಪುಸ್ತಕಗಳ ಅಭಿಮಾನಿ. ಅಪಾರ ಪ್ರಮಾಣದಲ್ಲಿ ಪುಸ್ತಕಗಳನ್ನು ಸಂಗ್ರಹಿಸಿಕೊಂಡಿದ್ದೇನೆ. ಆದರೆ ನನ್ನ ಓದಿನ ವೇಗ ತುಂಬಾ ಕಡಿಮೆ. ಹೀಗಾಗಿ ಹೆಚ್ಚು ಓದಲು ಆಗುತ್ತಿಲ್ಲ. ಅದರಲ್ಲೂ ಕೆಲಸದ ಒತ್ತಡ ಇದ್ದ ದಿನಗಳಲ್ಲಿ, ಸಿಗುತ್ತಿರುವುದು ಅಲ್ಪ ಸಮಯ, ದಣಿದ ಮನಸ್ಸು ಹಾಗೂ ಚಂಚಲ ಚಿತ್ತ. ನೀವು ಇಂಥದ್ದನ್ನೆಲ್ಲ ಹೇಗೆ ನಿಭಾಯಿಸುತ್ತೀರಿ? ಓದಿನ ವೇಗ ಹೆಚ್ಚಿಸಿ ಕೊಳ್ಳಲು ಏನು ಮಾಡಬಹುದು? ದಯವಿಟ್ಟು ಮಾರ್ಗದರ್ಶನ ನೀಡಿ.**

-ಡಾ.ಶೆಣೈ ಅವರೇ, ಓದಿನ ವೇಗವನ್ನು ಹೆಚ್ಚಿಸಿಕೊಳ್ಳುವುದು ಒಂದು ಕೌಶಲವಾಗಿದ್ದು, ಇದಕ್ಕೆ ತಾಲೀಮು, ತಂತ್ರಗಳು ಮತ್ತು ಸ್ಥಿರ ಅಭ್ಯಾಸದ ಅಗತ್ಯ. ಈ ಕೌಶಲವು ವಿದ್ಯಾರ್ಥಿಗಳಿಗೆ, ವೃತ್ತಿಪರರಿಗೆ ಮತ್ತು ಓದಿನ ಆಸಕ್ತಿಯುಳ್ಳವರಿಗೆ ಸಮಯವನ್ನು ಉಳಿಸಲು ಮತ್ತು ಮಾಹಿತಿಯನ್ನು ತ್ವರಿತವಾಗಿ ಗ್ರಹಿಸಲು ಸಹಾಯಕವಾಗುತ್ತದೆ.

ಮೊದಲು ನೀವು ಓದಿನ ವೇಗವನ್ನು ಅರ್ಥಮಾಡಿಕೊಳ್ಳಬೇಕು. ಓದಿನ ವೇಗವನ್ನು (Reading Speed) ಸಾಮಾನ್ಯವಾಗಿ ಪ್ರತಿ ನಿಮಿಷಕ್ಕೆ ಓದಿದ ಪದಗಳ ಸಂಖ್ಯೆಯಿಂದ (Words Per Minute - WPM) ಅಳೆಯಲಾಗುತ್ತದೆ. ಸರಾಸರಿ ವಯಸ್ಕ ವ್ಯಕ್ತಿಯ ಓದಿನ ವೇಗವು 200-250 WPM ಆಗಿರುತ್ತದೆ. ಆದರೆ, ಸ್ಪೀಡ್ ರೀಡಿಂಗ್ ತಂತ್ರಗಳನ್ನು ಅಳವಡಿಸಿಕೊಂಡರೆ, 400-700 WPM ಅಥವಾ ಅದಕ್ಕಿಂತಲೂ ಹೆಚ್ಚಿನ ವೇಗವನ್ನು ಸಾಧಿಸ ಬಹುದು. ಆದರೆ, ವೇಗವೊಂದೇ ಪ್ರಮುಖವಲ್ಲ; ಓದಿದ್ದನ್ನು ಅರ್ಥ ಮಾಡಿಕೊಳ್ಳುವ (Comprehension) ಸಾಮರ್ಥ್ಯವೂ ತುಂಬಾ ಮುಖ್ಯ. ವೇಗವನ್ನು ಹೆಚ್ಚಿಸಲು, ನಿಮ್ಮ ಪ್ರಸ್ತುತ ಓದಿನ ವೇಗವನ್ನು ಮೊದಲು ಅಳೆಯಿರಿ. ಒಂದು ಲೇಖನವನ್ನು ಓದಿ, ಟೈಮರ್ ಬಳಸಿ ಮತ್ತು ಓದಿದ ಪದಗಳ ಸಂಖ್ಯೆಯನ್ನು ಲೆಕ್ಕ ಹಾಕಿ. ಇದು ನಿಮಗೆ ಆರಂಭಿಕ ಮಾಹಿತಿಯನ್ನು ನೀಡುತ್ತದೆ ಮತ್ತು ಪ್ರಗತಿಯನ್ನು ಟ್ರ್ಯಾಕ್ ಮಾಡಲು ಸಹಾಯಕವಾಗುತ್ತದೆ.

ನಂತರ ಓದಿನ ದೋಷಗಳನ್ನು ಸರಿಪಡಿಸಿಕೊಳ್ಳಬೇಕು. ಓದಿನ ವೇಗವನ್ನು ಕಡಿಮೆ ಮಾಡುವ ಕೆಲವು ಸಾಮಾನ್ಯ ದೋಷಗಳಿವೆ. ಇವುಗಳನ್ನು ಗುರುತಿಸಿ, ಸರಿಪಡಿಸಿಕೊಳ್ಳುವುದು ಮೊದಲ ಹೆಜ್ಜೆಯಾಗಿದೆ. ಓದುವಾಗ ಮನಸ್ಸಿನಲ್ಲಿ ಅಥವಾ ಕಡಿಮೆ ಧ್ವನಿಯಲ್ಲಿ ಪದಗಳನ್ನು ಉಚ್ಚರಿಸುವ ಗೀಳು ಬಹಳಷ್ಟು ಜನರಿಗೆ ಇದೆ. ಇದು ಓದಿನ ವೇಗವನ್ನು ಗಮನಾರ್ಹವಾಗಿ ಕಡಿಮೆ ಮಾಡುತ್ತದೆ, ಏಕೆಂದರೆ ಉಚ್ಚಾರಣೆಯ ವೇಗವು ಕಣ್ಣಿನ ಓದಿನ ವೇಗಕ್ಕಿಂತ ಕಡಿಮೆಯಿರುತ್ತದೆ.

ಓದುವಾಗ ಕೇವಲ ಕಣ್ಣಿನ ಮೂಲಕ ಪದಗಳನ್ನು ಗ್ರಹಿಸಲು ಕಲಿಯಬೇಕು. ಓದುವಾಗ ಒಂದು ಸರಳವಾದ ಸಂಗೀತವನ್ನು ಹಾಡಿಕೊಳ್ಳಿ ಅಥವಾ ಲಯಬದ್ಧವಾಗಿ ಲೆಕ್ಕ ಹಾಕಿಕೊಳ್ಳಿ. ಕೆಲವರು ಓದುವಾಗ, ತಿಳಿಯದೆಯೇ ಮತ್ತೆ ಮತ್ತೆ ಹಿಂದಿನ ಸಾಲುಗಳನ್ನು ಓದುತ್ತಾರೆ. ಇದು ಸಮಯವನ್ನು ವ್ಯರ್ಥ ಮಾಡುತ್ತದೆ. ಕೈಬೆರಳು, ಪೆನ್, ಅಥವಾ ಒಂದು ಕಾರ್ಡ್ ಬಳಸಿ, ಓದುವ ಸಾಲಿನ ಮೇಲೆ ಕೇಂದ್ರೀಕರಿಸಿ. ಪದಗಳ ಗುಂಪನ್ನು ಒಮ್ಮೆಗೇ ಓದಲು ಕಲಿಯಿರಿ; ಇದರಿಂದ ಮನಸ್ಸು ಹಿಂದಕ್ಕೆ ಓಡಿಸುವುದು ಕಡಿಮೆಯಾಗುತ್ತದೆ. ಒಂದೊಂದು ಪದವನ್ನು ಪ್ರತ್ಯೇಕವಾಗಿ ಓದುವ ಬದಲು, ಕಣ್ಣಿನ ದೃಷ್ಟಿಯನ್ನು ವಿಸ್ತರಿಸಿ, ಒಂದು ಸಾಲಿ ನಲ್ಲಿ 3-4 ಪದಗಳನ್ನು ಒಮ್ಮೆಗೇ ಗ್ರಹಿಸಲು ಅಭ್ಯಾಸ ಮಾಡಿಕೊಳ್ಳಬೇಕು.

Ask the Editor

• ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ಪುಸ್ತಕದ ಮೇಲೆ ಎರಡು ಗೆರೆಗಳನ್ನು ಗುರುತಿಸಿ, ಒಮ್ಮೆಗೆ ಆ ಗೆರೆಗಳ ನಡುವಿನ ಪದಗಳನ್ನು ಓದಲು ಅಭ್ಯಾಸ ಮಾಡಬೇಕು. ಕಂಪ್ಯೂಟರ್ ಅಥವಾ ಮೊಬೈಲ್‌ನಲ್ಲಿ ಸ್ಪೀಡ್ ರೀಡಿಂಗ್ ಆ್ಯಪ್‌ಗಳನ್ನು (ಉದಾಹರಣೆಗೆ: Spreeder, AccelaReader) ಬಳಸಬೇಕು. ಒಂದೊಂದು ಪದವನ್ನು ಓದುವ ಬದಲು, 3-5 ಪದಗಳ ಗುಂಪನ್ನು ಒಮ್ಮೆಗೇ ಗ್ರಹಿಸಬೇಕು. ಇದರಿಂದ ಕಣ್ಣಿನ ಚಲನೆ ಕಡಿಮೆಯಾಗುತ್ತದೆ ಮತ್ತು ಓದಿನ ವೇಗ ಹೆಚ್ಚುತ್ತದೆ. ಓದುವಾಗ ಕೈಬೆರಳು ಅಥವಾ ಪೆನ್‌ನಂತಹ ಒಂದು ಸಾಧನವನ್ನು ಸಾಲಿನ ಕೆಳಗೆ ಚಲಿಸುವಂತೆ ಬಳಸಿ. ಇದು ಕಣ್ಣಿನ ಚಲನೆಯನ್ನು ನಿಯಂತ್ರಿಸುತ್ತದೆ ಮತ್ತು ವೇಗವನ್ನು ಹೆಚ್ಚಿಸುತ್ತದೆ. ಪಾಯಿಂಟರ್‌ನ ವೇಗವನ್ನು ಕ್ರಮೇಣ ಹೆಚ್ಚಿಸಿ, ಆದರೆ ಓದಿದ್ದನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವನ್ನು ಕಾಪಾಡಿಕೊಳ್ಳಬೇಕು.

ಲೇಖನದ ಮುಖ್ಯ ಅಂಶಗಳನ್ನು (ಶೀರ್ಷಿಕೆ, ಉಪಶೀರ್ಷಿಕೆ, ಮೊದಲ ವಾಕ್ಯಗಳು) ಓದಿ, ಸಾರಾಂಶವನ್ನು ತಿಳಿಯಬೇಕು. ವಾರ್ತಾಪತ್ರಿಕೆಯ ಲೇಖನವನ್ನು ತೆಗೆದುಕೊಂಡು,30 ಸೆಕೆಂಡುಗಳಲ್ಲಿ ಮುಖ್ಯ ಅಂಶಗಳನ್ನು ಗುರುತಿಸುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಕಣ್ಣಿನ ಚಲನೆಯನ್ನು ಮಾರ್ಗದರ್ಶನ ಮಾಡಲು, ಕೈಬೆರಳು ಅಥವಾ ಪೆನ್‌ನಂತಹ ಸಾಧನವನ್ನು ಬಳಸಿ. ಇದು ಕಣ್ಣಿನ ಗಮನವನ್ನು ಸಾಲಿನ ಮೇಲೆ ಇಡುತ್ತದೆ. ಇದನ್ನು ಮೆಟಾ- ಗೈಡಿಂಗ್ ಅಂತಾರೆ. ವೇಗವೊಂದೇ ಸಾಕಾಗದು; ಓದಿದ್ದನ್ನು ಅರ್ಥಮಾಡಿಕೊಳ್ಳುವುದು ತುಂಬಾ ಮುಖ್ಯ. ಓದುವಾಗ 'ಇದರ ಮುಖ್ಯ ಅಂಶ ಏನು?', 'ಲೇಖಕ ಏನನ್ನು ಸಾಬೀತು ಪಡಿಸಲು ಯತ್ನಿಸುತ್ತಿದ್ದಾನೆ?' ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು. ಓದಿದ ಮಾಹಿತಿಯನ್ನು ಮನಸ್ಸಿನಲ್ಲಿ ಚಿತ್ರವಾಗಿ ಕಲ್ಪಿಸಿಕೊಳ್ಳಿ. ಇದು ಓದಿದ್ದನ್ನು ದೀರ್ಘಕಾಲ ನೆನಪಿನಲ್ಲಿ ಇಡಲು ಸಹಾಯಕವಾಗು ತ್ತದೆ. ಓದಿನ ವೇಗವನ್ನು ಹೆಚ್ಚಿಸಲು ದೈನಂದಿನ ಅಭ್ಯಾಸ ಅಗತ್ಯ. ದಿನಕ್ಕೆ ಕನಿಷ್ಠ 20-30 ನಿಮಿಷ ಓದಲು ಸಮಯ ಮೀಸಲಿಡಿ. ವಾರ್ತಾಪತ್ರಿಕೆ, ನಿಯತಕಾಲಿಕೆ, ಅಥವಾ ಸರಳ ಪುಸ್ತಕಗಳಿಂದ ಪ್ರಾರಂಭಿಸಿ.

ಓದಿನ ವೇಗವನ್ನು ಸುಧಾರಿಸಲು ಕೆಲವು ಜೀವನಶೈಲಿಯ ಬದಲಾವಣೆಗಳು ಸಹಾಯಕ. ಕಣ್ಣಿನ ಆರೋಗ್ಯವು ಓದಿನ ವೇಗಕ್ಕೆ ನೇರವಾಗಿ ಸಂಬಂಧಿಸಿದೆ. ನಿಯಮಿತವಾಗಿ ಕಣ್ಣಿನ ವೈದ್ಯರನ್ನು ಭೇಟಿಯಾಗಿ, ಕನ್ನಡಕ ಅಗತ್ಯವಿದ್ದರೆ ಬಳಸಿ. ಪ್ರತಿದಿನ 7-8 ಗಂಟೆಗಳ ನಿದ್ರೆಯು ಮೆದುಳಿನ ಗ್ರಹಿಕೆಯ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಎಲ್ಲ ವಿಷಯಗಳಿಗೂ ಸ್ಪೀಡ್ ರೀಡಿಂಗ್ ಸೂಕ್ತವಲ್ಲ, ಕಾನೂನು ದಾಖಲೆಗಳು, ಕಾವ್ಯ ಅಥವಾ ತಾಂತ್ರಿಕ ವಿಷಯಗಳನ್ನು ಆಳವಾಗಿ, ನಿಧಾನವಾಗಿ ಓದಬೇಕಾಗುತ್ತದೆ. ವೇಗಕ್ಕಿಂತ ಗ್ರಹಿಕೆ ಮುಖ್ಯ. ವೇಗವನ್ನು ಹೆಚ್ಚಿಸುವ ಆತುರದಲ್ಲಿ ಓದಿದ್ದನ್ನು ಅರ್ಥ ಮಾಡಿಕೊಳ್ಳದಿದ್ದರೆ ಉಪಯೋಗವಾಗದು.

ಚಂದ್ರಮೋಹನ್ ಬಿ., ಮೈಸೂರು

- **ಭಟ್ರೇ, ನನ್ನ ಮುಂದಿರುವ ವ್ಯಕ್ತಿ ಸುಳ್ಳು ಹೇಳುತ್ತಾನೆ ಎಂಬುದು ನನಗೆ ಗೊತ್ತಿದ್ದರೂ ಅದನ್ನು ವಿರೋಧಿಸಲು ಅಥವಾ ಖಂಡಿಸಲು ನನಗೆ ಸಾಧ್ಯವಾಗುವುದಿಲ್ಲ. ಆ ವ್ಯಕ್ತಿ ಹೇಳಿದ ಎಲ್ಲ ಸುಳ್ಳುಗಳನ್ನು ಸುಮ್ಮನೆ ಕೇಳುತ್ತಾ ಇರುತ್ತೇನೆ. ಇದು ನನ್ನ ದೌರ್ಬಲ್ಯ ಎಂದು ಎಷ್ಟೋ ಸಲ ನನಗೆ ಅನಿಸಿದೆ. ಆದರೂ ನನ್ನ ಸ್ವಭಾವವನ್ನು ಬದಲಿಸಿ ಕೊಳ್ಳಲು ಆಗುತ್ತಿಲ್ಲ. ನನಗೆ ನಿಮ್ಮ ಮಾರ್ಗದರ್ಶನ ಬೇಕು.**

-ಚಂದ್ರಮೋಹನ್ ಅವರೇ, ಯಾರಾದರೂ ಸುಳ್ಳು ಹೇಳು ತ್ತಿರುವುದು ಗೊತ್ತಾಗಿದರೂ, ತಕ್ಷಣ ಅದನ್ನು ತಿರಸ್ಕರಿಸಲು ಅಥವಾ ಖಂಡಿಸಲು ಸಾಧ್ಯವಾಗದಿದ್ದರೆ, ಅದು ಒಳಗೆ ತೀವ್ರ ಸಂಕಟ, ಚಡಪಡಿಕೆ ಮತ್ತು ಆಕ್ರೋಶವನ್ನು ಉಂಟು ಮಾಡಬಹುದು. ಈಗ ನೀವು ಅನುಭವಿಸುತ್ತಿರುವುದು ಬಹುಶಃ ನಿಮ್ಮ ಅಹಿಂಸೆ, ಸೌಮ್ಯತೆ, ಅಥವಾ ಸಾಧುಸ್ವಭಾವಗಳ ಪ್ರತಿ ಬಿಂಬವಾಗಿರಬಹುದು. ನೀವು ಗದರಿಕೆ, ಜಗಳ, ಅಥವಾ ವಿರೋಧದಿಂದ ದೂರವಿರುವ ವ್ಯಕ್ತಿಯಾಗಿರ ಬಹುದು. ಇದು ನಿಮ್ಮ ವ್ಯಕ್ತಿತ್ವದ ಒಂದು ಶಕ್ತಿ ಕೂಡ. ಆದರೆ, ಈ ಶಕ್ತಿಯನ್ನು ಸ್ಥಿತಪ್ರಜ್ಞೆಯಿಂದ ಉಪಯೋಗಿಸಬೇಕು. ನೀವು ವ್ಯಕ್ತಿಯನ್ನು ವಿರೋಧಿಸದೇ ಇರುವಾಗ, ಆತನ ಸುಳ್ಳನ್ನು ನೀವು ನಂಬಿದ್ದೀರಿ ಎಂದರ್ಥವಲ್ಲ. ಕೆಲವೊಮ್ಮೆ ಸತ್ಯವನ್ನು ಶಾಂತಿಯುತವಾಗಿ ಹೇಳಬೇಕಾಗುತ್ತದೆ. ನೇರವಾಗಿ 'ಇದು ಸುಳ್ಳು' ಎಂದು ಹೇಳುವ ಬದಲು, 'ಹೌದಾ? ಅದಕ್ಕೆ ಸಾಕ್ಷ್ಯವಿದೆಯಾ?', 'ನನಗೆ ತಿಳಿದಿರುವುದು ವಿಷಯ ಸ್ವಲ್ಪ ಬೇರೆಯಾಗಿದೆ ನೀನು ಹೇಳಿದದ್ದು ನಿಜವಾಗಿರಬಹುದೇ?', 'ನಾನು ಸ್ವಲ್ಪ ಸಂದೇಹದಲ್ಲಿದ್ದೇನೆ, ನೀನು ಮತ್ತೊಮ್ಮೆ ವಿವರಿಸಬಹುದಾ?', ಎಂದು ಕೇಳಬಹುದು. ಇವು confrontation (ಎದುರಾಟ ಅಥವಾ ಸಂಘರ್ಷ) ಅಲ್ಲ, clarity (ಸ್ಪಷ್ಟತೆ)ಗೆ ದಾರಿ ಮಾಡಿ ಕೊಡುತ್ತದೆ.

ನಿಮ್ಮ ಶುದ್ಧ ಮನಸ್ಸು, ಶಾಂತಿ ಪ್ರಿಯತೆ, ಸಂತುಲಿತ ಗುಣ - ಇವು ಒಳ್ಳೆಯ ಸ್ವಭಾವಗಳು. ಅವನ್ನು ಸಂಪೂರ್ಣ ಬದಲಿಸ ಬೇಕೆಂದು ಒತ್ತಡ ಬೇಡ. ಬದಲಾಗಿ, ಕೆಲವು ಸಂದರ್ಭಗಳಲ್ಲಿ ಮಾತ್ರ ಧೈರ್ಯದಿಂದ 'ಇದು ನನಗೆ ಸ್ವೀಕಾರಾರ್ಹವಲ್ಲ' ಎಂದು ಹೇಳುವ ಅಭ್ಯಾಸ ಬೆಳೆಸಿಕೊಳ್ಳಿ. ಮೊದಲ ಬಾರಿಗೆ ಸಣ್ಣ ಸಂದರ್ಭಗಳಲ್ಲಿ ಹಾಗೆ ಮಾಡಿ. ಸ್ವಾಭಿಮಾನ ಎಂದರೆ ಯಾರನ್ನಾದರೂ ಕೆಡವುದಲ್ಲ, ಅದು 'ನಾನು ನಿಷ್ಕಳಂಕವಾಗಿ ಸತ್ಯದೊಂದಿಗೆ ನಿಲ್ಲುತ್ತೇನೆ' ಎಂಬ ಭಾವನೆ. ಸುಳ್ಳನ್ನು ಸಹಿಸು ವುದು ಆತ್ಮಗೌರವಕ್ಕೆ ತೊಂದರೆ ಉಂಟು ಮಾಡ ಬಹುದು. ಆದ್ದರಿಂದ, ನೀವು ತೊಳೆದ ಶುದ್ಧವಸ್ತ್ರದ ಮೇಲೆ ಧೂಳಿನ ಕಲೆ ಬಿದ್ದಂತೆ ಸತ್ಯವನ್ನು ಕಾಪಾಡುವುದು ಸಹ ಅಗತ್ಯ.

ನೀವು ಈಗಾಗಲೇ ಆತ್ಮಪರಿಶೀಲನೆ ಮಾಡುತ್ತಿದ್ದೀರಿ. ಇದು ಪ್ರಗತಿಯ ಮೊದಲ ಹೆಜ್ಜೆ. ಯಾರಾದರೂ ಸುಳ್ಳು ಹೇಳುವುದು ನಿಮ್ಮ ಅರಿವಿಗೆ ಬಂದಾಗ, ಅದನ್ನು ನಂಬಿಲ್ಲ ಎಂಬುದನ್ನಾದರೂ ಸೌಜನ್ಯದಿಂದ ತಿಳಿಸುವುದನ್ನು ರೂಢಿಸಿಕೊಳ್ಳಿ. ಗಂಡ ಹೇಳುವ ಎಲ್ಲ ಸುಳ್ಳುಗಳನ್ನು ಹೆಂಡತಿ ನಂಬುವುದಿಲ್ಲ. ಅವಳಿಗೆ ಎಲ್ಲಿ ಆ ಸುಳ್ಳುಗಳನ್ನು ಬಯಲು ಮಾಡಬೇಕು ಎಂಬುದು ಗೊತ್ತಿರುತ್ತದೆ. ಈ ವಿಷಯದಲ್ಲಿ ನಿಮ್ಮ ಪತ್ನಿಯ ಸಲಹೆ ಯನ್ನೇಕೆ ನೀವು ಪಡೆಯಬಾರದು?

ಎಸ್. ವಿ. ಶ್ರೇಯಸ್, ಬೆಂಗಳೂರು

- **ಸಂಪಾದಕರೇ, ನನ್ನ ಕಾರನ್ನು ಯಾರಾದರೂ ಓವರ್ ಟೇಕ್ ಮಾಡಿ ಮುನ್ನಡೆದರೆ ವಿಪರೀತ ಕೋಪ ಬರುತ್ತದೆ. ನಾನು ಎಷ್ಟೋ ಸಲ ಓವರ್ ಟೇಕ್ ಮಾಡಿದವರ ಜತೆ ರಸ್ತೆಯಲ್ಲಿಯೇ ಜಗಳವಾಡಿ ದ್ದಿದೆ. ಇತ್ತೀಚೆಗೆ ನನ್ನ ಈ ಸ್ವಭಾವ ಒಳ್ಳೆಯದಲ್ಲ ಎಂದು ನನಗೆ ಅನಿಸಲಾರಂಭಿಸಿದೆ. ಇದರಿಂದ ನನಗೆ ಸಮಸ್ಯೆ ಆಗಿದೆ. ಆದರೂ ಒಮ್ಮೊಮ್ಮೆ ನನ್ನಿಂದ ಇದೇ ಕಾರಣಕ್ಕೆ ತಪ್ಪುಗಳಾಗಿಬಿಡುತ್ತವೆ. ನಾನು ಈ ಸ್ವಭಾವವನ್ನು ಬಿಡುವುದು ಹೇಗೆ?**

-ಶ್ರೇಯಸ್ ಅವರೇ, ನೀವು ಹಂಚಿಕೊಂಡಿರುವ ಈ ಅನುಭವವು ತುಂಬಾ ಸಾಮಾನ್ಯವಾದದ್ದು. ಅನೇಕರು ರಸ್ತೆಗಿಳಿದಾಗ ತಮ್ಮನ್ನು ತಾವು ಕಳೆದುಕೊಳ್ಳುತ್ತಾರೆ. ಆದರೆ ನೀವು ಈಗ ನಿಮ್ಮ ಈ ಸ್ವಭಾವ ಸೂಕ್ತವಲ್ಲ ಎಂದು ಅರಿತುಕೊಂಡಿದ್ದೀರಿ. ಅಷ್ಟರಮಟ್ಟಿಗೆ ನಿಮ್ಮಲ್ಲಿ ಜ್ಞಾನೋದಯವಾಗಿದೆ.

ಯಾರಾದರೂ ನಿಮ್ಮನ್ನು ಓವರ್ ಟೇಕ್ ಮಾಡುವುದು ಅಪರಾಧವೇ? ಅದನ್ನು ನೀವು ಅವಮಾನ ಇಂದು ಏಕೆ ಭಾವಿಸಬೇಕು? ಬಹುಶಃ ಇದು ನಿಮ್ಮ ಅಹಂಗೆ ಅಥವಾ ಆತ್ಮಗೌರವಕ್ಕೆ ಹಾನಿಯಾದಂತೆ ಅನ್ನಿಸುತ್ತಿರಬಹುದು. 'ಅವನು ನನ್ನ ಹಿಂದೆ ಹಾಕಿ ಹೋಗಿದ್ದಾನೆ, ಅವನು ನನಗಿಂತ ಮೇಲು' ಎನ್ನುವ ಅಜ್ಞಾತ ಭಾವನೆ ನಿಮ್ಮನ್ನು ಕಾಡಬಹುದು. ಅಷ್ಟಕ್ಕೂ ಅವನಾರೋ, ನೀವ್ಯಾರೋ? ಅವನು ನಿಮ್ಮ ಹಿಂದೆ ಹಾಕಿಸಿದ ಮಾತ್ರಕ್ಕೆ ಜೀವನ ದಲ್ಲಿ ನಿಮ್ಮನ್ನು ಹಿಂದೆ ಹಾಕಿಸಿದ ಎಂದು ಯಾಕೆ ಭಾವಿಸುತ್ತೀರಿ? ಆತನಿಗೆ ನಿಮಗಿಂತ ಅವಸರ ಅಥವಾ ಎಮರ್ಜನ್ಸಿ ಇದ್ದಿರಬಹುದು. ಹೋಗಲಿ ಬಿಡಿ. ಬೇರೆಯವರಿಗೆ ದಾರಿ ಮಾಡಿಕೊಟ್ಟೆ ಎಂದು ಖುಷಿಪಡಿ.

ನಿಮ್ಮನ್ನು ಹಿಂದಕ್ಕೆ ಹಾಕಿ ಮುಂದೆ ಹೋದ ವ್ಯಕ್ತಿ ನನ್ನ ಜೀವನದ ಎಷ್ಟು ಭಾಗ ಇಂದು ನೀವೆ ಕೇಳಿಕೊಳ್ಳಿ. ಹೆಚ್ಚೆಂದರೆ ಹತ್ತು-ಇಪ್ಪತ್ತು ಸೆಕೆಂಡ್ ಇದ್ದಿರಬಹುದು. 10 ಸೆಕೆಂಡ್? ಇದನ್ನು ನಿಮ್ಮ ನೆನಪಿನಲ್ಲಿ ಜೀವನವಿಡೀ ಇಟ್ಟುಕೊಳ್ಳುತ್ತೀರಾ? ಐದು ಸೆಕೆಂಡ್ ಕಾದರೇ ಸಾಕು, ನಿಮ್ಮ ದೇಹದ ಅಡ್ರೆನಲಿನ್ ಇಳಿಯುತ್ತದೆ.

ರಸ್ತೆಯಲ್ಲಿ ಜಗಳ ಮಾಡುವುದರ ಪರಿಣಾಮದ ಬಗ್ಗೆ ಕಲ್ಪಿಸಿಕೊಳ್ಳಿ. ರಸ್ತೆಯಲ್ಲಿ ಯಾರೂ ತಮ್ಮದು ತಪ್ಪು ಎಂದು ಒಪ್ಪಿಕೊಳ್ಳುವುದಿಲ್ಲ, ತಪ್ಪಿದ್ದರೂ. ಆ ಜಗಳಕ್ಕೆ ಕೊನೆಯಿಲ್ಲ. ರಸ್ತೆ ಮೇಲೆ ಆದ ಜಗಳಕ್ಕೆ ನ್ಯಾಯ ಸಿಗುವುದಿಲ್ಲ. ನಿಮ್ಮ ಕುಟುಂಬ ನಿಮ್ಮನ್ನು ಕಾಯು ತ್ತಿರುತ್ತದೆ ಎಂಬುದು ಗೊತ್ತಿರಲಿ. ಆ ಜಗಳದಲ್ಲಿ ನೀವು ಗೆದ್ದರೂ, ಯಾರೂ ನಿಮಗೆ ಪಾರಿತೋಷಕ ಕೊಡುವುದಿಲ್ಲ.

ಯಾರಾದರೂ ನಿಮ್ಮನ್ನು ಓವರ್ ಟೇಕ್ ಮಾಡಿ ಮುಂದೆ ಸಾಗಿದರೆ, ಮನಸ್ಸಿನಲ್ಲಿ, 'ಆತ ಫಾರ್ಮುಲಾ 1 ರೇಸ್‌ಗೆ ತಯಾರಿ ಮಾಡುತ್ತಿರಬಹುದು, ನಾನು ಅವರಿಗೆ ಶುಭಾಶಯಗಳನ್ನು ಕೋರುವೆ' ಎಂದು ಅಂದುಕೊಳ್ಳಿ. ಈ ಸಣ್ಣ ಹಾಸ್ಯ ನಿಮ್ಮ ಕೋಪವನ್ನು ಕಡಿಮೆ ಮಾಡುತ್ತದೆ. ಅಷ್ಟಕ್ಕೂ ಒಂದು ಮಾತು ಹೇಳುತ್ತೇನೆ - ನಿಮ್ಮ ನಿಜವಾದ ಸಾಮರ್ಥ್ಯ, ಪ್ರಬುದ್ಧತೆ, ಕಾರನ್ನು ವೇಗವಾಗಿ ಓಡಿಸುವುದರಲ್ಲಿ ಇಲ್ಲ, ನಿಮ್ಮ ಕೋಪವನ್ನು ನಿಯಂತ್ರಿಸುವ ಸಮಚಿತ್ತದಲ್ಲಿರುತ್ತದೆ. 'ನಾನು ಅವನಿಗೆ ಪಾಠ ಕಲಿಸಬೇಕು' ಎಂದು ಸಿಟ್ಟಿನ ಕೈಗೆ ಬುದ್ಧಿಕೊಟ್ಟರೆ ಅದು ನಿಮ್ಮ ಪಾಲಿಗೆ ನೋವಿನ ಕಥೆಯಾಗಬಹುದು ಎಂಬುದನ್ನು ಮರೆಯದಿರಿ.

ರೂಪಿಕಾ, ಶಿವಮೊಗ್ಗ

- **ಭಟ್ರೇ, ನಾನು ನಿಮ್ಮ ಹಾಗೆ ಬರೆಯಬೇಕು ಎಂದು ತೀವ್ರವಾಗಿ ಆಸೆಪಟ್ಟಿದ್ದೇನೆ. ಆದರೆ ಅದು ಸಾಧ್ಯವಾಗುವುದೋ ಇಲ್ಲವೋ, ಗೊತ್ತಿಲ್ಲ. ನಿಮ್ಮ ಬರಹದ ಗುಟ್ಟನ್ನು ನನಗೆ ಹೇಳಬಹುದಾ? ನಾನು ಬೇರೆ ಯಾರಿಗೂ ಹೇಳುವುದಿಲ್ಲ.**

-ರೂಪಿಕಾ ಅವರೇ, ನೀವು ನನ್ನನ್ನು ಭೇಟಿಯಾಗಿ ಈ ಪ್ರಶ್ನೆಯನ್ನು ಕೇಳಿದ್ದರೆ ಖಂಡಿತವಾಗಿಯೂ ನಾನು ಆ ರಹಸ್ಯವನ್ನು ನಿಮಗೆ ತಿಳಿಸಿಕೊಡುತ್ತಿದ್ದೆ. ಆದರೆ ಈ ಅಂಕಣದ ಮೂಲಕ ಅದನ್ನು ಹೇಳಿದರೆ ಎಲ್ಲರಿಗೂ ತಿಳಿಸಿದಂತಾಗುತ್ತದೆ, ಜಗಜ್ಜಾಹೀರಾಗುತ್ತದೆ. ಆಗ ಬೇರೆಯವರು ನಿಮಗೆ ಸಹಜ ಪೈಪೋಟಿ ನೀಡಬಹುದು. ಇರಲಿ. ನೀವು ನನ್ನ ಹಾಗೆ ಬರೆಯುವ ಬದಲು, ನನಗಿಂತ ಚೆನ್ನಾಗಿ ಮತ್ತು ನನಗಿಂತ ಹೆಚ್ಚಾಗಿ ಬರೆಯುವುದು ಹೇಗೆ ಎಂಬುದರ ಬಗ್ಗೆ ಯೋಚಿಸಿ. ನೀವು ನನ್ನನ್ನು ಅನುಸರಿಸಿದರೆ ಅಥವಾ ನನ್ನ ಹಾಗೆ ಬರೆಯುವುದನ್ನು ರೂಢಿಸಿಕೊಂಡರೆ, ಅದರಲ್ಲಿ ಹೆಚ್ಚುಗಾರಿಕೆ ಏನು ಇಲ್ಲ. ನೀವು ವಿಶ್ವೇಶ್ವರ ಭಟ್ಟರ ಮಹಿಳಾ ರೂಪ ಆಗ ಬಹುದು. ಅದರ ಬದಲು ನನಗಿಂತ ಉತ್ತಮವಾಗಿ, ಚೆಂದವಾಗಿ ಬರೆಯುವುದನ್ನು ಅಭ್ಯಾಸ ಮಾಡಿಕೊಂಡರೆ, ಆಗ ನಾನು ನಿಮ್ಮ ಹಾಗೆ ಬರೆಯುವುದು ಹೇಗೆ ಎಂದು ನಿಮಗೆ ಪ್ರಶ್ನೆ ಕೇಳಬಹುದು.

ಏನಂತೀರಿ?

ಸತ್ಯಕಾಮ ಜಿ ರಾವ್, ಬೆಂಗಳೂರು

- **ಸಂಪಾದಕರೇ, ನಿಮ್ಮ ಸಂಪಾದಕತ್ವದಲ್ಲಿ ಬಿಡುಗಡೆಯಾದ 'ಪ್ರವಾಸಿ ಪ್ರಪಂಚ' ಪತ್ರಿಕೆಯನ್ನು ತೀವ್ರ ಕುತೂಹಲದಿಂದ ಗಮನಿಸಿದೆ. ಪತ್ರಿಕೆ ಚೆನ್ನಾಗಿದೆ; ಆದರೆ, ನಾನು ಸಹ ಇಂಥದೇ ಪತ್ರಿಕೆಯನ್ನು ಮಾಡಬೇಕೆಂದು ಬಹಳ ವರ್ಷಗಳಿಂದ ಕನಸು ಕಾಣುತ್ತಿದ್ದೆ. ನೀವು ನನ್ನ ಐಡಿಯಾವನ್ನು ಕದ್ದಿದ್ದೀರಿ ಎಂದು ನನಗೆ ಅನಿಸುತ್ತಿದೆ. ಇದರಿಂದ ನನಗೆ ಅನ್ಯಾಯವಾಗಿದೆ. ಇದಕ್ಕೆ ನೀವೇನು ಹೇಳುತ್ತೀರಿ?**

- ರಾವ್ ಅವರೇ, ನನಗೆ ನೀವು ಯಾರು ಎಂಬುದೇ ಗೊತ್ತಿಲ್ಲ. ನಮ್ಮ-ನಿಮ್ಮ ನಡುವೆ ಯಾವ ರೀತಿಯ ಸಂಪರ್ಕವೂ ಆಗಿಲ್ಲ. ಹೀಗಿರುವಾಗ ನಿಮ್ಮ ಆಲೋಚನೆಯನ್ನು ನಾನು ಕದ್ದಿದ್ದೇನೆ ಎಂಬು ದರಲ್ಲಿ ಯಾವುದೇ ಹುರುಳಿಲ್ಲ. ಸಾಮಾನ್ಯವಾಗಿ ರಾತ್ರಿ ಕಂಡ ಕನಸು ಬೆಳಗಾಗುತ್ತಿದ್ದಂತೆ ಮರೆತು ಹೋಗುತ್ತದೆ. ಆದರೆ ನೀವು ಅದನ್ನು ನೆನಪಿಟ್ಟುಕೊಳ್ಳುತ್ತೀರಿ ಮತ್ತು ಅದೇ ನಿಜ ಎಂದು ಭಾವಿಸುತ್ತೀರಿ. ಸದ್ಯ ನಿಮಗೆ ಕರ್ನಾಟಕದ ಮುಖ್ಯಮಂತ್ರಿ ಆದ ಕನಸು ಬಿದ್ದಿಲ್ಲ. ಅಂಥ ಕನಸನ್ನು ಕಂಡಿದ್ದರೆ, ಸಿದ್ದರಾಮಯ್ಯನವರ ಬಳಿ ಹೋಗಿ, 'ನನ್ನ ಕುರ್ಚಿಯ ಮೇಲೆ ನೀವೇಕೆ ಕುಳಿತಿದ್ದೀರಿ ಎಂದು ಹೇಳುತ್ತಿದ್ದಿರಿ. ಆಗ ಪೊಲೀಸರು ನಿಮ್ಮನ್ನು ಎಳೆದುಕೊಂಡು ಪರಪ್ಪನ ಅಗ್ರಹಾರಕ್ಕೋ, ನಿಮ್ಹಾನ್ಸ್‌ಗೋ ಸೇರಿಸುತ್ತಿದ್ದರು!